"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

# ಕರ್ನಾಟಕ ವಿಧಾನ ಪರಿಷತ್ತು

3ನೇ ಫೆಬ್ರವರಿ 2021
ಬುಧವಾರ

## ವಿಷಯಾನುಕ್ರಮಣಿಕೆ


01. ನೂತನ ಸಚಿವರ ಪರಿಚಯ

02. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು

374– ಬೀದರ್ ಜಿಲ್ಲೆಯ ಎಸ್.ಸಿ.ಪಿ./ಟಿ.ಎಸ್.ಪಿ. ಯೋಜನೆಗೆ ಬಿಡುಗಡೆಯಾದ ಅನುದಾನದ ಕುರಿತು.
–ಶ್ರೀ ಅರವಿಂದ ಕುಮಾರ್ ಅರಳಿ
–ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಇಲಾಖೆ)

379– ಲೋಕೋಪಯೋಗಿ ಇಲಾಖೆಯಲ್ಲಿ ಎ.ಬಿ.ಸಿ.ಡಿ. ದರ್ಜೆಯ ಹುದ್ದೆಗಳ ಮಾಹಿತಿ
–ಶ್ರೀ ಎಸ್.ವ್ಹಿ.ಸಂಕನೂರ
–ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಇಲಾಖೆ)

348– ಬೆಂಗಳೂರು ನಗರದಲ್ಲಿ ಇಲಾಖೆ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ಬಗ್ಗೆ
–ಶ್ರೀ ಎಂ.ನಾರಾಯಣಸ್ವಾಮಿ
–ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಇಲಾಖೆ)

330– ಬೆಂಗಳೂರು–ಮೈಸೂರು ರಸ್ತೆ ಕಾಮಗಾರಿ ಬಗ್ಗೆ
–ಶ್ರೀ ಮರಿತಿಬ್ಬೇಗೌಡ
–ಶ್ರೀ ಗೋವಿಂದ ಎಂ.ಕಾರಜೋಳ(ಉಪ ಮುಖ್ಯಮಂತ್ರಿ, ಲೋಕೋಪಯೋಗಿ ಇಲಾಖೆ)

361– ಕೊಡಗಿನ ಪವಿತ್ರ ಕ್ಷೇತ್ರ ತಲಕಾವೇರಿಯಲ್ಲಿ ಧಾರ್ಮಿಕ ಪಾವಿತ್ರ್ಯತೆಯನ್ನು ಕಾಪಾಡಲು ಕ್ರಮ ವಹಿಸುವ ಕುರಿತು.
–ಶ್ರೀಮತಿ ಎಸ್.ವೀಣಾ ಅಚ್ಚಯ್ಯ
–ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)


"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**306–** ಮಣ್ಣಿನ ಫಲವತ್ತತೆ ಮತ್ತು ಪರೀಕ್ಷಾ ಪ್ರಯೋಗಾಲಯಗಳ ಸ್ಥಾಪನೆ

–ಶ್ರೀ ಕೆ.ಎ.ತಿಪ್ಪೇಸ್ವಾಮಿ
–ಶ್ರೀ ಬಿ.ಸಿ.ಪಾಟೀಲ್(ಕೃಷಿ ಸಚಿವರು)

**281–** ಮುಜರಾಯಿ ಇಲಾಖೆಗೆ ಒಳಪಟ್ಟಿರುವ ದೇವಸ್ಥಾನಗಳ ಕುರಿತು

–ಶ್ರೀ ಪ್ರಕಾಶ್ ಕೆ.ರಾಥೋಡ್
–ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**015–** ಗ್ರಾಮ ಪಂಚಾಯತಿಗಳಿಂದ ಮನೆ ಹಂಚಿಕೆ ಮಾಡುವ ಕುರಿತು.

– ಶ್ರೀ ಎಂ.ಎ.ಗೋಪಾಲಸ್ವಾಮಿ
– ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

**336–** ಮನೆ ಹಂಚಿಕೆ ಮಾಡಲು ನಿಗದಿಪಡಿಸಿರುವ ಮಾನದಂಡಗಳ ಬಗ್ಗೆ

–ಶ್ರೀ ಎಂ.ಎ.ಗೋಪಾಲಸ್ವಾಮಿ
–ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

**325–** ವಿಶ್ವಕರ್ಮ ಜನಾಂಗದ ಕುರಿತು

–ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ
–ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**326–** ಹಿಂದುಳಿದ ಜಾತಿಗಳನ್ನು ಪರಿಶಿಷ್ಟ ಜಾತಿ ವರ್ಗಗಳಿಗೆ ಸೇರಿಸುವ ಬಗ್ಗೆ

–ಶ್ರೀ ಅಡಗೂರ್ ಹೆಚ್.ವಿಶ್ವನಾಥ್
–ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

**310–** ರಾಜ್ಯದಲ್ಲಿ **KFDC** ಮೀನುಗಾರಿಕೆ ಅಭಿವೃದ್ಧಿ ನಿಗಮ ನಿಯಮಿತ ಕುರಿತು

– ಶ್ರೀ ಹೆಚ್.ಎಂ.ರಮೇಶ ಗೌಡ
– ಶ್ರೀ ಎಸ್.ಅಂಗಾರ(ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲ ಸಾರಿಗೆ ಸಚಿವರು)

**291–** ವಸತಿ ಯೋಜನೆಯ ಫಲಾನುಭವಿಗಳಿಗೆ ಅನುದಾನ ಬಿಡುಗಡೆ ವಿಳಂಬವಾಗಿರುವ ಬಗ್ಗೆ

–ಶ್ರೀ ಕೆ.ಟಿ.ಶ್ರೀಕಂಠೇಗೌಡ
–ಶ್ರೀ ವಿ.ಸೋಮಣ್ಣ(ವಸತಿ ಸಚಿವರು)

**270–** ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಸರ್ಕಾರವು ಎಷ್ಟು ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಘೋಷಣೆ ಮಾಡಲಾಗಿದೆ ಎನ್ನುವ ಕುರಿತು.

–ಶ್ರೀ ಆರ್.ಪ್ರಸನ್ನ ಕುಮಾರ್
–ಶ್ರೀ ಆರ್.ಅಶೋಕ(ಕಂದಾಯ ಸಚಿವರು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**295–** ಬೆಳಗಾವಿ ವಿಭಾಗದ ವ್ಯಾಪ್ತಿಯಲ್ಲಿ ಕೃಷಿ ಇಲಾಖೆಯ ಅಧೀನದ ಕಛೇರಿಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ಕುರಿತು.

–ಶ್ರೀ ನಿರಾಣಿ ಹಣಮಂತ್ ರುದ್ರಪ್ಪ
–ಶ್ರೀ ಬಿ.ಸಿ.ಪಾಟೀಲ್ (ಕೃಷಿ ಸಚಿವರು)

**372–** ಅತಿವೃಷ್ಟಿ ಹಾನಿ ಕುರಿತು

–ಶ್ರೀ ಆರ್.ಬಿ.ತಿಮ್ಮಾಪೂರ
–ಶ್ರೀ ಆರ್.ಅಶೋಕ(ಕಂದಾಯ ಸಚಿವರು)

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**03.** ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಚಿವರಿಂದ ಲಿಖಿತ ಹೇಳಿಕೆಯ ಮಂಡನೆ.

ವಿಷಯ: ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ತುಂಬಲು ನಡೆಸಲಾಗುವ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ.

– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)
(ಮುಖ್ಯ ಮಂತ್ರಿಗಳ ಪರವಾಗಿ)

**04.** ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ಖಾಸಗಿ ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳಲ್ಲಿ ಸೇವಾ ವಿಲೀನಗೊಂಡ ಸಹಾಯಕ ಪ್ರಾಧ್ಯಾಪಕರುಗಳು ವಿಭಜಿತ ಪೂರ್ವದಲ್ಲಿ ಸಲ್ಲಿಸಿದ ಖಾಯಂ ಸೇವೆಯನ್ನು ಪರಿಗಣಿಸಿ ಬಡ್ತಿ/ಸ್ಥಾನೀಕರಣ ಸೌಲಭ್ಯ ನೀಡುವ ಬಗ್ಗೆ.

– ಶ್ರೀ ಕೆ.ಟಿ.ಶ್ರೀಕಂಠೇಗೌಡ
– ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

ಆ) ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಗ್ರಾಮದ ಎಂ.ಜಿ.ಆರ್. ಕ್ರಷರ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಪ್ರಾಪ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**"ತಿದ್ದುಪಡಿಯಾಗದ ಪ್ರತಿ/ Unedited Copy, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"**

- ಶ್ರೀ ಎಂ. ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು)
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಇ) ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಶೇಕಡ 30ರಷ್ಟು ಶುಲ್ಕ ಕಡಿತ ಮಾಡಿರುವುದರಿಂದ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ವೇತನಕ್ಕೆ ತೊಂದರೆಯಾಗುವ ಬಗ್ಗೆ.**

- ಶ್ರೀ ಮರಿತಿಬ್ಬೇಗೌಡ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು)

**ಈ) ರಾಜ್ಯದ ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಆಸ್ತಿ ನೋಂದಣಿಗೆ ಗಣಕ ಯಂತ್ರಗಳ ಸರ್ವರ್ ಸ್ಥಗಿತಗೊಂಡು ನೋಂದಣಿ ಕಾರ್ಯವಿಲ್ಲದೇ ಸಾರ್ವಜನಿಕರಿಗೆ ಅನಾನುಕೂಲವಾಗಿರುವ ಬಗ್ಗೆ.**

- ಶ್ರೀ ಎಸ್.ರುದ್ರೇಗೌಡ
- ಶ್ರೀ ಆರ್.ಅಶೋಕ್ (ಕಂದಾಯ ಸಚಿವರು)

**ಉ) ಸಂಕಷ್ಟದಲ್ಲಿರುವ ಬಡ ನೇಕಾರರುಗಳಿಗೆ ನೆರವಾಗಲು ನೇಕಾರರ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡುವ ಬಗ್ಗೆ.**

- ಶ್ರೀ ಕೆ.ಸಿ.ಕೊಂಡಯ್ಯ
- ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು)

**05. ಸಭೆಯ ಮುಂದಿಡಲಾದ ಕಾಗದ ಪತ್ರಗಳು**
**06. ಕಾರ್ಯದರ್ಶಿಯವರ ವರದಿ**
**07. ಶಾಸನ ರಚನೆ**
**ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ**

**ಅ) ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕ, 2021**

- **ಡಾ॥ಅಶ್ವಥ್‌ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)**
- **ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು)**
- **ಡಾ॥ವೈ.ಎ.ನಾರಾಯಣಸ್ವಾಮಿ**
- **ಶ್ರೀ ಕೆ.ಟಿ.ಶ್ರೀಕಂಠೇಗೌಡ**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

- ಶ್ರೀ ಸಿ.ಎಂ.ಇಬ್ರಾಹಿಂ
- ಶ್ರೀ ಬಿ.ಕೆ.ಹರಿಪ್ರಸಾದ್
- ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು)
- ಶ್ರೀ ಮರಿತಿಬ್ಬೇಗೌಡ
- ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ
- ಶ್ರೀ ಕೆ.ಎ.ತಿಪ್ಪೇಸ್ವಾಮಿ
- ಶ್ರೀ ಪುಟ್ಟಣ್ಣ
- ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು)
- ಶ್ರೀ ಎನ್.ಅಪ್ಪಾಜಿಗೌಡ
- ಡಾ॥ತೇಜಸ್ವಿನಿಗೌಡ
- ಶ್ರೀ ಆರ್.ಬಿ.ತಿಮ್ಮಾಪೂರ
- ಶ್ರೀ ಬಸವರಾಜ ಪಾಟೀಲ್ ಇಟಗಿ
- ಶ್ರೀ ಪ್ರಕಾಶ್ ಕೆ.ರಾಥೋಡ್
- ಶ್ರೀ ನಸೀರ್ ಅಹ್ಮದ್

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಆ) ಬೆಂಗಳೂರು ಡಾ॥ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2021**

- ಡಾ॥ಅಶ್ವತ್ಥ್‌ನಾರಾಯಣ್ ಸಿ.ಎನ್(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

**ಇ) ವಿದ್ಯಾಶಿಲ್ಪ್ ವಿಶ್ವವಿದ್ಯಾಲಯ ವಿಧೇಯಕ, 2020**

- ಡಾ॥ಅಶ್ವತ್ಥ್‌ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)

(ವಿಧೇಯಕ ಅಂಗೀಕರಿಸಲ್ಪಟ್ಟಿತು)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಈ) ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ, 2020**

– **ಡಾ||ಅಶ್ವಥ್‌ನಾರಾಯಣ್ ಸಿ.ಎನ್(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**ಉ) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕ, 2020**

– **ಡಾ||ಅಶ್ವಥ್‌ನಾರಾಯಣ್ ಸಿ.ಎನ್(ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ)**

**(ವಿಧೇಯಕ ಅಂಗೀಕರಿಸಲ್ಪಟ್ಟಿತು)**

**08) ಪ್ರಕಟಣೆ**

~~~~~~

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"
~~~~~~

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(100) 3.2.2021 11.20 ಪಿಕೆ:ಎಂಡಿ

**<u>ಕರ್ನಾಟಕ ವಿಧಾನ ಪರಿಷತ್ತು</u>**

**ಬುಧವಾರ 3ನೇ ಫೆಬ್ರವರಿ 2021**

**ಸದನವು ವಿಧಾನ ಪರಿಷತ್ತಿನ ಸಭಾಂಗಣದಲ್ಲಿ**
**ಬೆಳಿಗ್ಗೆ 11 ಗಂಟೆ 29 ನಿಮಿಷಕ್ಕೆ ಸಮಾವೇಶಗೊಂಡಿತು.**

**ಸಭಾಪತಿ (ಶ್ರೀ ಕೆ.ಪ್ರತಾಪ್‌ಚಂದ್ರ ಶೆಟ್ಟಿ) ಯವರು ಪೀಠದಲ್ಲಿ**
**ಉಪಸ್ಥಿತರಿದ್ದರು.**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 01.ನೂತನ ಸಚಿವರ ಪರಿಚಯ

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ಶ್ರೀ ಎಸ್.ಅಂಗಾರ, ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಸಚಿವರನ್ನು ಸದನಕ್ಕೆ ಪರಿಚಯಿಸುತ್ತಿದ್ದೇನೆ.

**(ಮುಂದು . . .)**

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

(101) 3–2–2021/11.30/ಡಿಎಸ್–ಎಂಡಿ

02. **ಪ್ರಶ್ನೋತ್ತರಗಳು**

**ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಮೌಖಿಕವಾಗಿ ನೀಡಲಾದ ಉತ್ತರಗಳು**

**ಚುಕ್ಕೆ ಪ್ರಶ್ನೆ ಸಂಖ್ಯೆ:374**
**ಉತ್ತರ ಲಗತ್ತಿಸಲಾಗಿದೆ**

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಎಸ್.ಸಿ.ಪಿ/ಟಿ.ಎಸ್.ಪಿ. ಕಾಮಗಾರಿಗಳ ಬಗ್ಗೆ ವಿವರವಾದ ಮಾಹಿತಿಗಳನ್ನು ಕೊಡಿ ಎಂದು ಕೇಳಿದ್ದೆ. ಲೆಕ್ಕಶೀರ್ಷಿಕೆ 5054ರ ಅಡಿಯಲ್ಲಿ ಅವ್ಯವಹಾರ ಆಗಿರುವ ಬಗ್ಗೆ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಅದು ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಯಾವ ಎಸ್.ಸಿ.ಪಿ/ಟಿ.ಎಸ್.ಪಿ. ಕಾಮಗಾರಿಗಳು ಮಾಡಬೇಕು, ಆ ಕಾಮಗಾರಿಗಳ ನಿಯಮ ಉಲ್ಲಂಘಿಸಿ ಬೇರೆ ಸ್ಥಳದಲ್ಲಿ ಮಾಡುತ್ತಿದ್ದಾರೆ. ಆ ಬಗ್ಗೆ ಅನೇಕ ಸಲ ದೂರಗಳನ್ನು ಕೊಟ್ಟಿದ್ದೆ. ಆದರೂ ಕೂಡ ಮಾನ್ಯ ಸಚಿವರು ಗಮನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಇಂತಹ ಅನೇಕ ಪ್ರಕರಣಗಳು ನಡೆದಿವೆ. ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕೆಂದು ನಾನು ಮಾನ್ಯ ಸಚಿವರಿಗೆ ಒತ್ತಾಯ ಮಾಡುತ್ತೇನೆ. ಏಕೆಂದರೆ, 2015 ರಿಂದ 2019 ರವರೆಗೆ ವಿವರವಾದ ಮಾಹಿತಿ ಕೊಡಿ ಎಂದು ಕೇಳಿದ್ದೇನೆ. ಕೊನೆ ಪಕ್ಷ ಮೂರು ತಾಲ್ಲೂಕಿನ ಮಾಹಿತಿಯನ್ನಾದರೂ ಕೊಡಲಿ. ಯಾವ ಮನೆಯಿಂದ ಯಾವ ಮನೆಯವರೆಗೆ ರಸ್ತೆಯನ್ನು ಮಾಡಿದ್ದಾರೆ ಎಂದು ಮಾಹಿತಿಯನ್ನು ಕೊಡಿ ಎಂದು ಕೇಳಿದ್ದೇನೆ. ಎರಡು ವರ್ಷವಾದರೂ ಕೂಡ ಅವರು ಮಾಹಿತಿಯನ್ನು ಕೊಡಲಿಲ್ಲ. ಈ ಊರಿನಲ್ಲಿ ಈ ಕೆಲಸ ಮಾಡಿದ್ದೇವೆಂದು ಮಾಹಿತಿಯನ್ನು ಕೊಡುತ್ತಾರೆ. ನಾನು ನಿರ್ದಿಷ್ಟವಾಗಿ ಕೇಳುತ್ತಿದ್ದೇನೆ. ಮಾಹಿತಿಯನ್ನು ಕೊಡುವುದಕ್ಕೆ ಏಕೆ ಕಷ್ಟವಾಗುತ್ತಿದೆ? ಇದರಲ್ಲಿ ಅವ್ಯವಹಾರವಾಗಿರುವುದರಿಂದ ಉನ್ನತ ಮಟ್ಟದ ತನಿಖೆಯಾಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಅರವಿಂದ ಕುಮಾರ್ ಅರಳಿ ಯವರ ಕಳಕಳಿ ನನಗೆ ಅರ್ಥವಾಗುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಒದಗಿಸಿರುವ ಅನುದಾನ ದುರುಪಯೋಗವಾಗಬಾರದು ಎನ್ನುವ ಕಳಕಳಿ ನನಗೆ ಅರ್ಥವಾಗುತ್ತದೆ. ಆದರೆ, ನಾನು ಮಾನ್ಯ ಸದಸ್ಯರಿಗೆ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ, ಎಸ್.ಸಿ./ಎಸ್.ಟಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜನಾಂಗದ ಮನೆಗಳ ಮುಂದೆ ಮಾತ್ರ ನಾವು concrete roads ಮಾಡಿದರೆ ಆಗುವುದಿಲ್ಲ. ಈಗ ಹತ್ತು ಮನೆ ಇರುತ್ತವೆ, ನಾವು ಹತ್ತು ಮನೆ ಮುಂದೆ ಮಾಡಿದರೆ ಮುಗಿಯುವುದಿಲ್ಲ. ಎಸ್.ಸಿ./ಎಸ್.ಟಿ. ಕಾಲೋನಿಯಿಂದ ಮಕ್ಕಳು ಶಾಲೆಗೆ ಹೋಗುತ್ತಾರೆ. ಎಸ್.ಸಿ./ಎಸ್.ಟಿ. ಕಾಲೋನಿ ಮನೆಯಿಂದ ಶಾಲೆಯವರೆಗೆ concrete ಹಾಕಿದರೆ ಅದು ದುರುಪಯೋಗವಾಗುವುದಿಲ್ಲ. ಇದನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು. ಎಸ್.ಸಿ./ಎಸ್.ಟಿ. ಜನಾಂಗದವರು ಸಾಮಗ್ರಿಗಳನ್ನು ಖರೀದಿ ಮಾಡುವುದಕ್ಕೆ ಮಾರ್ಕೆಟ್‌ಗೆ ಹೋಗುತ್ತಾರೆ. ನಾವು ಅಲ್ಲಿಂದ ಇಲ್ಲಿಯವರೆಗೆ ಮಾಡಿದರೆ ಅದು ದುರುಪಯೋಗ ಅಲ್ಲ. ಕೆಲವು ಸಂಘಟನೆಯವರು ನನ್ನ ಹತ್ತಿರ ಬಂದು ದೂರು ಕೊಡುತ್ತಾರೆ. ಕೆಲವು ವ್ಯಕ್ತಿಗಳು ಬಂದು ದೂರು ಕೊಡುತ್ತಾರೆ. ಮಾನ್ಯ ಸದಸ್ಯರು ಕೂಡ ಇದನ್ನೇ ಹೇಳಿದ್ದಾರೆ. ನಾನು ಹೇಳುವುದೇನೆಂದರೆ, ಹತ್ತು ಮನೆ ಈ ಕಡೆ, ಹತ್ತು ಮನೆ ಆ ಕಡೆ, ಎಸ್.ಸಿ./ಎಸ್.ಟಿ. ಜನಾಂಗದ ಅಲ್ಲೇ ನಾವು ಅಲ್ಲಿಯೇ ಒಂದು patch ಮಾಡಿಬಿಟ್ಟರೆ ಅದು ಅಲ್ಲ. ಅವರು ಎಲ್ಲೆಲ್ಲಿ ಹೋಗುತ್ತಾರೆ, ಅವರು ಕಾಲೋನಿಯಿಂದ ದೇವಸ್ಥಾನಕ್ಕೆ ಹೋಗುತ್ತಾರೆ, ಅಲ್ಲಿಗೆ ಮಾಡಬೇಕು. ಮಾರ್ಕೆಟ್‌ಗೆ ಹೋಗುತ್ತಾರೆ, ಅಲ್ಲಿಗೆ ಮಾಡಬೇಕು. ಮಕ್ಕಳು ಶಾಲೆಗೆ ಹೋಗುತ್ತಾರೆ, ಅಲ್ಲಿಗೆ ಮಾಡಬೇಕು. ಅಂತಹ ಜಾಗಗಳಿಗೆ ಪೂರ್ಣವಾಗುತ್ತದೆ. ನಾವು ಬರೀ ಹತ್ತು ಮನೆ, ಇಪ್ಪತ್ತು ಮನೆ ಮುಂದೆ concrete roads ಮಾಡಿ ಚರಂಡಿ ಮಾಡುತ್ತೇವೆ. ಅದಕ್ಕೆ inlet and outlet ಇಲ್ಲವೆಂದರೆ ಮತ್ತೊಂದು ಅಲ್ಲಿ slum ಆಗುತ್ತದೆ, ಕೊಳಚೆಯಾಗಿಬಿಡುತ್ತದೆ. ಕೊಳೆತು ವಾಸನೆ ಬಂದು ಕೆಟ್ಟ ಹುಳಗಳಾಗುತ್ತವೆ. ಅದು ಮತ್ತೊಂದು ಕೊಳಚೆ ಪ್ರದೇಶವಾಗಿಬಿಡುತ್ತದೆ. ಅದಕ್ಕಾಗಿ ನಾನು ಬಹಳ ಸೂಕ್ಷ್ಮವಾಗಿ ಹೇಳಿದ್ದೇನೆ, ನೀವು ಮಾಡತಕ್ಕಂಥ ರಸ್ತೆಗಳಾಗಲಿ, ಚರಂಡಿಗಳಾಗಲಿ, ಚರಂಡಿ ಮಾಡುವಾಗ inlet and outlet ಇರಬೇಕು ಎಂದು ಹೇಳಿದ್ದೇನೆ. ಅವರ ಮನೆ ಮುಂದೆ ಬರೀ ತೆಗ್ಗು ತೆಗೆದು ಅಷ್ಟಕ್ಕೆ ನಿಂತು ಈ ಕಡೆ inlet and outlet ಇಲ್ಲ, ಹೊರಗೂ ಹೋಗುವುದಿಲ್ಲ ಒಳಗೂ ಬರುವುದಿಲ್ಲ. ಆ ರೀತಿ ಮಾಡುವುದರಿಂದ ಬಿದ್ದ ನೀರು ಅವರ ಮನೆ ಒಳಗಡೆ ಹೋಗುತ್ತದೆ. ಇದು 25 ವರ್ಷಗಳಿಂದ ಎಸ್.ಸಿ./ಎಸ್.ಟಿ. ಕಾಲೋನಿಯಲ್ಲಿ ಚರಂಡಿ, ರಸ್ತೆ ಎಂದು ಮಾಡುತ್ತಲೇ ಇದ್ದೇವೆ. ನಾನು ಕಳೆದ ವರ್ಷ ಅದಕ್ಕಾಗಿಯೇ ಎಲ್ಲಾ ತೆಗೆದು ಶಾಲೆಗಳಿಗೆ ಮತ್ತು ಹಾಸ್ಟೆಲ್‌ಗಳಿಗೆ ಹಾಕಿಬಿಟ್ಟೆ. ಏಕೆಂದರೆ, ಬಡವರ ಮಕ್ಕಳು ವ್ಯವಸ್ಥೆ ಇಲ್ಲದಂತಹ ಬಾಡಿಗೆ ಕಟ್ಟಡದಲ್ಲಿ ಓದುತ್ತಿದ್ದಾರೆ. ಬಾಡಿಗೆ ಕಟ್ಟಡದಲ್ಲಿ ಮೂರ್‍ನಾಲ್ಕು ಕೊಠಡಿಗಳಿರುತ್ತವೆ. ಅದಕ್ಕೆ ಬಾಡಿಗೆಯನ್ನು ತೆಗೆದುಕೊಳ್ಳುತ್ತಾರೆ. ಅಲ್ಲಿ ನೂರು ಮಕ್ಕಳು, ಐವತ್ತು ಮಕ್ಕಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಓದುತ್ತಿದ್ದಾರೆ. ಅವರ ಪರಿಸ್ಥಿತಿ ಏನು? ಶೌಚಾಲಯ ಇಲ್ಲ, ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಅದಕ್ಕಾಗಿ ಕಳೆದ ಒಂದೂವರೆ ವರ್ಷದಲ್ಲಿ ನಾನು ಸಮಾಜ ಕಲ್ಯಾಣ ಇಲಾಖೆಯನ್ನು ವಹಿಸಿಕೊಂಡ ನಂತರ ಇದನ್ನು ಕಡಿಮೆ ಮಾಡಿ ಹಾಸ್ಟಲ್‌ಗಳಿಗೆ ಕೊಟ್ಟಿದ್ದೇವೆ. 173 Residential School Complex ಕಟ್ಟಿಸಿದ್ದೇವೆ. ಸುಮಾರು 68 occupy ಆಗಲಿಕ್ಕೆ ಸಿದ್ಧವಾಗಿದೆ. ಏಕೆಂದರೆ, ಶಾಲೆಗಳು ಪ್ರಾರಂಭವಾಗದಿರುವುದರಿಂದ ಅವು ಹಾಗೆಯೇ ಇದೆ. ಉಳಿದವು ಈ ವರ್ಷದಲ್ಲಿ ಆಗುತ್ತದೆ. 173 ಶಾಲೆಗಳಿಗೆ ಮತ್ತು ಕಾಂಪ್ಲೆಸ್‌ಗೆ ಸುಮಾರು 20 ಕೋಟಿಯಿಂದ 25 ಕೋಟಿಯವರೆಗೆ ನಾವು ಖರ್ಚು ಮಾಡುತ್ತಿದ್ದೇವೆ. ಅದಕ್ಕೆ ಎಸ್.ಸಿ./ಎಸ್.ಟಿ. ಹಣ ದುರುಪಯೋಗವಾಗಬಾರದು, asset create ಆಗಬೇಕು. ಆ ಮಕ್ಕಳಿಗೆ ಉತ್ತಮವಾದ ವ್ಯವಸ್ಥೆಯನ್ನು ಕಲ್ಪಿಸುವ ಉದ್ದೇಶದಿಂದ ಮಾಡಿದ್ದೇವೆ. ಮಾನ್ಯ ಅರವಿಂದ ಕುಮಾರ್ ಅರಳಿಯವರೇ, ತಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ನಿಮ್ಮ ಕುಟುಂಬದವರೆಲ್ಲರೂ ನನಗೆ ಬಹಳ ಆತ್ಮೀಯರು. ಅವರು ಬೀದರ್‌ನವರಾಗಿದ್ದರು ನನ್ನ ಜೊತೆಯಲ್ಲಿ ಅವರ ಅಣ್ಣ ಬಹಳ ಆತ್ಮೀಯರು. ಇದರಲ್ಲಿ ದುರುಪಯೋಗ ಎನ್ನುವ ಪ್ರಶ್ನೆ ಇಲ್ಲ. ಅಕಸ್ಮಾತ್ ಯಾರಾದರೂ ಎಸ್.ಸಿ./ಎಸ್.ಟಿ. ಜನಾಂಗದವರ ಹೆಸರಿನಲ್ಲಿ ಬೋಗಸ್ ಬಿಲ್ ಮಾಡಿ ತೆಗೆದುಕೊಂಡಿದ್ದರೆ, ಕೆಲಸ ಮಾಡದೆ ತೆಗೆದುಕೊಂಡಿದ್ದರೆ, ಖಂಡಿತವಾಗಿಯೂ ಹೇಳಿ ನಾನು ತನಿಖೆ ಮಾಡಿಸುತ್ತೇನೆ.

**ಶ್ರೀ ಅರವಿಂದ ಕುಮಾರ್ ಅರಳಿ:–** ಮಾನ್ಯ ಸಭಾಪತಿಯವರೇ, ಅದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಈಗಾಗಲೇ ಬೀದರ್, ಔರಾದ್, ಬಾಲ್ಕಿ, ಈ ಮೂರು ತಾಲ್ಲೂಕುಗಳಲ್ಲಿ ಅತಿಯಾಗಿ ದುರುಪಯೋಗವಾಗಿದೆ. ಎಸ್.ಸಿ./ಎಸ್.ಟಿ. ಜನಾಂಗ ಎಲ್ಲಾ ಕಡೆಯಲ್ಲೂ ಓಡಾಡುತ್ತಾರೆ. ರಸ್ತೆಗಳನ್ನು ಸರಿಯಾಗಿ ಮಾಡಬೇಕೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಅದು ಸರಿಯಾಗಿದೆ. ಯಾವ ಓಣಿ ಎಸ್.ಸಿ./ಎಸ್.ಟಿ. ಜನಾಂಗದವರಿಗೆ ಸಂಬಂಧ ಇಲ್ಲ, ಆ ಓಣಿಯಲ್ಲಿ ರಸ್ತೆ ಮಾಡುತ್ತಿದ್ದಾರೆ. ಈ ಬಗ್ಗೆ ಕೇಳಿದರೆ, ನಾವು ಬೇರೆ ಯೋಜನೆಯಲ್ಲಿ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಲೋಕೋಪಯೋಗಿ ಇಲಾಖೆಯಿಂದ ಮಾಡಿದರೆ ಅದೇ ರಸ್ತೆಯಲ್ಲಿ ಮಾಡುತ್ತಾರೆ, ಎಸ್.ಸಿ.ಪಿ/ಟಿ.ಎಸ್.ಪಿ. ಯವರು ಅದೇ ರಸ್ತೆಯನ್ನು ಮಾಡುತ್ತಾರೆ, ಜಿಲ್ಲಾ ಪಂಚಾಯಿತಿಯವರು ಅದೇ ರಸ್ತೆಯನ್ನು ಮಾಡುತ್ತಾರೆ. ಒಂದೇ ರಸ್ತೆಯನ್ನು ತೋರಿಸಿ ಬಿಲ್ ತೆಗೆದುಕೊಳ್ಳುತ್ತಿದ್ದಾರೆ. ಇದರಲ್ಲಿ ಅನೇಕ ಪ್ರಕರಣಗಳಿವೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಅವರ ಹತ್ತಿರ ಇರುವ ಮಾಹಿತಿಯನ್ನು ಕೊಡಲಿ. ನಾನು ನಮ್ಮ ಇಲಾಖೆಯ ಉನ್ನತ ಅಧಿಕಾರಿಗಳಿಂದ ತನಿಖೆ ಮಾಡಿಸುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಅವರು ಬಹಳ ಒಳ್ಳೆಯ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇಲ್ಲದಿದ್ದರೆ ದಲಿತರಿಗೂ ಬೇರೆ ಜಾತಿಯವರಿಗೂ ಈ ರಸ್ತೆಯೇ ಬೇರೆ ಮಾಡಿಬಿಟ್ಟಿತ್ತು. ಯಾರು ಮಾಡಿದರೋ ಏನೋ ಗೊತ್ತಿಲ್ಲ, ನಾನು ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ನಾನು ಯೋಜನಾ ಆಯೋಗದ ಉಪಾಧ್ಯಕ್ಷನಾಗಿ ಇದರ ಬಗ್ಗೆ ಸಾಕಷ್ಟು ಸಲ ಚರ್ಚೆ ಮಾಡಿದ್ದೇನೆ. ಅವರ ಕೇರಿ ಎಷ್ಟು ಇರುತ್ತದೆಯೋ ಅಷ್ಟೆ ಡಾಂಬರ್ ಹಾಕುತ್ತಿದ್ದರು. ಅದರ ಮುಂದೆ ಹೇಗೆ ಹೋಗಬೇಕು? ನಾನು ಎಲ್ಲಾ ದಲಿತ ಶಾಸಕರಿಗೆ ಪ್ರಾರ್ಥನೆ ಮಾಡುತ್ತೇನೆ. ಸಾಮರಸ್ಯ ಬೆಳೆಯಬೇಕು. ಆ ರಸ್ತೆಯಿಂದ ಸಾಮರಸ್ಯ ಹಾಳಾಗುತಿತ್ತು. ನೋಡಿದವರು ಏನು ಹೇಳುತ್ತಿದ್ದರೆಂದರೆ, ಅವರಿಗಷ್ಟೇ ರಸ್ತೆ ಇದೆಯೇನೋ ನಮಗೆ ರಸ್ತೆ ಇಲ್ಲವೇನೋ ಎಂದು ಅಲ್ಲೇ ಶತೃತ್ವ ಬೆಳೆಯುವುದಕ್ಕೆ ಅವಕಾಶ ಆಗುತಿತ್ತು. ಇದನ್ನು ಮುಂದುವರೆಸಿ ಬಹಳ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಇದು ಒಂದನೆಯದು. ಎರಡನೆಯದು, ಇದನ್ನು ಹೇಳುವುದಕ್ಕೆ ಮನಸ್ಸು ನೋಯುತ್ತದೆ. ಸುಮಾರು 30,000 ಕೋಟಿ ರೂಪಾಯಿಗಳನ್ನು ಸರಿಯಾಗಿ ಉಪಯೋಗಿಸಿ ಬಿಟ್ಟರೆ ಐದು ವರ್ಷಗಳಲ್ಲಿ ಒಬ್ಬ ದಲಿತನು ಮನೆ ಇಲ್ಲದೆ ಇರುವುದಿಲ್ಲ, ನಿರುದ್ಯೋಗಿಯಾಗಿರುವುದಿಲ್ಲ. ಆದರೆ ಏನಾಗಿದೆ ಎಂದರೆ, ಬೆಂಗಳೂರಿನಿಂದ ಒಂದು ರೂಪಾಯಿ ಬಿಟ್ಟರೆ ಅವರಿಗೆ 30 ಪೈಸೆ ತಲುಪುತ್ತದೆ. ಈ 70 ಪೈಸೆ ಏನು ಸೋರಿಕೆಯಾಗುತ್ತಿದೆಯೋ ಅದನ್ನು ಕಾಪಾಡಿಬಿಟ್ಟರೆ ಮಾನ್ಯ ಸಚಿವರಿಗೆ ಬಹಳ ಪುಣ್ಯ ಬರುತ್ತದೆ. ಈ ಸಮಾಜವನ್ನು ಯಾವ ರೀತಿ ಬೇರೆ ಸಮಾಜದ ಜೊತೆ ಬೆರೆಸುವುದಕ್ಕೆ ಶಾಲೆಗಳು, ರಸ್ತೆಗಳು, ಇನ್ನು ದೊಡ್ಡ ಸವರ್ಣಿಯರಿದ್ದಾರೆ, ಅವರ ಕೇರಿಗೂ ದಲಿತರಿಗೂ ರಸ್ತೆಯನ್ನು ಮಾಡಿದ್ದೇವೆಂದು ಅವರು ಮಾಡಿದರೆ ಒಳ್ಳೆಯ ಸಂದೇಶ ಹೋಗುತ್ತದೆ. ಆರೂವರೆ ಕೋಟಿ ಜನ, ನಾವು ಒಂದೇ ತಾಯಿಯ ಮಕ್ಕಳು ಎನ್ನುವ ಭಾವನೆಯನ್ನು ನಾವು ನಿರ್ಮಾಣ ಮಾಡಬೇಕಾಗುತ್ತದೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳುತ್ತಿರುವುದು ಖಂಡಿತವಾಗಿಯೂ ಸತ್ಯವಾಗಿದೆ. ದ್ವೇಷ ಬೆಳೆಯುವಂತಹ ಕೆಲಸ ಆಗುತ್ತಿತ್ತು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದಕ್ಕಾಗಿಯೇ ಅದನ್ನು ತೆಗೆದುಬಿಟ್ಟಿದ್ದೇವೆ. ಎರಡನೆಯದು, asset create ಮಾಡುವಂತಹ ಕೆಲಸ ಏಕೆ ಮಾಡಿದ್ದೇವೆಂದರೆ, ಶಾಲಾ ಕಟ್ಟಡ, ಹಾಸ್ಟೆಲ್ ಕಟ್ಟಡ, ಅಂದರೆ ಎಸ್.ಸಿ./ಎಸ್.ಟಿ. ಜನಾಂಗದ ಶಾಲೆ, ವಸತಿ ನಿಲಯ ಮಾಡಿದ್ದೇವೆಂದರೆ, ನಮ್ಮಲ್ಲಿ ಸುಮಾರು 684 Residential Schools ಗಳಿವೆ. 684 ರಲ್ಲಿ 300 ಕ್ಕಿಂತಲೂ ಹೆಚ್ಚು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. 300–400 ಮಕ್ಕಳು ಹೇಗೆ ಬಾಡಿಗೆ ಕಟ್ಟಡದಲ್ಲಿ ಇರುವುದಕ್ಕಾಗುತ್ತದೆ, ಇರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿಯೇ asset create ಮಾಡಬೇಕೆಂದು ಒಂದು ಸಲ 2,400 ಕೋಟಿ ರೂಪಾಯಿಗಳಿಗೆ ಅನುಮೋದನೆ ಕೊಟ್ಟು ಕೆಲಸ ಪ್ರಾರಂಭ ಮಾಡುವುದಕ್ಕೆ ಹೇಳಿದ್ದೇನೆ. ಈಗಾಗಲೇ ಶೇಕಡ 50 ರಷ್ಟು ಸಿದ್ಧವಾಗಿದೆ. ಮಾನ್ಯ ಸದಸ್ಯರಿಗೆ ಇರತಕ್ಕಂಥ ಸಾಮಾಜಿಕ ಕಳಕಳಿಗೆ ನಾನು ಅವರನ್ನು ಅಭಿನಂದಿಸುತ್ತೇನೆ. ಅವರು ಇಸ್ಲಾಂ ಧರ್ಮದಲ್ಲಿ ಹುಟ್ಟಿದರೂ ಕೂಡ ಬಸವ ತತ್ವದಲ್ಲಿ ಬೆಳೆದಿದ್ದಾರೆ.

(ಮುಂದು)

102/3-2-2021/11-40/ಬಿಕೆಪಿ–ಎಕೆ

**ಶ್ರೀ ಸಿ.ಎಂ. ಇಬ್ರಾಹಿಂ:–** ಮಾನ್ಯ ಸಭಾಪತಿಯವರೆ, 1978 ರಲ್ಲಿ ಹಿರಿಯೂರಿನಲ್ಲಿ ಮಾನ್ಯ ಶ್ರೀ ಡಿ.ಮಂಜುನಾಥ್‌ರವರು ಇದ್ದಾಗ ಎಡ ಸಮುದಾಯಕ್ಕೆ ಮಠವನ್ನು ಬೀಳದಂತೆ ಕಟ್ಟಿಕೊಟ್ಟವನು ನಾನು ಎಂದು ನಿಮಗೆ ನಾನು ಒಂದು ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಆಗ ಅಲ್ಲಿನ ಸ್ವಾಮಿಗಳು ಓಡಾಡಲಿಕ್ಕೆ Fiat car ಅನ್ನು ನಾವು ಕೊಡಿಸಿದ್ದೆವು.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೆ, ತಮಗೆ ಇರತಕ್ಕಂತಹ ಸಾಮಾಜಿಕ ಕಳಕಳಿಯ ಕಾಳಜಿಯನ್ನು ನಾನು ಬಹಳ ಸಣ್ಣ ವಯಸ್ಸಿನಿಂದ ನೋಡಿದ್ದೇನೆ. ಅಷ್ಟೇ ಅಲ್ಲದೆ ನಾನು ಒಂದು ಆಲೋಚನೆಯನ್ನು ಮಾಡಿ ಎಸ್.ಸಿ./ಎಸ್.ಟಿ. ಜನಾಂಗದ ಅನುದಾನವೇನಿದೆ, ಸುಮಾರು 24% ಅನ್ನು ಬಜೆಟ್‌ನಲ್ಲಿ ಏನು ಕೊಡುತ್ತೇವೆ, ಪ್ರತಿ ವರ್ಷ ರೂ.29,000 ಕೋಟಿಗಳಿಗಿಂತಲೂ ಹೆಚ್ಚು ಹಣ ಬರುತ್ತದೆ. ಅದಕ್ಕೆ ಮಡಿಕೇರಿಯಲ್ಲಿ ಮತ್ತು ಬಿಜಾಪುರದಲ್ಲಿ army ಯವರ ಶಾಲೆಗಳಿವೆ, ಅದೇ ಮಾದರಿಯಲ್ಲಿ ಅಂದರೆ ನಾನು ಮಿಲಿಟರಿ ಅಧಿಕಾರಿಗಳ ಜೊತೆಯಲ್ಲಿ ಸಂಪರ್ಕ ಮಾಡಿ ಮಾತನಾಡಿದ್ದೇನೆ. ನಾವು grant ಕೊಡುತ್ತೇವೆ. ಪೂರ್ಣ grant ನಮ್ಮದೇ ಆಗಿರುತ್ತದೆ. ಅದಕ್ಕೆ ಬೇಕಾಗಿರುವಂತಹ ಅಂದರೆ residential school ಗೆ ಬೇಕಾಗಿರುವಂತಹ ಭೂಮಿಯೂ ಸಹ ನಮ್ಮದೇ ಆಗಿರುತ್ತದೆ. ಬೇಕಾಗಿರುವಂತಹ ಅನುದಾನವೂ ಸಹ ನಮ್ಮದೇ ಆಗಿರುತ್ತದೆ. ನನ್ನದು ಒಂದೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

condition ಏನೆಂದರೆ 50% ಮಕ್ಕಳಿಗೆ ಅಂದರೆ ನಮ್ಮ ರಾಜ್ಯದ ಎಸ್.ಸಿ./ಎಸ್.ಟಿ. ವರ್ಗದ ವಿದ್ಯಾರ್ಥಿಗಳಿಗೆ ಕೊಡಬೇಕು. ಉಳಿದ 50% ಅನ್ನು ನೀವು ಯಾವ ರೀತಿ selection ಮಾಡಿ ಕೊಡುತ್ತೀರೋ ಎಂದು ಅವರ ಜೊತೆಗೆ ಸಂಪರ್ಕ ಮಾಡಿ ಕೊಡಿ ಎಂದು ನಾನು ಹೇಳಿದ್ದೆ. ಅದನ್ನು ಈ ವರ್ಷ ಮಾಡಬೇಕಾಗಿತ್ತು. ಆದರೆ, ಈ ಕೊರೊನಾ ಸಲುವಾಗಿ ಸ್ವಲ್ಪ ಹಿನ್ನೆಡೆಯಾಗಿ ಹಾಗೆಯೇ ಉಳಿದಿದೆ. ನನ್ನ ಉದ್ದೇಶವೇನೆಂದರೆ, ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ನಾಲ್ಕು residential schools ಅಂದರೆ management ಎಲ್ಲಾ ಅವರದ್ದೇ ಆಗಿರುತ್ತದೆ. ಹಣ ನಮ್ಮದು, ನಮ್ಮ ವಿದ್ಯಾರ್ಥಿಗಳಿಗೇ ಕೊಡಬೇಕಾಗುತ್ತದೆ. ವಿದ್ಯಾರ್ಥಿಗಳು ಆ ಲೆವೆಲ್‌ಗೆ ಬೆಳೆಯಬೇಕಾಗುತ್ತದೆ. ಈಗ ಸೈನಿಕ್ ಶಾಲೆಗಳಲ್ಲಿ ಓದಿದಂತಹ ವಿದ್ಯಾರ್ಥಿಗಳು ಅಂದರೆ ಬಿಜಾಪುರದಲ್ಲಿ ನಮ್ಮ ಮನೆಯ ಬಾಗಿಲ ಹತ್ತಿರ ಸೈನಿಕ್ ಶಾಲೆಯಿದೆ. ಅಲ್ಲಿ ಓದಿದಂತಹ ವಿದ್ಯಾರ್ಥಿಗಳು ಯಾರೂ ಕೂಡ ನಿರುದ್ಯೋಗಿಗಳಾಗಿಲ್ಲ, officers ಆಗಿದ್ದಾರೆ, ಒಳ್ಳೊಳ್ಳೆಯ ಅಧಿಕಾರದಲ್ಲಿದ್ದಾರೆ, ಹೆಚ್ಚು ಸಂಖ್ಯೆಯಲ್ಲಿ ಮಿಲಿಟರಿಗೆ ಸೇರಿದ್ದಾರೆ. ಈಗ ಮಾನ್ಯ ಬಸವರಾಜ್ ಹೊರಟ್ಟಿಯವರು ಇಲ್ಲಿಯೇ ಇದ್ದಾರೆ. ಬಹುಶ: ನನಗೆ ಅನಿಸುತ್ತದೆ North Karnataka ದಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿ ಮಿಲಿಟರಿಗೆ ಸೇರಿಕೊಂಡಿದ್ದಾರೆ ಎಂದರೆ ಅವರು ನಮ್ಮವರು ಅಂದರೆ ಮುಧೋಳದ ತಾಲ್ಲೂಕಿನವರು. ಅದಕ್ಕೆ ಕಾರಣವೇನೆಂದರೆ ನಮ್ಮವರು Deputy Chief of Indian Army ಯವರು ಇದ್ದರು. Major Ramesh Halagali ಯವರು ಇದ್ದರು. ಹೀಗಾಗಿ ನನಗೆ ಅದು ಒಂದು impression ನಿಂದ ಅದನ್ನೂ ಮಾಡಬೇಕೆಂಬ ಆಸೆಯಿತ್ತು. ಆದರೆ ಈ ಕೊರೊನಾ ಸಲುವಾಗಿ ಹಾಗೆಯೇ ಉಳಿಯಿತು. ಮುಂದಿನ ದಿನಮಾನಗಳಲ್ಲಿ ಖಂಡಿತವಾಗಿಯೂ ನಾಲ್ಕು residential schools ಅನ್ನು ಅಂದರೆ ಸೈನಿಕ್ ಶಾಲೆಗಳನ್ನು, ಅಂದರೆ military management ಗೆ ನಾವು ಏನೂ ಅದರಲ್ಲಿ ಹಸ್ತಕ್ಷೇಪ ಮಾಡುವ ಹಾಗೆ ಇಲ್ಲ. ಅವರಿಗೇ ಕೊಟ್ಟುಬಿಡುವುದು. ಹಣ ಕೊಟ್ಟು ಮಾಡಿಸಬೇಕೆಂಬ ನಮ್ಮ ಆಲೋಚನೆಯಿದೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಸ್ವಲ್ಪ ಬೇಗ ಮುಗಿಸಿ. ಟೈಮ್ ಕಡಿಮೆಯಿದೆ.

**Sri GOVIND M. KARJOL:** Yes sir.

**ಶ್ರೀ ಎಸ್.ಆರ್.ಪಾಟೀಲ್(ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ಸಚಿವರು ತೆಗೆದುಕೊಂಡಂತಹ ನಿರ್ಣಯ ಇಲ್ಲಿ ವಿವರಣೆ ಕೊಟ್ಟಿದ್ದು ನನಗಂತೂ ಬಹಳ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತೃಪ್ತಿಕರವೆನಿಸಿದೆ. ಈ ಭಾರತ ದೇಶ ಹಳ್ಳಿಗಳಿಂದ ಕೂಡಿದೆ. ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ, ಯಾವುದೇ ಗ್ರಾಮಕ್ಕೆ ಹೋದರೂ ಸಹಿತ ಪ್ರಸ್ತುತ ಜಾತಿ–ಜನಾಂಗದವರಿಗೆ separate colony ಇರುತ್ತದೆ. Why this has happened? ಆ system ಗೆ ಕೊನೆಯಾಡಲಿಕ್ಕೆ ಅವರು ನಿರ್ಣಯ ತೆಗೆದುಕೊಂಡಿದ್ದಾರೆ. ಗ್ರಾಮದಲ್ಲಿರುವಂತಹ ಸವರ್ಣೀಯರ ಸ್ಥಳದಲ್ಲಿರತಕ್ಕಂತಹ ದೇವಾಲಯಗಳು ಬರುವುದಕ್ಕೂ ಸಹಿತ ಆ ಹಣ ಉಪಯೋಗ ಮಾಡುವುದು ಒಳ್ಳೆಯದು. ಅಂದರೆ, ದಲಿತರು ಹಾಗೂ ಸವರ್ಣೀಯರ ಮಧ್ಯೆ ಸಮನ್ವಯ ಸಾಧನೆ ಮಾಡುವುದಕ್ಕೆ ತಾವು ತೆಗೆದುಕೊಂಡಂತಹ ದಿಟ್ಟ ನಿರ್ಣಯವನ್ನು ನಾನು ಹೃದಯಪೂರ್ವಕವಾಗಿ ಸ್ವಾಗತ ಮಾಡುತ್ತೇನೆ. ಏಕೆ ಇಷ್ಟು ವರ್ಷಗಳ ಕಾಲ ನಡೆದುಕೊಂಡು ಬಂದಿದೆ. ಎಲ್ಲಿ ಬೇಕಾದರೂ ನೋಡಿ, ಹರಿಜನರ ಕೇರಿ separate ಇದೆ. Why? ಅದು ಏನು ವ್ಯವಸೆ ಇತ್ತಲ್ಲಾ? ಆ ವ್ಯವಸ್ಥೆಗೆ ಕೊನೆಯಾಡುವುದಕ್ಕೆ ನೀವು ಅಲ್ಲಿ ಇದ್ದು ಮಾಡಿದ್ದೀರಲ್ಲಾ ಅದಕ್ಕೆ ನಿಮಗೆ ವಿಶೇಷವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

**ಶ್ರೀ ಹೆಚ್. ವಿಶ್ವನಾಥ್(ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಗಳೇ, 2014ನೇ ಇಸವಿಯಲ್ಲಿ ಬೆಳಗಾವಿ ಅಧಿವೇಶನದಲ್ಲಿ ತೆಗೆದುಕೊಂಡಂತಹ ತೀರ್ಮಾನದಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರಿಗೆ ಸುಮಾರು ರೂ.28,500 ಸಹಸ್ರ ಕೋಟಿಗಳನ್ನು ಕೊಡಬೇಕು ಎನ್ನುವಂತಹದ್ದು. ಅದು ಏತಕ್ಕೋಸ್ಕರವಾಗಿ ಎಂದರೆ ಅವರ ಆರ್ಥಿಕ, ಶೈಕ್ಷಣಿಕ ಹಾಗೂ ಔದ್ಯೋಗಿಕ ಪ್ರಗತಿಗಾಗಿ ತೆಗೆದುಕೊಂಡಂತಹ ತೀರ್ಮಾನವಾಗಿದೆ. ನಿಜ, ಹಿಂದೆ ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರದಲ್ಲಿ ಅದನ್ನು ಕೊಟ್ಟರು. ಹಣ ಕೊಟ್ಟರೇ ಹೊರತು ಸ್ಕೀಂ ಮಾಡಲಿಲ್ಲ. ನೋಡಿ ನಮ್ಮ ಮಾನ್ಯ ಮಂತ್ರಿಗಳು ಈಗ ಸ್ಕೀಂ ಬಗ್ಗೆ ಹೇಳುತ್ತಿದ್ದಾರೆ. ಎಷ್ಟು ಎಂದರೆ 2015 ಎಲ್ಲಿ? 2021ನೇ ಸಾಲಿನಲ್ಲಿ ನಾವು ಇದ್ದೇವೆ, ನಾವು ಅದಕ್ಕೆ ಈಗ ಸ್ಕೀಂ ಹೇಳುತ್ತಿದ್ದೇವೆ. ಸುಮಾರು ರೂ. ಒಂದು ಲಕ್ಷ ಕೋಟಿಗಳು ಹರಿದು ಹೋಗಿದೆ. ಸುಮ್ಮನೆ ಕೇರಿಗಳಲ್ಲಿ ಅಲ್ಲಿ ಇಲ್ಲಿ ಎಲ್ಲಾ ಗುಂಡಿಗಳನ್ನು ಒಡೆದಿದ್ದಾರೆ. It is a massive loot in the name of the SC and ST. ಇದನ್ನು ನೋಡಿರುವವರು ಯಾರು? ಈಗ ಪಾಪ ಮಾನ್ಯ ಗೋವಿಂದ ಎಂ.ಕಾರಜೋಳರವರು ಸ್ಕೀಂ ಬಗ್ಗೆ ಹೇಳುತ್ತಿದ್ದಾರೆ. ಆದರೆ, ನಮ್ಮಲ್ಲಿ ಶಾಸಕರು, ದಲಿತ ಶಾಸಕರುಗಳು, ಪರಿಶಿಷ್ಟ ಪಂಗಡದ ಶಾಸಕರುಗಳಿಗೆ ಯಾರಿಗೂ ಬುದ್ಧಿಯಿಲ್ಲವೇ? ಅವರನ್ನು ಕೂರಿಸಿ ಯಾವುದಾದರೂ ಮೀಟಿಂಗ್‌ಗಳು ಆಗಿವೆಯೇ? ನಮ್ಮ ಸಮುದಾಯಕ್ಕೆ ಎಂದು ಸರ್ಕಾರ ಕೊಟ್ಟಿರುವಂತಹ ಇಷ್ಟೊಂದು ಹಣ, ನಾವು ಹೇಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ಕಿಂಗಳನ್ನು ಮಾಡಬೇಕು, work out ಮಾಡಬೇಕು, ಅದು ಇಲ್ಲಿಯತನಕ ಕೂಡ ಆಗಲಿಲ್ಲ. ಸರ್ಕಾರ ಹಣ ಕೊಡುತ್ತಿದೆಯೇ ಹೊರತು, ಇಲ್ಲಿ ನೋಡಿ Planning Commission ಅಧ್ಯಕ್ಷರು ಎದ್ದು ನಿಂತು ಅದನ್ನೇ ಹೇಳಿದರು, ಬಹಳ ಸಂತೋಷವಾಯಿತು, ನೀವು ಎಲ್ಲಾ ಕೇರಿಗಳಿಗೆ . . . ಸ್ವಾಮಿ ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟ ಹಣದಲ್ಲಿ ನಮ್ಮ ಕೊಡಗಿನಲ್ಲಿ ಅಂದರೆ ಶ್ರೀಮತಿ ವೀಣಾ ಅಚ್ಚಯ್ಯರವರು ಇಲ್ಲಿಯೇ ಇದ್ದಾರೆ, estate owners ಮನೆಗಳಿಗೆ ರಸ್ತೆಗಳಾಗಿವೆ. ಆದರೆ, ಪರಿಶಿಷ್ಟ ಪಂಗಡದವರ ಮನೆಗೆ ಹೋಗುವುದಕ್ಕೆ ರಸ್ತೆಗಳು ಇನ್ನೂ ಆಗಿಲ್ಲ. ನೀವು ಈ ರೀತಿ ತೆಗೆದುಕೊಂಡರೆ, ಈ ರೀತಿ ಈಗ ಚರ್ಚೆಯಾಯಿತಲ್ಲಾ, ಈ ಲೈನ್‌ನಲ್ಲಿ ತೆಗೆದುಕೊಂಡು ಬಿಟ್ಟರೆ ದಲಿತರಿಗೆ ಸಿಗುವುದೂ ಸಹಿತ ಸಿಗುವುದಿಲ್ಲ. ಅದಕ್ಕೆ ಸರಿಯಾದ ರೀತಿಯಲ್ಲಿ ಒಂದು ಮೀಟಿಂಗ್ ಕರೆಯಿರಿ. ಒಂದೆರಡು ದಿವಸಗಳ ಕಾಲ outskirts ನಲ್ಲಿ ಎಲ್ಲಾದರೂ ಕುಳಿತುಕೊಂಡು ಇದಕ್ಕೋಸ್ಕರವಾಗಿ ಒಂದು brainstorming session ಆಗಲಿ. ಇಷ್ಟೊಂದು ಕೋಟಿಗಳ ಹಣವಿದೆ. ಆದರೆ, ಆವತ್ತಿನ ದಿವಸ 2014ನೇ ಸಾಲಿನ ಬೆಳಗಾವಿ ಅಧಿವೇಶನದಲ್ಲಿ ಬಹಳ ಅಚ್ಚುಕಟ್ಟಾಗಿ ಕಾನೂನನ್ನು ಮಾಡಿ ಹಣವನ್ನು ಇಟ್ಟಿದ್ದಾರೆ. ಇಲ್ಲಿಯವರೆಗೆ ಒಂದು ಲಕ್ಷ ಕೋಟಿಗಳಿಗೂ ಮೀರಿ ಹಣ ಹರಿದಿದೆ. ಆದರೆ, development ಏನಾಗಿದೆ ಎಂದು ನಾವು ನೋಡಿದ್ದೇವೆಯೇ? ದಯಮಾಡಿ ನಮ್ಮ ಗೋವಿಂದ ಎಂ.ಕಾರಜೋಳ ಸಾಹೇಬರು ಹಾಗೂ ನಮ್ಮ ಶೋಷಿತ ಸಮುದಾಯದ ಶಾಸಕರುಗಳ ಮುಖಂಡರುಗಳಲ್ಲಿ ಈ ಹಣವನ್ನು ಹೇಗೆ ಖರ್ಚು ಮಾಡಬೇಕು? What are all the programmes that has to be drawn properly; ಅಂತಹ ಕಾರ್ಯಕ್ರಮಗಳನ್ನು ರೂಪಿಸಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ–379**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಸ್.ವ್ಹಿ. ಸಂಕನೂರ:–** ಮಾನ್ಯ ಸಭಾಪತಿಗಳೇ, ಲೋಕೋಪಯೋಗಿ ಇಲಾಖೆಯಲ್ಲಿ ಮಂಜೂರಾದಂತಹ A, B, C ಮತ್ತು D ವೃಂದದ ಹುದ್ದೆಗಳೆಷ್ಟು, ಸಧ್ಯಕ್ಕೆ ಎಷ್ಟು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಎಷ್ಟು ಹುದ್ದೆಗಳು ಖಾಲಿಯಿವೆ? ಇದರ ಬಗ್ಗೆ ಈಗಾಗಲೇ ಮಾಹಿತಿ ಕೊಟ್ಟಿದ್ದೆ ಹಾಗೂ ಏಜೆನ್ಸಿ ಮೂಲಕ ಕೂಡ ಎಷ್ಟು ಜನರು ಕೆಲಸ ಮಾಡುತ್ತಿದ್ದಾರೆ ಎಂದು ಪ್ರಶ್ನೆ ಕೇಳಿದ್ದೆ. ಸರಿಯಾದಂತಹ, ವಿವರವಾದಂತಹ ಮಾಹಿತಿ ಕೊಟ್ಟಿದ್ದಾರೆ. ನನ್ನ ಪ್ರಶ್ನೆ ಈಗ ಏನು ಎಂದರೆ, ವಿಶೇಷವಾಗಿ 'B' category ಹುದ್ದೆಗಳು 1,899 Assistant Engineers ಮಂಜೂರಾಗಿದ್ದು, ಆದರಲ್ಲಿ 671 ಹುದ್ದೆಗಳು ಖಾಲಿಯಿವೆ. ಹಾಗೆಯೇ 'C' category ಯಲ್ಲಿ 2,047 Junior Engineers, ಹುದ್ದೆಗಳು ಮಂಜೂರಾಗಿದ್ದು, 674 ಹುದ್ದೆಗಳು ಇನ್ನೂ ಖಾಲಿಯಿವೆ. ಖಾಲಿಯಿರುವ ಹುದ್ದೆಗಳು ಯಾವಾಗ ನೇಮಕಾತಿ ಮಾಡಿಕೊಳ್ಳುತ್ತೀರಿ ಎಂದು ಕೇಳಿದ್ದಕ್ಕೆ ಕೆ.ಪಿ.ಎಸ್.ಸಿ.ಗೆ ಈಗಾಗಲೇ ನೇಮಕಾತಿ ಮಾಡುವುದಕ್ಕೆ ನಾವು ಹೇಳಿದ್ದೇವೆ. ಕೋರ್ಟ್‌ನಲ್ಲಿ ಸ್ಟೇ ಬಂದಿದೆ, ಹಾಗಾಗಿ ಆ ಪ್ರಕ್ರಿಯೆ ನಿಂತಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಹಾಗಾಗಿ ನಾನು ಸರ್ಕಾರಕ್ಕೆ ತಮ್ಮ ಮೂಲಕ ಸಚಿವರಲ್ಲಿ ಏನು ವಿನಂತಿ ಮಾಡುತ್ತೇನೆಂದರೆ, ದಯವಿಟ್ಟು ನಿನ್ನೆ ಇದನ್ನು ತೋಟಗಾರಿಕೆ ಇಲಾಖೆಯಲ್ಲಿ ಏನು ಬಹಳಷ್ಟು ಹುದ್ದೆಗಳು ಖಾಲಿಯಿದ್ದವು ಮತ್ತು ನೇಮಕಾತಿ ವಿಳಂಬವಾದ ಸಮಯದಲ್ಲಿ ಬಹಳಷ್ಟು ಚರ್ಚೆಯಾಗಿದೆ. ಆ ದಿಸೆಯಲ್ಲಿ ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಕೋರ್ಟ್‌ನಲ್ಲಿ ಏನು ಸ್ಟೇ ಆಗಿದೆ, ಅದನ್ನು ದಯವಿಟ್ಟು vacate ಮಾಡಿಸಿ ನೇಮಕಾತಿ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಏಜೆನ್ಸಿ ಮೂಲಕ ಎಷ್ಟು ಜನರು ಕೆಲಸ ಮಾಡುತ್ತಾರೆ ಎಂದರೆ, 'A' category ಯಲ್ಲಿ ಇಬ್ಬರು ಹಾಗೂ 'B' category ಯಲ್ಲಿ 25 ಜನರು ಹಾಗೂ 'C' category ಯಲ್ಲಿ 148 ಜನರು ಏಜೆನ್ಸಿ ಮೂಲಕ ಕೆಲಸ ಮಾಡುತ್ತಿದ್ದಾರೆ ಎಂದು ಇಲಾಖೆಯವರು ಹೇಳುತ್ತಿದ್ದಾರೆ, ಏಜೆನ್ಸಿ ಅಡಿಯೊಳಗಡೆ ಅವರು appointment ಆಗಿದ್ದಾರೆ ಎಂದು ಹೇಳುತ್ತಾರೆ. ಏಜೆನ್ಸಿ ಮೂಲಕ ಎಂದರೆ . . . .

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಿನ್ನೆ ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಿದೆ. ಏಜೆನ್ಸಿ ಮೂಲಕ ನೇಮಕಾತಿ ಮಾಡುವುದನ್ನು ಸಂಪೂರ್ಣವಾಗಿ ಬಂದ್ ಮಾಡುಬೇಕು. ಏಕೆಂದರೆ, ಇಲ್ಲಿ ಬಹಳಷ್ಟು ಮೋಸ ಹಾಗೂ ಅನ್ಯಾಯವಾಗುತ್ತದೆ. ನೀವು ಆ ನೌಕರರಿಗೆ ಒಂದು ವೇಳೆ ರೂ.15,000/-ಗಳನ್ನು fix ಮಾಡಿದರೆ ಅಲ್ಲಿ ರೂ.15,000/-ಗಳನ್ನು ಅಲ್ಲಿ ಕೊಡುವ ಆಗಿಲ್ಲ. ಕೇವಲ ರೂ.8,000/-ಗಳನ್ನು ಮಾತ್ರ ಕೊಡುತ್ತಾರೆ, ಅದನ್ನು ಅವರು ತಿಂದು ಬಿಡುತ್ತಾರೆ. ಹೀಗಾಗಿ ಏಜೆನ್ಸಿ ಮೂಲಕ ಹುದ್ದೆಗಳನ್ನು ಭರ್ತಿ ಮಾಡುವ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದುಹಾಕಿ, ಒಂದು Consolidated Pay ರೀತಿ ಬೇರೆ ಒಂದು ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ನಾನು ವಿನಂತಿ ಮಾಡುತ್ತೇನೆ. ಮಾನ್ಯ ಸಚಿವರು ಇದಕ್ಕೆ ಉತ್ತರ ಕೊಡಬೇಕಾಗಿ ವಿನಂತಿ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪರಿಯವರೆ, ಕೋರ್ಟ್‌ನಿಂದ ಬೇಗನೇ stay vacate ಮಾಡಿಸಿ ಎಂದರು. ಈಗಾಗಲೇ argument ನಡೆಯುತ್ತಿದೆ. ಇವತ್ತೂ ಕೂಡ ಕೋರ್ಟ್‌ನಲ್ಲಿ argument ನಡೆಯುತ್ತಿದೆ. ಬಹುಶ: 2-3 ದಿವಸಗಳಲ್ಲಿ ಕೋರ್ಟ್‌ನಲ್ಲಿ ಅಂತಿಮ ಆದೇಶವಾಗಬಹುದು. ಆದಕೂಡಲೇ ಕಟ್ಟಡ ಪ್ರಾರಂಭ ಮಾಡಿ ನಿಯಮಾನುಸಾರ ತೆಗೆದುಕೊಳ್ಳುವುದಕ್ಕೆ ಸರ್ಕಾರ ಸಿದ್ಧವಾಗಿದೆ, ಅದು ಒಂದು. ಇನ್ನೊಂದು ಎರಡನೆಯದಾಗಿ, ಹೊರ ಗುತ್ತಿಗೆ ಆಧಾರದ ಮೇಲೆ ಎಂದು ಹೇಳಿದ್ದೀರಿ. ಹೊರ ಗುತ್ತಿಗೆ ಮೇಲೆ ಎಂದರೆ Quality Control Laboratory ಯೊಳಗೆ ಮತ್ತು ಕೆಲವು ಕಡೆ ಸ್ವಲ್ಪ ತೆಗೆದುಕೊಂಡಿದ್ದೇವೆ. ಅದರಲ್ಲಿಯೂ 'C' Group ನಲ್ಲಿ ಕೆಲವು Clerks, Computer Operators ಮತ್ತು ಉಳಿದಂತಹ ಹುದ್ದೆಗಳನ್ನು ತೆಗೆದುಕೊಂಡಿದ್ದೇವೆ. ಡ್ರೈವರ್ ಹುದ್ದೆಗಳು ಮತ್ತು essential ಇರುವಂತಹ ಹುದ್ದೆಗಳನ್ನು ತೆಗೆದುಕೊಂಡಿದ್ದೇವೆ. ನಮ್ಮಲ್ಲಿ ಸಾಧ್ಯವಾದಷ್ಟು ಹುದ್ದೆಗಳನ್ನು ಹೊರ ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವುದೇ ಇಲ್ಲ. ಎಲ್ಲಿ ಅನಿವಾರ್ಯತೆಯಿರುತ್ತದೆ ಅಲ್ಲಿ ಸ್ವಲ್ಪ ತೆಗೆದುಕೊಂಡಿದ್ದೇವೆ. ಈಗ regular recruitment ಆದಮೇಲೆ ಅಂದರೆ ಸುಮಾರು 900 ಕ್ಕಿಂತಲೂ ಹೆಚ್ಚು ಜನರು regular recruitment ಆಗಿ ಬರುತ್ತಾರೆ, 2-3 ತಿಂಗಳುಗಳಲ್ಲಿ ಆ process complete ಆಗುತ್ತದೆ. ಅದಕ್ಕೆ ಖಂಡಿತವಾಗಿಯೂ ವ್ಯವಸ್ಥೆಯನ್ನು ಮಾಡುತ್ತೇವೆ.

(ಮುಂದು . . . )

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(103) 03.02.2021 11.50 ಎಸ್‌ವಿ-ಎಕೆ**

**ಶ್ರೀ ಗೋವಿಂದ ಎಂ. ಕಾರಜೋಳ (ಮುಂದು):-**

ವಾಹನ ಚಾಲಕರು ಈ ರೀತಿಯಾದ essential ಇರುವ ಹುದ್ದೆಗಳನ್ನು ತೆಗೆದುಕೊಂಡಿದ್ದೇವೆ. ನಾವು ಸಾಧ್ಯವಾದಷ್ಟು ಹೊರಗುತ್ತಿಗೆಯ ನೌಕರರನ್ನು ತೆಗೆದುಕೊಳ್ಳುವುದೇ ಇಲ್ಲ. ಅನಿವಾರ್ಯತೆ ಇರುವ ಕಡೆಗಳಲ್ಲಿ ಸ್ವಲ್ಪ ತೆಗೆದುಕೊಂಡಿದ್ದೇವೆ. 900ಕ್ಕಿಂತಲೂ ಹೆಚ್ಚು ಜನ regular recruitment ಆಗಿ ಬರುತ್ತಾರೆ. ಇನ್ನು ಎರಡು ಮೂರು ತಿಂಗಳುಗಳಲ್ಲಿ ಆ ಪ್ರಕ್ರಿಯೆಯೇ ಮುಕ್ತಾಯಗೊಳ್ಳಲಿದೆ. ಅದಕ್ಕೆ ಖಂಡಿತವಾಗಿಯೂ ವ್ಯವಸ್ಥೆಯನ್ನು ಮಾಡಲಾಗುತ್ತದೆ.

**ಶ್ರೀ ಎಸ್.ವ್ಹಿ.ಸಂಕನೂರ:-** ಮಾನ್ಯ ಸಚಿವರಲ್ಲಿ ನನ್ನ ಇನ್ನೊಂದು ಪ್ರಶ್ನೆಯೇನೆಂದರೆ, ಈಗ ಕೊಟ್ಟಿರುವ vacancy position ಪಟ್ಟಿಯ ಕೆಳಗಡೆ ಒಂದು Foot Note ಅನ್ನು ಹಾಕಲಾಗಿದೆ. ಸದರಿ ಮೂರು ಇಲಾಖೆಗಳಿಗೆ ಅಂದರೆ ಲೋಕೋಪಯೋಗಿ, ಜಲಸಂಪನ್ಮೂಲ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳಿಗೆ bifurcation ವರ್ಗಾವಣೆ ಪ್ರಕ್ರಿಯೆಗೆ ಆದೇಶ ಮಾಡಲಾಗಿದೆಯೆಂದು ಹೇಳಿದ್ದು, bifurcation ನಂತರ ಇಷ್ಟು ಹುದ್ದೆಗಳು ಉಳಿಯುತ್ತವೆಯೇ ಹೇಗೆ ಎಂಬುದು ನನ್ನ ಪ್ರಶ್ನೆ.

**ಶ್ರೀ ಗೋವಿಂದ ಎಂ. ಕಾರಜೋಳ:-** ಮಾನ್ಯ ಸಭಾಪತಿಯವರೇ, ಇಲಾಖೆಗಳು bifurcation ಆಗಬೇಕೆಂದು ಕಳೆದ 25 ವರ್ಷಗಳಿಂದ ಅಸೋಸಿಯೇಷನ್‌ನವರ ಬೇಡಿಕೆ ಇತ್ತು. ಆದರೆ ಅದರಲ್ಲಿ ಅಂತಿಮ ನಿರ್ಧಾರವನ್ನು ಯಾರೂ ತೆಗೆದುಕೊಳ್ಳದೆ ಬಾಕಿ ಉಳಿದಿತ್ತು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ನಿನ್ನೆಯ ದಿನವೂ ಇದರ ಬಗ್ಗೆ ಚರ್ಚೆಯಾಗಿದೆ. ಎಲ್ಲಾ ಇಲಾಖೆಗಳಲ್ಲಿಯೂ ಹೊರಗುತ್ತಿಗೆ ಆಧಾರದಲ್ಲಿ ನೌಕರರನ್ನು ತೆಗೆದುಕೊಳ್ಳಲಾಗುತ್ತಿದ್ದು, ತೆಗೆದುಕೊಳ್ಳುವ ರೀತಿಯನ್ನು ಮಾನ್ಯ ಉಪಮುಖ್ಯಮಂತ್ರಿಗಳು ತಮ್ಮ ಲೋಕೋಪಯೋಗಿ ಇಲಾಖೆಯಲ್ಲಿ ನೋಡುತ್ತಿದ್ದಾರೆ. ಒಟ್ಟು ರಾಜ್ಯದಲ್ಲಿರತಕ್ಕಂತಹ ವಿವಿಧ ಇಲಾಖೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇರೆಗೆ ನೌಕರರನ್ನು ತೆಗೆದುಕೊಳ್ಳುವುದರಿಂದ ಅರ್ಹ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಇದರ ಜೊತೆಗೆ ಹೊರಗುತ್ತಿಗೆ ಮಾಡುವ ಸಂದರ್ಭದಲ್ಲಿ ಕಂಪನಿಗಳು ಮಂಜೂರಾದ ಹಣದಲ್ಲಿ ಶೇ.25-40ರವರೆಗೆ ಹಣವನ್ನು ತೆಗೆದುಕೊಳ್ಳುತ್ತವೆ. ನಿಜವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಲ್ಲಿ ಕೆಲಸ ಮಾಡುವವರ ಖರ್ಚು ರೂ.15,000 ಆಗಿರುತ್ತದೆ. ಆದರೆ ಅವನಿಗೆ ರೂ.8000 ಅಥವಾ 9000 ಮಾತ್ರ ಪಾವತಿಯಾಗುತ್ತದೆ. ಇದರಿಂದ ನೌಕರರ ಶೋಷಣೆಯಾಗುತ್ತದೆ ಎನ್ನುವುದನ್ನು ತಮ್ಮ ಮೂಲಕ ಮಾನ್ಯ ಸಚಿವರ ಗಮನಕ್ಕೆ ತರುತ್ತಾ, ಈ ಹುದ್ದೆಗಳನ್ನು ಖಾಯಂ ಆಗಿ ಭರ್ತಿ ಮಾಡುವುದಕ್ಕೆ ಸರ್ಕಾರ ಮುಂದಾಗಬೇಕು ಎಂದು ವಿನಂತಿ ಮಾಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, 20 ವರ್ಷಗಳಿಂದ ಇಲಾಖೆಗಳ bifurcation ಮಾಡುವ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳದೆ ಹಾಗೆಯೇ ಉಳಿದಿತ್ತು. ಅದನ್ನು ಮಾಡಲಿಕ್ಕೆ ಕಾರಣವೂ ಇದೆ. ಮೊದಲು ಲೋಕೋಪಯೋಗಿ ಇಲಾಖೆ ಒಂದೇ ಇತ್ತು. ಈ ಎಲ್ಲಾ Engineering Cell ಇರುವ ಇಲಾಖೆಗಳಿಗೆ ಲೋಕೋಪಯೋಗಿ ಇಲಾಖೆಯೇ ಮಾತೃ ಇಲಾಖೆಯಾಗಿತ್ತು. ಈಗ ಜಲಸಂಪನ್ಮೂಲ ಇಲಾಖೆಯವರು ಪ್ರತ್ಯೇಕ recruitment ಮಾಡಿಕೊಂಡರು. ಅವರು ಪ್ರತ್ಯೇಕವಾಗಿ Cadre and Recruitment Rules ಅನ್ನು frame ಮಾಡಿದರು. ಅದೇ ರೀತಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ಪ್ರತ್ಯೇಕ Cadre and Recruitment Rules ಅನ್ನು frame ಮಾಡಿಕೊಂಡರು. ಹೀಗಾಗಿ ಈಗ ಇದು ಒಂದೇ ಇಲಾಖೆಯಾಗಿ ಉಳಿದಿಲ್ಲ. ಈಗ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲು ಐದಾರು ಸಭೆಗಳನ್ನು ನಡೆಸಿದ್ದೇನೆ. ಅದು ಅಂತಿಮ ಹಂತದಲ್ಲಿದ್ದು, ಇಲಾಖೆಯ bifurcation ಅನ್ನು ಆದಷ್ಟು ಬೇಗನೆ ಮುಗಿಸುವಂತಹ ಕೆಲಸವನ್ನು ನಾನು ಖಂಡಿತವಾಗಿಯೂ ಮಾಡುತ್ತೇನೆ.

ಇನ್ನು ಮಾನ್ಯ ಕವಟಗಿಮಠ ಅವರು ಹೇಳಿದರು. ಖಾಸಗಿ ಏಜೆನ್ಸಿಗಳ ಮೂಲಕ ತೆಗೆದುಕೊಳ್ಳುವುದರಿಂದ harassment ಆಗುತ್ತದೆ. ಅರ್ಹ ವ್ಯಕ್ತಿಗಳಿಗೆ ಸಿಗುವುದಿಲ್ಲ ಎಂದು ಹೇಳಿದರು. ಅಷ್ಟೇ ಅಲ್ಲದೆ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಲ್ಲಿ ಆಗಿರುವಂತಹ ಅನ್ಯಾಯವೇನೆಂದರೆ ನಮ್ಮ ಸಾಮಾಜಿಕ ನ್ಯಾಯಕ್ಕೆ ಹೊಡೆತ ಬೀಳುತ್ತಿದೆ. ಹೊರಗುತ್ತಿಗೆಯ ಮೇಲೆ ತೆಗೆದುಕೊಳ್ಳುವುದರಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸಿಗಬೇಕಾಗಿದ್ದ ಅವಕಾಶಗಳಿಂದ ಅವರು ವಂಚಿತರಾಗುತ್ತಿದ್ದಾರೆ. ಆ ಕಾರಣಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಖಾಸಗಿ ಏಜೆನ್ಸಿಗಳ ಮೂಲಕ ಯಾರನ್ನೂ ತೆಗೆದುಕೊಳ್ಳಬಾರದು. ತೆಗೆದುಕೊಳ್ಳುವುದಾದರೆ ಸರ್ಕಾರಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಂಸ್ಥೆಯಾದ ಕಿಯೋನಿಕ್ಸ್ ಮುಖಾಂತರ ತೆಗೆದುಕೊಳ್ಳಲಿ ಎಂದು ಮಾಡಿದ್ದೇವೆ. ಬಹುಶಃ ತಾವು ದಿನಪತ್ರಿಕೆಗಳಲ್ಲಿ ಓದಿರಬಹುದು. ನಮ್ಮ procedure, Cadre and Recruitment Rules, ಮೀಸಲಾತಿ ವ್ಯವಸ್ಥೆಯೊಳಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದೇವೆ. ಈಗ ನಮ್ಮ ಜಿಲ್ಲೆಯಲ್ಲಿ cancel ಮಾಡಿ ಇದೇ ಮಾದರಿಯಲ್ಲಿ ತೆಗೆದುಕೊಳ್ಳುತ್ತಿದ್ದೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಚಿವರೇ, ಹೊರಗುತ್ತಿಗೆಯ ಮುಖಾಂತರ ನೇಮಕ ಮಾಡುವುದು ನಮ್ಮ ಬಾಗಲಕೋಟೆ ಜಿಲ್ಲೆಯಲ್ಲಿ ಪೂರ್ಣ ಬಂದ್ ಮಾಡಲಾಗಿದೆಯೇ ಅಥವಾ ಇನ್ನೂ ಬೇರೆ ಬೇರೆಯವರಿಗೆ ಕೊಡುತ್ತಿದ್ದಾರೆಯೇ? ಅದನ್ನು ಬಿಟ್ಟು ಸರ್ಕಾರಿ ಸಂಸ್ಥೆಗೆ ನೀಡಲು ಎಷ್ಟು ದಿನ ತೆಗೆದುಕೊಳ್ಳಲಾಗುವುದು? ಅಲ್ಲಿ ನಡೆಯುವಂತಹ ಅವ್ಯವಹಾರ ಬಹಳ ಇದೆ. ಹೊರಗುತ್ತಿಗೆಯ ಮೂಲಕ 10 ಜನರನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳುವುದು, ಅಲ್ಲಿ 5 ಜನ ಕೆಲಸ ಮಾಡುವುದು; ರೂ.10,000 ಖರ್ಚು ತೋರಿಸುವುದು, ಅವರಿಗೆ ರೂ.5,000 ಕೊಡುವುದು. ಇಂತಹ ಒಂದು ಅವ್ಯವಹಾರದ ದಂಧೆ ನಡೆಯುತ್ತಿದ್ದು, ಇದನ್ನು ತಡೆಗಟ್ಟಲು ಸರ್ಕಾರ ಆದಷ್ಟು ಬೇಗ ಕ್ರಮ ಕೈಗೊಳ್ಳಬೇಕು.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಹೊರಗುತ್ತಿಗೆಯಲ್ಲಿ ನಡೆಯುವ ಅವ್ಯವಹಾರದ ಬಗ್ಗೆ ಅಂದರೆ ನೌಕರರಿಗೆ Provident Fund ನೀಡದಿರುವುದು, ನಾವು ನಿಗದಿ ಮಾಡಿದಷ್ಟು ಹಣವನ್ನು ನೀಡದಿರುವುದು ಈ ಎಲ್ಲವೂ ನನ್ನ ಗಮನಕ್ಕೆ ಬಂದ ನಂತರ ಸಭೆಯನ್ನು ಮಾಡಿದ್ದೇನೆ. ಅವರ ಜೊತೆಯಲ್ಲಿ ನಾವು ಒಂದು ವರ್ಷದ ಅವಧಿಗಾಗಿ ಎಂದು ಒಡಂಬಡಿಕೆಯನ್ನು ಮಾಡಿಕೊಂಡಿರುತ್ತೇವೆ. ಅವಧಿ ಮುಗಿದ ಮೇಲೆ terminate ಮಾಡಿ, ಸರ್ಕಾರಿ ಏಜೆನ್ಸಿಗಳ ಮೂಲಕವೇ ತೆಗೆದುಕೊಳ್ಳಬೇಕೆಂದು ಮಾಡಿದ್ದೇನೆ. ಈಗ ಎಲ್ಲಿ ಖಾಲಿ ಆಗಿದೆಯೋ ಅಲ್ಲಿ ಸರ್ಕಾರಿ ಏಜೆನ್ಸಿಗಳ ಮೂಲಕವೇ ಭರ್ತಿ ಮಾಡಬೇಕೆಂದು ನಾನು ಸೂಚನೆಯನ್ನು ನೀಡಿದ್ದೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಚಿವರೇ, ಬಾಗಲಕೋಟೆ ಜಿಲ್ಲೆ ಮುಧೋಳ ತಾಲ್ಲೂಕಿನ ಗುಲಗಾಲಜಂಬಗಿ ಎನ್ನುವ ಊರಿನಲ್ಲಿ ಚುನಾವಣೆಯಲ್ಲಿ ಬಿಜೆಪಿ ಮಾಡಿರುವುದಿಲ್ಲ ಎಂದು ತೆಗೆದು ಹಾಕಿರುತ್ತಾರೆ. ಇವರನ್ನು ಕೇಳಿದರೆ ಏಜೆಂಟ್‌ಗಳು ಮಾಡಿರುವುದು ಎಂದು ಹೇಳುತ್ತಾರೆ. ಅಧಿಕಾರಿಗಳನ್ನು ಕೇಳಿದರೆ ಏಜೆಂಟ್‌ಗಳನ್ನು ಕೇಳಿ ಎಂದು ಹೇಳುತ್ತಾರೆ. ಹೊರಗುತ್ತಿಗೆ ಎಂದರೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರಾಜಕೀಯ ಪಕ್ಷದ ಏಜೆಂಟರಂತೆ ನೇಮಕ ಮಾಡುವುದು ಸರಿಯಾದ ಕ್ರಮವಲ್ಲ. ಅದು ತಪ್ಪಾಗುತ್ತದೆ, ಆ ರೀತಿ ಮಾಡಬಾರದೆಂದು ತಾವು ಹೇಳಬೇಕು.

**ಶ್ರೀ ಗೋವಿಂದ ಎಂ.ಕಾರಜೋಳ:–** ನಮ್ಮ ಸರ್ಕಾರ ಬಂದ ನಂತರ ಯಾವುದೂ ಆ ರೀತಿಯ ಏಜೆನ್ಸಿಯನ್ನು ನಾವು ನೇಮಿಸಿರುವುದಿಲ್ಲ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಚಿವರೇ, ಅಲ್ಲಿಯ ಸರ್ಕಾರಿ ದವಾಖಾನೆಯಲ್ಲಿ ಕೆಲಸ ಮಾಡತಕ್ಕಂತಹ ಯುವಕನನ್ನು ಹೊರಹಾಕಿರುವ ಉದಾಹರಣೆಯಿದ್ದು, ಆ ಮಾಹಿತಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ಆ ಪ್ರಶ್ನೆ ಬರುವುದಿಲ್ಲ. ಹೊರಗುತ್ತಿಗೆಯವರಿಗೆ ಸರ್ಕಾರದಲ್ಲಿ ಯಾವುದೇ ನೀತಿಯಿರುವುದಿಲ್ಲ. ಅವರು ಬಂದು ಕೆಲಸ ಮಾಡಿ ಸಂಬಳ ತೆಗೆದುಕೊಂಡು ಹೋಗುತ್ತಿರುತ್ತಾರೆ. ಹಾಗೇನಾದರೂ ಇದ್ದರೆ ಸರಿಪಡಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 348**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ನೀಡಿದ್ದಾರೆ. ಬಹಳ ಸುದೀರ್ಘವಾದಂತಹ ಉತ್ತರವಾಗಿದ್ದು, ಇದನ್ನು ಓದಲು ಕಡಿಮೆ ಎಂದರೆ 24 ಗಂಟೆಗಳು ಬೇಕೆನಿಸುತ್ತದೆ. ನಾನು ಕೇಳಿರುವ ಪ್ರಶ್ನೆ ಎಂದರೆ, ಕಳೆದ 2 ವರ್ಷಗಳಲ್ಲಿ ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳ ಸಂಖ್ಯೆ ಎಷ್ಟು ಮತ್ತು ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? ಕ್ಷೇತ್ರವಾರು ಮಾಹಿತಿ ನೀಡುವುದು ಎಂಬುದಕ್ಕೆ ಸಂಪೂರ್ಣವಾದ ಮಾಹಿತಿಯನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಧನ್ಯವಾದಗಳು.

ಇದಕ್ಕೆ ಪೂರಕವಾಗಿ ಒಂದು ಪ್ರಶ್ನೆಯನ್ನು ಕೇಳಲಿಚ್ಛಿಸುತ್ತೇನೆ. ಇಲಾಖೆಯಿಂದ ರಸ್ತೆ ಕಾಮಗಾರಿಗಳು, ಸೇತುವೆಗಳ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಟೆಂಡರ್ ಮೂಲಕ ಅವುಗಳನ್ನು ವಹಿಸಿಕೊಂಡಿರುವ ಗುತ್ತಿಗೆದಾರರು ಅವುಗಳನ್ನು sub-contract ನೀಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ? Sub-contract ಮೂಲಕ ತೆಗೆದುಕೊಂಡಿರುವವರು ಕೆಲಸ ಮಾಡುತ್ತಿರುವ ರೀತಿಯನ್ನು ನೋಡಿದರೆ ತಮ್ಮ ಇಲಾಖೆಯ norms ಗಳಿಗೆ ಅನುಗುಣವಾಗಿ ಕೆಲಸವಾಗುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ. ಇದಕ್ಕೇನಾದರೂ ಅವರ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವೇ? ನಿಮ್ಮ ಇಲಾಖೆಯವರು tender allot ಆಗಿರುವ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಬಹುದು. ಆದರೆ sub-contract ನೀಡಿರುವವರ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ? ಇದರಿಂದಾಗಿ ಗುಣಮಟ್ಟ ಹಾಳಾಗುತ್ತಿದೆ. ಸರ್ಕಾರ ಬಹಳ ಕಾಳಜಿಯನ್ನು ವಹಿಸಿ ರಸ್ತೆಗಳನ್ನು, ಸೇತುವೆಗಳನ್ನು ನಿರ್ಮಾಣ ಮಾಡಬೇಕೆಂದು ಹಣ ಬಿಡುಗಡೆ ಮಾಡಿದ್ದರೂ ಸಹ ಆ ಹಣ ಎಲ್ಲಿಯೋ ಒಂದು ಕಡೆ ಪೋಲಾಗುತ್ತಿದೆ. ಗುಣಮಟ್ಟ ಇಲ್ಲ ಎನ್ನುವುದು ನನ್ನ ಕಾಳಜಿ. ಅದಕ್ಕೆ ತಾವೇನು ಕ್ರಮ ಕೈಗೊಳ್ಳುತ್ತೀರಿ?

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ನಮ್ಮ tender terms and conditions ಪ್ರಕಾರ sublet ಮಾಡಲಿಕ್ಕೆ ಅವಕಾಶವಿಲ್ಲ. ಇದುವರೆಗೂ ನನ್ನ ಗಮನಕ್ಕೆ ಬಂದಿಲ್ಲ. ಇಂದು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಹಾಗೇನಾದರೂ ಕೊಟ್ಟಿದ್ದರೆ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೂಡಲೇ ನಮ್ಮ ಇಲಾಖೆ ಮುಖ್ಯಸ್ಥರಿಂದ ಅದನ್ನು ತನಿಖೆ ಮಾಡಿಸಿ ರದ್ದುಪಡಿಸಲಿಕ್ಕೆ ಸೂಚನೆಯನ್ನು ಕೊಡುತ್ತೇನೆ.

ಮಾನ್ಯ ನಾರಾಯಣಸ್ವಾಮಿಯವರು ಹೇಳುತ್ತಿರುವುದು ಸರಿ ಇದೆ. ಏಕೆಂದರೆ ಟೆಂಡರ್ ತೆಗೆದುಕೊಂಡವನು ತನ್ನ profit margin ಇಟ್ಟುಕೊಂಡು ಟೆಂಡರ್ ಹಾಕಿರುತ್ತಾನೆ. ಇನ್ನೊಬ್ಬನಿಗೆ ಕೊಟ್ಟನೆಂದರೆ ಅವನ profit margin ಸೇರಿದಾಗ ಗುಣಮಟ್ಟಕ್ಕೆ ತೊಂದರೆಯಾಗುತ್ತದೆ ಎನ್ನುವ ತಮ್ಮ ಕಳಕಳಿ ನನಗೆ ಅರ್ಥವಾಗುತ್ತದೆ. ಖಂಡಿತವಾಗಿಯೂ ನಾನು ಕ್ರಮ ಕೈಗೊಳ್ಳುತ್ತೇನೆ.

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಇಷ್ಟು ಹಿರಿಯರಾಗಿ ಈ ಮಾತನ್ನು ಹೇಳುವುದು ನನಗೆ ಎಲ್ಲಿಯೋ ಒಂದು ಕಡೆ ನೋವಾಗುತ್ತದೆ. Sub-contract ಕೊಡುವುದಕ್ಕೆ ಬರುವುದಿಲ್ಲವೆಂದು ಕಾನೂನು ಇದೆ. ಆದರೆ ನಡೆಯುತ್ತಿರುವ ಕಾಮಗಾರಿಗಳು 100ಕ್ಕೆ 60 ಭಾಗ sublet ಆಗಿದೆ. ಆನೇಕಲ್ ತಾಲ್ಲೂಕಿನಲ್ಲಿ ಮತ್ತು ಯಲಹಂಕ ವಿಧಾನ ಸಭಾ ಕ್ಷೇತ್ರದಲ್ಲಿ ಆಗಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಶೇ.100ರಲ್ಲಿ ಶೇ.60ರಷ್ಟು ಜನ ಟೆಂಡರ್‌ನಲ್ಲಿ ಭಾಗವಹಿಸಿ ತೆಗೆದುಕೊಂಡಿರುವವನು ಕೆಲಸ ಮಾಡುತ್ತಿಲ್ಲ.

**(...ಮುಂದು)**

(104) 03.02.2021, 12 .00. KG.RN

**ಶ್ರೀ ಎಂ.ನಾರಾಯಣಸ್ವಾಮಿ (ಮುಂದು.,)**

ಯಾರು ಅವರ ಹತ್ತಿರ, ಆರ್ಥಿಕವಾಗಿ ಚೆನ್ನಾಗಿ ಇರುತ್ತಾರೋ, ಅಂತಹವರು tender ನಲ್ಲಿ participate ಮಾಡುತ್ತಾರೆ. EMD (Earnest Money Deposit) ಕಟ್ಟಬೇಕು, ಇವೆಲ್ಲವನ್ನು ಮಾಡುತ್ತಾರೆ. ಅವರಿಗೆ tender allot ಆದ ಮೇಲೆ ಯಾರೋ ಒಬ್ಬ ದಾರಿಯಲ್ಲಿ ಹೋಗುವಂತಹ ಮೇಸ್ತ್ರಿಗೆ ಕೆಲಸವನ್ನು ಕೊಟ್ಟು ಬಿಡುತ್ತಾರೆ. ಅವರ ಬಳಿ ಯಾವುದೇ equipment ಇರುವುದಿಲ್ಲ. ಅವರು ಕೆಲಸ ಮಾಡುವುದಕ್ಕೆ ಬರುತ್ತಾರೆ. ಯಾವುದೇ ಅನುಭವ ಇಲ್ಲದವರು ಕೆಲಸ ಮಾಡುವಂತಹ ಸಂದರ್ಭದಲ್ಲಿ quality ಹಾಳಾಗುತ್ತಿದೆ ಎನ್ನುವುದು ನನ್ನ ಕಳಕಳಿಯಾಗಿದೆ. ಮಾನ್ಯ ಸಚಿವರು ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಬಹಳ ಮಹತ್ವವಾದ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಚಿವರು tender conditions ನಲ್ಲಿ ಉಪ ಗುತ್ತಿಗೆ ಕೊಡುವುದಕ್ಕೆ ಅವಕಾಶ ಇಲ್ಲವೆಂದು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ನೋಡಿದರೆ ಸುಮಾರು 70 ರಿಂದ 80% ರಷ್ಟು ಟೆಂಡರ್ ಒಬ್ಬರ ಹೆಸರಿಗೆ ಬರುತ್ತದೆ. ಅವರು ಉಪ ಗುತ್ತಿಗೆಯನ್ನು ನಡೆಸುತ್ತಿರುವ ವಿಷಯ ನಾವು ಯಾರ್‍ಯಾರು ಜನ ಪ್ರತಿನಿಧಿಗಳು ಇದ್ದೇವೆ, ಇದು ಎಲ್ಲರಿಗೂ ಸಹ ಮೇಲ್ನೋಟಕ್ಕೆ ಗೊತ್ತಿರುವಂತಹ ವಿಷಯ. ಕಳೆದ ಸದನದಲ್ಲಿ ನಾನು ನಮ್ಮ ಜಿಲ್ಲೆಯ ಮತ್ತು ನಾಗಮಂಗಲ ತಾಲ್ಲೂಕಿನ ವಿಷಯದ ಬಗ್ಗೆ ಪ್ರಶ್ನೆ ಮಾಡಿದ್ದೆ. Tender ಆಗಿ ಸುಮಾರು ಮೂರು ವರ್ಷಗಳು ಆಗಿವೆ. ಆದರೆ, ಗುತ್ತಿಗೆ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಅಲ್ಲಿ ಅರ್ಧ ರಸ್ತೆಯನ್ನು ಅಗೆದು ಬಿಟ್ಟಿದ್ದಾರೆ, ಆ ರಸ್ತೆ ಬರಿ ಧೂಳಿನಿಂದ ತುಂಬಿಕೊಂಡಿದೆ. ಆ ರಸ್ತೆಯಲ್ಲಿ ಜನರು ಓಡಾಡುವಾಗ ನಮಗೆ ಶಾಪ ಹಾಕುತ್ತಿದ್ದಾರೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಹಿರಿಯ ಸಚಿವರು ಮತ್ತು ಉಪ ಮುಖ್ಯ ಮಂತ್ರಿಗಳಾಗಿದ್ದಾರೆ. ಟೆಂಡರ್ ಪ್ರಕ್ರಿಯೆಯಲ್ಲಿ ಒಂದು ದೊಡ್ಡ ದಂಧೆ ನಡೆಯುತ್ತದೆ. ಕೆಲವರಿಗೆ eligibility ಬಂದು ಬಿಡುತ್ತದೆ. ಅಂತಹವರಿಗೆ ಲಕ್ಷಾಂತರ ರೂಪಾಯಿಗಳು, ಕೋಟ್ಯಾಂತರ ರೂಪಾಯಿಗಳು ಅವರು ಕೆಲಸ ಮಾಡಲಿ ಅಥವಾ ಮಾಡದಿರಲಿ ಅವರಿಗೆ ಹಣ ಬರುತ್ತಲೇ ಇರುತ್ತದೆ. ಅವರು ಉಪ ಗುತ್ತಿಗೆಯನ್ನು ಕೊಡುತ್ತಾರೆ, ಆ ಉಪ ಗುತ್ತಿಗೆಯನ್ನು ಪಡೆದವರು ಲಾಭವಿಲ್ಲದೇ ಕೆಲಸ ಹೇಗೆ ಮಾಡುತ್ತಾರೆ? ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಹೇಳಿದಂತೆ, ಅವರ ಬಳಿ ಯಾವುದೇ ವಿಧವಾದ infrastructure ಇರುವುದಿಲ್ಲ. ಹಾಗಾಗಿ, ಇದನ್ನು ತಪ್ಪಿಸಿ ಎಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಮಾನ್ಯ ಸಭಾಪತಿಯವರೇ, ಮೂರ್‍ನಾಲ್ಕು ವರ್ಷಗಳಿಂದ ಟೆಂಡರ್ ಆಗಿದ್ದರೂ ಸಹ ಕೆಲಸವನ್ನು ಏಕೆ ಪ್ರಾರಂಭ ಮಾಡಿಲ್ಲ? ಅಂತಹವರ ವಿರುದ್ಧ ಏನು ಕ್ರಮ ತೆಗೆದುಕೊಂಡಿದ್ದಾರೆ? ಸರ್ಕಾರ ಏನು ಮಾಡುತ್ತಿದೆ? ಇಲಾಖೆಯ ಅಧಿಕಾರಿಗಳು ಮೂರು ವರ್ಷಗಳಾದರೂ ಸಹ ಕೆಲಸ ಪ್ರಾರಂಭ ಮಾಡಿಲ್ಲವೆಂದರೆ ಏನು ಅರ್ಥ? ಈಗ ಕೋವಿಡ್–19 ಎನ್ನುವುದು ಒಂದು ದೊಡ್ಡ ನೆಪವಾಗಿದೆ. ಕೋವಿಡ್–19 ಗೂ ಮತ್ತು ಗುತ್ತಿಗೆದಾರರು ಕೆಲಸ ಮಾಡದಿರುವುದಕ್ಕೆ ಏನು ಸಂಬಂಧವಿದೆ? ಏನಾದರೂ ಸಂಬಂಧವಿದೆಯೇ? ಈಗ ನಾನು ನಮ್ಮ ಜಿಲ್ಲೆಯ ವಿಷಯವನ್ನು ಹೇಳುತ್ತಿದ್ದೇನೆ. ಇಡೀ ನಮ್ಮ ರಾಜ್ಯದಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಟೆಂಡರ್ ಆಗಿ ಮೂರು ವರ್ಷಗಳಾದರೂ ಸಹ ಕೆಲಸ ಪ್ರಾರಂಭ ಮಾಡದಿರುವುದು, ಜೊತೆಗೆ ಉಪ ಗುತ್ತಿಗೆಯನ್ನು ಕೊಡುತ್ತಿರುವಂತಹ ದಂಧೆಯನ್ನು ದಯವಿಟ್ಟು ನಿಲ್ಲಿಸಬೇಕು.

**ಶ್ರೀ ಗೋವಿಂದ ಎಂ.ಕಾರಜೋಳ:-** ಮಾನ್ಯ ಸಭಾಪತಿಯವರೇ, ಕಾಮಗಾರಿಗಳು ವಿಳಂಬವಾಗಿರುವುದಕ್ಕೆ ಕಾರಣ ಇದೆ. ಇಲ್ಲಿ ಕೋವಿಡ್-19 ಎನ್ನುವುದು ನೆಪವಲ್ಲ. ಇದು ತಮಗೂ ಗೊತ್ತಿದೆ. ನಮಗೂ ಗೊತ್ತಿದೆ. ನಮ್ಮ ದೇಶದಲ್ಲಿ ಮಾತ್ರವಲ್ಲ. ಹೊರ ದೇಶಗಳಲ್ಲಿಯೂ ಸಹ ಕಾಮಗಾರಿಗಳು ಸ್ಥಗಿತಗೊಂಡಿವೆ. ಸುಮಾರು ಒಂದೂವರೆ ವರ್ಷದಿಂದ ಇದರಿಂದ ತೊಂದರೆಯಾಗಿದೆ. ಕಾಮಗಾರಿಗಳನ್ನು ಆದಷ್ಟು ಬೇಗ ಮುಕ್ತಾಯ ಮಾಡುವುದಕ್ಕೆ ಗುತ್ತಿಗೆದಾರರಿಗೆ ಸಮಯವನ್ನು ನಿಗದಿ ಮಾಡಿರುತ್ತೇವೆ, ಅವರು ಅಷ್ಟರೊಳಗೆ ಕಾಮಗಾರಿಗಳನ್ನು ಮಾಡಿಕೊಡಬೇಕು. ಅವರು ಒಂದು ವೇಳೆ ಮಾಡಿಕೊಡದಿದ್ದರೆ, ಅಂತಹವರ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳುತ್ತೇವೆ, ಅವರಿಗೆ ದಂಡ ಹಾಕುತ್ತೇವೆ. ಅಲ್ಲದೇ, ಅವಶ್ಯ ಬಿದ್ದರೆ ಟೆಂಡರ್‌ನ್ನು terminate ಮಾಡುತ್ತೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಎಂ.ನಾರಾಯಣಸ್ವಾಮಿಯವರು ಬಹಳ valid ಪ್ರಶ್ನೆನ್ನು ಕೇಳಿದ್ದಾರೆ. ಕಾಮಗಾರಿಗಳನ್ನು sub-lease ಗೆ ಕೊಟ್ಟಂತಹ ಸಂದರ್ಭಗಳಲ್ಲಿ ಗುಣಮಟ್ಟ ಖಂಡಿತವಾಗಿ ಹಾಳಾಗುತ್ತದೆ. ಏಕೆಂದರೆ, ಒಬ್ಬರ interest ಹೋಗಿ ಇಬ್ಬರ interest ಅನ್ನು safeguard ಮಾಡಬೇಕಾಗುತ್ತದೆ. ಇರುವಂತಹ ಹಣದಲ್ಲಿ. ಈಗಾಗಲೇ ನಮ್ಮಲ್ಲಿ ಆ ರೀತಿ sub-lease ಕೊಡಬಾರದೆಂದು ಕಾನೂನುಗಳು ಇವೆ. ಅಗತ್ಯ ಬಿದ್ದರೆ, ಇನ್ನೂ ಬಿಗಿಯಾದಂತಹ ಕ್ರಮ ತೆಗೆದುಕೊಳ್ಳುವುದಕ್ಕೆ ಕಾನೂನಿಗೆ ತಿದ್ದುಪಡಿ ಮಾಡಿಯಾದರೂ ಸಹ, ಬಿಗಿಯಾದಂತಹ ಕ್ರಮಗಳನ್ನು ತೆಗೆದುಕೊಳ್ಳೋಣ. ಮುಂದೆ ಯಾರಾದರೂ ಈ ರೀತಿ ಉಪ ಗುತ್ತಿಗೆ ಕೊಟ್ಟಿದ್ದು officially prove ಆದಂತಹ ಸಂದರ್ಭದಲ್ಲಿ ಅಂತಹವರಿಗೆ ಮುಂದೆ ಗುತ್ತಿಗೆ ಕೊಡದಂತೆ ಮಾಡಿ ಅವರನ್ನು ಕಪ್ಪು ಪಟ್ಟಿಗೆ ಸೇರಿಸುವುದಕ್ಕೂ ಸಹ ಕ್ರಮವನ್ನು ತೆಗೆದುಕೊಳ್ಳೋಣ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ, ನಾನು ಅವರು ಗಮನಿಸಿದ್ದಾರೆಂದು ಭಾವಿಸುತ್ತೇನೆ. ನಮ್ಮಲ್ಲಿ ನಿರ್ಮಿತ ಕೇಂದ್ರ ಇದೆ. ಅದೇರೀತಿ KRIDL (Karnataka Rural Infrastructure Development Limited), Land Army ಇದೆ. ಇವರು sublet

ಕೊಡುತ್ತಾರೆ. ಇವರು ಸರ್ಕಾರಿ construction ರವರಾಗಿದ್ದು, ಸರ್ಕಾರಿ agency ಆಗಿರುತ್ತಾರೆ. ಇವರಿಗೆ ಒಂದು ಲಕ್ಷ ರೂಪಾಯಿಗಳ ಅನುದಾನವನ್ನು ಕೊಟ್ಟರೆ, first of all, 24% deduction ಮಾಡುತ್ತಾರೆ. ಇಷ್ಟು deduction ಆದ ಮೇಲೆ ಇದರಲ್ಲಿ 76 ಸಾವಿರ ರೂಪಾಯಿಗಳು ಮಾತ್ರ ಉಳಿಯುತ್ತದೆ. ಇವರ ಹತ್ತಿರ ಒಂದು ಗುದ್ದಲಿ ಇಲ್ಲ, ಒಂದು ಪಿಕಾಸಿ ಇಲ್ಲ. ನಿರ್ಮಿತ ಕೇಂದ್ರದವರು ಮತ್ತು KRIDL, Land Army ರವರು ಕೆಲಸವನ್ನು ತೆಗೆದುಕೊಂಡು 24% deduction ಮಾಡುವುದನ್ನು ಮಾಡುತ್ತಾರೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸಭಾನಾಯಕರು ನಮ್ಮ ವಿಚಾರಕ್ಕೆ ಒಪ್ಪುತ್ತಾರೆ. ಆ ಮೇಲೆ ಇವರು 24% ಮುರಿದುಕೊಂಡು ನಂತರ sublet ಮಾಡುತ್ತಾರೆ. ಆ ಮೇಲೆ ಅವರು ಅದರಲ್ಲಿ 25% ಮುರಿದುಕೊಳ್ಳುತ್ತಾರೆ. ಅವರಿಗೂ ಸಹ margin ಬೇಕಲ್ಲವೇ; ಅಲ್ಲಿಗೆ ಇಲ್ಲಿಯೇ 50% ಹೋಯಿತು. ಆಮೇಲೆ ಉಳಿದಿದ್ದು ಏನಿದೆ, ಯಾರ್‍ಯಾರು ಏನೇನು deduction ಮಾಡುತ್ತಾರೆಂದು ನಾನು ಹೇಳುವುದಿಲ್ಲ. ಈ ರೀತಿಯಾದರೆ, ಆ ಕೆಲಸದ ಗತಿ ಏನು? This is happening everywhere. ಅದು government agency ಯಲ್ಲಿ subletting ಆಗುತ್ತದೆ. ಇದು ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಹೇಳಿದ್ದು ಮುಂದುವರಿದ ಭಾಗವಾಗಿರುತ್ತದೆ. ಆ ಎರಡು agency ರವರ ಬಳಿ ಒಂದು ಗುದ್ದಲಿ ಇಲ್ಲ, ಒಂದು ಪಿಕಾಸಿ ಇಲ್ಲ. ಅವರು ಸುಮ್ಮನೆ ಅಲ್ಲೇ ಕುಳಿತುಕೊಂಡು ಹಣ ತೆಗೆದುಕೊಳ್ಳುತ್ತಾರೆ, 24% deduction ಮಾಡುವುದು, ಮಾನ್ಯ ಕೊಂಡಯ್ಯನವರಿಗೆ ತೆಗೆದುಕೊಳ್ಳಿ, ಮಾನ್ಯ ಹರಿಪ್ರಸಾದ್‌ರವರೇ ನೀವು ತೆಗೆದುಕೊಳ್ಳಿ ಎಂದು ಹೇಳುವುದು. ಈ ರೀತಿಯಾದರೆ, ಮುಂದೆ ಕಾಮಗಾರಿಗಳ ಗತಿ ಏನು? ಇದು ಸಾರ್ವಜನಿಕರ ತೆರಿಗೆ ಹಣ. ಮಾನ್ಯ ಸಚಿವರು ಹಿರಿಯ ಸಚಿವರಾಗಿದ್ದಾರೆ ಹಾಗೂ ಈ ರಾಜ್ಯದ ಉಪ ಮುಖ್ಯ ಮಂತ್ರಿಗಳಾಗಿದ್ದಾರೆ. ನಾನು ಇದುವರೆಗೂ ಹೇಳಿದ್ದು ನಗ್ನ ಸತ್ಯವಾಗಿದೆ. It is a naked truth. You must take some steps.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಲೋಕೋಪಯೋಗಿ ಸಚಿವರು ಒಬ್ಬ ನುರಿತ ವ್ಯಕ್ತಿಯಾಗಿದ್ದಾರೆ. ಮಾನ್ಯ ಸಚಿವರು ರಾಜಕಾರಣಕ್ಕೆ ಬರುವುದಕ್ಕಿಂತ ಮೊದಲು ಲೋಕೋಪಯೋಗಿ ಇಲಾಖೆಯಲ್ಲಿ ಇದ್ದಂತಹವರು. ಅಲ್ಲಿ ಏನೇನು ಅನಾಹುತಗಳು ಆಗುತ್ತವೆ ಎಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವರು ಸ್ವತಃ ಕಣ್ಣಿನಿಂದ ಕಂಡಂತಹವರು. ಮಾನ್ಯ ಸಚಿವರು ಇದು ಆಗುವುದಿಲ್ಲವೆಂದು ಹೇಳಿದಾಗ, ನನಗೆ ಆಶ್ಚರ್ಯವಾಯಿತು. 100ಕ್ಕೆ 60% ರಷ್ಟು sub-lease ಆಗುತ್ತದೆ. ಆದರೆ, ಮಾನ್ಯ ಸದಸ್ಯರಾದ ಅಪ್ಪಾಜಿಗೌಡರು 80% ರಷ್ಟು ಅಗುತ್ತದೆ ಎಂದು ಹೇಳಿದ್ದಾರೆ. ನಮ್ಮ ವಿರೋಧ ಪಕ್ಷದ ನಾಯಕರು ಇದರಲ್ಲಿ ಏನಾಗುತ್ತದೆ ಎಂದು ಹೇಳಿದ್ದಾರೆ. ಇನ್ನೊಂದು ಏನು ಮಾಫಿಯಾ ಇದೆ ಎಂದರೆ, tender call ಮಾಡಿದ ತಕ್ಷಣ, ಯಾರ್ಯಾರು ಆ ಟೆಂಡರ್‌ನಲ್ಲಿ ಭಾಗವಹಿಸುತ್ತಾರೋ, ಅವರದ್ದು ಒಂದು wing ಇದೆ. ಅವರು ಇಂತಹ ಕೆಲಸ ಇಂತಹವರಿಗೆ ಎಂದು ಹಂಚಿಕೊಳ್ಳುತ್ತಾರೆ. ಏಕೆಂದರೆ, ಇವರು ಟೆಂಡರ್ ಹಾಕಬೇಕಾದರೆ, ನಾನು above ಒಂದು 20% ಹೋಗುತ್ತೇನೆ. ನೀವು ಒಂದು 10% ಮಾಡಿಕೊಳ್ಳಿ ಎಂದು ಆ wing ನಲ್ಲಿ ಎಲ್ಲರೂ ಸಹ ಹಂಚಿಕೊಳ್ಳುತ್ತಾರೆ. ಇದಕ್ಕೆ ಏನಾದರೊಂದು ಕಡಿವಾಣ ಹಾಕಬೇಕು ಮತ್ತು ಅಂತಹವರಿಗೆ ಶಿಕ್ಷೆ ಆಗಬೇಕು. ಅವರನ್ನು blacklist ಗೆ ಸೇರಿಸಬೇಕು. ಅವರಿಗೆ ಮುಂದೆ ಯಾವುದೇ ಕೆಲಸ ಕಾರ್ಯಗಳನ್ನು ಕೊಡಬಾರದು. ಇಲ್ಲಿಂದ ಅವರನ್ನು blacklist ಗೆ ಸೇರಿಸಿದಾಗ ಅವರು ಬೇರೆ ಇಲಾಖೆಯಲ್ಲಿ ಕೆಲಸವನ್ನು ತೆಗೆದುಕೊಳ್ಳುತ್ತಾರೆ. ಇದು ಸಹ ಆಗಬಾರದು.

**ಶ್ರೀ ಗೋವಿಂದ ಎಂ.ಕಾರಜೋಳ:–** ಮಾನ್ಯ ಸಭಾಪತಿಯವರೇ, ನಮ್ಮ ಪ್ರತಿ ಪಕ್ಷದ ನಾಯಕರು Land Army Corporation ಮತ್ತು ನಿರ್ಮಿತಿ ಕೇಂದ್ರಗಳ ಬಗ್ಗೆ ಹೇಳಿದ್ದಾರೆ. ನಾವು Land Army Corporation ಅನ್ನು ಮತ್ತು ನಿರ್ಮಿತಿ ಕೇಂದ್ರಗಳನ್ನು ಏತಕ್ಕೆ ಸ್ಥಾಪನೆ ಮಾಡಿದ್ದೇವೆ ಎಂದರೆ, Emergency work ಅಂದರೆ, ಯಾವುದನ್ನು ಟೆಂಡರ್ ಕರೆದು ಮಾಡುವುದಕ್ಕೆ 2 ರಿಂದ 3 ತಿಂಗಳ ಸಮಯ ಆಗುತ್ತದೆಯೋ, ಅಂತಹ ಕೆಲಸಗಳಿಗೆ ಕಾನೂನನ್ನು ಸರಳೀಕರಣಗೊಳಿಸಿ important ಅಂದರೆ, ಅದಕ್ಕೆ 50 ಲಕ್ಷ ರೂಪಾಯಿಗಳವರೆಗೂ ಕೊಡಬಹುದೆಂದು ಮಿತಿ ಇದೆ. ಇದಕ್ಕಿಂತ ಹೆಚ್ಚಿಗೆ ಕೊಡುವುದಕ್ಕೆ ಅವಕಾಶ ಇಲ್ಲ. ಅದರಲ್ಲೂ ವಿಶೇಷ ಸಂದರ್ಭದಲ್ಲಿ ನಡೆದುಕೊಂಡು ಬಂದಿರುವಂತಹದ್ದು Corporations ಪ್ರಾರಂಭವಾದಗಿನಿಂದ ಮತ್ತು ನಿರ್ಮಿತ ಕೇಂದ್ರ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇರುವಂತಹ ಒಂದು society ಅದು. ಅದನ್ನು ನಾವೇ register ಮಾಡಿದಂತಹ ಸರ್ಕಾರದ society. ಅವರು ಕೆಲಸ ಕಾರ್ಯಗಳನ್ನು ಮಾಡುವಂತಹ ಸಂದರ್ಭದಲ್ಲಿ ಇವುಗಳನ್ನೆಲ್ಲಾ observe ಮಾಡಿ ಮಾಡಬೇಕೆಂದು ಇದೆ. ನಮಗೆ ಅಂದರೆ ಶಾಶಕರಿಗೆ 2 ಕೋಟಿ ರೂಪಾಯಿಗಳ ಅನುದಾನ ಬರುತ್ತದೆ. ಆ ಅನುದಾನದಲ್ಲಿ 20 ಹಳ್ಳಿಗಳಿಗೆ, 30 ಹಳ್ಳಿಗಳಿಗೆ ಇಲ್ಲವೇ 40

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹಳ್ಳಿಗಳಿಗೆ ಸ್ವಲ್ಪ ಸ್ವಲ್ಪ ಹಂಚುತ್ತಿರುತ್ತೇವೆ. ಅವರು ಬೇಡಿದ್ದಾರೆ, ಇವರು ಬೇಡಿದ್ದಾರೆ, ಈ ಸಮುದಾಯದವರು ಬೇಡಿದ್ದಾರೆ, ಆ ಸಮುದಾಯದವರು ಬೇಡಿದ್ದಾರೆಂದು ಹಂಚುತ್ತಿರುತ್ತೇವೆ. ಇಂತಹ ಸಣ್ಣ ಸಣ್ಣ ಕೆಲಸಗಳನ್ನು ಟೆಂಡರ್ ಕರೆದು ಕೊಡುವುದಕ್ಕೆ ಆಗುವುದಿಲ್ಲ ಎನ್ನುವ ಕಾರಣಕ್ಕೆ ನಿರ್ಮಿತಿ ಕೇಂದ್ರಕ್ಕೂ ಅಥವಾ Land Army ಗೆ ವಹಿಸಿ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರು ಹೇಳಿರುವಂತಹ ಲೋಪ ದೋಷಗಳ ಬಗ್ಗೆ ಒಪ್ಪಿಕೊಳ್ಳುತ್ತೇನೆ. ಏಕೆಂದರೆ, ಅದು ನಮ್ಮ ಗಮನಕ್ಕೂ ಬಂದಿದೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ಎಲ್ಲರೂ ಸೇರಿ ಮಾಡೋಣ. ಈಗ ನಿರ್ಮಿತಿ ಕೇಂದ್ರಕ್ಕೆ ಮತ್ತು Land Army ಗೆ ದೊಡ್ಡ ದೊಡ್ಡ ಕೆಲಸಗಳನ್ನು ಯಾವುದನ್ನು ವಹಿಸಿ ಕೊಡುತ್ತಿಲ್ಲ. ಅವರು ಹೆಚ್ಚಿಗೆ depend ಆಗಿರುವುದು ಶಾಸಕರ ಅನುದಾನದ ಮೇಲೆ. ನಾವು ಶಾಸಕರ ಅನುದಾನದಿಂದ ಎಲ್ಲರನ್ನು ಖುಷಿ ಪಡಿಸುವ ಸಲುವಾಗಿ, 1 ಲಕ್ಷ, 2 ಲಕ್ಷ, 3 ಲಕ್ಷ ರೂಪಾಯಿಗಳನ್ನು ಈ ರೀತಿಯಾಗಿ ಒಂದೊಂದು ಊರುಗಳಿಗೆ ಕೊಡುತ್ತೇವೆ. ಒಂದೊಂದು ಸಮುದಾಯಗಳಿಗೆ ಕೊಡುತ್ತಿರುತ್ತೇವೆ. ಹೀಗಾಗಿ, ಅದು ನಡೆಯುತ್ತಿದೆ. ಮಾನ್ಯ ಸದಸ್ಯರು ಹೇಳುವುದು ಸಹ ಸರಿ ಇದೆ. ಇದನ್ನು ಬಿಗಿಗೊಳಿಸುವುದಕ್ಕೆ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇವೆ.

ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದಂತಹ ಎಂ.ನಾರಾಯಣಸ್ವಾಮಿಯವರು ಕೇಳಿದ್ದು ಸರಿ ಇದೆ. ಇಲ್ಲಿ ಯಾರು ತಪ್ಪು ಮಾಡುತ್ತಾರೆ, ಯಾರ ಬಳಿ infrastructure ಇಲ್ಲ, machinery ಇಲ್ಲ. ಈಗ ಉದಾಹರಣೆಗೆ 10 ಕೋಟಿ ರೂಪಾಯಿಗಳ ಕೆಲಸವನ್ನು ತೆಗೆದುಕೊಂಡವರ ಬಳಿ roller ಇಲ್ಲ, asphalt plant ಇಲ್ಲವೆಂದರೆ, ಅವರು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದ್ದವರಿಗೆ sub-lease ಮಾಡಿ ಹೋಗುವುದು ಖಂಡಿತವಾಗಿ ಒಳ್ಳೆಯದಲ್ಲ. ಮುಂದಿನ ದಿವಸಗಳಲ್ಲಿ ಮಾನ್ಯ ಸದಸ್ಯರು ಹೇಳಿದಂತಹ ಎಲ್ಲಾ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಸರಿಪಡಿಸುವಂತಹ ಕೆಲಸವನ್ನು ಸರ್ಕಾರ ಮಾಡುತ್ತದೆ.

**(ಮುಂದು., )**

(105)03-02-2021(12-10)ಎಂವಿ-ಆರ್‌ಎನ್

**ಶ್ರೀ ಸಿ.ಎಂ.ಇಬ್ರಾಹಿಂ:-** ಮಾನ್ಯ ಸಭಾಪತಿಯವರೇ, ಈಗ ಯಾರು sub-lease ಕೊಟ್ಟಿದ್ದಾರೋ ಅವರನ್ನು permanent ಆಗಿ blacklist ಮಾಡುತ್ತೇವೆಂದು Rule ಮಾಡಿ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗ sub-lease ಗೆ ಹೋಗುವುದಿಲ್ಲ. ಇದಕ್ಕೆ ಇರುವುದು ಇದು ಒಂದೇ ಮಾರ್ಗ. ನೀವು ಲವ್ ಮಾಡಬೇಡಿ ಎಂದರು ಸಹ ಅವರು ಬಸ್‌ಸ್ಟ್ಯಾಂಡ್ ಹಿಂದೆ ಹೋಗಿ ಮಾಡಿಕೊಳ್ಳುತ್ತಾರೆ. ಈಗ ಯಾರಾದರೂ sub-lease ಕೊಟ್ಟಿದ್ದಾರೆಂದು ಗೊತ್ತಾದರೆ, ಅವರು ಇನ್ನು ಮುಂದೆ ಟೆಂಡರ್‌ನಲ್ಲಿ ಭಾಗವಹಿಸುವುದಕ್ಕೆ ಅವಕಾಶವಿಲ್ಲವೆಂದು ಅವರನ್ನು ಅನರ್ಹ ಮಾಡಿಬಿಡಿ. ಆಗ ಅದು ಸರಿ ಹೋಗುತ್ತದೆ.

**ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್):–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಮತ್ತು ನಿರ್ಮಿತಿ ಕೇಂದ್ರ ಈ ಎರಡು ಸಂಸ್ಥೆಗಳನ್ನು ತೆಗೆದುಹಾಕುವುದು ಒಳ್ಳೆಯದು ಎಂಬುದು ನನ್ನ ಭಾವನೆ. ಇದಕ್ಕೆ ಕಾರಣವೇನೆಂದರೆ, ಅದು State ಎಂದು ಕಳೆದ ಒಂದು ವರ್ಷದಿಂದ ಲ್ಯಾಂಡ್ ಆರ್ಮಿಗೆ ಏನು ಕೊಟ್ಟಿದ್ದಾರೆ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಈಗ ಶಾಸಕರ ಅನುದಾನದ ಹಣ lapse ಆಗುತ್ತಿದೆ. ದಯವಿಟ್ಟು ಅದನ್ನು open ಮಾಡಿಸಿ, ಅದರ stay ಅನ್ನು vacate ಮಾಡಿಸಿ. ಇಲ್ಲವೆ ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಮತ್ತು ನಿರ್ಮಿತಿ ಕೇಂದ್ರವನ್ನು cancel ಮಾಡಿ. ಅವುಗಳಿಗೆ ಗುದ್ದಲಿ ಮತ್ತು ಹಾರೆ ಇಲ್ಲ. ಅವರಿಗೆ ಸಣ್ಣ ಪ್ರಮಾಣ ಕಾಮಗಾರಿಯನ್ನು ಕೊಡುತ್ತೇವೆಂದು ಹೇಳುತ್ತಾರೆ. ಈಗ ಐವತ್ತು ಲಕ್ಷ ರೂಪಾಯಿ ಕಾಮಗಾರಿಯನ್ನು ಕೊಡುತ್ತಾರೆ. ಈಗ ಐವತ್ತು ಲಕ್ಷದಲ್ಲಿ ಶೇಕಡಾ 25ರಷ್ಟು ಹೋದರೆ, ಇನ್ನು ಶೇಕಡಾ 75ರಷ್ಟು ಉಳಿಯುತ್ತದೆ. ಇನ್ನುಳಿದ ಶೇಕಡಾ 75ರಲ್ಲಿ sub-lease ಗೆ ಶೇಕಡಾ 25ರಷ್ಟು ಹೋದರೆ, ಇನ್ನು ಶೇಕಡಾ 50ರಷ್ಟು ಉಳಿಯುತ್ತದೆ. ಉಳಿದ ಶೇಕಡಾ 50ರಲ್ಲಿ ಏನು ಕೆಲಸ ಮಾಡುವುದಕ್ಕೆ ಆಗುತ್ತದೆ? ದಯವಿಟ್ಟು ಈಗ ನಡೆಯುತ್ತಿರುವುದರಲ್ಲಿ ನಿರ್ಮಿತಿ ಕೇಂದ್ರ ಮತ್ತು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಅನ್ನು ತೆಗೆದುಹಾಕುವುದು ಒಳ್ಳೆಯದು ಎಂಬುದು ನನ್ನ ಅನಿಸಿಕೆ.

**ಶ್ರೀ ಗೋವಿಂದ ಎಂ ಕಾರಜೋಳ:–** ಮಾನ್ಯ ಸಭಾಪತಿಯವರೇ, ಸರ್ಕಾರದಲ್ಲಿರುವ procedure ಅನ್ನು ಸರಳೀಕರಣಗೊಳಿಸಿ, ಕಾಮಗಾರಿಗಳು ಬೇಗ ಬೇಗ ಆಗಬೇಕೆಂಬ ಸದುದ್ದೇಶದಿಂದ ಕಾರ್ಪೊರೇಷನ್ ಅನ್ನು ಪ್ರಾರಂಭ ಮಾಡಿದ್ದೇವೆ. ಯಾರೇ ಬರಲಿ, ಈಗ 25 ಅಥವಾ 40 ವರ್ಷ ಹಿಂದೆ ಯಾರು ಮಾಡಿದ್ದಾರೋ ಅವರು ಸೊಸೈಟಿಗಳನ್ನು ಮತ್ತು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾರ್ಪೋರೇಷನ್‌ಗಳನ್ನು ರಚನೆ ಮಾಡಿದ್ದಾರೆ. ಅವುಗಳಲ್ಲಿ ಲೋಪದೋಷಗಳು ಕಂಡುಬಂದರೆ, ಅದನ್ನು ಸರಿಪಡಿಸುವಂತಹ ಕೆಲಸ ಮಾಡೋಣ. ಈಗ ಲ್ಯಾಂಡ್ ಆರ್ಮಿ ಕಾರ್ಪೋರೇಷನ್ ಮತ್ತು ನಿರ್ಮಿತಿ ಕೇಂದ್ರವನ್ನು ಮುಚ್ಚಬೇಕು ಎನ್ನುವುದು ಸರಿಯಲ್ಲ. ಏಕೆಂದರೆ, ನೆಗಡಿ ಬಂದರೆ ಮೂಗನ್ನು ಕೊಯ್ದುಕೊಳ್ಳುವಂತಹ ಕೆಲಸವಾಗುತ್ತದೆ. ಏನು ತಪ್ಪಾಗಿದೆ ಅದನ್ನು ಸರಿಪಡಿಸುವಂತಹ ಕೆಲಸವನ್ನು ಖಂಡಿತವಾಗಿ ಸರ್ಕಾರ ಮಾಡುತ್ತದೆ.

**ಶ್ರೀ ಎಂ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ದಯಮಾಡಿ ಅದು ಸಾಮಾನ್ಯ ತಪ್ಪಲ್ಲ. ಈಗ ನಿರ್ಮಿತಿ ಕೇಂದ್ರದಲ್ಲಿ ಅವರು sub-lease ಗೆ ಕೊಡುತ್ತಾರೆ. ಅವರು ಕೇವಲ ಏಜೆನ್ಸಿಯಾಗಿ ಕೆಲಸ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಅವರ ಬಳಿ ಹಾರೆ ಮತ್ತು ಗುದ್ದಲಿ ಇಲ್ಲ. ಆದರೆ, ಅಲ್ಲಿ ಎಷ್ಟು ಜನ ಎಂಜಿನಿಯರ್ಸ್ ಇದ್ದಾರೆ ಗೊತ್ತೆ? ಅಲ್ಲಿ ನೂರಾರು ಜನ ಎಂಜಿನಿಯರ್ಸ್‌ಗಳು ಇದ್ದಾರೆ. ಅವರು ಆ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಶಕ್ತಿಯಿಲ್ಲ. ಆದರೆ, ಇಲಾಖೆಯಲ್ಲಿ ನೂರಾರು ಜನ ಎಂಜಿನಿಯರ್ಸ್‌ಗಳನ್ನು ಇಟ್ಟುಕೊಂಡಿದ್ದಾರೆ. ಅವರಿಗೆ ಸಂಬಳ ಕೊಡುವುದಕ್ಕೆ ಎಷ್ಟಾಗುತ್ತದೆ?

**ಶ್ರೀ ಗೋವಿಂದ ಎಂ ಕಾರಜೋಳ:-** ಮಾನ್ಯ ಸಭಾಪತಿಯವರೇ, ಅದು ನನ್ನ ಇಲಾಖೆಯ ವ್ಯಾಪ್ತಿಗೆ ಬರದಿದ್ದರೂ ಕೂಡ, ಸರ್ಕಾರದ ಪರವಾಗಿ ಮಾನ್ಯ ಸದಸ್ಯರಿಗೆ ಉತ್ತರವನ್ನು ಒದಗಿಸಿದ್ದೇನೆ. ಸಂಬಂಧಪಟ್ಟಂತಹವರ ಜೊತೆಯಲ್ಲಿ ಚರ್ಚೆ ಮಾಡಿ, ಏನು ಸರಿಪಡಿಸುವುದಕ್ಕೆ ಸಾಧ್ಯವೋ ಅದನ್ನು ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಪ್ರಶ್ನೆ ಸಂಖ್ಯೆ: 330)**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ಈಗ ಬೆಂಗಳೂರು ಮತ್ತು ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ, ಹತ್ತು ಪಥದ ರಸ್ತೆಗಳನ್ನು ಮಾಡುವುದಕ್ಕೆ, ಈಗಾಗಲೇ ಈ ಯೋಜನೆಯ ಕಾಮಗಾರಿ ಪ್ರಾರಂಭವಾಗಿದೆ. ನನ್ನ ಪ್ರಶ್ನೆಯ ಮುಖ್ಯವಾದ ಉದ್ದೇಶವೇನೆಂದರೆ, ಈಗ ಬೆಂಗಳೂರು-ಮೈಸೂರಿಗೆ ಕಾರಿನಲ್ಲಿ ಪ್ರಯಾಣ ಮಾಡುವುದಕ್ಕೆ ನಾಲ್ಕು ತಾಸು ತೆಗೆದುಕೊಳ್ಳುತ್ತಿದೆ. ಬಸ್ ಎಷ್ಟು ಗಂಟೆಗೆ ತಲುಪುತ್ತದೆಯೋ ಗೊತ್ತಿಲ್ಲ. ಇದರ ಜೊತೆಗೆ ಅಪಘಾತಗಳು ಸಹ ಬಹಳ ಹೆಚ್ಚಾಗುತ್ತಿವೆ. ಈಗ ಈ ಅಪಘಾತವನ್ನು ಕಡಿಮೆ ಮಾಡಬೇಕು ಮತ್ತು ವೇಗದ ಮಿತಿಯನ್ನು ಹೆಚ್ಚು ಮಾಡಬೇಕು ಎಂಬ ಸದುದ್ದೇಶವನ್ನು ಇಟ್ಟುಕೊಂಡು ಈ ಯೋಜನೆಯನ್ನು ಪ್ರಾರಂಭ ಮಾಡಿದ್ದಾರೆ. ಈಗ ಅವರ ಉತ್ತರದಲ್ಲಿ ಏನನ್ನು ಹೇಳಿದ್ದಾರೆಂದರೆ, ಈ ರಸ್ತೆಯ ವಿಚಾರದಲ್ಲಿ ನಾನು ಮಾನ್ಯ ಮಾಜಿ ಮುಖ್ಯಮಂತ್ರಿಗಳಾದಂತಹ ಎಸ್.ಎಂ.ಕೃಷ್ಣರವರನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಅವರು ಕೇವಲ 386 ಕೋಟಿ ವೆಚ್ಚದಲ್ಲಿ ಮೊದಲ ಬಾರಿಗೆ ನಾಲ್ಕು ಪಥದ ರಸ್ತೆಯನ್ನು ಮಾಡಿಸಿದರು. ಅವರು ಏನಾದರೂ ಅಂದಿನ ದಿನ ಈ ಯೋಜನೆಯನ್ನು ಕೈಗೆತ್ತಿಕೊಳ್ಳದಿದ್ದರೆ, ಇವತ್ತಿನ ಪರಿಸ್ಥಿತಿ ಯಾವ ರೀತಿ ಕೆಟ್ಟದಾಗುತ್ತಿತ್ತು ಎಂದು ಹೇಳುವುದಕ್ಕೆ ಅಸಾಧ್ಯ. ಆದರೆ, ಇವತ್ತು ಮತ್ತು ಮುಂದಿನ ಸರ್ಕಾರಗಳು, ಇದನ್ನು ಹತ್ತು ಪಥದ ರಸ್ತೆಗಳನ್ನಾಗಿ ಪರಿವರ್ತನೆ ಮಾಡುತ್ತಿವೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಆದರೆ, ಇವತ್ತು ಕಾಮಗಾರಿಗೆ ಒಟ್ಟು ವೆಚ್ಚ 4473 ಕೋಟಿ ರೂಪಾಯಿಗಳು ಎಂದು ಮಾಹಿತಿ ನೀಡಿದ್ದಾರೆ. ಅದನ್ನು ಎರಡು ಪ್ಯಾಕೇಜ್ ಮಾಡಿದ್ದಾರೆ. ಒಂದು ಪ್ಯಾಕೇಜ್‌ಗೆ 2190 ಕೋಟಿ ರೂಪಾಯಿಗಳು ಮತ್ತೊಂದು ಪ್ಯಾಕೇಜ್‌ಗೆ 2280 ಕೋಟಿ ರೂಪಾಯಿಗಳು. ಆದರೆ, ಇಲ್ಲಿ ಮೂವತ್ತು ತಿಂಗಳ ಅವಧಿಯಲ್ಲಿ ಈ ಕಾಮಗಾರಿಯನ್ನು ಮುಗಿಸಬೇಕೆಂದು ಯೋಜನೆಯಲ್ಲಿ ತಿಳಿಸಿದ್ದಾರೆ ಮತ್ತು ಅವರು ಈ ಯೋಜನೆ ಪ್ರಗತಿ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಅಂದರೆ, ಒಂದು ಕಡೆ ಶೇಕಡಾ 67ರಷ್ಟು ಕಾಮಗಾರಿಯಾಗಿದೆ. ಮತ್ತೊಂದು ಕಡೆ ಶೇಕಡಾ 55ರಷ್ಟು ಆಗಿದೆ ಎಂದು. ಆದರೆ, ಟೆಂಡರ್ ಪ್ರಕಟಣೆಯ ಪ್ರಕಾರ ಇನ್ನು ಒಂದು ವರ್ಷದ ಒಳಗೆ ಇನ್ನುಳಿದಿರುವ ಕಾಮಗಾರಿಗಳನ್ನು ಮಾಡಬೇಕೆಂದು ಇದೆ. ಈ ಅವಧಿಯೊಳಗಡೆ ಈ ಕಾಮಗಾರಿಗಳನ್ನು ಮಾಡುವುದಕ್ಕೆ ಆಗುತ್ತದೆಯೇ? ಕೋವಿಡ್-19 ಹಿನ್ನೆಲೆಯಲ್ಲಿ ಅವರಿಗೆ ಮೂರು ತಿಂಗಳ ಅವಧಿಯನ್ನು ಸಹ ವಿಸ್ತರಣೆ ಮಾಡಿದ್ದಾರೆ. ಆ ದಿಸೆಯಿಂದ ದಯಮಾಡಿ, ಅಲ್ಲಿನ ಕಾಮಗಾರಿಗಳು ಬಹಳ ವೇಗವಾಗಿ ಆಗಬೇಕು ಮತ್ತೆ ಈ ಕಾಮಗಾರಿಗಳ ಗುಣಮಟ್ಟವನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಯಾವ ಏಜೆನ್ಸಿಯಿಂದ ಮಾಡಿಸುತ್ತಿದ್ದಾರೆ? ಇದುವರೆಗೆ ಈ ಕಾಮಗಾರಿಗೆ ಬಿಡುಗಡೆ ಮಾಡಿರುವಂತಹ ಮೊತ್ತವೆಷ್ಟು? ಮತ್ತೆ ಇಲ್ಲಿ ಉತ್ತರದಲ್ಲಿ ಏನು ಹೇಳಿದ್ದಾರೆಂದರೆ, ಹತ್ತು ಪಥದ ರಸ್ತೆ, ಅದರಲ್ಲಿ ಆರು ಪಥಗಳು ವಾಹನಗಳು ಓಡಾಡುವುದಕ್ಕೆ ಮತ್ತೆ ಎರಡೂ ರಸ್ತೆ ಭಾಗದಲ್ಲಿಯೂ ಕೂಡ ಎರಡು ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುತ್ತಿದ್ದಾರೆ. ಇದು ಒಂದು ರೀತಿ ವಿಶೇಷ. ಅಂದರೆ, ಎರಡು ಭಾಗದಲ್ಲೂ ಎರಡೆರಡು ಸರ್ವಿಸ್ ರಸ್ತೆಗಳು. ಅದಕ್ಕೆ ಅವರನ್ನು ಅಭಿನಂದಿಸುತ್ತೇನೆ. ಆದರೆ, ಸರ್ವಿಸ್ ರಸ್ತೆಯ ಪಕ್ಕದಲ್ಲಿ, ಬೇಲಿ ಹಾಕುತ್ತಾರೆಯೇ? ಅಥವಾ ಹಾಗೆಯೇ ಓಪನ್ ಆಗಿ ಇರುತ್ತದೆಯೇ? ಅದರ ಬಗ್ಗೆ ಉತ್ತರದಲ್ಲಿ ಏನೂ ಹೇಳಿಲ್ಲ. ದಯವಿಟ್ಟು ಮಾನ್ಯ ಸಚಿವರು ಇದನ್ನು ತಿಳಿಸಬೇಕೆಂದು ವಿನಂತಿ ಮಾಡುತ್ತೇನೆ.

**ಶ್ರೀ ಗೋವಿಂದ ಎಂ ಕಾರಜೋಳ:-** ಮಾನ್ಯ ಸಭಾಪತಿಯವರೇ, ಈ ಕಾಮಗಾರಿಯನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಮಾಡುತ್ತಿದ್ದಾರೆ. ನಾವು ಅವರಿಂದ ಮಾಹಿತಿ ಪಡೆದುಕೊಂಡು ಮಾನ್ಯ ಸದಸ್ಯರ ಪ್ರಶ್ನೆಗೆ ಉತ್ತರವನ್ನು ನೀಡಿದ್ದೇನೆ. ಮಾನ್ಯ ಸದಸ್ಯರು ಕೇಳಿರುವಂತಹ ಹಿಂದುಳಿದಿರುವಂತಹ ವಿಷಯಗಳನ್ನು ಪ್ರಾಧಿಕಾರದವರ ಜೊತೆಯಲ್ಲಿ ಚರ್ಚೆ ಮಾಡುತ್ತೇನೆ. ಪ್ರಾಧಿಕಾರದವರ ಜೊತೆ ಚರ್ಚೆ ಮಾಡಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟಂತೆ ನಾನೇ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ, ಅದು ಭಾರತ ಸರ್ಕಾರಕ್ಕೆ ಸಂಬಂಧಪಟ್ಟಿದ್ದು, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಕರೆದು ಮಾತನಾಡುತ್ತೇನೆ. ನನ್ನ ಗಮನಕ್ಕೆ ಮಾನ್ಯ ಸದಸ್ಯರು ಏನೇನು ಸಮಸ್ಯೆ ಮತ್ತು ಸಲಹೆಗಳನ್ನು ತಂದಿದ್ದಾರೆ, ಅದನ್ನು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಗಮನಕ್ಕೂ ತರುತ್ತೇನೆ. ಅಧಿವೇಶನ ಮುಗಿದ ನಂತರ ಮಾನ್ಯ ಸದಸ್ಯರನ್ನು ಸಭೆಗೆ ಕರೆಯುತ್ತೇನೆ. ಅಲ್ಲಿ ಚರ್ಚೆ ಮಾಡಿ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಗೆ ಇನ್ನೇನು ಸಲಹೆ ಸೂಚನೆಗಳನ್ನು ಕೊಡಬಹುದು ಎಂಬುದನ್ನು ಸಹ ತಿಳಿಸೋಣ. ಆ ಕಾಮಗಾರಿ ಬೇಗ ಮುಗಿಯಬೇಕು ಎಂಬುದರ ಬಗ್ಗೆ ಮಾನ್ಯ ಸದಸ್ಯರ ಸಾಮಾಜಿಕ ಕಳಕಳಿ ಕಾಳಜಿ ಏನಿದೆ, ಅಂದರೆ ಪ್ರಯಾಣಕ್ಕೆ ನಾಲ್ಕು ಗಂಟೆ ಸಮಯ ಹಿಡಿಯುತ್ತದೆ. ಅಪಘಾತಗಳು ಆಗುತ್ತಿದೆ ಎಂದು ಹೇಳಿದ್ದಾರೆ. ಅವುಗಳೆಲ್ಲವನ್ನು ಪ್ರಾಧಿಕಾರದವರ ಜೊತೆ ಚರ್ಚೆ ಮಾಡಿ. ಖಂಡಿತವಾಗಿ ಇದನ್ನು ಮಾಡಿಸೋಣವೆಂದು, ಮಾನ್ಯ ಸದಸ್ಯರ ಸಾಮಾಜಿಕ ಕಳಕಳಿ ಕಾಳಜಿಯ ಜೊತೆಗೆ ನನಗೂ ಕೂಡ ಕಾಳಜಿ ಇದೆ. ಏಕೆಂದರೆ, ಅಪಘಾತವಾಗಿ ಪ್ರಾಣಾಪಾಯಗಳು, ಅನಾಹುತಗಳು, ಸಾರ್ವಜನಿಕ ಆಸ್ತಿ-ಪಾಸ್ತಿಗಳು ಹಾಳಾಗುವಂಥನ್ನು ನಾವು ನೋಡುತ್ತಿದ್ದೇವೆ. ಅದನ್ನು ಖಂಡಿತವಾಗಿ ಮಾಡುತ್ತೇವೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಒಂದು ಉಪ ಪ್ರಶ್ನೆ ಏನೆಂದರೆ, ಈ ಒಂದು ಕಾಮಗಾರಿ ಬಹಳ ನಿಧಾನಗತಿಯಲ್ಲಿ ಆಗುತ್ತಿದೆ. ಅದಕ್ಕೆ ಮುಖ್ಯವಾದ ಕಾರಣವೇನೆಂದರೆ, ಸಣ್ಣ ಸಣ್ಣ ಪ್ಯಾಚ್‌ನಲ್ಲಿ ಭೂಸ್ವಾಧೀನವಾಗಿಲ್ಲ. ಅದು ಬಹಳ ಮುಖ್ಯವಾದ ಕಾರಣ. ಆ ಕಾಮಗಾರಿಯನ್ನು ಬಹಳ ದೊಡ್ಡ ಸಂಸ್ಥೆಗೆ ವಹಿಸಿದ್ದಾರೆ ಮತ್ತು ಅಲ್ಲಿ ಕೆಲಸ ನಡೆಯುತ್ತಿದೆ. ಅಲ್ಲಿ ಬಹಳ ಮುಖ್ಯವಾದ ಸಮಸ್ಯೆಯೇನೆಂದರೆ, ಸುಮಾರು ಕಡೆಗಳಲ್ಲಿ ಭೂಸ್ವಾಧೀನವಾಗಿಲ್ಲ. ಅದಕ್ಕೆ ಸರ್ಕಾರ ಮತ್ತು ಕಂದಾಯ ಅಧಿಕಾರಿಗಳು ಆ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳದೆ ಇದ್ದರೆ, ಅದು ಒಂದು ವರ್ಷವಲ್ಲ ಬಹುಶಃ ಇನ್ನು ಮೂರು ವರ್ಷವಾದರೂ ಆಗುವುದಿಲ್ಲ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಉತ್ತರವನ್ನು ನೀಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಯಾಗಲಿ ಮತ್ತು ಕೇಂದ್ರ ಸರ್ಕಾರದ ಯೋಜನೆಯಾಗಲಿ ಮತ್ತೇನೇ ಆಗಲಿ. ಬಹಳಷ್ಟು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕೇಂದ್ರ ಸರ್ಕಾರದ ಯೋಜನೆಯಲ್ಲಿ ಕಾಮಗಾರಿಗಳು ನಡೆಯುತ್ತವೆ. ಆದರೆ, ನಾನು ಕೇಳಿರುವ ಪ್ರಶ್ನೆಗೆ ಮಾಹಿತಿಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರ ಬಳಿ ತೆಗೆದುಕೊಂಡು ಕೊಡುತ್ತೇನೆಂದು ಹೇಳುತ್ತಾರೆ. ಹಾಗಾದರೆ, ಈ ರಾಜ್ಯದಲ್ಲಿ ಉಸ್ತುವಾರಿ, ಜವಾಬ್ದಾರಿ ಮತ್ತು ಈ ಕಾರ್ಯಯೋಜನೆ ಏನು ಎಂಬುದರ ಬಗ್ಗೆ ಮಾಹಿತಿ ಇರುವುದಿಲ್ಲವೇ?

**ಶ್ರೀ ಗೋವಿಂದ ಎಂ ಕಾರಜೋಳ:–** ಮಾನ್ಯ ಸಭಾಪತಿಯವರೇ, National Highway Authority of India ದಲ್ಲಿ independent Engineers ಗಳು ಇದ್ದಾರೆ ಮತ್ತು ಅವರ ಕಚೇರಿಗಳಿವೆ. ಅಲ್ಲಿ Chief Engineers, Project Directors and CPO's ಗಳಿದ್ದಾರೆ. ಅವರೆಲ್ಲರೂ ಸೇರಿಕೊಂಡು independent ಆಗಿ management ಮಾಡಿಕೊಂಡು supervise ಮಾಡುತ್ತಾರೆ. ಅದನ್ನು ನಾವು ಮಾಡುವುದಿಲ್ಲ. ಕಾಲಕಾಲಕ್ಕೆ ಜನರಿಗೆ ಆಗುವಂತಹ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಅವರ ಜೊತೆಯಲ್ಲಿ ಪತ್ರ ವ್ಯವಹಾರ ಮಾಡುತ್ತೇವೆ. ಆದಷ್ಟು ಬೇಗ ಮಾಡಬೇಕು, ಕಾಮಗಾರಿಯಿಂದ ಧೂಳು ಬರುತ್ತಿದೆ, ಮೂರು ವರ್ಷದಿಂದ ಅಗೆದು ಇಟ್ಟಿದ್ದಾರೆಂದು ಹೇಳುತ್ತೇವೆ. ಖಂಡಿತವಾಗಿ ಪ್ರಾಧಿಕಾರದವರನ್ನು ಕರೆದು ಅವರ ಜೊತೆಯಲ್ಲಿ ಸಭೆ ಮಾಡಿ ಇದನ್ನು ಸರಿಪಡಿಸುವುದಕ್ಕೆ ತಿಳಿಸುತ್ತೇನೆ.

**(ಮುಂದು...)**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(106) 03.02.2021 12.20 LL-BNS

**ಶ್ರೀ ಸಿ.ಎಂ. ಇಬ್ರಾಹಿಂ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬಹಳ ಮುಖ್ಯವಾದ ವಿಚಾರದ ಬಗ್ಗೆ ನಾನು ಮಾತನಾಡುತ್ತೇನೆ. ಅದೇನೆಂದರೆ, ಸರ್ಕಾರದಿಂದ ರಸ್ತೆಗಳನ್ನು ಮಾಡುತ್ತಾರೆ. ಆದರೆ, ಆ ರಸ್ತೆಗಳಿಗೆ ಗೇಟ್‌ಗಳನ್ನು ಹಾಕುತ್ತಾರೆ. ಇದರಿಂದಾಗಿ, ಹಗಲು ದರೋಡೆ ಆಗುತ್ತಿದೆ. ಆ ರಸ್ತೆಗೆ ಎಷ್ಟು ದುಡ್ಡು ಖರ್ಚಾಗಿರುತ್ತದೆ; ಯಾವ ಗೇಟ್‌ನಲ್ಲಿ ಎಷ್ಟು ದುಡ್ಡು ಕಲೆಕ್ಟ್ ಮಾಡಬೇಕು; ಹಾಗಾಗಿ ಎಷ್ಟು ವರ್ಷ ದುಡ್ಡು ಕಲೆಕ್ಟ್ ಮಾಡಬೇಕೆಂಬ ಬಗ್ಗೆ ಏನಾದರೂ ಮಾನದಂಡ ಮಾಡಲಾಗಿದೆಯೇ? ನಾನು ಟೋಲ್ ಗೇಟ್‌ಗಳ ಬಗ್ಗೆ ಮಾತನಾಡುತ್ತಿದ್ದೇನೆ. ಇಂತಹ ಟೋಲ್ ಗೇಟ್‌ಗಳಲ್ಲಿ ಯದ್ವಾತದ್ವಾ ಹಣ ಅಂದರೆ, 70 ರೂಪಾಯಿ, 80 ರೂಪಾಯಿ, 100 ರೂಪಾಯಿಯಂತೆ ಹಣ ವಸೂಲಿ ಮಾಡುತ್ತಿದ್ದಾರೆ. ಈ ಹಿಂದೆ ಎಷ್ಟೋ ವರ್ಷಗಳ ಹಿಂದೆ ಆದಂತಹ ರಸ್ತೆಗಳಲ್ಲಿ ಇನ್ನೂ ಟೋಲ್ ವಸೂಲಿ ಮಾಡಲಾಗುತ್ತಿದೆ. ಅಷ್ಟೇ ಅಲ್ಲದೇ, ಈ ರಸ್ತೆಗಳಿಗೆ ನಾವು ರೋಡ್ ಟ್ಯಾಕ್ಸ್ ಸಹ ಕಟ್ಟಬೇಕು ಮತ್ತು ಟೋಲ್ ಸಹ ಕಟ್ಟಬೇಕು. ಇದಕ್ಕೆ ಎಲ್ಲಿಯಾದರೂ ಕಡಿವಾಣ ಹಾಕಬೇಕಲ್ಲವೇ? ಈಗ ಬೆಂಗಳೂರು–ಮೈಸೂರು ಮಾರ್ಗದಲ್ಲಿ 10 ಪಥದ ರಸ್ತೆ ನಿರ್ಮಾಣ ಮಾಡುತ್ತಿದ್ದು, ಅದಕ್ಕೆ ಟೋಲ್ ಎಷ್ಟು ವರ್ಷ ಸಂಗ್ರಹ ಮಾಡಬೇಕು ಎನ್ನುವ ಬಗ್ಗೆ ಹೇಳಬೇಕು. ಅದೇ ರೀತಿ ನೈಸ್ ರಸ್ತೆಯಲ್ಲಿ ಕಾಮಗಾರಿ ಪೂರ್ಣಗೊಳಿಸದೇ 4 ಕಡೆ ಟೋಲ್ ಗೇಟ್ ಇಟ್ಟು, ಟೋಲ್ ವಸೂಲಿ ಮಾಡುತ್ತಿದ್ದಾರೆ. ಇದನ್ನು ಯಾವ ರೀತಿ ಮಾಡುತ್ತಾರೆ ಎನ್ನುವುದು ಬಹಳ ಮುಖ್ಯವಾಗಿರುತ್ತದೆ.

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಸಭಾಪತಿಯವರೇ, ಟೋಲ್ ವಸೂಲಿ ಬಗ್ಗೆ ಆಗಾಗ್ಗೆ ತಕರಾರು ಬರುತ್ತಲೇ ಇರುತ್ತದೆ. ಈ ಬಗ್ಗೆ ನಾವು ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಲಕಾಲಕ್ಕೆ ಸೂಚನೆಗಳನ್ನು ಕೊಡುತ್ತಲೇ ಇರುತ್ತೇವೆ. ಈ ಬಗ್ಗೆ ಮಾನ್ಯ ಸಿ.ಎಂ. ಇಬ್ರಾಹಿಂ ರವರು ಹೇಳಿರುವುದು ಸರಿಯಾಗಿದೆ. ಏಕೆಂದರೆ, ನಿಗದಿತ ಅವಧಿಯೊಳಗೆ ಅವರಿಗೆ ಹಣ ಮುಟ್ಟಿದ ನಂತರ ಆ ಟೋಲ್ ವಸೂಲಿಯನ್ನು ಬಂದ್ ಮಾಡಬೇಕೆಂದು ಅಗ್ರಿಮೆಂಟ್ ಇರುತ್ತದೆ. ಹಾಗಾಗಿ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಸೂಚನೆ ನೀಡಿ, ಅವಧಿ ಮುಕ್ತಾಯವಾದ ಟೋಲ್ ಗೇಟ್‌ಗಳನ್ನು ಮುಚ್ಚುವುದಕ್ಕೆ ಹೇಳುತ್ತೇನೆ.

**ಸಭಾಪತಿಯವರು:–** ಮುಂದಿನ ಪ್ರಶ್ನೆ ಶ್ರೀಮತಿ ವೀಣಾ ಅಚ್ಚಯ್ಯನವರದ್ದು.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಬಿ.ಕೆ. ಹರಿಪ್ರಸಾದ್(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಪ್ರಶ್ನೆ ಸಂಖ್ಯೆ:325ರಲ್ಲಿ ಶ್ರೀ ಕೆ.ಪಿ. ನಂಜುಂಡಿಯವರು ವಿಶ್ವಕರ್ಮ ಜನಾಂಗದ ಬಗ್ಗೆ ಕೇಳಿರುವ ಪ್ರಶ್ನೆ ಮೇಲೆ ಮಾತನಾಡುವುದಕ್ಕೆ ನಮಗೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:–** ಸಂಬಂಧಪಟ್ಟ ಸದಸ್ಯರೇ ಈ ಸದನದಲ್ಲಿ ಇಲ್ಲದೇ ಇದ್ದರೆ ಏನು ಮಾಡುವುದು?

**ಶ್ರೀ ಕೆ.ಸಿ. ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಈ ವಿಷಯ ಕೊನೆಯಲ್ಲಿ ತೆಗೆದುಕೊಳ್ಳಬೇಕೆಂದು ಅವರು ಹೇಳಿರುತ್ತಾರೆ.

**ಸಭಾಪತಿಯವರು:–** ಅದನ್ನು ತಮ್ಮ ಬಳಿ ಹೇಳಿ ಹೋಗಿರುತ್ತಾರೆಯೇ? ಪ್ರಶ್ನೆ ಇರುವವರು ಸದನದಲ್ಲಿ ಹಾಜರಿರಬೇಕಲ್ಲವೇ? ಒಂದು ಚುಕ್ಕೆ ಗುರುತಿನ ಪ್ರಶ್ನೆ ಹಾಕಬೇಕಾದರೆ ಅದನ್ನು 10 ದಿನ ಮುಂಚಿತವಾಗಿ ಹಾಕಬೇಕು. ಆ ವಿಷಯದಲ್ಲಿ ನಾವು ಅಷ್ಟು ಜಾಗೃತರಾಗಿರುತ್ತೇವೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ಮಾನ್ಯ ಸಭಾಪತಿಯವರೇ, ಬಹಳ ದೊಡ್ಡ ಪ್ರಮಾಣದ ಜನಸಂಖ್ಯೆಯ ಬಗ್ಗೆ ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದು, ಅದರ ಬಗ್ಗೆ ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ:361**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. 'ತಲಕಾವೇರಿಯಲ್ಲಿ ಪ್ರವಾಸಿಗರು ತಮ್ಮ ಭೇಟಿಯ ಸಂದರ್ಭದಲ್ಲಿ ಧಾರ್ಮಿಕ ನಂಬಿಕೆಗಳಿಗೆ ಧಕ್ಕೆ ಬರುವ ರೀತಿಯಲ್ಲಿ ನಡೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ' ಎಂಬ ಪ್ರಶ್ನೆ ಕೇಳಿದ್ದು, ಅದಕ್ಕೆ, 'ಪ್ರಕರಣಗಳು ಕಂಡು ಬಂದಿರುವುದಿಲ್ಲವೆಂದು' ಮಾನ್ಯ ಸಚಿವರು ಉತ್ತರ ನೀಡಿರುತ್ತಾರೆ. ಎರಡನೆಯದಾಗಿ, 'ತಲಕಾವೇರಿ ಕ್ಷೇತ್ರದಲ್ಲಿ ಧಾರ್ಮಿಕ ಚಟುವಟಿಕೆಗಳಿಗೆ ಮಾತ್ರ ಅವಕಾಶವಿರುವಂತೆ ಸ್ಪಷ್ಟ ಹಾಗೂ ಕಡ್ಡಾಯ ಮಾರ್ಗಸೂಚಿಗಳನ್ನು ಅಳವಡಿಸಿ, ಅವುಗಳ ಪಾಲನೆಯಾಗುವಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ' ಎಂದು ಪ್ರಶ್ನೆ ಕೇಳಿದ್ದು, 'ಅಲ್ಲಿ ನಾಮಫಲಕಗಳನ್ನು ಹಾಕಿದ್ದೇವೆಂದು' ಉತ್ತರ ನೀಡಿರುತ್ತಾರೆ. ಆದರೆ, ಅಲ್ಲಿ ಏನಾಗುತ್ತಿದೆಯೆಂದರೆ, ಭಾಗಮಂಡಲದಲ್ಲಿ ಒಂದು ವ್ಯವಸ್ಥಾಪನಾ ಸಮಿತಿ ಸರ್ಕಾರದ ಮೂಲಕ ನೇಮಕವಾಗಿರುತ್ತದೆ. ಆ ವ್ಯವಸ್ಥಾಪನಾ ಸಮಿತಿಯವರಿಗೆ ಯಾವುದೇ ಒಂದು ಅಧಿಕಾರ ನಾನು ಕಂಡಂತೆ ಇರುವುದಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಎಲ್ಲಾ ವಿಷಯಗಳಲ್ಲಿಯೂ ಜಿಲ್ಲಾಧಿಕಾರಿಗಳು ಅಥವಾ ಜಿಲ್ಲಾಡಳಿತ ಹಸ್ತಕ್ಷೇಪ ಮಾಡುತ್ತಿದೆ. ಉದಾಹರಣೆಗೆ, ಅಕ್ಟೋಬರ್ 17ಕ್ಕೆ ತಲಕಾವೇರಿಯಲ್ಲಿ ತೀರ್ಥೋದ್ಭವ ಆಗುವಂತಹ ಸಂದರ್ಭದಲ್ಲಿ ಅಲ್ಲಿಯ ಒಂದು ವ್ಯವಸ್ಥೆ ಹೇಗಿತ್ತೆಂದರೆ, ಸ್ಥಳೀಯ ಕೊಡಗು ನಿವಾಸಿಗಳನ್ನು ಸಹ ಪವಿತ್ರ ತೀರ್ಥ ಬರುವಂತಹ ಸ್ಥಳಕ್ಕೆ ಹೋಗದ ರೀತಿ ತಡೆಹಿಡಿಯಲಾಗಿತ್ತು. ಆಗ ಅನೇಕ ಭಕ್ತರಿಗೆ ಬಹಳ ನೋವಾಗಿರುತ್ತದೆ. ಅಲ್ಲದೇ, ಅದೇ ದಿವಸ ಬಹಳಷ್ಟು ಗೊಂದಲವಾಗಿ, ಕೊನೆಗೆ ತೀರ್ಥ ಬರುವಂತಹ ಸಂದರ್ಭದಲ್ಲಿ ಭಕ್ತಾದಿಗಳಿಗೆ ಅವಕಾಶ ಮಾಡಿಕೊಟ್ಟಿರುತ್ತಾರೆ. ಅಲ್ಲಿ ಏನಾಗಿದೆಯೆಂದರೆ, ತಲಕಾವೇರಿ ಒಂದು ಪ್ರವಾಸಿ ತಾಣ ಅಲ್ಲವೆಂದು ಹೇಳಿದರೂ ಸಹ ಅನೇಕ ಪ್ರವಾಸಿಗರು ಭೇಟಿ ನೀಡುತ್ತಿದ್ದಾರೆ. ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ಅಲ್ಲಿಗೆ ಒಂದು ಸುಸಜ್ಜಿತವಾದ ವ್ಯವಸ್ಥೆಯನ್ನು ಮಾಡಬೇಕಾಗಿದೆ.

**ಸಭಾಪತಿಯವರು:-** ಮಾನ್ಯ ಸಚಿವರು ತಮ್ಮ ಪ್ರಶ್ನೆಗೆ ಉತ್ತರ ನೀಡುತ್ತಾರೆ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನ್ನ ಪ್ರಶ್ನೆ ಮುಗಿದಿರುವುದಿಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಸಭಾಪತಿಯವರು:-** ಉಪ ಪ್ರಶ್ನೆ ಕೇಳುವುದಕ್ಕೆ ಪುನಃ ತಮಗೆ ಅವಕಾಶ ಕೊಡುತ್ತೇನೆ. ಈಗ ಭಾಷಣ ಬೇಡ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಉತ್ತರ ಕೊಟ್ಟಿರುತ್ತೇವೆ. ಆದರೆ, ಮತ್ತಷ್ಟು ವಿಸ್ತಾರವಾದಂತಹ ಪ್ರಸ್ತಾವಗಳನ್ನು ಅವರು ಮಾಡಿರುತ್ತಾರೆ. ಅದರಂತೆ, ತೀರ್ಥೋದ್ಭವದ ಸಂದರ್ಭದಲ್ಲಿ ಕೊಡಗಿನ ಸ್ಥಳೀಯ ನಿವಾಸಿಗಳನ್ನು ಪವಿತ್ರ ಕ್ಷೇತ್ರಕ್ಕೆ ಬಿಟ್ಟಿರುವುದಿಲ್ಲವೆಂದು ಅವರ ಭಾವನೆಗಳು ಏನಿದೆ, ಅದು ಯಾವ ಕಾರಣಕ್ಕಾಗಿ ಬಿಟ್ಟಿರುವುದಿಲ್ಲವೆಂದು ಗೊತ್ತಿರುವುದಿಲ್ಲ. ಆದರೆ, ನಿಯಮಾನುಸಾರ ಮಾಡಿರುತ್ತೇವೆಂದು ಅಧಿಕಾರಿಗಳು ಉತ್ತರ ಕೊಟ್ಟಿರುತ್ತಾರೆ. ಒಂದು ವೇಳೆ ಅಂತಹ ಏನಾದರೂ ತಪ್ಪು ಆಗಿದ್ದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಇತ್ತೀಚೆಗೆ ಕೆಲವು ಸಮಯದ ಹಿಂದೆ, ಇದೊಂದು ಪ್ರವಾಸಿ ಸ್ಥಳ ಅಲ್ಲದೇ ಇದ್ದರೂ ಕೂಡ, ಆ ತಲಕಾವೇರಿ ದೇವಾಲಯಕ್ಕೆ ಬಂದಂತಹ ಭಕ್ತಾದಿಯಾಗಿ ಅಥವಾ ಪ್ರವಾಸಿಗರಾಗಿ ಬಂದಂತಹ ಕೆಲವು ಯುವಕ-ಯುವತಿಯರು ಆ ದೇವಾಲಯದ ಅಧ್ಯಕ್ಷರ ಜೊತೆ ಕೆಲವೊಂದು ವಾದ-ವಿವಾದಗಳನ್ನು ಮಾಡಿದ್ದು, ಆ ಬಗ್ಗೆ ಪ್ರಕರಣ ಕೂಡ ದಾಖಲಾಗಿರುತ್ತದೆ. ಈ ಹಿಂದೆ ಕೂಡ ಸದರಿ ದೇವಸ್ಥಾನದ ಶಿವಲಿಂಗಕ್ಕೆ ಸಂಬಂಧಪಟ್ಟಂತೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದರು. ಅದಕ್ಕೆ ಸಂಬಂಧಪಟ್ಟಂತೆ ಒಂದು ವರದಿಯನ್ನು ತರಿಸಲಾಗಿರುತ್ತದೆ. ಈಗ ಈ ಸಮಸ್ಯೆಗೆ ಸಂಬಂಧಪಟ್ಟಂತೆ, ಸದನ ಮುಕ್ತಾಯವಾದ ಒಂದು ವಾರದಲ್ಲಿ ಮಾನ್ಯ ಸದಸ್ಯರನ್ನು ಮತ್ತು ಅಲ್ಲಿಯ ಸ್ಥಳೀಯ ಎಂ.ಎಲ್.ಸಿ.ಗಳ ಮತ್ತು ಅಧಿಕಾರಿಗಳ ಸಭೆ ಕರೆದು ಇದಕ್ಕೆ ಸರಿಯಾದ ಮತ್ತು ಬಿಗಿಯಾದ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ಯಾವುದೇ ಗೊಂದಲ ಬೇಡ.

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರ ಉತ್ತರದಿಂದ ನನಗೆ ಸಮಾಧಾನವಾಗಿದೆ. ಆದರೆ, ನನ್ನ ಎರಡನೇ ಪ್ರಶ್ನೆಗೆ, "ಅನ್ವಯಿಸುವುದಿಲ್ಲ" ವೆಂದು ಉತ್ತರ ನೀಡಿರುತ್ತಾರೆ. ಅಲ್ಲಿ ಏನಾಗಿದೆಯೆಂದರೆ, ಪ್ರವಾಸಿಗರು ಬರುವಂತಹ ಸಂದರ್ಭದಲ್ಲಿ ಅವರನ್ನು ಯಾರು ತಪಾಸಣೆ ಮಾಡುವುದಿಲ್ಲ. ಇದರಿಂದಾಗಿ, ಅಲ್ಲಿಗೆ ಬಂದಂತಹ ಪ್ರವಾಸಿಗರು ಇದೊಂದು ಪ್ರವಾಸಿ ತಾಣವೆಂದು ಭಾವಿಸಿ, ಧಾರ್ಮಿಕ ಕ್ಷೇತ್ರಕ್ಕೆ ಹೋಗಿ ಅಲ್ಲಿ ಬೇಡದೇ ಇರುವಂತಹ ಅವ್ಯವಸ್ಥೆಗಳು ಆಗಿರುತ್ತದೆ. ಪ್ರತಿ ತಿಂಗಳಿಗೊಮ್ಮೆ ಕೊಡಗು ಜಿಲ್ಲೆಯ ಯುವಕ-ಯುವತಿಯರು ಭಾಗಮಂಡಲದಿಂದ ತಲಕಾವೇರಿಯವರೆಗೆ ಪಾದಯಾತ್ರೆಯಲ್ಲಿ ನಡೆದುಕೊಂಡು ಹೋಗುತ್ತಾರೆ. ಆ ಸಂದರ್ಭದಲ್ಲಿ ಆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಧಾರ್ಮಿಕ ಕ್ಷೇತ್ರವನ್ನು ಪರಿಶೀಲನೆ ಮಾಡುವಾಗ ಅಲ್ಲಿ ಬೇಕಾದಷ್ಟು ಸಾರಾಯಿ ಬಾಟಲಿ ಹಾಗೂ ಇನ್ನಿತರ ಬೇಡದ ವಸ್ತುಗಳು ಅಲ್ಲಿ ಸಿಗುತ್ತದೆ.

ಹಾಗಾಗಿ, ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದೇನೆಂದರೆ, ಅಲ್ಲಿ ಒಂದು ಚೆಕ್‌ಪೋಸ್ಟ್ ನಿರ್ಮಾಣ ಮಾಡಬೇಕಾಗುತ್ತದೆ. ಅಲ್ಲಿ ಬರುವಂತಹ ಎಲ್ಲಾ ಪ್ರವಾಸಿಗರನ್ನು ಚೆಕ್ ಮಾಡಿ ಅಲ್ಲಿಗೆ ಬಿಡಬೇಕು. ಧರ್ಮಸ್ಥಳ ಮತ್ತು ಕುಕ್ಕೆ ಸುಬ್ರಮಣ್ಯ ದೇವಾಲಯಗಳಿಗೆ ಜನರು ಎಷ್ಟು ಪವಿತ್ರವಾಗಿ ಹೋಗಿ ಬರುತ್ತಾರೆ? ಆದರೆ, ನಮ್ಮ ಕೊಡಗು-ಮಡಿಕೇರಿಗೆ ಪ್ರವಾಸಿಗರು ಬಂದಾಗ, ಟ್ಯಾಕ್ಸಿ ಡ್ರೈವರ್‌ಗಳು ತಲಕಾವೇರಿ ಒಂದು ಪ್ರವಾಸಿ ತಾಣವೆಂದು ಕರೆದುಕೊಂಡು ಹೋಗುತ್ತಾರೆ. ಅದನ್ನು ಮೊದಲು ನಿಲ್ಲಿಸಬೇಕು. ಮಡಿಕೇರಿ ನಮ್ಮ ಕೊಡಗು ಜಿಲ್ಲೆಯ ಕ್ಯಾಪಿಟಲ್ ಆಗಿದ್ದು, ಅಲ್ಲಿಯೇ ಪ್ರವಾಸಿಗರನ್ನು ತಡೆದು ಅವರ ಬಳಿ ಯಾವುದೇ ರೀತಿಯ ಬೇಡದ ವಸ್ತುಗಳು ಇಲ್ಲದ ರೀತಿಯಲ್ಲಿ ಕಟ್ಟುನಿಟ್ಟಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಈ ಹಿಂದೆ ನಡೆದಂತಹ ಘಟನೆಯಿಂದ ಕೊಡಗು ಜಿಲ್ಲೆಯ ಜನರ ಧಾರ್ಮಿಕ ನಂಬಿಕೆಗೆ ಬಹಳ ಪೆಟ್ಟಾಗಿರುತ್ತದೆ. ಅದನ್ನು ಮಾನ್ಯ ಮುಜರಾಯಿ ಸಚಿವರು ಆದಷ್ಟು ಶೀಘ್ರದಲ್ಲಿ ಅಲ್ಲಿ ವ್ಯವಸ್ಥಾಪನಾ ಸಮಿತಿಯವರು ಇರಬಹುದು ಅಥವಾ ನಮ್ಮ ಜನಪ್ರತಿನಿಧಿಗಳನ್ನು ಕರೆದು ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. 17ನೇ ಅಕ್ಟೋಬರ್‌ನಲ್ಲಿ ನಡೆದಂತಹ ಘಟನೆಯಿಂದ ಕೊಡಗು ಜಿಲ್ಲೆಯ ಸ್ಥಳೀಯ ಬಹಳ ನೊಂದಿದ್ದಾರೆ. ಹಾಗಾಗಿ, ಇನ್ನು ಮುಂದೆ ಇಂತಹ ಘಟನೆಗಳಿಗೆ ಆಸ್ಪದ ಕೊಡಬಾರದೆಂದು ಹೇಳುತ್ತೇನೆ.

ಮತ್ತೊಂದು ವಿಚಾರವೇನೆಂದರೆ, ಮಾನ್ಯ ಸಚಿವರು ಕಳೆದ ಅಧಿವೇಶನದಲ್ಲಿ ನಾನು ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಸಂಬಂಧಪಟ್ಟಂತೆ, ಆಗಮ ಪಂಡಿತರನ್ನು ಕರೆಸಿದ್ದು, ಅವರು ಸ್ಥಳಕ್ಕೆ ಬಂದು ಪರಿಶೀಲನೆ ಸಹ ಮಾಡಿರುತ್ತಾರೆ. ಆದರೆ, ಅದರ ಫಲಿತಾಂಶ ಏನಾಯಿತು ಎಂಬ ಬಗ್ಗೆ ನಮಗೆ ಮಾಹಿತಿ ಇರುವುದಿಲ್ಲ. ಇದರ ಜೊತೆಗೆ, ಭಗ್ನಶಿವಲಿಂಗ ಅಲ್ಲಿಯೇ ಇರಬೇಕೇ ಅಥವಾ ಅದನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕೆಂಬ ಪ್ರಶ್ನೆಯನ್ನು ಸಹ ನಾನು ಕೇಳಿರುತ್ತೇನೆ. ಅದಕ್ಕೆ ಉತ್ತರವಾಗಿ, 'ಆ ವಿಷಯ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುತ್ತದೆಯೆಂದು' ಹೇಳಿರುತ್ತಾರೆ. ಹಾಗಾಗಿ, ಸರ್ಕಾರ ಈ ವಿಷಯದಲ್ಲಿ ಎಚ್ಚೆತ್ತುಕೊಂಡು ಆದಷ್ಟು ಬೇಗ ಮಾನ್ಯ ನ್ಯಾಯಾಲಯದ ತೀರ್ಮಾನ ಬರುವಂತೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಇದಕ್ಕಾಗಿ ನಾವು ಕಾಯುತ್ತಿದ್ದೇವೆ. ಏಕೆಂದರೆ, ಆ ಶಿವಲಿಂಗ ಆ ಸ್ಥಳದಲ್ಲಿ ಇರಬೇಕು ಇಲ್ಲವಾದರೆ ಅದನ್ನು ಬೇರೆ ಕಡೆಗೆ ವರ್ಗಾವಣೆ ಮಾಡಬೇಕು.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅವಕಾಶ ನೀಡಿದ್ದಕ್ಕಾಗಿ ಧನ್ಯವಾದಗಳು. ತಲಕಾವೇರಿ ನಮ್ಮ ಕೊಡಗಿನ ಕುಲದೇವತೆಯಾಗಿದೆ. ಇತ್ತೀಚೆಗೆ ಅರ್ಚಕ ಕುಟುಂಬದ 5 ಜನ ತಮ್ಮ ಪ್ರಾಣವನ್ನು ಕಳೆದುಕೊಂಡಿದ್ದಾರೆ. ಅಲ್ಲಿ ಅಷ್ಟಮಂಗಲ ಪ್ರಶ್ನೆ ಹಾಕಬೇಕು. ಏಕೆಂದರೆ, ಧಾರ್ಮಿಕ ವಿಧಿ–ವಿಧಾನಗಳ ಪ್ರಕಾರ ಕೆಲಸ ಆಗಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಏಕೆಂದರೆ, ತಲಕಾವೇರಿಯಿಂದ ಮೈಸೂರಿಗೆ, ಬೆಂಗಳೂರಿಗೆ ಮತ್ತು ತಮಿಳುನಾಡಿಗೆ ನೀರಿನ ಅವಶ್ಯಕತೆ ಇರುತ್ತದೆ. ಆ ನೀರಿನ ಕೊರತೆ ಬಂದಾಗ, ಮಾನ್ಯ ಮಂತ್ರಿಗಳಿಂದ ಹಿಡಿದು ಎಲ್ಲರೂ ಅಲ್ಲಿ ಮಳೆ ಬಿದ್ದಿದೆಯೇ ಎಂದು ಫೋನ್ ಮಾಡಿ ಕೇಳುತ್ತಾರೆ. ಆದುದರಿಂದ, ಈ ವಿಷಯದಲ್ಲಿ ಮೊದಲು ಎಚ್ಚೆತ್ತುಕೊಳ್ಳುವುದು ಉತ್ತಮವೆಂದು ತಮ್ಮ ಮೂಲಕ ಮನವಿ ಮಾಡುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಧಾರ್ಮಿಕ ಕ್ಷೇತ್ರವಾಗಿರುವ ತಲಕಾವೇರಿಯಲ್ಲಿ ಪ್ರವಾಸಿಗರ ತಾಣವಾಗಿ ಕೆಲವರು ಅಕ್ರಮವಾಗಿ ತಿರುಗಾಡುತ್ತಿದ್ದಾರೆ ಮತ್ತು ಕಾನೂನು ಬಾಹಿರವಾದಂತಹ ಚಟುವಟಿಕೆಗಳಲ್ಲಿ ನಿರತರಾಗಿದ್ದಾರೆ. ಅದೆಲ್ಲವನ್ನೂ ಚೆಕ್‌ಪೋಸ್ಟ್‌ನಲ್ಲಿ ಚೆಕ್ ಮಾಡಿ ಅವರನ್ನು ಬಿಡಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ವಿಷಯಕ್ಕೆ ಸಂಬಂಧಪಟ್ಟಂತೆ, ಪ್ರತ್ಯೇಕವಾದಂತಹ ಸಭೆಯನ್ನು ಇನ್ನೊಂದು ವಾರದಲ್ಲಿ ಕರೆಯುತ್ತೇನೆಂದು ನಾನು ಆಗಲೇ ಹೇಳಿದ್ದೇನೆ. ಇನ್ನೂ ಅಲ್ಲಿರುವಂತಹ ಶಿವಲಿಂಗದ ಬಗ್ಗೆ ಮಾನ್ಯ ಸದಸ್ಯರು ಉಲ್ಲೇಖ ಮಾಡಿದ್ದಾರೆ. ಪೂಜಾ ಪದ್ಧತಿಯ ವಿಚಾರದ ಬಗ್ಗೆ ಮಾನ್ಯ ನ್ಯಾಯಾಲಯದಲ್ಲಿ ದಾವೆ ಇದೆಯೆಂದು ಉತ್ತರ ನೀಡಿರುತ್ತೇನೆ. ಆದಾಗ್ಯೂ, ಈ ಬಗ್ಗೆ ನಾನು ಒಂದು ಸುತ್ತಿನ ಮಾತುಕತೆಯನ್ನು ನಡೆಸಿರುತ್ತೇನೆ. ಇದರ ಜೊತೆಗೆ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಆದಷ್ಟು ಬೇಗ ನ್ಯಾಯಾಲಯದ ಸಮಸ್ಯೆಗಳನ್ನು ಪರಿಹಾರ ಮಾಡಿ, ನಮ್ಮ ಸದಸ್ಯರು ಹೇಳಿದಂತೆ ಅಲ್ಲಿ ಅಷ್ಟಬಂಧವೂ ಸೇರಿದಂತೆ ಇತರೆ ಎಲ್ಲಾ ಧಾರ್ಮಿಕ ಪ್ರಕ್ರಿಯೆಗಳನ್ನು ಮಾಡುವುದಕ್ಕೆ ಬೇಕಾದಂತಹ ಯೋಜನೆಗಳನ್ನು ರೂಪಿಸುತ್ತೇವೆ. ಜೊತೆಗೆ, ಮಾನ್ಯ ಸದಸ್ಯರು ಹೇಳಿದ ರೀತಿ, ಕೊಡಗಿನ ಪ್ರವಾಸಿ ತಾಣದಲ್ಲಿ ಅದರಲ್ಲಿಯೂ ತಲಕಾವೇರಿ ದೇವಾಲಯದಲ್ಲಿರುವಂತಹ ಭಕ್ತರು ಪ್ರವಾಸಿಗರ ಹೆಸರಿನಲ್ಲಿ ಗೊಂದಲ ಆಗುತ್ತಿದೆ ಮತ್ತು ಕಾನೂನು ಬಾಹಿರವಾದ ಚಟುವಟಿಕೆಗಳು ಆಗುತ್ತಿದೆ ಎಂದು ಹೇಳಿದ್ದಾರೆ, ಅದನ್ನು ಈ ಸದನ ಮುಗಿದ ಒಂದು ವಾರದಲ್ಲಿ ಅಲ್ಲಿರುವಂತಹ ಜನಪ್ರತಿನಿಧಿಗಳ ಜೊತೆಯಲ್ಲಿ ವಿಧಾನಸೌಧದಲ್ಲಿ ಸಭೆ ನಡೆಸುತ್ತೇವೆ. ಇನ್ನೂ ನ್ಯಾಯಾಲಯದಲ್ಲಿರುವ ದಾವೆಯನ್ನು ಪ್ರತ್ಯೇಕವಾಗಿ ಪರಿಗಣಿಸಿ ಆದಷ್ಟು ಬೇಗ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(107) 03.02.2021 12.30 ವೈಎಲ್–ಬಿಎನ್ಎಸ್

**ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಮತ್ತೊಂದು ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರಲಿಚ್ಛಿಸುತ್ತೇನೆ. ತಲಕಾವೇರಿ–ಭಾಗಮಂಡಲ ದೇವಸ್ಥಾನಕ್ಕೆ ಸಂಬಂಧಿಸಿದಂತೆ, ಅನೇಕ ಕಡೆ ಅದರ ಜಾಗ ಇದ್ದು, ಅದನ್ನು ಒಂದು ಸಲ ಸಂಪೂರ್ಣವಾಗಿ ಸರ್ವೇ ಮಾಡಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದೇವಸ್ಥಾನಕ್ಕೆ ಸಂಬಂಧಪಟ್ಟಂತಹ ಭೂಮಿಯನ್ನು ಅನೇಕ ಜನರು ಅತಿಕ್ರಮಿಸಿದ್ದಾರೆ ಎಂಬ ಸುದ್ದಿ ಇದೆ. ಪ್ರತ್ಯೇಕವಾದಂಥ ತಂಡವನ್ನು ರಚನೆ ಮಾಡಿ, ಸರ್ವೇ ಮಾಡಿಸಿ, ಯಾರ್ಯಾರು ಅತಿಕ್ರಮಣ ಮಾಡಿದ್ದಾರೆ, ಅದನ್ನು ತೆರವು ಮಾಡಿಸುವಂತಹ ಕೆಲಸ ಮಾಡುತ್ತೇವೆ. ಜೊತೆಗೆ ದೇವಸ್ಥಾನಗಳ ಆಸ್ತಿ–ಪಾಸ್ತಿಗಳನ್ನು ರಕ್ಷಣೆ ಮಾಡುವಂಥ ಕೆಲಸ ಮಾಡುತ್ತೇವೆ.

**ಸಭಾಪತಿಯವರು:–** ಶ್ರೀ ಕೆ.ಪಿ.ನಂಜುಂಡಿಯವರು ಸದನದಲ್ಲಿಲ್ಲ. ಹಾಗಾಗಿ ಅವರು ಸದನಕ್ಕೆ ಬಂದ ಮೇಲೆ ಅವರ ಪ್ರಶ್ನೆಗೆ ಅವಕಾಶ ಕಲ್ಪಿಸಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 306**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಣ್ಣಿನ ಫಲವತ್ತತೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಗರಿಷ್ಠ ಸವಾಲುಗಳನ್ನು ಎದುರಿಸುತ್ತಿರುವ ಜಿಲ್ಲೆಗಳು ಯಾವುವು ಎಂದಾಗ ಅದರಲ್ಲಿ ತುಂಗಾಭದ್ರಾ ಮತ್ತು ಕಾವೇರಿ ಜಲಾನಯನದಲ್ಲಿರುವಂಥ,... ಮುಖ್ಯವಾಗಿ ಮಂಡ್ಯ ಮತ್ತು ಬಳ್ಳಾರಿ ಜಿಲ್ಲೆಗಳನ್ನು ಕೈಬಿಟ್ಟಿದ್ದಾರೆ. ತಮಗೆ ಗೊತ್ತಿರುವ ಹಾಗೆ ಸುಮಾರು 80, 100 ವರ್ಷಗಳಿಂದ intensive cultivation ಅಂದರೆ, ತ್ವರಿತಗತಿಯಲ್ಲಿ ಬೇಸಾಯವಾಗುತ್ತಿದೆ. ಅಲ್ಲಿಯು ಸಹ ಉಪ್ಪು/ಲವಣ ಮಿಶ್ರಿತ saline ಅಂಶದಿಂದಾಗಿ ಭೂಮಿ ಹಾಳಾಗಿದೆ. ಅದನ್ನು ಏತಕ್ಕೆ ಸೇರಿಸಿಲ್ಲ? ಅದರ ಬಗ್ಗೆ ಸಹ ನಮಗೆ ಮಾಹಿತಿ ನೀಡಬೇಕು. ಸರ್ಕಾರವು ನೀಡಿರುವ ಮಾಹಿತಿಯಲ್ಲಿ ರಾಜ್ಯದಲ್ಲಿ 30 ಜಿಲ್ಲೆಗಳಿದ್ದು, ಕೇವಲ 12 ಜಿಲ್ಲೆಗಳಿಗೆ ಮಾತ್ರ ಮಣ್ಣು ಫಲವತ್ತತೆ ಕಾರ್ಡ್‌ನ್ನು ವಿತರಿಸಲಾಗಿದೆ. ಉಳಿದ ಜಿಲ್ಲೆಗಳಿಗೆ ಯಾವಾಗ ಮಣ್ಣು ಫಲವತ್ತತೆ ಕಾರ್ಡ್‌ನ್ನು ವಿತರಿಸಲಾಗುವುದು? ರಾಜ್ಯದಲ್ಲಿ ಹಿಡುವಳಿ ಭೂಮಿ ಆಧಾರದ ಮೇಲೆ, ಎಷ್ಟು ಹಿಡುವಳಿ ಭೂಮಿದ್ದಾರರಿದ್ದಾರೆ; ಎಷ್ಟು ಜನರಿಗೆ ಮಣ್ಣು ಫಲವತ್ತತೆ ಕಾರ್ಡ್‌ನ್ನು ನೀಡಬೇಕಾಗಿತ್ತು; ಏಕೆಂದರೆ, ರಾಷ್ಟ್ರೀಯ ಕೃಷಿ ಯೋಜನೆ ಎಂದು ಕೇಂದ್ರ ಸರ್ಕಾರದಲ್ಲಿ ಪುರಸ್ಕೃತ ಕೃಷಿ ಯೋಜನೆ ಅಸ್ತಿತ್ವದಲ್ಲಿದ್ದು, ಇದರಲ್ಲಿ ಸಾಕಷ್ಟು ಅನುದಾನ ಬರುತ್ತಿದೆ. ಇದನ್ನಾದರೂ ಬಳಕೆ ಮಾಡಬೇಕಾಗಿತ್ತು. ಏತಕ್ಕೋಸ್ಕರ ನೀಡಿಲ್ಲ ಎಂಬುದಕ್ಕೆ ಕಾರಣವನ್ನು ತಿಳಿಸಬೇಕು. ಮಣ್ಣಿನ ಪರೀಕ್ಷಾ ಕೇಂದ್ರದ ವಿಚಾರಕ್ಕೆ ಬಂದರೆ, ರಾಜ್ಯದಲ್ಲಿ ಒಟ್ಟು 30 ಜಿಲ್ಲೆಗಳಿದ್ದು, 30 ಜಿಲ್ಲೆಗಳಿಗೆ 30 ಮಣ್ಣಿನ ಪರೀಕ್ಷಾ ಕೇಂದ್ರಗಳು ಬಹುಶಃ ಜಿಲ್ಲಾ ಮಟ್ಟದಲ್ಲಿರಬಹುದು ಎಂಬುದು ನನ್ನ ಭಾವನೆ. ಹಾಗೆಯೇ ಗ್ರಾಮ ಮಟ್ಟದಲ್ಲಿ ಕೇವಲ 290 ಮಣ್ಣಿನ ಪರೀಕ್ಷಾ ಕೇಂದ್ರಗಳಿವೆ. ತಮಗೆ ಗೊತ್ತಿರುವ ಹಾಗೆ, ನಮ್ಮ ರಾಜ್ಯದಲ್ಲಿ 27,028 ಗ್ರಾಮಗಳಿವೆ. ಇದರಿಂದ ದೂರದ ಗ್ರಾಮಾಂತರ ಪ್ರದೇಶದಲ್ಲಿರುವ ರೈತರಿಗೆ ಅನುಕೂಲವಾಗುತ್ತದೆಯೇ? ಏತಕ್ಕಾಗಿ ಹೋಬಳಿ ಕೇಂದ್ರ ಅಥವಾ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಣ್ಣಿನ ಫಲವತ್ತತೆಯ ಪರೀಕ್ಷೆಯನ್ನು ಮಾಡುತ್ತಿಲ್ಲ? ಮಾನ್ಯ ಸಚಿವರಿಗೆ ಹಳ್ಳಿಗಳಲ್ಲಿ ನೆಲೆಸಿರುವಂಥ ಕೃಷಿ ಪದವೀಧರರು ಅಥವಾ ನಿರುದ್ಯೋಗಿ ಪದವೀಧರರಿಗೆ ಲ್ಯಾಬೊರೇಟರಿ ಸ್ಥಾಪನೆ ಮಾಡಲು ಏನಾದರೂ ಸಹಾಯ ಮಾಡಿ ಕೊಡುವಂಥ ಕೆಲಸ ಮಾಡುತ್ತೀರಾ ಎಂದು ಪ್ರಶ್ನೆಯನ್ನು ಕೇಳಿದ್ದೇನೆ. ಈಗಾಗಲೇ ಕೆಲವು ಕಡೆ 'ಶಾಲಾ–ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಬಹುದು' ಎಂದು ಹೇಳಿದ್ದಾರೆ. ಅದೇ ರೀತಿ ಪದವೀಧರ ನಿರುದ್ಯೋಗಿಗಳನ್ನು ಉಪಯೋಗಿಸಿಕೊಳ್ಳುತ್ತಾರೆಯೇ ಎಂಬುದನ್ನು ಮಾನ್ಯ ಸಚಿವರಲ್ಲಿ ಕೇಳಲಿಚ್ಛಿಸುತ್ತೇನೆ.

**ಶ್ರೀ ಬಿ.ಸಿ.ಪಾಟೀಲ್:-** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಉತ್ತರ ಒದಗಿಸಿದ್ದೇವೆ. ಆದರೂ ಸಹ ಹೆಚ್ಚಿನ ಮಾಹಿತಿಯನ್ನು ಕೇಳಿದ್ದಾರೆ. ಮಣ್ಣಿನಲ್ಲಿ 2 ವಿಧಗಳಿವೆ. (1) ಹೆಚ್ಚು ಆಮ್ಲೀಯ ಮಣ್ಣು (2) ಹೆಚ್ಚು ಲವಣಾಂಶ ಮಣ್ಣು. ಮೊದಲನೆಯದಾಗಿ, ಹೆಚ್ಚು ಆಮ್ಲೀಯ ಮಣ್ಣು ಎಂದರೆ, ಪಿಹೆಚ್ (ಪವರ್ ಆಫ್ ಹೈಡ್ರೋಜನ್) 5.5 ಕ್ಕಿಂತ ಕಡಿಮೆ ಇದ್ದರೆ, ಅಲ್ಲಿ ರಸಸಾರ ಕಡಿಮೆಯಾಗಿರುತ್ತದೆ. ಅಂತಹ 7 ಜಿಲ್ಲೆಗಳಿವೆ. ಅವುಗಳು ಯಾವುವೆಂದರೆ; ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡ, ಕೊಡಗು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ. ಈ ಜಿಲ್ಲೆಗಳಿಗೆ ಮಣ್ಣಿನ ಫಲವತ್ತತೆಯನ್ನು ಕಾಪಾಡಲು ಇಲಾಖೆಯಿಂದ ಸುಣ್ಣವನ್ನು ಸರಬರಾಜು ಮಾಡುತ್ತೇವೆ. ಹೆಚ್ಚು-ಹೆಚ್ಚು ಸುಣ್ಣವನ್ನು ಬಳಸುವುದರಿಂದ ನಾಲ್ಕೈದು ವರ್ಷದಲ್ಲಿ ಮತ್ತೆ ಒರಿಜಿನಾಲಿಟಿಗೆ ಬರುತ್ತದೆ. ಎರಡನೆಯದಾಗಿ, ಹೆಚ್ಚು ಲವಣಾಂಶ ಇರುವ ಮಣ್ಣು ಎಂದರೆ, ಪಿಹೆಚ್ 8.5 ಕ್ಕಿಂತ ಹೆಚ್ಚಿಗೆ ಇದ್ದು, ಈ ಮಣ್ಣು ಅಚ್ಚುಕಟ್ಟು ಪ್ರದೇಶವಾದ ಕಾಡಾದಲ್ಲಿ ಜಾಸ್ತಿ ಬರುತ್ತದೆ. Alkaline soil, Gypsum, Dhaincha ಮತ್ತು ಸೆಣಬಿನ ಬೀಜಗಳನ್ನು ನೀಡುತ್ತೇವೆ ಮತ್ತು ಕಂದಕಗಳನ್ನು ನಿರ್ಮಾಣ ಮಾಡುವುದರಿಂದ ಭೂಮಿಯ ಜವಳು ಅಂಶವನ್ನು ತೆಗೆಯಲು ಸಾಧ್ಯತೆ ಇದ್ದು, ಇದನ್ನು ವಿಜಯಪುರ, ಗದಗ್, ಕೊಪ್ಪಳ, ಬೆಳಗಾವಿ, ಬಾಗಲಕೋಟೆ ಈ ಜಿಲ್ಲೆಗಳಲ್ಲಿ ಅನುಸರಿಸಲಾಗುತ್ತಿದೆ. ಮಂಡ್ಯ ಜಿಲ್ಲೆಯನ್ನು ಏತಕ್ಕೆ ಸೇರಿಸಿಲ್ಲವೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ಮಣ್ಣು ಆರೋಗ್ಯ ಕ್ರಮಕ್ಕಾಗಿ ಖುಷ್ಕಿ ಪ್ರದೇಶದಲ್ಲಿ 10 ಹೆಕ್ಟೇರ್‌ಗೆ 1 ಗ್ರಿಡ್ ಎಂದು ಮಾಡುತ್ತೇವೆ. ಅದೇ ರೀತಿ ನೀರಾವರಿ ಪ್ರದೇಶಕ್ಕೆ ಎರಡೂವರೆ ಹೆಕ್ಟೇರ್‌ನಲ್ಲಿ ಮಾಡುತ್ತೇವೆ. ಎಲ್ಲಾ ಹಿಡುವಳಿದಾರರಿಗೆ ಮಣ್ಣಿನ ಬಗ್ಗೆ ವಿಶ್ಲೇಷಣೆ ಮಾಡಿ, ಮಣ್ಣಿನಲ್ಲಿ ಎಷ್ಟು ಲವಣಾಂಶ ಇದೆ, ಆ ಲವಣಾಂಶಕ್ಕಾಗಿ ಎಷ್ಟು ಗೊಬ್ಬರವನ್ನು ಬಳಸಬೇಕು, ಎಷ್ಟು ಗೊಬ್ಬರ ಬಳಸಿದರೆ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ, ಹೇಗೆ ಇಳುವರಿಯನ್ನು ಮಾಡಬಹುದು ಎನ್ನುವ ದೃಷ್ಟಿಯಿಂದ ಮಣ್ಣಿನ ಪರೀಕ್ಷಾ ಗ್ರಿಡ್‌ಗಳನ್ನು ಮಾಡಲಾಗುತ್ತದೆ. ಈ ಗ್ರಿಡ್‌ಗಳನ್ನು ಗುರುತಿಸಲು ಭಾರತ ದೇಶದಲ್ಲಿಯೇ ಪ್ರಪ್ರಥಮವಾಗಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಣ್ಣು ಮಾದರಿ ಸಂಗ್ರಹಣೆಗಾಗಿ ಗ್ರಿಡ್‌ಗಳನ್ನು ಜಿ.ಪಿ.ಎಸ್. ಆಧಾರಿತ ಸೇವೆಗಳನ್ನು ಬಳಸಿ, ಗ್ರಾಮಗಳ cadastral ನಕ್ಷೆಯ ಸಹಾಯದಿಂದ ಮಣ್ಣಿನ ಮಾದರಿಗಳನ್ನು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

ಸಂಗ್ರಹಿಸಲಾಗುತ್ತಿದೆ. ಇದಕ್ಕಾಗಿ ‘Soil Collector App’ ಜಾರಿಯಲ್ಲಿದ್ದು, ಆ ಆ್ಯಪ್‌ನ್ನು ಸಹ ಬಳಸಲಾಗುತ್ತಿದೆ. ಮಾನ್ಯ ಸದಸ್ಯರು ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಪ್ರಸ್ತಾಪ ಮಾಡಿದ್ದು, ಮಂಡ್ಯ ಜಿಲ್ಲೆಯಲ್ಲಿ ಸಹ ಈ ಮಣ್ಣಿನ ಫಲವತ್ತತೆಯನ್ನು ಪರೀಕ್ಷೆ ಮಾಡಿ, ಅಲ್ಲಿ ಆಮ್ಲೀಯ ಅಂಶಗಳು ಇದೆಯೇ, ಇಲ್ಲವೇ / ಕಡಿಮೆ ಇದೆಯೇ, ಹೆಚ್ಚಿದೆಯೇ ಎಂಬುದನ್ನು ಮುಂದಿನ ದಿನಗಳಲ್ಲಿ ಪರೀಕ್ಷೆ ಮಾಡಿ, ತಮಗೆ ಒದಗಿಸುತ್ತೇವೆ. ಈಗಾಗಲೇ ಮಣ್ಣು ಆರೋಗ್ಯ ಚೀಟಿ ಕಾರ್ಯಕ್ರಮದಲ್ಲಿ 2015–16 ರಿಂದ 2016–17ನೇ ಸಾಲಿನವರೆಗೆ 16 ಲಕ್ಷದ 58 ಸಾವಿರ ಮಣ್ಣು ಮಾದರಿಯನ್ನು ಸಂಗ್ರಹಿಸಿ, ಇದನ್ನು ಪರೀಕ್ಷೆ ಮಾಡಿ, 83.38 ಲಕ್ಷ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ಈಗಾಗಲೇ ರೈತರಿಗೆ ವಿತರಿಸಲಾಗಿದೆ. ಅದೇ ರೀತಿ 2017–18 ರಿಂದ 2018–19ನೇ ಸಾಲಿನವರೆಗೂ 16 ಲಕ್ಷದ 58 ಸಾವಿರ ಮಣ್ಣು ಮಾದರಿಯನ್ನು ಸಂಗ್ರಹಿಸಿ, 88.55 ಲಕ್ಷ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ವಿತರಿಸಲಾಗಿದೆ.

**(ಈ ಹಂತದಲ್ಲಿ ಮಾನ್ಯ ಸಚಿವರು ಮಣ್ಣಿನ ಆರೋಗ್ಯ ಕಾರ್ಡ್‌ನ ಭಾವಚಿತ್ರವನ್ನು ಪ್ರದರ್ಶಿಸಿದರು)**

ಮಣ್ಣಿನ ವಿಶ್ಲೇಷಣೆ ಆದ ಮೇಲೆ ಯಾವ್ಯಾವ ಅಂಶಗಳಿವೆ ಎಂದರೆ, ಒಂದು ಭೂಮಿಯಲ್ಲಿ 17 ಲವಣಾಂಶಗಳಿರುತ್ತವೆ. ಆ ಲವಣಾಂಶದ ಕೊರತೆಯಾದರೆ, ಮಣ್ಣನ್ನು ಪರೀಕ್ಷೆ ಮಾಡಿ, ಅವರಿಗೆ ಕಾರ್ಡ್‌ನ್ನು ವಿತರಿಸಿ, ಯಾವ್ಯಾವ ಅಂಶಗಳನ್ನು ಎಷ್ಟೆಷ್ಟು ಪ್ರಮಾಣದಲ್ಲಿ ಮಣ್ಣಿಗೆ ಸೇರಿಸಬೇಕೆಂಬುದನ್ನು ಕಾರ್ಡ್‌ನಲ್ಲಿ ನಮೂದಿಸಿರುತ್ತೇವೆ. ಅದೇ ರೀತಿ ಸವಳು ಕಾಲುವೆ, ಬಸಿ ಕಾಲುವೆ ಮಾಡುವುದರ ಬಗ್ಗೆಯೂ ಮಾಹಿತಿ ಇರುತ್ತದೆ. ನಮ್ಮ ಇಲಾಖೆಯಿಂದ ಬಸಿ ಕಾಲುವೆಯನ್ನು ಮಾಡಿ, ಜವಳನ್ನು ತೆಗೆಯುವಂಥ ಕೆಲಸವನ್ನು ಮಾಡುತ್ತಿದ್ದೇವೆ. ಇವತ್ತು ರಾಜ್ಯದಲ್ಲಿ ಆಮ್ಲೀಯ ಮಣ್ಣಿನ ಕ್ಷೇತ್ರ 12.50 ಲಕ್ಷ ಹೆಕ್ಟೇರ್‌ನಷ್ಟಿದೆ. ಹೆಚ್ಚು alkaline ಮಣ್ಣಿನ ಕ್ಷೇತ್ರ 1.80 ಲಕ್ಷ ಹೆಕ್ಟೇರ್‌ನಷ್ಟಿದೆ. ಒಟ್ಟು salt affected soil-1.79 ಮತ್ತು ಒಟ್ಟು acid soil–12.5 ನಷ್ಟಿದೆ. ಅದರ ಜೊತೆಗೆ ಮಾನ್ಯ ಸದಸ್ಯರು ಸಂಚಾರಿ ಮಣ್ಣಿನ ಪರೀಕ್ಷಾ ಪ್ರಯೋಗಾಲಯವನ್ನು ಸ್ಥಾಪಿಸಲು ಸರ್ಕಾರ ಯೋಜಿಸಿದೆಯೇ ಎಂಬ ಪ್ರಶ್ನೆ ಕೇಳಿದ್ದು, ಈಗಾಗಲೇ ಒಂದು ಸಂಚಾರಿ ಮಣ್ಣಿನ ಪರೀಕ್ಷಾ ಪ್ರಯೋಗಾಲಯವು ಬೆಳಗಾವಿಯಲ್ಲಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ 40 ಸಂಚಾರಿ ಸಸ್ಯ ಆರೋಗ್ಯ ಚಿಕಿತ್ಸಾಲಯ ವಾಹನಗಳನ್ನು ಖರೀದಿಸಿ, 30 ಜಿಲ್ಲೆಗಳಿಗೆ ನೀಡಿದ್ದೇವೆ. ದೊಡ್ಡ–ದೊಡ್ಡ ಜಿಲ್ಲೆಗಳಿಗೆ ಎರಡೆರಡು ವಾಹನಗಳನ್ನು ನೀಡಿದ್ದೇವೆ. ಅದರಲ್ಲಿ ಸಂಚಾರಿ ಮಣ್ಣಿನ ಪರೀಕ್ಷಾ ಪ್ರಯೋಗಾಲಯವನ್ನು ಪ್ರತ್ಯೇಕವಾಗಿ ಕೇಳಿರುವುದರಿಂದ ಆ 40 ವಾಹನಗಳಲ್ಲಿ ಬೇರೆ–ಬೇರೆ ಪರೀಕ್ಷೆ ಸಹ ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಇತ್ತೀಚೆಗೆ 'ಕೃಷಿ ಸಂಜೀವಿನಿ' ಎಂಬುದನ್ನು ತೆರೆಯಲಾಗಿದೆ. ಬೆಳೆಗಳಿಗೆ ಏನಾದರೂ ರೋಗ ಬಂದರೆ, ಸಂಬಂಧಪಟ್ಟ ರೈತ '133515' ನಂಬರ್‌ಗೆ ಕರೆ ಮಾಡಿದರೆ, ವಾಹನದ ಜೊತೆಗೆ ತಕ್ಷಣ ಆ ಜಾಗಕ್ಕೆ ಹೋಗುತ್ತಾರೆ. ಅಲ್ಲಿ ರೈತನ ಸಂಪರ್ಕ ಮಾಡಿ, ಆ ಮಣ್ಣನ್ನು ಪರೀಕ್ಷಿಸಿ ಆ ಬೆಳೆಗಳಲ್ಲಿ ಏನಾದರೂ ರೋಗ ಇದೆಯೇ, ರೋಗ ಇದ್ದಲ್ಲಿ, ಯಾವ ರೀತಿ ಆ ರೋಗಕ್ಕೆ ಔಷಧಿಗಳನ್ನು ನೀಡಬೇಕು ಎಂಬುದನ್ನು ಆ ಸ್ಥಳದಲ್ಲಿ ನೀಡಬೇಕು. ಈಗ introduce ಮಾಡುತ್ತಿದ್ದೇವೆ. ಇನ್ನೂ ಸಂಪೂರ್ಣವಾಗಿ ಜಾರಿಗೆ ಬಂದಿಲ್ಲ, ಜಾರಿಗೆ ಬರುತ್ತಿದೆ. ಅದರ ಜೊತೆಗೆ ರೈತರಿಗೆ ಮಾಹಿತಿ ಒದಗಿಸುವಂಥದ್ದಾಗಿದೆ. ಅದಲ್ಲದೇ ನಾನು ಕೊಪ್ಪಳ ಜಿಲ್ಲೆಯ ಉಸ್ತುವಾರಿ ಸಚಿವನಾಗಿದ್ದು, ಕೊಪ್ಪಳ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ 20 ರೈತ ಸಂಪರ್ಕ ಕೇಂದ್ರಗಳಿಗೆ 20 ಕೃಷಿ ಸಂಜೀವಿನಿ ವಾಹನಗಳನ್ನು ನೀಡಿದ್ದೇವೆ. ನಾವು Lab to land digital concept ಅನ್ನು ಇಟ್ಟುಕೊಂಡು ಮಾಡಲು ಹೊರಟಿದ್ದೇವೆ.

(ಮುಂದು...)

(108)03.02.2021/12.40/ಎಸ್‌ಕೆ-ಜಿಆರ್ (ಉಪ ಸಭಾಪತಿಯವರ ಉಪಸ್ಥಿತಿ)

**ಶ್ರೀ ಬಿ.ಸಿ.ಪಾಟೀಲ್ (ಮುಂದು):-**

'Lab to land' concept ಅನ್ನು ಇಟ್ಟುಕೊಂಡು ನಾವು ಕೃಷಿಯನ್ನು ಮಾಡುವುದಕ್ಕೆ ಹೊರಟಿದ್ದೇವೆ. ಆ ಮೂವತ್ತು ಜಿಲ್ಲೆಗಳಿಗೆ ಆ ನಲವತ್ತು ವಾಹನಗಳನ್ನು ಯಾವ ರೀತಿ ಕೊಟ್ಟಿದ್ದೇವೆ. ಕೊಪ್ಪಳ ಜಿಲ್ಲೆಯ ಇಪ್ಪತ್ತು ರೈತ ಸಂಪರ್ಕ ಕೇಂದ್ರಗಳಿಗೆ ಕೂಡ ಈ ವಾಹನಗಳನ್ನು ಒದಗಿಸಿಕೊಟ್ಟಿದ್ದೇವೆ. ತಾವು ಕೇಳಿರುವಂತೆ, ಅದರ ಜೊತೆಗೆ ಈಗಾಗಲೇ ಮಣ್ಣಿನ ಆರೋಗ್ಯ ಕಾರ್ಡ್ ವಿತರಣೆಯ ಬಗ್ಗೆ ಉತ್ತರದಲ್ಲಿ ವಿವರವನ್ನು ಒದಗಿಸಿದ್ದೇವೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಭಾಪತಿಯವರೇ, ಬಿಸಿ ಕಾಲುವೆ ಯೋಜನೆಯನ್ನು ಮಾಡುತ್ತಿದ್ದೇವೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ನನ್ನ ಸಲಹೆ ಏನೆಂದರೆ, CADA ದಲ್ಲಿ ಸಾಕಷ್ಟು ಹಣವಿದೆ. ಅದಕ್ಕೋಸ್ಕರವಾಗಿ Command Area Development Authority ಎಂದು ಹೇಳಿ ಮಾಡಿರುವಂತಹದ್ದು. ಅಲ್ಲಿ ಬರುವಂತಹ ಅನುದಾನವನ್ನು ತುಂಗಾಭದ್ರ ಮೇಲ್ದಂಡೆ ಯೋಜನೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆ, ಕಾವೇರಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಜಲಾನಯನ ಯೋಜನೆಯಲ್ಲಿ ಹಣವನ್ನು ಬಳಕೆ ಮಾಡಿದರೆ ಒಳ್ಳೆಯದು. ಅದು ನೀರಾವರಿ ಇಲಾಖೆಗೆ ಒಳಪಡುತ್ತಿದೆ. ಕೃಷಿ ಇಲಾಖೆ ಮತ್ತು ನೀರಾವರಿ ಇಲಾಖೆಗಳು ಸಮನ್ವಯವಾದರೆ ಒಳ್ಳೆಯದಾಗುತ್ತದೆ. ನಾನು ಕೇಳುತ್ತೀರುವುದೇನೆಂದರೆ, ಕೃಷಿ Mobile Laboratories ಮಾಡಿದರೆ ಒಳ್ಳೆಯದು. ಕೃಷಿ ಸಂಚಲನಗೆ ವಾಹನಗಳಿವೆ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಬೆಳೆಗಳಿಗೆ ರೋಗ ಬಿದ್ದರೆ ಮಾತ್ರ, ಅಲ್ಲಿಗೆ ಅದು ಹೋಗಿ ಪರೀಕ್ಷೆ ಮಾಡಿ, ರೈತರಿಗೆ ತಿಳುವಳಿಕೆ ಮತ್ತು ಸಲಹೆಯನ್ನು ಕೊಡಬಹುದು. ಸಹಾಯಕ ಕೃಷಿ ನಿರ್ದೇಶಕ ಕೃಷಿಗೋಸ್ಕರವಾಗಿ ನಡೆದಾಡುವಂತಹ ಡಾಕ್ಟರ್‌ಗಳು ಎಂದು ಈ ಹಿಂದೆ ಇದ್ದಂತಹ ಶ್ರೀ ಕೆ.ಹೆಚ್ ರಂಗನಾಥ್‌ರವರು ಕೃಷಿ ಸಚಿವರಾಗಿದ್ದಾಗ "the Assistant Director of Agriculture ಅವರು ನಡೆದಾಡುವ Doctor ಗಳು. ಅವರು ಪ್ರತಿಯೊಂದು ಹಳ್ಳಿಗಳಿಗೆ ಹೋಗಬೇಕು. ಪ್ರತಿಯೊಂದು ಕ್ಷೇತ್ರಗಳಿಗೂ ಹೋಗಿ, ಅಲ್ಲಿರುವ ಮಣ್ಣಿನ ಫಲವತ್ತತೆ ಇರುವಂತಹದ್ದನ್ನು ನೋಡಿ, ಆನಂತರ ರೈತರಿಗೆ ಸಲಹೆ ಕೊಡಬೇಕು" ಎಂದು ಹೇಳುತ್ತಿದ್ದರು. ಮಾನ್ಯ ಸಚಿವರು ಕೊಟ್ಟಿರುವಂತಹ ಉತ್ತರದಲ್ಲಿ ತೋಟಗಾರಿಕೆ ಸಂಬಂಧಪಟ್ಟಿರುವಂತಹ ಏನೊಂದು ಮಣ್ಣಿನ ಪರೀಕ್ಷೆ ಕೇಂದ್ರಗಳಿವೆ. ಅವು ಸಾಕಷ್ಟು ಕಡಿಮೆ ಇವೆ. ದಯವಿಟ್ಟು, ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಮಾನ್ಯ ಸಚಿವರು ಗಮನಹರಿಸಬೇಕು. ಎಲ್ಲಾ ರೈತರು ಕೂಡ ಇವತ್ತು ತೋಟಗಾರಿಕೆ ಬೆಳೆಯನ್ನು ಬೆಳೆಯುವುದಕ್ಕೆ ಹೋಗುತ್ತಾರೆ. ಅದಕ್ಕೋಸ್ಕರವಾಗಿ ಮಣ್ಣಿನ ಫಲವತ್ತತೆಯನ್ನಾದರೂ ಮಾಡಿ, ಇಲ್ಲವೆಂದರೆ ರೈತರಿಗೆ ತುಂಬಾ ತೊಂದರೆಯಾಗುತ್ತದೆ. ರೈತರು ತುಂಬಾ ನಷ್ಟವನ್ನು ಅನುಭವಿಸುತ್ತಾರೆ. ಆದ್ದರಿಂದ ಸಾಕಷ್ಟು ಗುಣಮಟ್ಟದ ಮಣ್ಣು ಪರೀಕ್ಷೆ ಕೇಂದ್ರ ಘಟಕಗಳನ್ನು ಕೃಷಿ ಇಲಾಖೆ ಸ್ಥಾಪನೆ ಮಾಡಬೇಕೆಂದು, ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕೋರಿಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ವಿರೋಧಪಕ್ಷದ ನಾಯಕರೇ ಮಾತನಾಡಿ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೃಷಿ ಸಚಿವರು ಬಹಳಷ್ಟು ವಿಚಾರಗಳನ್ನು ವ್ಯಕ್ತಪಡಿಸಿದರು. ಇವತ್ತು ದೊಡ್ಡ ದೊಡ್ಡ ನೀರವಾರಿ ಯೋಜನೆಗಳು ಉದಾಹರಣೆಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಅಡಿಯಲ್ಲಿ ಸುಮಾರು ಮೂವತ್ತೆರಡು ಲಕ್ಷ ಎಕರೆ ನೀರಾವರಿ ಬರುವಂತಹ command area ಪ್ರದೇಶವಾಗಿದೆ. ಅದೇ ರೀತಿ ತುಂಗಾಭದ್ರ ಮೇಲ್ದಂಡೆ ಯೋಜನೆಯಾಗಲೀ ಹಾಗೂ ಬೇರೆ ಬೇರೆ ಹೊಸ ನೀರಾವರಿ ಯೋಜನೆಗಳೇನಿವೆ. ಆ command area ದಲ್ಲಿ ನೀರಾವರಿಗೊಳಪಡುವಂತಹ ಲಕ್ಷಾಂತರ ಎಕರೆ ಜಮೀನಿನಲ್ಲಿ ಸವಳು-ಜವಳು ತುತ್ತಾಗಿ, ಬಹುತರವಾಗಿ ರೈತರು ಜಮೀನಿಗೆ ಹೋಗಲಾರದಂತಹ ದುಸ್ಥಿತಿಯಾಗಿದೆ. ನಮ್ಮ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಜಿಲ್ಲೆಯಲ್ಲಿರುವ ಬಹಳಷ್ಟು ಕ್ಷೇತ್ರದಲ್ಲಿ ಒಂದು, ಎರಡು, ಮೂರು ಲಕ್ಷ ಎಕರೆಗಳ ಜಮೀನಿನಲ್ಲಿ ಸವಳು–ಜವಳು ಭೂಮಿಯಿಂದ deteriorate ಆಗಿ ಹೋಗಿದೆ. ಮಾನ್ಯ ಸದಸ್ಯರು ಸಲಹೆ ಮಾಡಿರುವಂತೆ, ಈ ಸವಳು–ಜವಳು – reclamation of salinity and as well as alkalinity - ಅದಕ್ಕೆ ಸರ್ಕಾರದ ಯೋಜನೆಗಳನ್ನು ತರಬೇಕು. ಅದಕ್ಕಿಂತ ಪೂರ್ವದಲ್ಲಿ ರೈತರಿಗೆ ತಿಳುವಳಿಕೆ ಕೊಡುವಂತಹ ಕೆಲಸವನ್ನು ಸರ್ಕಾರ ಮಾಡಬೇಕು. ಕೃಷಿ ಇಲಾಖೆಯ ಅಧಿಕಾರಿಗಳು ಬರಿ ಸಬ್ಸಿಡಿ ಬೀಜಗಳನ್ನು ಕೊಡುವುದು. ಒಕ್ಕಲುತನದ ಉಪಕರಣ ಕೊಡುವುದು. ಅದು ಇಷ್ಟಕ್ಕೆ ಸೀಮಿತವಾಗಬಾರದು. ಕೃಷಿ ಅಧಿಕಾರಿಗಳು ರೈತರಿಗೆ ವೈಜ್ಞಾನಿಕವಾದಂತಹ ವಿಚಾರಗಳನ್ನು ತಿಳಿ ಹೇಳಬೇಕು. ಅದರ ಜೊತೆಗೆ ರೈತರಿಗೆ ಮಣ್ಣು ಮತ್ತು ನೀರಿನ ಬಳಕೆ ಬಗ್ಗೆ ಮೇಲಿಂದ ಮೇಲೆ ಸಭೆಗಳನ್ನು ಕೃಷಿ ಅಧಿಕಾರಿಗಳು ಏರ್ಪಡಿಸಬೇಕು. ಇದಕ್ಕೆ ಏನಾದರೂ ಅವಶ್ಯಕವಾದರೆ, ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾನಿಲಯಗಳ ವಿಜ್ಞಾನಿಗಳನ್ನು ಕರೆಸಿ, ರೈತರಿಗೆ ಯಾವ ರೀತಿ ಮಣ್ಣಿನ ಬಳಕೆ ಮಾಡಬೇಕು ಹಾಗೂ ನೀರಿನ ಬಳಕೆ ಹೇಗೆ ಮಾಡಬೇಕು. ಕೆಲವು ಜನ ರೈತರು ಹೆಚ್ಚು ನೀರನ್ನು ಹಾಯಿಸಿದರೆ, ಹೆಚ್ಚು ಉತ್ಪಾದನೆ ಬರುತ್ತದೆ. ಹೆಚ್ಚು ನೀರನ್ನು ಹಾಯಿಸಿದರೆ, plant nutrients, ಅವರು ಕೊಟ್ಟಂತಹ chemical fertilizers ಅವು ಎಲ್ಲಾ dissolve ಆಗಿ below the root zone leach out ಆಗುತ್ತದೆ. ಅದು ಪಿಕಿಗೂ ಬರುವುದಿಲ್ಲ. ಅಲ್ಲದೇ ರೈತನ ಹಣ ಸಹ ಖರ್ಚಾಗುತ್ತದೆ. ಮಣ್ಣು ಹಾಗೂ ನೀರು ಯಾವ ರೀತಿ ಸದ್ಬಳಕೆ ಮಾಡಬೇಕೆಂಬುದರ ಬಗ್ಗೆ ರೈತರಿಗೆ ಸರಿಯಾದ ಮಾಹಿತಿಯನ್ನು ಕೊಡಬೇಕು. ಭೂಮಿ ಎಂದರೆ, ತಾಯಿ ಸಮಾನ. ರೈತ ಒಮ್ಮೆ ಭೂಮಿ ಏನಾದರೂ ಕಳೆದುಕೊಂಡರೆ, ತನ್ನ ತಾಯಿಯನ್ನೇ ಕಳೆದುಕೊಂಡ ಹಾಗೆ ಆಗುತ್ತದೆ. ಆ ದೃಷ್ಟಿಯಿಂದ ರೈತರಿಗೆ ಮಣ್ಣು ಮತ್ತು ನೀರಿನ ಬಗ್ಗೆ ಕಲ್ಪನೆ ಕೊಡುವುದರ ಜೊತೆಗೆ, ಆ command area ಇರತಕ್ಕಂಥ ಭೂಮಿಯ ಫಲವತ್ತೆ ಹಾಳಾಗಬಾರದು. ಸವಳು–ಜವಳಿಗೆ ತುತ್ತಾಗಬಾರದು. ಅಲ್ಲಿ ಏನಾದರೂ ಒಂದು ವೇಳೆ ಆ ರೀತಿ ಆಗಿದ್ದರೆ, ಸರ್ಕಾರವೇ ತನ್ನ ವೆಚ್ಚದಲ್ಲಿ reclamationಗೆ, .... ಮಾನ್ಯ ಸಚಿವರು ಹೇಳಿದ ಹಾಗೇ ಕಾವಲಿ ಹಾಕಬೇಕು ಎಂದು ಹೇಳಿದ್ದಾರೆ. ಕಾವಲಿ ಹಾಕಿದರೆ, ಆಗುವುದಿಲ್ಲ. Now, underground drainage pipe ಬಂದಿದೆ. Latest ಆಗಿ ಪೈಪ್ ಬಂದಿದೆ. ಇವತ್ತು ಆಧುನಿಕವಾಗಿ ಬಹಳಷ್ಟು ಮುಂದುವರೆದಿದೆ. ಭೂಮಿಯಲ್ಲಿ ಕಾವಲಿ ಹಾಕಿದರೆ, ಅಷ್ಟು ಭೂಮಿ waste ಆಗುತ್ತದೆ. ಮಾನ್ಯ ಸಚಿವರು ತೋರಿಸಿದ ಹಾಗೇ underground porous pipe ಇರುತ್ತದೆ. ಆ ಪೈಪ್‌ಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಳಗೆ ಹಾಕಿ, ಅದರ ಮೇಲೆ ಉಸುಕು ಹಾಕಿ, ಕ್ಲೋಸ್ ಮಾಡಬಹುದು. ಅದರ ಮೇಲೆ ಬಿತ್ತಿ ಬೆಳೆಯಬಹುದು. ಅದರ ಜೊತೆಗೆ gypsum add ಮಾಡಬಹುದು ಎಂಬುದರ ಬಗ್ಗೆ ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ರೈತರಿಗೆ ಮಣ್ಣು ಹಾಗೂ ನೀರಿನ ಬಳಕೆ ಬಗ್ಗೆ ಮಾಹಿತಿ ಕೊಡುವುದರ ಜೊತೆಗೆ ಈ ನೀರಾವರಿ ಯೋಜನೆಯ command area ದಲ್ಲಿ ಬರತಕ್ಕಂಥ ಭೂಮಿ ಸವಳು-ಜವಳಿಗೆ ತುತ್ತಾಗಲಾರದ ಹಾಗೇ ರೈತರಿಗೆ ತಿಳುವಳಿಕೆ ಹೇಳುವಂತಹ ವ್ಯವಸ್ಥೆಯನ್ನು ಕೃಷಿ, ತೋಟಗಾರಿಕೆ ವಿಶ್ವವಿದ್ಯಾನಿಲಯದವರನ್ನು ಬಳಕೆ ಮಾಡಿಕೊಂಡು, ಕೃಷಿ ಇಲಾಖೆ ಸಶಕ್ತವಾಗಬೇಕು. ಆ ರೀತಿಯಾದಾಗ ಮಾತ್ರ ಮಾನ್ಯ ಸಚಿವರು ಕೃಷಿ ಸಚಿವರಾಗಿದ್ದಕ್ಕೆ ಯೋಗ್ಯವೆಂದು ನಾನು ಭಾವಿಸುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಅಪ್ಪಾಜಿಗೌಡರೇ ತಾವು ಒಂದು ನಿಮಿಷಗಳ ಕಾಲ ಮಾತನಾಡಿ ಮುಗಿಸಿ.

**ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿಯವರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಇಲ್ಲಿ ಪ್ರಶ್ನೋತ್ತರ ಅವಧಿಯಲ್ಲದೇ ತಾವು ಅರ್ಧ ಗಂಟೆ ಸಮಯವನ್ನು ನಿಗಧಿ ಮಾಡಿದರೆ ಬಹಳ ಒಳ್ಳೆಯದು. ಇದರ ಬಗ್ಗೆ ಕಳೆದ ಸಾಲಿನಲ್ಲಿ ಅಂದರೆ ರಾಜ್ಯಪಾಲರ ಭಾಷಣದಲ್ಲಿ ನಮ್ಮ ಹಿರಿಯ ಸದಸ್ಯರಾದ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಕೂಡ ಈ ಮಣ್ಣಿನ ಪರೀಕ್ಷೆ ಮತ್ತು ಕಾಡಾ ಬಗ್ಗೆ ಬಹಳ ಸುದೀರ್ಘವಾಗಿ ಮಾತನಾಡಿದ್ದಾರೆ. ಮಂಡ್ಯ ಜಿಲ್ಲೆಯೂ ಬಹಳ ಕೃಷಿ ಪ್ರಧಾನವಾದ ಜಿಲ್ಲೆಯಾಗಿದೆ. ಅಲ್ಲಿ ಪ್ರಯೋಗಾಲಯವೇ ಇಲ್ಲ. ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಅಲ್ಲಿ ಕೂಡ soil testing laboratory ಅನ್ನು ಮಾಡಬೇಕು. ಇಲ್ಲಿರುವ ಎಲ್ಲ ಸದಸ್ಯರು ಕೂಡ ರೈತರ ಮಕ್ಕಳಾಗಿ ಹುಟ್ಟಿದ್ದೇವೆ. ಆದರೆ soil testing laboratory ಇದೆ ಎಂಬುದು ಎಷ್ಟು ಜನರಿಗೆ ಗೊತ್ತಿದೆ. ನಾವೆಲ್ಲರೂ ಕೂಡ ನಮ್ಮ ನಮ್ಮಲ್ಲಿಯೂ ಕೂಡ ಆತ್ಮ ಸಾಕ್ಷಿಯಾಗಿ ಗೊತ್ತು ಮಾಡಿಕೊಳ್ಳೋಣ.

**ಉಪ ಸಭಾಪತಿಯವರು:-** ಮಾನ್ಯ ಅಪ್ಪಾಜಿಗೌಡರೇ, ಇದು ರೈತರಿಗೆ ಸಂಬಂಧಪಟ್ಟ ವಿಚಾರವಾಗಿರುವುದರಿಂದ ಇದಕ್ಕೆ ಆದಂತಹ ಸಮಯಾವಕಾಶವನ್ನು ನಿಗಧಿ ಮಾಡಿ, ಇದರ ಬಗ್ಗೆ

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಚರ್ಚೆ ಮಾಡುವಂತಹದ್ದನ್ನು ಮಾಡೋಣ. ಈಗ ಪ್ರಶ್ನೋತ್ತರ ವೇಳೆ ಇರುವುದರಿಂದ ಸಮೀಪವಾಗಿ ಮಾತನಾಡಿ.

**ಶ್ರೀ ಎನ್. ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಹೆಚ್ಚಿನ ಚರ್ಚೆ ಅಗತ್ಯವಿರುವುದರಿಂದ ಚರ್ಚೆಗೆ ಕಾಲವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ, ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಲಿ ಎಂಬುದು ನನ್ನ ಮನವಿಯಾಗಿದೆ.

**ಉಪ ಸಭಾಪತಿಯವರು:–** ಮಾನ್ಯ ಅಲ್ಲಂ ವೀರಭದ್ರಪ್ಪನವರೇ ಮಾತನಾಡಿ.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳನ್ನರ್ಪಿಸುತ್ತೇನೆ. ಹೊಸ ಹೊಸ ಕೃಷಿ ಯೋಜನೆಗಳನ್ನು ತಂದು, ರಾಜ್ಯದಲ್ಲಿರುವ ರೈತರಿಗೆ ಅನುಕೂಲವಾಗಬೇಕೆಂದು ಮಾನ್ಯ ಕೃಷಿ ಸಚಿವರು ಹೇಳಿದ್ದಾರೆ. ಇದು ಬಹಳ ಸಂತೋಷ. ಹೊಸದಾಗಿ ಕೃಷಿ ಸಂಜೀವಿನಿ ಅಡಿಯಲ್ಲಿ ರೈತರು ಬೆಳೆದಂತಹ ಬೆಳೆಗಳಿಗೆ ರೋಗಗಳು ಬಂದರೆ, ಅದಕ್ಕೆ ತಪಾಸಣೆ ಮಾಡಿ, ಪರಿಹಾರ ಕೊಡುವಂತಹ ವ್ಯವಸ್ಥೆ ಮಾಡಿದ್ದಾರೆಂದು ಹೇಳಿದ್ದಾರೆ. basic ಆಗಿ ನಮ್ಮ ರಾಜ್ಯದಲ್ಲಿ ಯಾವ್ಯಾವು ಮುಖ್ಯ ಬೆಳೆಗಳು? ರಾಗಿ, ಹತ್ತಿ, ಭತ್ತ ಮೆಣಸಿನಕಾಯಿ ಈ ಬೆಳೆಗಳಿಗೆ ನಿರಂತರವಾಗಿ ಸುಮಾರು 25 ವರ್ಷಗಳಿಂದಲೂ ಪ್ರತಿ ವರ್ಷ ರೋಗಗಳು ಬರುತ್ತಿವೆ. ಹತ್ತಿ, ಭತ್ತ, ಮೆಣಸಿನಕಾಯಿ ಬೆಳೆಗಳಿಗೆ ರೋಗ ಬರುತ್ತದೆ. ನಮ್ಮ ಸರ್ಕಾರ ಮತ್ತು ತಮ್ಮ ಸರ್ಕಾರ ಎಂದು ನಾನು ಹೇಳುತ್ತಿಲ್ಲ. ಯಾವ ಸರ್ಕಾರಗಳು ಮಂತ್ರಿಗಳು ಮಾಡತಕ್ಕಂತಹದ್ದಲ್ಲ. ಕೃಷಿ ಇಲಾಖೆಯಲ್ಲಿ technical persons ಇದ್ದಾರೆ. ಇವತ್ತು ಮೂರ್ನಾಲ್ಕು ಕೃಷಿ ವಿಶ್ವವಿದ್ಯಾನಿಲಯಗಳಿವೆ. ಇದನ್ನೆಲ್ಲಾ ಸಾಂತ್ವಾನ ಮಾಡುವುದು ಅವರೆಲ್ಲರ ಕರ್ತವ್ಯ. ಅದಕ್ಕೆ ನಾನು ಹೇಳುವುದೇನೆಂದರೆ, ಇವತ್ತು ರಾಯಚೂರು, ಹುಬ್ಬಳ್ಳಿ–ಧಾರವಾಡ, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಗಳಿವೆ. ಅವರು ಏರಿಯಾಗಳನ್ನು divide ಮಾಡಿ, ಆ ಭಾಗದಲ್ಲಿ ಬರತಕ್ಕಂಥ ರೋಗಗಳು ಏನು ಬರುತ್ತದೆ ಎಂಬುದರ ಬಗ್ಗೆ ತಯಾರು ಮಾಡಿ, ಅದನ್ನು ಸಂಶೋಧನೆ ಮಾಡಿ, ಅದಕ್ಕೊಂದು ಔಷಧಿಯನ್ನು ಕೊಟ್ಟರೆ, ಇದಕ್ಕಿಂತ ಭೂಮಿ ಯಾವುದು ಆಗುವುದಿಲ್ಲ. ಏಕೆಂದರೆ ನಲವತ್ತು ವರ್ಷಗಳಿಂದ ಇದಕ್ಕೆ, who has to bell the cat ಎಂದು ಹೇಳುತ್ತೇನೆ.

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ ಮಾತನಾಡಿ.

**ಶ್ರೀ ಬಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರುಗಳಾದ ಶ್ರೀ ಅಲ್ಲಂ ವೀರಭದ್ರಪ್ಪ, ಶ್ರೀ ತಿಪ್ಪೇಸ್ವಾಮಿ, ಶ್ರೀ ಅಪ್ಪಾಜಿಗೌಡರು ಒಳ್ಳೆಯ ಸಲಹೆಗಳನ್ನು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊಟ್ಟಿದ್ದಾರೆ. ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿರುವ ಹಾಗೇ ವಿಶ್ವವಿದ್ಯಾನಿಲಯದ ಪ್ರಾಧ್ಯಪಕರಿಗೆ ಈಗಾಗಲೇ ಸುತ್ತೋಲೆಗಳನ್ನು ಕೊಟ್ಟಿದ್ದೇವೆ. University Professors and University work should not be confined to the compound of the University. They should go out. ನಾವು ಪ್ರತಿಯೊಂದು ತಾಲ್ಲೂಕಿಗೆ ಪ್ರತಿಯೊಬ್ಬ ಪ್ರಾಧ್ಯಪಕರನ್ನು ನೋಡೆಲ್ ಅಧಿಕಾರಿಗಳನ್ನಾಗಿ ನೇಮಿಸಿದ್ದೇವೆ.

(ಮುಂದು)

(109)03.02.2021, 12.50, ಟಿಸಿಹೆಚ್-ಜಿಆರ್

**ಶ್ರೀ ಬಿ.ಸಿ.ಪಾಟೀಲ್ (ಮುಂದು):-**

ಪ್ರತಿಯೊಂದು ರೈತ ಸಂಪರ್ಕ ಕೇಂದ್ರಕ್ಕೆ ಒಬ್ಬೊಬ್ಬರು ಅಸಿಸ್ಟೆಂಟ್ ಪ್ರೊಫೆಸರ್‌ರವರನ್ನು ನೋಡಲ್ ಆಫೀಸರ್ ಆಗಿ ನೇಮಿಸಲಾಗಿದೆ. ನಾನು ಸಚಿವನಾದ ನಂತರ ಇದಕ್ಕೆ ಸುತ್ತೋಲೆಯನ್ನು ಕೂಡ ಕೊಟ್ಟಿದ್ದೇನೆ. ಅವರು ಎಲ್ಲೆಲ್ಲಿ ಭೇಟಿ ಮಾಡಿದರೆಂದು ತಿಂಗಳಲ್ಲಿ 15 ದಿವಸಕ್ಕೊಂದು ಬಾರಿ ತಾಲ್ಲೂಕಿಗೆ ಭೇಟಿ ಮಾಡಿ ಮಾಹಿತಿಯನ್ನು ನೀಡುತ್ತಾರೆ. ರೈತ ಸಂಪರ್ಕ ಕೇಂದ್ರದವರು ಕೃಷಿ ಅಧಿಕಾರಿಗಳ ಜೊತೆಗೆ ಹೋಗಿ ಅಲ್ಲಿನ ರೈತರ ಹೊಲಗಳಿಗೆ ಭೇಟಿ ನೀಡಿ ಏನು ತೊಂದರೆ ಇದೆಯೆಂದು ತಿಳಿದುಕೊಳ್ಳುತ್ತಾರೆ. ಅವರೆಲ್ಲಾ ಸೈಂಟಿಸ್ಟ್‌ಗಳು ಹೋಗುತ್ತಾರೆ. ಅದನ್ನು ಕೂಡ ನಾವು ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಇದರ ಜೊತೆಗೆ . . .

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಚಿವರೇ, Lab to land ನ್ನು ಮಾಡಿ. ಅಂದರೆ, extension program strengthen ಮಾಡಿ. ಆಗ ಎಲ್ಲಾ ಸರಿಯಾಗುತ್ತದೆ.

**ಶ್ರೀ ಬಿ.ಸಿ.ಪಾಟೀಲ್:-** ಮಾಡುತ್ತೇವೆ. ಆಮೇಲೆ ಮಾನ್ಯ ಸದಸ್ಯರು ಕಂದಕಗಳನ್ನು ಹೊಡೆದರೆ ಅಷ್ಟೇ ಸಾಲದೆಂದು ಹೇಳಿದರು. ತಮ್ಮ ಮಾಹಿತಿಗೆ ಹೇಳುವುದಾದರೆ, ನಾವು ಈಗಾಗಲೇ ಭೂಮಿಯೊಳಗಡೆ ಕಂದಕಗಳ ತೆಗೆದು ಪೈಪ್‌ಗಳನ್ನು ಅಳವಡಿಸಿ ಬಸಿಯುವ ನೀರನ್ನು ತೆಗೆಯತಕ್ಕಂಥ ಕೆಲಸವನ್ನು ಮಾಡುತ್ತಿದ್ದೇವೆ. ಮತ್ತೆ ಸೆಣಬು, ಸುಣ್ಣ ಏನಿದೆ ಇದನ್ನು ನಾವು ಸಬ್ಸಿಡಿ ದರದಲ್ಲಿ ರೈತರಿಗೆ ಒದಗಿಸಿಕೊಡುತ್ತಿದ್ದೇವೆ. ತಾವು ಕೊಟ್ಟಂತಹ ಸಲಹೆಗಳನ್ನು ಕೂಡ ಅಳವಡಿಸಿಕೊಳ್ಳಲಾಗುವುದು. ಏಕೆಂದರೆ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೃಷಿಯಲ್ಲಿ ಯಾರೂ ಪಂಡಿತರಲ್ಲ. ಪ್ರತಿಯೊಂದು ದಿವಸ ಒಂದೊಂದು ಸಮಸ್ಯೆಗಳು ಉದ್ಭವವಾಗುತ್ತಿರುತ್ತವೆ. ಬಹುತೇಕ ನಾವೆಲ್ಲರೂ ಕೂಡ ಕೃಷಿ ಕುಟುಂಬದಿಂದಲೇ ಬಂದಿರುವುದರಿಂದ ನಾವೆಲ್ಲಾ ಕುಳಿತುಕೊಂಡು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ, ವಿರೋಧ ಪಕ್ಷದ ಸದಸ್ಯರುಗಳು ಕೊಟ್ಟಂತಹ ಸಲಹೆಗಳೇನಿವೆ, ಅವುಗಳನ್ನು ಖಂಡಿತ ನಾವು ಅಳವಡಿಸಿಕೊಂಡು ರೈತರ ಅನುಕೂಲಕ್ಕಾಗಿ ಅದನ್ನು ಬಳಕೆ ಮಾಡುತ್ತೇವೆ ಎನ್ನತಕ್ಕಂಥದ್ದನ್ನು ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರುಗಳಲ್ಲಿ ಒಂದು ವಿನಂತಿ ಇದೆ. ದಯಮಾಡಿ ಪ್ರಶ್ನೋತ್ತರ ಅವಧಿ ಬೆಳಗ್ಗೆ 11.30 ಗಂಟೆಗೆ ಪ್ರಾರಂಭವಾಗಿದೆ. ಇಲ್ಲಿಯವರೆಗೆ ಕೇವಲ 7 ಪ್ರಶ್ನೆಗಳು ಮುಗಿದಿದೆ. ಈಗಾಗಲೇ ಸಮಯ ಮಧ್ಯಾಹ್ನ 12.50 ಗಂಟೆಯಾಗಿದೆ. ಹಾಗಾಗಿ, ದಯವಿಟ್ಟು ಮಾನ್ಯ ಸದಸ್ಯರೆಲ್ಲರೂ ಪ್ರಶ್ನೋತ್ತರ ಅವಧಿಯೊಳಗೆ ಮುಗಿಸಲು ಸಹಕಾರ ಮಾಡಿ. ಮಧ್ಯಾಹ್ನ 1.00 ಗಂಟೆಯೊಳಗಾದರು ಪ್ರಶ್ನೋತ್ತರವನ್ನು ಮುಗಿಸಬೇಕು. ಮಾನ್ಯ ಸಚಿವರುಗಳಿಗೆ ಬರೀ ಪ್ರಶ್ನೆಗಳನ್ನು ಕೇಳಿ, ಉತ್ತರಗಳನ್ನು ಪಡೆದುಕೊಳ್ಳತಕ್ಕಂಥ ಕೆಲಸ ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶಿತರು):–** ಮಾನ್ಯ ಸಭಾಪತಿಯವರೇ, ದಯಮಾಡಿ ಈ ಸಂಬಂಧ ಅರ್ಧಗಂಟೆ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಈ ಸಮಯದಲ್ಲಿ ಆಗದಿದ್ದರೆ, ಮುಂದಿನ ಸಮಯದಲ್ಲಾದರೂ ಅರ್ಧಗಂಟೆ ಚರ್ಚೆಗೆ ಅನುವು ಮಾಡಿಕೊಡಬೇಕು.

**ಉಪ ಸಭಾಪತಿಯವರು:–** ಖಂಡಿತ ಅವಕಾಶ ಕೊಡಲಾಗುವುದು.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಬೇರೆ ಯಾವುದಾದರೂ ರೂಪದಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡಬೇಕು. ಏಕೆಂದರೆ, ಇದು ಬಹಳ ಮುಖ್ಯವಾದುದು.

**ಉಪ ಸಭಾಪತಿಯವರು:–** ಖಂಡಿತ ಅವಕಾಶ ಕೊಡಲಾಗುವುದು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ. 281**
**(ಉತ್ತರ ಲಗತ್ತಿಸಿದೆ)**

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಮಾನ್ಯ ಸಚಿವರು ಕರ್ನಾಟಕ ರಾಜ್ಯದಲ್ಲಿ ಒಟ್ಟು 34563 ದೇವಸ್ಥಾನ/ಅಧಿಸೂಚಿತ ಸಂಸ್ಥೆಗಳಿವೆಯೆಂದು ಕೊಟ್ಟಿದ್ದಾರೆ. ಅದನ್ನು 'ಎ', 'ಬಿ' ಹಾಗೂ 'ಸಿ' ಶ್ರೇಣಿಯಲ್ಲಿ ಮಾಡಲಾಗಿದೆಯೆಂದು ಹೇಳಿದ್ದಾರೆ. ಆದರೆ ನಾನು ಕೇಳಿರತಕ್ಕಂಥ ಪ್ರಶ್ನೆ ಮೂರು ವರ್ಷಗಳಿಂದ ದೇವಸ್ಥಾನಗಳಿಗೆ ಬಂದಂಥ ಆದಾಯ ಎಷ್ಟು ಎಂದು ಕೇಳಿದ್ದೆನು. ಅದಕ್ಕೆ 2016-17, 2017-18 ಮತ್ತು 2018-19 ಸಾಲಿಗೆ ಕೊಟ್ಟಿದ್ದಾರೆ. 2019-20ನೇ ಸಾಲಿಗೆ ವಾರ್ಷಿಕ ಆದಾಯ ಎಷ್ಟಿದೆ ಎಂಬ ಮಾಹಿತಿಯನ್ನು ಕೊಟ್ಟಿಲ್ಲ. ಮೂರು ವರ್ಷಗಳಲ್ಲಿ ವಾರ್ಷಿಕ ಆದಾಯ ಒಟ್ಟು ರೂ.1481.02 ಕೋಟಿ ಬಂದಿದೆ. ಈ ಹಣವನ್ನು ಯಾವ ರೀತಿ ವಿನಿಯೋಗಿಸಿದ್ದೀರೆಂದು ಕೇಳಿದಾಗ, ರಾಜ್ಯದಲ್ಲಿ ಒಟ್ಟು 34563 ದೇವಾಲಯಗಳಿವೆ; ಇದಕ್ಕೆ ಸ್ವಲ್ಪ ಕಾಲಾವಕಾಶ ಬೇಕೆಂದು ಮಾನ್ಯ ಸಚಿವರು ಹೇಳಿದ್ದಾರೆ. ನಾನು ಈ ಹಿಂದೆಯೂ ಕೂಡ ಪ್ರಶ್ನೆಯನ್ನು ಕೇಳಿದ್ದೆನು. ಅದು ಚುಕ್ಕೆಗುರ್ತಿನ ಪ್ರಶ್ನೆ ಆಗಲಿಲ್ಲ. ಆಗ ಬರೀ ಲಿಖಿತ ಮೂಲಕ ಉತ್ತರ ಬಂತು. ನಾನೇಕೆ ಈ ಪ್ರಶ್ನೆಯನ್ನು ಈಗ ಕೇಳುತ್ತಿದ್ದೇನೆಂದರೆ, ವಿಶೇಷವಾಗಿ ಬಹಳಷ್ಟು ತಾಲ್ಲೂಕುಗಳಲ್ಲಿ ದೇವಸ್ಥಾನಗಳು ಇದ್ದರೂ ಕೂಡ ಸರ್ಕಾರ ಅಲ್ಲಿಗೆ ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ. ಉದಾಹರಣೆಗೆ 2019-20ರಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಬಸವನ ಬಾಗೇವಾಡಿ ತಾಲ್ಲೂಕಿನ ದೇವಸ್ಥಾನಗಳಿಗೆ ಒಂದು ರೂಪಾಯಿ ಕೂಡ ಬಿಡುಗಡೆ ಮಾಡಿಲ್ಲ. ಮುದ್ದೇಬಿಹಾಳ ತಾಲ್ಲೂಕಿಗೆ ಹಣ ಬಿಡುಗಡೆ ಮಾಡಿಲ್ಲ ಮತ್ತು ಕೋಲಾರ ತಾಲ್ಲೂಕಿಗೆ ಹಣ ಬಿಡುಗಡೆ ಮಾಡಿಲ್ಲ. ತಾವೇನು ವಿಯೋಗ ಮಾಡುತ್ತೀರಿ ಅದು ಸರಿಯಾಗಿ ಹೋಗುತ್ತಿಲ್ಲ. ದಯವಿಟ್ಟು ತಾವು ಯಾವುದೇ ತಾರತಮ್ಯ ಮಾಡದೇ ಅದನ್ನು ಸರಿಯಾಗಿ ವಿನಿಯೋಗಿಸಬೇಕೆಂದು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಪ್ರಕಾಶ್ ಕೆ.ರಾಥೋಡ್‌ರವರು ಕೇಳಿರತಕ್ಕಂಥ ಒಟ್ಟು ಪ್ರಶ್ನೆಗಳಿಗೆ ಒಂದಷ್ಟು ಕಾಲಾವಕಾಶಗಳ ಅಗತ್ಯವಿತ್ತು. ಆದರೆ ನಾನು ಒಂದು ಬಾರಿ ಉತ್ತರ ಕೊಡೋಣ. ಅಗತ್ಯವಿದ್ದರೆ ಉತ್ತರವನ್ನು ಅವರಿಗೆ ಕಳುಹಿಸಿಕೊಡೋಣವೆಂದು ಮಾಡಿದ್ದೆ. ಅವರು ಪ್ರಶ್ನೆಯಲ್ಲಿ ರಾಜ್ಯದಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು; ದೇವಸ್ಥಾನಗಳು ಎಷ್ಟು ವಿಧಗಳಲ್ಲಿ ವಿಂಗಡಿಸಲಾಗಿದೆ?

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಳೆದ 3 ವರ್ಷಗಳಿಂದ ದೇವಸ್ಥಾನಗಳಿಂದ ಬಂದಂತಹ ಆದಾಯ ಎಷ್ಟು? ಹಾಗೂ ಹಣವನ್ನು ವಿನಿಯೋಗಿಸಿದ ಬಗ್ಗೆ ಮಾಹಿತಿ ನೀಡುವಂತೆ ಕೇಳಿದ್ದರು.

ಒಟ್ಟು 34563 ದೇವಸ್ಥಾನಗಳಿವೆಯೆಂದು ಉತ್ತರ ಕೊಟ್ಟಿದ್ದೆನು. ಮತ್ತೆ ಎಷ್ಟು ವಿಧಗಳಲ್ಲಿ ವಿಂಗಡಿಸಲಾಗಿದೆಯೆಂದು ಕೇಳಿದ್ದರು. 'ಎ', 'ಬಿ' ಹಾಗೂ 'ಸಿ' ಶ್ರೇಣಿಯ ದೇವಸ್ಥಾನಗಳೆಂದು ವರ್ಗೀಕರಿಸಲಾಗಿದೆ. ವರ್ಷಕ್ಕೆ 25 ಲಕ್ಷಕ್ಕಿಂತ ಹೆಚ್ಚು ಆದಾಯ ಬರುವ ದೇವಸ್ಥಾನಗಳನ್ನು 'ಎ' ವರ್ಗದ ದೇವಸ್ಥಾನಗಳೆಂದು ಕರೆಯುತ್ತೇವೆ. ಅವುಗಳ ಸಂಖ್ಯೆ.205. 5 ಲಕ್ಷದಿಂದ 25 ಲಕ್ಷ ರೂಪಾಯಿಯೊಳಗೆ ವಾರ್ಷಿಕ ವರಮಾನ ಬರತಕ್ಕಂಥ ದೇವಸ್ಥಾನಗಳನ್ನು 'ಬಿ' ವರ್ಗವೆಂದು ಕರೆಯುತ್ತೇವೆ. ಅವುಗಳ ಸಂಖ್ಯೆ.139. 5 ಲಕ್ಷಕ್ಕಿಂತ ಕಡಿಮೆ ಆದಾಯ ಇರತಕ್ಕಂಥ ದೇವಸ್ಥಾನಗಳನ್ನು 'ಸಿ' ವರ್ಗವೆಂದು ಕರೆಯುತ್ತೇವೆ. ಅವುಗಳ ಸಂಖ್ಯೆ.34219. ರಾಜ್ಯದಲ್ಲಿ ಒಟ್ಟು 34563 ದೇವಸ್ಥಾನಗಳಿವೆ ಎನ್ನತಕ್ಕಂಥ ಮಾಹಿತಿಯನ್ನು ಕೊಡಲಾಗಿದೆ. ಆನಂತರ ಮಾನ್ಯ ಸದಸ್ಯರು ಕಳೆದ ಮೂರು ವರ್ಷಗಳಿಂದ ಬಂದ ಆದಾಯ ಎಷ್ಟು ಎಂದು ಕೇಳಿದ್ದಾರೆ. ಅದಕ್ಕೆ 2016-17, 2017-18 ಮತ್ತು 2018-19ನೇ ಸಾಲಿನಲ್ಲಿ ಒಟ್ಟು ಸರಾಸರಿ ವಾರ್ಷಿಕವಾಗಿ ಎಷ್ಟು ಬರುತ್ತದೆ ಎಂಬುದನ್ನೂ ಕೂಡ ಉಲ್ಲೇಖ ಮಾಡಲಾಗಿದೆ. 2019-20ರಲ್ಲಿ ಮಾರ್ಚ್‌ನಿಂದ ಇಲ್ಲಿಯವರೆಗೆ ಲಾಕ್‌ಡೌನ್‌ನಿಂದಾಗಿ ಕೆಲವು ಕಡೆ ದೇವಸ್ಥಾನಗಳು ಬಂದ್ ಆಗಿರುವುದರಿಂದ, ಅವುಗಳ ಮಾಹಿತಿಯನ್ನೂ ಕೂಡ ಕೊಡಬೇಕಾದಂತಹ ಅವಶ್ಯಕತೆ ಇತ್ತು. ಮತ್ತೆ ಹಣವನ್ನು ಹೇಗೆ ಖರ್ಚು ಮಾಡುತ್ತೀರಿ ಎಂದು ಕೇಳಿದ್ದಾರೆ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ 34219 'ಸಿ' ದರ್ಜೆ ದೇವಸ್ಥಾನಗಳಲ್ಲಿ ಕೆಲವು ದೇವಸ್ಥಾನಗಳಲ್ಲಿ ಎಣ್ಣೆ ಮತ್ತು ಬತ್ತಿಗೂ ಕೂಡ ಕಷ್ಟ ಇದೆ. ಆ ಕಾರಣಕ್ಕೆ ಸರ್ಕಾರದ ವತಿಯಿಂದ ಸುಮಾರು 26000 ದೇವಸ್ಥಾನಗಳಿಗೆ ತಸ್ತಿಕ್ ಎಂದು ವರ್ಷಕ್ಕೆ ರೂ.48,000/-ಗಳನ್ನು ಸಮಾನ ದರ್ಜೆಗಳಲ್ಲಿ ಎಣ್ಣೆ, ಬತ್ತಿ, ಪೂಜಾ ಪ್ರಕ್ರಿಯೆಗೆ ಹಾಗೂ ಅಲ್ಲಿ ಇರತಕ್ಕಂಥ ಅರ್ಚಕರಿಗೆ ಸಹಾಯವಾಗಲಿ ಎಂದು ಬಿಡುಗಡೆ ಮಾಡುತ್ತೇವೆ. 34219 ದೇವಸ್ಥಾನಗಳ ಪೈಕಿ ಕೆಲವು ದೇವಸ್ಥಾನಗಳು ಮುಚ್ಚಲ್ಪಟ್ಟಿವೆ. ಇಂತಹ ದೇವಸ್ಥಾನಗಳನ್ನು ಹೊರತುಪಡಿಸಿದರೆ, 26000 ದೇವಸ್ಥಾನಗಳಿಗೆ ತಸ್ತಿಕ್‌ನ್ನು ವಾರ್ಷಿಕ ರೂ.48000/- ಗಳಂತೆ ಬಿಡುಗಡೆ ಮಾಡಲಾಗುತ್ತದೆ. ಸುಮಾರು 131 ಕೋಟಿ ರೂಪಾಯಿಗಳು ತಸ್ತಿಕ್‌ಗೋಸ್ಕರ ಸರ್ಕಾರದಿಂದ ವಿನಿಯೋಗವಾಗುತ್ತಿದೆ. ಮತ್ತೆ ಹಣವನ್ನು ವಿನಿಯೋಗಿಸುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವುದು ಎಂದು ಕೇಳಿದ್ದಾರೆ. ಪ್ರತಿ ದೇವಸ್ಥಾನದಲ್ಲೂ ಕೂಡ ಕಟ್ಟುಕಟ್ಟೆ ಪೂಜೆ ಎಂದು ಇರುತ್ತದೆ, ರಥೋತ್ಸವ ಇರುತ್ತದೆ, ಸಿಬ್ಬಂದಿಗಳ ವೆಚ್ಚ ಇರುತ್ತದೆ; ಅಭಿವೃದ್ಧಿ ಮೂಲಭೂತ ಸೌಕರ್ಯಗಳನ್ನು ಕೊಡಬೇಕಾಗಿರುತ್ತದೆ. ದೇವಸ್ಥಾನಗಳಲ್ಲಿ ಅನೇಕ ಕಲ್ಯಾಣೋತ್ಸವಗಳು ನಡೆಯುತ್ತವೆ.

ಒಂದೊಂದು ದೇವಸ್ಥಾನದ ಪೂಜಾ ಪದ್ಧತಿಗಳು ಮತ್ತು ಅಲ್ಲಿರತಕ್ಕಂಥ ಪರಂಪರೆಗಳು ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಬಹಳ ವಿಸ್ತಾರವಾಗಿ ಚರ್ಚೆ ಮಾಡಬೇಕಾದ ಅವಶ್ಯಕತೆಗಳಿವೆ. ಅಗತ್ಯವೆನಿಸಿದರೆ ಮಾನ್ಯ ಸದಸ್ಯರಿಗೆ ಸಮಗ್ರವಾದ ಮಾಹಿತಿಯನ್ನು ಈ ಸದನ ಮುಗಿದ 15 ದಿವಸಗಳಲ್ಲಿ ಉತ್ತರವನ್ನು ಕಳುಹಿಸುವಂಥ ಕೆಲಸಗಳನ್ನು ಮಾಡುತ್ತೇನೆ.

**ಉಪ ಸಭಾಪತಿಯವರು:-** ಮಾನ್ಯ ಪ್ರಕಾಶ್ ಕೆ.ರಾಥೋಡ್‌ರವರೇ, ಮಾನ್ಯ ಸಚಿವರು ಸದನ ಮುಗಿದ 15 ದಿವಸಗಳಲ್ಲಿ ಉತ್ತರಗಳನ್ನು ಕಳುಹಿಸುತ್ತೇವೆಂದು ಹೇಳಿದರಲ್ಲ.

**ಶ್ರೀ ಪ್ರಕಾಶ್ ಕೆ.ರಾಥೋಡ್:-** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರೇ, ನಾನು ಈಗಾಗಲೇ ಬಿಜಾಪುರ ಜಿಲ್ಲೆಯದ್ದು ಉದಾಹರಣೆಯನ್ನು ಕೊಟ್ಟಿದ್ದೇನೆ. ಅಂತಹ ದೇವಸ್ಥಾನಗಳಿಗೆ ಹಣ ಬಿಡುಗಡೆ ಮಾಡುವಲ್ಲಿ ಏನಾದರೂ ತಾರತಮ್ಯವಾಗಿದ್ದರೆ ಬಿಡುಗಡೆ ಮಾಡಬೇಕು. ಕೆಲವು ದೇವಸ್ಥಾನಗಳಲ್ಲಿ ಏನೂ ಪೂಜಾ ಕಾರ್ಯಗಳು ನಡೆಯುವುದಿಲ್ಲ. ಅವು ಮುಚ್ಚುವಂಥ ಸ್ಥಿತಿಯಲ್ಲಿವೆ. ಏಕೆಂದರೆ ಅಲ್ಲಿಗೆ ಯಾವುದೇ ಹಣ ಬಿಡುಗಡೆಯಾಗುತ್ತಿಲ್ಲ. ನಾವು ಬಿಜಾಪುರ ಜಿಲ್ಲೆಯಲ್ಲಿ ಆ ರೀತಿ ಆಗುತ್ತಿರುವುದನ್ನು ನೋಡುತ್ತಿದ್ದೇವೆ. ವಿಶೇಷವಾಗಿ ಕೆಲವೊಂದು ಲಂಬಾಣಿ ತಾಂಡಾಗಳಲ್ಲಿ ದೇವಸ್ಥಾನಗಳು ಮುಚ್ಚುತ್ತಿವೆ. ಅದಕ್ಕೆ ಮಾನ್ಯ ಸಚಿವರು ಹಣವನ್ನು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಹಿರಿಯ ಸದಸ್ಯರಾದ ಮಾನ್ಯ ಪ್ರಕಾಶ್ ಕೆ.ರಾಥೋಡ್ ರವರು ಕೆಲವು ಜಿಲ್ಲೆಗಳಲ್ಲಿ ಮತ್ತು ಬಿಜಾಪುರದಂಥ ಜಿಲ್ಲೆಗಳಲ್ಲಿ ಹಣ ಕೊಟ್ಟಂಥ ದಾಖಲೆಗಳಿಲ್ಲವೆಂದು ಹೇಳಿದ್ದಾರೆ. ನನಗೆ ಗೊತ್ತಿರುವ ಪ್ರಕಾರ, ಸಾಕಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ. ಹಾಗೊಂದು ವೇಳೆ, ತಾರತಮ್ಯವಾಗಿದ್ದರೆ ಮುಂದಿನ ದಿನಗಳಲ್ಲಿ ಆ ತಾರತಮ್ಯವನ್ನು ಸರಿಪಡಿಸುವಂಥ ಕೆಲಸವನ್ನು ಮಾಡುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ತಡೆಹಿಡಿಯಲಾದ ಪ್ರಶ್ನೆ ಸಂಖ್ಯೆ. 15**
**ಮತ್ತು**
**ಪ್ರಶ್ನೆ ಸಂಖ್ಯೆ. 336**
**(ಉತ್ತರ ಲಗತ್ತಿಸಿದೆ)**

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 336 ಕ್ಕೆ ಎಲ್ಲಾ ಉತ್ತರವನ್ನು ಒದಗಿಸಿದ್ದಾರೆ. ಅದಕ್ಕೆ ಮಾನ್ಯ ಸಚಿವರಿಗೆ ಧನ್ಯವಾದಗಳು. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ.15, ಇದು ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ, 35 ಗ್ರಾಮ ಪಂಚಾಯಿತಿಗಳಿದ್ದು, ಪ್ರತಿ ಗ್ರಾಮ ಪಂಚಾಯಿತಿಗೆ 20 ಮನೆಗಳನ್ನು ಹಂಚಿಕೆ ಮಾಡಲು ಮಾನ್ಯ ಸಚಿವರು ಸುತ್ತೋಲೆಯನ್ನು ಹೊರಡಿಸಿ ರೇಷಿಯೋ ಮುಖಾಂತರ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮಾರ್ಗಸೂಚಿಯಂತೆ; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಶೇ.15. ಅಲ್ಪಸಂಖ್ಯಾತರಿಗೆ ಶೇ.15 ಮತ್ತು ಸಾಮಾನ್ಯ ವರ್ಗಕ್ಕೆ ಶೇ.25 ರಂತೆ ವಸತಿ ಯೋಜನೆಯನ್ನು ಕೊಡುವುದಕ್ಕೆ ಮಾನ್ಯ ಸಚಿವರು ಸೂಚನೆಯನ್ನು ನೀಡಿರುತ್ತಾರೆ. ಆದರೆ, ನಮ್ಮ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಇ.ಓ ಮತ್ತು ಇತರೆ ಅಧಿಕಾರಿಗಳು ಸೇರಿಕೊಂಡು ಸುಮಾರು ಒಂದೂವರೆ ಸಾವಿರ ಮನೆಗಳ ಪಟ್ಟಿ ಮಾಡಿಕೊಂಡು, ಯಾರಿಗೆ ಮನೆಗಳಿವೆ, ಅವರಿಗೆ ಕೊಟ್ಟಿಗೆ ಕಟ್ಟಿಕೊಳ್ಳುವುದಕ್ಕೆ, ಬೋರ್‌ವೆಲ್‌ಗಳು ಇರುವ ಕಡೆಗಳಲ್ಲಿ ಗೆಸ್ಟ್‌ಹೌಸ್ ಕಟ್ಟಿಕೊಳ್ಳುವುದಕ್ಕೆ ಯಾವುದೇ ಗ್ರಾಮಸಭೆಗಳನ್ನು ಮಾಡದೇ ಅಲ್ಲಿನ ಅಧಿಕಾರಿಗಳು ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ. ಆಡಳಿತಾಧಿಕಾರಿಗಳೆಲ್ಲಾ ಒಟ್ಟಾಗಿ ಸೇರಿ ಕೋಟ್ಯಾಂತರ ರೂಪಾಯಿಗಳ ಹಣವನ್ನು ಅವ್ಯವಹಾರವನ್ನು ಮಾಡಿ ದೋಷಿಯಾಗಿದ್ದಾರೆ. ಒಂದು ಮನೆಗೆ ಸುಮಾರು ರೂ.10,000/– ಗಳಿಂದ್ಹ ರೂ.20,000/–ಗಳನ್ನು ಸಂಗ್ರಹ ಮಾಡಿಕೊಂಡು ದಂಧೆಯನ್ನು ಮಾಡಿದ್ದಾರೆ. ಹಾಗಾಗಿ, ನಾನು ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರ ಗಮನಕ್ಕೆ ತಂದಿದ್ದೆನು. ಅವರು ಇದು ಮಾನ್ಯ ವಸತಿ ಸಚಿವರ ವ್ಯಾಪ್ತಿಗೆ ಬರುತ್ತವೆಂದು ಹೇಳಿದರು. ಹಾಗಾಗಿ, ಮಾನ್ಯ ವಸತಿ ಸಚಿವರು ಇದಕ್ಕೆ ಉತ್ತರವನ್ನು ಕೊಡಬೇಕು. ಮಾನ್ಯ ಸಚಿವರು ಹಾಸನ ಜಿಲ್ಲೆಗೆ ಬಂದಂಥ ಸಂದರ್ಭದಲ್ಲಿ ಅಧಿಕಾರಿಗಳು ಯಾವ ರೀತಿ ನಡೆದುಕೊಂಡಿದ್ದಾರೆಂದು ಗೊತ್ತಿದೆ. ನನ್ನ ಉದ್ದೇಶ ಇರುವುದು ಅದಕ್ಕೊಂದು ಸದನ ಸಮಿತಿ ರಚನೆ ಮಾಡಬೇಕು. ಇಲ್ಲವೆಂದರೆ, E.O., ಅವರನ್ನು ಅಮಾನತ್ತಿನಲ್ಲಿಟ್ಟು ತನಿಖೆಗೆ ಆದೇಶ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಉಪ ಸಭಾಪತಿಯವರು:–** ಮಾನ್ಯ ಎಂ.ಎ.ಗೋಪಾಲ ಸ್ವಾಮಿಯವರೇ, ನೀವು ತಡೆಹಿಡಿಯಲಾದ ಪ್ರಶ್ನೆಯನ್ನೂ ಸೇರಿಸಿ ಕೇಳಿದ್ದೀರಾ.

**(ಮುಂದು...)**

(110)03.02.2021/1.00/ಎಂ.ಎಂ–ಎಂ.ಡಿ

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಶೇ.60ರಷ್ಟು, ಅಲ್ಪಸಂಖ್ಯಾತರಿಗೆ ಶೇ.15, ಇತರೆ ಸಾಮಾನ್ಯ ವರ್ಗದವರಿಗೆ ಶೇ.25 ಇಲ್ಲಿ ಈ ರೋಸ್ಟರ್ ಅನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕಲ್ಲವೇ? ಯಾರ ತಲೆ ಮೇಲೆ ಸೂರಿಲ್ಲ, ಅವರಿಗೆ ಮನೆಯನ್ನು ಕೊಡಬೇಕು. ಈಗ ಮನೆ ಇರುವವರಿಗೆ ದನದ ಕೊಟ್ಟಿಗೆ ಕಟ್ಟಿಕೊಳ್ಳಲು ಮನೆಯನ್ನು ಕಟ್ಟಿಕೊಡುವುದನ್ನು ಮಾಡುತ್ತಿದ್ದಾರೆ. ಗುಡಿಸಲು ಮುಕ್ತ ರಾಜ್ಯವನ್ನು ನಿರ್ಮಾಣ ಮಾಡುತ್ತೇವೆಂದು ದೊಡ್ಡ ದೊಡ್ಡ ಭಾಷಣ ಮಾಡುತ್ತೇವೆ. ಅಲ್ಲಿರುವಂತಹ ರೋಸ್ಟರ್ ಅನ್ನು ಅನುಸರಿಸುವುದಿಲ್ಲ. ಯಾರ ತಲೆ ಮೇಲೆ ಸೂರಿಲ್ಲ, ಹತ್ತಾರು ವರ್ಷಗಳಿಂದ ಯಾರೋ ಶ್ರೀಮಂತರ ಮನೆಯ ಪಕ್ಕದಲ್ಲಿ ಗುಡಿಸಲು ಹಾಕಿಕೊಂಡಿರುತ್ತಾರೆ ಅವರು ಗುಡಿಸಿಲಿನಲ್ಲಿಯೇ ಇದ್ದಾರೆ. ಯಾರು 4–5 ಮನೆ ಇದ್ದವರು ಇದ್ದಾರೆ; ನಾನು ಇದೇ ಸರ್ಕಾರವೆಂದು ಹೇಳುವುದಿಲ್ಲ. ಇದು ನಡೆದು ಬಂದಂತಹ ದಾರಿಯಾಗಿದೆ ಇದಕ್ಕೆ ನೀವು ಇತಿಶ್ರೀ ಹಾಡಬೇಕಲ್ಲವೇ? ನೀವು ಬಹಳ ಕಾಳಜಿಪೂರ್ವಕವಾಗಿ ಕೆಲಸ ಮಾಡುತ್ತೀರಿ. ಗುಡಿಸಲಿನಲ್ಲಿದ್ದವರು ಗುಡಿಸಲಿನಲ್ಲಿಯೇ ಇದ್ದಾರೆ ಯಾರಿಗೆ ಮನೆ ಇದೆ ಅವರು ಒಂದಲ್ಲ 4–5 ಮನೆಗಳನ್ನು ತೆಗೆದುಕೊಂಡು ಎಷ್ಟೋ ಜನರು ಮಾರುವುದಕ್ಕೆ ನೋಡುತ್ತಿದ್ದಾರೆ. ಅಲ್ಲದೇ ಬಾಡಿಗೆಗೆ ಕೂಡ ಕೊಟ್ಟಿದ್ದಾರೆ. ಗುಡಿಸಲಿನಲ್ಲಿದ್ದ ವ್ಯಕ್ತಿ, ತಲೆ ಮೇಲೆ ಸೂರಿಲ್ಲದವನು ಅನೇಕ ವರ್ಷಗಳಿಂದ ಅಲ್ಲಿಯೇ ಇದ್ದಾರೆ. ಗ್ರಾಮ ಸಭೆ, ವಾರ್ಡ್ ಸಭೆ ಪರಿಣಾಮಕಾರಿಯಾಗಿ ನಡೆದರೆ, ಫಲಾನುಭವಿಗಳ ಲಿಸ್ಟ್ ಸರಿ ಬಂದಿದ್ದರೆ ಸರಿ ಅದರಲ್ಲಿ decentralization of power ಆಗುವ ಬದಲಿಗೆ decentralization of corruption ಆಗಬಾರದು. ಬಡವರು 20,000, 30,000 ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವಿದೆಯೇ? ಅಸಾಧ್ಯ. ಅದಕ್ಕೆ ನೀವು ಅದರ ಬಗ್ಗೆ ವಿಶೇಷ ಕಾಳಜಿ ವಹಿಸಿ, roster follow ಮಾಡಬೇಕು ಮತ್ತು ಭ್ರಷ್ಟಾಚಾರ ಆಗಲಾರದಂತೆ ನೋಡಿಕೊಳ್ಳಬೇಕು ಮತ್ತು ಯಾರಿಗೆ ತಲೆ ಮೇಲೆ ಸೂರಿಲ್ಲ ಅಂತಹ ಯೋಗ್ಯ ಫಲಾನುಭವಿಗಳನ್ನು ಆಯ್ಕೆ ಮಾಡಿ ನ್ಯಾಯ ಒದಗಿಸಬೇಕು.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ವಿ. ಸೋಮಣ್ಣ:-** ಮಾನ್ಯ ಸಭಾಪತಿಯವರೇ, ಮಿತ್ರರಾದ ಮಾನ್ಯ ಗೋಪಾಲಸ್ವಾಮಿಯವರು ಮತ್ತು ಹಿರಿಯ ಸದಸ್ಯರಾದ ಶ್ರೀ ಎಸ್.ಆರ್. ಪಾಟೀಲರು ಹೇಳಿದರು ಇದೊಂದು ಗೊಂದಲದ ಗೂಡಾಗಿತ್ತು. ನಾನು ಸವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ, ಅದಕ್ಕೆ ಸಮಯವೂ ಇಲ್ಲ. ಆದರೆ ತಾವು ಏನು ರೋಸ್ಟರ್ ಪದ್ಧತಿಯನ್ನು ಫಾಲೋ ಮಾಡಬೇಕೆಂದು ಹೇಳಿದ್ದೀರಿ ಅದನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ರಾಜ್ಯಾದ್ಯಂತ ಪ್ರವಾಸ ಮಾಡಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲು ಕೂಡ ಸಭೆಗಳನ್ನು ಮಾಡಿದ್ದೇವೆ. ನಾನು ಸಚಿವನಾಗಿ ಚಾರ್ಜ್ ತೆಗೆದುಕೊಂಡಾಗ 15,47,000 ಮನೆಗಳು ಏಕಕಾಲದಲ್ಲಿ ಮಂಜೂರಾಯಿತು. ಒಂದು ವರ್ಷಕ್ಕೆ ಅಷ್ಟು ಮನೆಗಳನ್ನು ನಿರ್ಮಿಸುತ್ತೇವೆಂದು ಆದೇಶ ಪತ್ರ ಮಾಡಿದೆವು. ಅದಾದ ಮೇಲೆ ನಾನು ಸಾಕಷ್ಟು ಸುತ್ತಾಡಿ, ಚಿತ್ರದುರ್ಗ, ಬೇರೆ ಬೇರೆ ಜಿಲ್ಲೆಗಳು ಎಲ್ಲೆಲ್ಲೋ ಕೆಲವು ಕಡೆ ಹೋಗಿ ಹತ್ತಾರು ಕಡೆ ಪರಿಶೀಲನೆ ಮಾಡಿದಾಗ ಇದಕ್ಕೆ ಮೂಲತಃ ಕಾರಣರು ಯಾರೆಂದು ಅರ್ಥ ಮಾಡಿಕೊಂಡು ಅಲ್ಲಿನ ಪಂಚಾಯಿತಿ ಛೇರ್ಮನ್ ಮತ್ತು PDO (Panchayat Development Officer) ಮೇಲೆ ಕ್ರಮ ತೆಗೆದುಕೊಂಡೆ. ಅದು ಎಷ್ಟರಮಟ್ಟಿಗೆ ದೂರವಾಯಿತೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಆದರೂ ಪಾರದರ್ಶಕತೆಯನ್ನು ಕಾಪಾಡಬೇಕು, ಅರ್ಹರಿಗೆ ತಲುಪಬೇಕು. ಮಾನ್ಯ ವಿರೋಧಪಕ್ಷದ ನಾಯಕರೇ, ಭಾಲ್ಕಿ, ಯಾದಗಿರಿ ಹೀಗೆ ಅನೇಕ ಕಡೆ ನಾನೇ ಸ್ವತಃ ಹೋಗಿದ್ದೆ. ಇದಾದ ಮೇಲೆ ಇದಕ್ಕೊಂದು ರೂಪ ಕೊಟ್ಟಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ ಇಲ್ಲಿಯವರೆಗೂ ಕೂಡ ಒಂದು ಮನೆಯನ್ನೂ ಮಂಜೂರು ಮಾಡಿರಲಿಲ್ಲ. ಮೊದಲನೇ ಬಾರಿಗೆ ಒಂದೊಂದು ಪಂಚಾಯಿತಿಗೆ 20 ಮನೆಗಳನ್ನು Roster System ನಲ್ಲಿ ಮಾಡುವುದಕ್ಕೆ ಸೂಚನೆಯನ್ನು ಅಧಿಕಾರಿಗಳಿಗೆ ಕೊಟ್ಟು ಸಂಬಂಧಪಟ್ಟ CEO (Chief Executive Officer) ಜಿಲ್ಲಾಧಿಕಾರಿಗಳು ಮತ್ತು EO (Executive Officer) ಮತ್ತು PDO ಗಳಿಗೆ ಸೂಚನೆ ಕೊಟ್ಟು ಇದನ್ನು ಮಾಡಿದೆವು. ಇದನ್ನು ಮಾಡಿದ ನಂತರ ಕೆಲವು ಕಡೆ ಅರ್ಹತೆ ಇರುವಂತಹವರು ಸುಮಾರು ಜನ ಇದ್ದಾರೆ. ಅನರ್ಹರಿಗೆ ಆಗಿರುವಂತಹ ಕೆಲವು ನ್ಯೂನತೆಗಳನ್ನು ಸರಿಪಡಿಸುವುದಕ್ಕೆ 15,47,000ದಲ್ಲಿ ನಾವು ಆಯ್ಕೆ ಮಾಡಿದ್ದು 5,96,000 ಫಲಾನುಭವಿಗಳನ್ನು. ಬಹುತೇಕ Vigil App ಮಾಡಿ ಸಮಯ ಕೊಟ್ಟು ಏನೆಲ್ಲಾ ಮಾಡಿದರೂ ಕೂಡ ಯಾರೂ ಅರ್ಜಿ ಹಾಕುವುದಕ್ಕೆ ಬರಲಿಲ್ಲ. ಈ ಮಧ್ಯದಲ್ಲಿ ಕೆಲವರಿಗೆ foundation ಹಾಕಿಕೊಂಡಿದ್ದ ನಿಜವಾದ ಅರ್ಹರಿಗೆ ತೊಂದರೆಯಾಗಿದೆ ಎನ್ನುವ ದೃಷ್ಟಿಯಿಂದ ನಾನು ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೂ ಕೂಡ 20 ಮನೆ, 35 ಮನೆ ಮತ್ತು 40

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮನೆಗಳನ್ನು ನಿರ್ಮಿಸಿ ಪಾರದರ್ಶಕತೆಯಲ್ಲಿ ಮತ್ತು Roster System ನಲ್ಲಿ ಒಂದು ಸಣ್ಣ ಅಪಚಾರವೂ ಆಗಬಾರದೆಂದು guidelines ಕೊಟ್ಟಿದ್ದೇವೆ. ತಾವು ಏನು ಹೇಳಿದ್ದೀರಿ ಅದಕ್ಕೆ ಒಂದು ಅಂಕಿತ ರೂಪ ಕೊಟ್ಟಿದ್ದೇವೆ. ತಾವು ಯಾವಾಗಲಾದರೂ ಕಛೇರಿಯಲ್ಲಿದ್ದರೆ ನಾವು ಏನೇನು ಮಾಡಿದ್ದೇವೆ ಎಂಬ ಬಗ್ಗೆ ತಮಗೆ ಮಾಹಿತಿಯನ್ನು ಕೊಡುತ್ತೇನೆ. ಇದರ ಉದ್ದೇಶ ಇಷ್ಟೇ. ಸುಮಾರು ವರ್ಷಗಳಿಂದ ಪ್ರಧಾನಮಂತ್ರಿಗಳ ಆಶಯ ಏನಿದೆ ಸೂರಿಲ್ಲದವರಿಗೆ ಸೂರನ್ನು ಕೊಡಬೇಕು ಎನ್ನುವ ಆಶಯದಂತೆ ಸುಮಾರು ವರ್ಷಗಳಿಂದ ತೊಂದರೆ ಅನುಭವಿಸುವುದು ಬೇಕಿಲ್ಲ. ನಾನು ನಮ್ಮ ಇಟ್ನಾಳ್‌ರವರ ಜೊತೆಯಲ್ಲಿ ರಾಯಚೂರಿಗೆ ಹೋದಾಗ ಗಂಟೆಗಟ್ಟಲೆ ಕುಳಿತುಕೊಂಡು ಚರ್ಚೆ ಮಾಡಿದೆವು. ಯಾವುದೇ ಜಿಲ್ಲೆಗೆ ಹೋದರೂ ಕೂಡ ಆ ಜಿಲ್ಲೆಯ ಕೆಲಸ ಮುಗಿದ ಮೇಲೆ ಯಾವುದಾದರೂ ತಾಲ್ಲೂಕಿಗೆ ಹೋಗುತ್ತೇವೆ. ಆ ತಾಲ್ಲೂಕಿನಲ್ಲಿ ಯಾವುದಾದರೂ ಒಂದು ಹಳ್ಳಿಯನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ಆ ಹಳ್ಳಿಗೆ ಹೋದಂತಹ ಸಂದರ್ಭದಲ್ಲಿ 25–30 ವರ್ಷದಲ್ಲಿ ಏನಿದೆಯೋ ಒಂದೆರಡು ಪರ್ಸೆಂಟ್ ಕೂಡ ಜಾಸ್ತಿಯಾಗಿಲ್ಲ. ಅಂಕಿ–ಅಂಶಗಳನ್ನು ನೋಡಿದರೆ ಅದಕ್ಕೆ double, triple ಆಗಬೇಕಾಗಿತ್ತು. ಅಂತಹ ಬದಲಾವಣೆಯನ್ನು ತಂದಿದ್ದೇವೆ. ಸನ್ಮಿತ್ರರಾದ ಮಾನ್ಯ ಗೋಪಾಲಸ್ವಾಮಿಯವರು ಏನಿವತ್ತು ಹೇಳುತ್ತಿದ್ದಾರೆ ಅದರಲ್ಲಿ 20 ಮನೆಗಳಲ್ಲಿ ರೋಸ್ಟರ್ ನಿಬಂಧನೆಗಳನ್ನು ಮಾಡಿಲ್ಲ, ಅದನ್ನು ಗಾಳಿಗೆ ತೂರಿದ್ದಾರೆ ಎಂದು 35 ಅಲ್ಲ 50 ಮನೆಗಳು ಬರಲಿ ಒಂದು ಪಂಚಾಯಿತಿಗೆ 30 ಮನೆ, 20 ಮನೆ ಎನ್ನುವುದಕ್ಕಿಂತ ಹೆಚ್ಚಾಗಿ ಕಾನೂನಿನ ಚೌಕಟ್ಟಿನಲ್ಲಿ ಉಳ್ಳವರಿಗೆ ಏನೂ ಆಗಬಾರದು. ಯಾರು ಅರ್ಹರಿದ್ದಾರೆ, ಬಡವರಿದ್ದಾರೆ, ಮನೆಗಾಗಿ ಬಕಪಕ್ಷಿಯಂತೆ ಕಾಯುತ್ತಿರುವವರಿಗೆ ಆದೇಶ ಮಾಡುವುದಕ್ಕೆ ನಮಗೇನೂ ತೊಂದರೆಯಿಲ್ಲ. ಈ ರೀತಿ ಏನಾದರೂ 10 ರೂಪಾಯಿ ಅಪಚಾರವಾಗಿದ್ದರೂ ನನಗೆ ದಯಮಾಡಿ ಮಾಹಿತಿ ನೀಡಿ ನಾನು ತಕ್ಷಣವೇ ಅಧಿಕಾರಿಗಳಿಗೆ ಸೂಚನೆ ಕೊಡುತ್ತೇನೆ. ಏನು 1400ಕ್ಕೂ ಮೇಲ್ಪಟ್ಟ ಅರ್ಜಿಗಳು ಅಲ್ಲಿಂದ ಬಂದಿದೆ ನಾನು ಅಷ್ಟನ್ನೂ ಮಂಜೂರು ಮಾಡುತ್ತೇನೆ. ಯಾರು ಅರ್ಹರಿದ್ದಾರೋ ಅಂತಹವರಿಗೆ ಮಾತ್ರ ಮನೆಗಳನ್ನು ಮಂಜೂರು ಮಾಡುತ್ತೇನೆ. ಅರ್ಹತೆ ಇರಬೇಕು ಮತ್ತು ರೋಸ್ಟರ್ ಫಾಲೋ ಮಾಡಬೇಕು. ಇಲ್ಲದಿದ್ದರೆ ಅದನ್ನು ತನಿಖೆ ಮಾಡಿಸುತ್ತೇನೆ. ತನಿಖೆ ಮಾಡುವಾಗ ತಾವು ಕೆಲವು ನಿಬಂಧನೆಗಳನ್ನು ಕೇಳಿದ್ದೀರಿ ಎಲ್ಲವನ್ನೂ ನಾವು ಕಾನೂನು ಚೌಕಟ್ಟನ್ನು ಹೊರತುಪಡಿಸಿ ಮಾಡುವಾಗ ಅಲ್ಲಿ ಮಾಡುವಂತಹ ಕೆಲವು ಲೋಪಗಳನ್ನು ಸರಿಪಡಿಸಬೇಕೆಂದರೆ, ಇಂತಹ ಕೆಲವು ಗುರುತರವಾದ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ತಕ್ಷಣವೇ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಜಿಲ್ಲಾಧಿಕಾರಿ ಮತ್ತು ಜಿಲ್ಲಾ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ಸ್ವತಃ ಅಲ್ಲಿಗೆ ಹೋಗಿ ನಾನು ಕೂಡ ನಮ್ಮ ಕಛೇರಿಯಿಂದ ಒಬ್ಬರನ್ನು ಕಳುಹಿಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರೇ, ನಮಗೆ ನಮ್ಮದೇ ಆದಂತಹ ಅಧಿಕಾರಿಗಳಿಲ್ಲ. ಪ್ರತಿಯೊಂದಕ್ಕೂ ನಾವು Rural Development and Panchayat Raj department ಮೇಲೆ depend ಆಗಬೇಕು. Urban ಗೆ ಬಂದಾಗ Municipality ಮೇಲೆ depend ಆಗಬೇಕು, ಇನ್ನು ವ್ಯವಸ್ಥೆಯನ್ನು ಸರಿಮಾಡಬೇಕೆಂದಾಗ ಜಿಲ್ಲಾಧಿಕಾರಿಯವರನ್ನು ನೋಡಬೇಕು. ನಮ್ಮ ರಾಜೀವ್ ಗಾಂಧಿ ವಸತಿ ನಿಗಮದಲ್ಲಿ ಕೇವಲ ಒಬ್ಬ Nodal Officer ಇದ್ದಾರೆ. ಅವನು ಎಲ್ಲೋ ಒಂದು ಕಡೆ ಹೋಗಿ ಕಾಲ ಕಳೆಯುತ್ತಾ ಇರುತ್ತಾನೆ. PDO ಗಳಿರಬಹುದು, EO ಗಳಿರಬಹುದು, Revenue Inspector, ತಹಸೀಲ್ದಾರ್ ಇರಬಹುದು, Assistant Commissioner ಇರಬಹುದು, Deputy Commissioner ಇರಬಹುದು ಮತ್ತು CEO ಇರಬಹುದು. ಇವರು ತಮ್ಮ ಕರ್ತವ್ಯದ ಜೊತೆಯಲ್ಲಿ ಬಡವರ ಕೆಲಸವನ್ನು ಮಾಡಬೇಕೆಂದು ನಾನು ಹತ್ತಾರು ಕಾಗದಗಳನ್ನು ಬರೆಯುತ್ತಿದ್ದೇನೆ, ತಮ್ಮಗಳಿಗೂ ಕಳುಹಿಸಿಕೊಡುತ್ತಿದ್ದೇನೆ. ತಮ್ಮ ಶ್ರವಣಬೆಳಗೊಳ ಕ್ಷೇತ್ರದಲ್ಲಿ 1400 ಅಲ್ಲ 1500 ಇರಲಿ ಇನ್ನೂ ಹೆಚ್ಚು ಇದ್ದರೂ ನಾವು ಮಾಡುವುದಕ್ಕೆ ತಯಾರಿದ್ದೇವೆ. ಆದರೆ ಅಪಚಾರವಾಗಿದೆ ಎಂದು ತಾವೇನು ಹೇಳಿದ್ದೀರಿ ಇದನ್ನು ತಕ್ಷಣವೇ ನಾನು ತನಿಖೆ ಮಾಡಿಸುತ್ತೇನೆ, ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

**ಉಪ ಸಭಾಪತಿಯವರು:-** ನಂತರ ಮಾನ್ಯ ತಿಮ್ಮಾಪುರರವರ ಪ್ರಶ್ನೆ. ಒಂದು ನಿಮಿಷದಲ್ಲಿ ತಮ್ಮ ಪ್ರಶ್ನೆ ಮುಗಿಯಬೇಕು.

**ಶ್ರೀ ಎಂ.ಎ. ಗೋಪಾಲಸ್ವಾಮಿ:-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ವಸತಿ ಸಚಿವರೇ, ಕೊಟ್ಟಿರುವ 1400 ಮನೆಗಳಲ್ಲಿ ಶೇ. 90ರಷ್ಟು ಅವ್ಯವಹಾರವಾಗಿದೆ. ಅದಕ್ಕೆ ನಾನೇ ಸಾಕ್ಷಿ. ನಾನು ಆ ನೋಡಲ್ ತಾಲ್ಲೂಕಿನ ಸಹ ಅಧ್ಯಕ್ಷನಾಗಿದ್ದೇನೆ. ಇದು ಕಾನೂನುಬಾಹಿರ ಎಂದು ಮನವಿ ಮಾಡಿದರೂ ಈ ಅವ್ಯವಹಾರವನ್ನು ಮಾಡುತ್ತಿದ್ದಾರೆ. ದಯವಿಟ್ಟು ತಪ್ಪಿತಸ್ಥರನ್ನು suspend ಮಾಡುವುದಕ್ಕೆ ಆದೇಶ ಮಾಡಿ. ಇದರಲ್ಲಿ ಅವ್ಯವಹಾರವಾಗಿಲ್ಲ ಎಂದರೆ ನಾನೇ ವಿಧಾನ ಪರಿಷತ್ತಿನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಆದ್ದರಿಂದ ದಯಮಾಡಿ ಕೂಡಲೇ ಅವರನ್ನು ಸಸ್ಪೆಂಡ್

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಬೇಕು. 1400 ಮನೆಗಳಿಗೆ ತಮ್ಮ Roster System ಪದ್ಧತಿ ಏನಿದೆ? ವಿಧಾನಸಭೆಯ ಸದಸ್ಯರು ಮಾತ್ರ ಶಾಸಕರೇ, ನಾವು ಶಾಸಕರಲ್ಲವೇ?

**ಶ್ರೀ ವಿ. ಸೋಮಣ್ಣ:–** ಮಾನ್ಯ ಗೋಪಾಲಸ್ವಾಮಿಯವರೇ, ಒಂದು ನಿಮಿಷ . . .

**ಶ್ರೀ ಎಂ.ಎ. ಗೋಪಾಲಸ್ವಾಮಿ:–** ತಾವು ಕೂಡ ಮೇಲ್ಮನೆ ಸದಸ್ಯರಾಗಿದ್ದಿರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಕೂಡ ಮೇಲ್ಮನೆ ಸದಸ್ಯರಾಗಿ ಕೆಲಸ ಮಾಡಿದ್ದಾರೆ.

**ಉಪ ಸಭಾಪತಿಯರು:–** ಮಾನ್ಯ ಗೋಪಾಲಸ್ವಾಮಿಯವರೇ, ಮಾನ್ಯ ಸಚಿವರು ಹೇಳುತ್ತಾರೆ.

**ಶ್ರೀ ವಿ. ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಮಾನ್ಯ ಗೋಪಾಲಸ್ವಾಮಿಯವರು ಇನ್ನೂ ಒಂದು ಸಲ ಈ ಸದನಕ್ಕೆ ಆಯ್ಕೆಯಾಗಿ ಬರಲಿ ಎಂದು ನಾನು ಆಸೆ ಪಡುತ್ತೇನೆ. ತಾವು ರಾಜೀನಾಮೆ ಕೊಡುವುದು ಬೇಡ. ದಯಮಾಡಿ ಸರ್ಕಾರ ಬಿಗಿಯಾಗಿದೆ. ನಾನು ಇಷ್ಟು ಮಾತ್ರ ಹೇಳುತ್ತೇನೆ. ಮೇಲ್ನೋಟಕ್ಕೆ ಇನ್ನು 15 ದಿವಸದಲ್ಲಿ ವರದಿಯನ್ನು ತರಿಸುತ್ತೇನೆ. ಸಂಬಂಧಪಟ್ಟ ಅಧಿಕಾರಿ ಅವರೆಷ್ಟೇ ದೊಡ್ಡವರಾದರೂ ಕೂಡ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದರ ಜೊತೆಗೆ, ಬಡವರ ಹಣವನ್ನು ಯಾರಿಗೋ; ತಾವು ಬಹಳ ಚೆನ್ನಾಗಿ ಹೇಳಿದಿರಿ, ಕೊಟ್ಟಿಗೆ ಕಟ್ಟಿಕೊಳ್ಳುವುದು, ಮೇಕೆ, ಹಂದಿ ಗುಡಿಸಲು ಕಟ್ಟಿಕೊಳ್ಳುವುದನ್ನು ನಾನು ಸಾಕಷ್ಟು ನೋಡಿದ್ದೇನೆ. ಕೆಲವು ಕಡೆ ಯಾರು ಆದೇಶ ಮಾಡಬೇಕೋ ಅವರು ಮಾಡದೇ ಬೇರೆ ಬೇರೆಯವರು ಆದೇಶ ಮಾಡಿದ್ದಾರೆ. ಇಂತಹ ಮಾಹಿತಿಗಳನ್ನು ಕೂಡ ಕೆಲವಾರು ವಿಷಯಗಳು ಚರ್ಚೆಗೆ ಬಂದಾಗ ಎಲ್ಲರೂ ಒಂದಾಗಿ ಕೆಲಸ ಮಾಡಿದರೆ ಬಡವರಿಗೆ ಏನಾದರೂ ಒಂದಿಷ್ಟು ತಲುಪಿಸಬಹುದು. ಆ ಕೆಲಸವನ್ನು ತಾವು ಮಾಡುತ್ತಿದ್ದೀರಿ, ತಾವು ಇಲ್ಲಿಯೇ ಇರಬೇಕು. ತಪ್ಪಿತಸ್ಥ ಅವನೆಷ್ಟೇ ದೊಡ್ಡವನಾಗಿರಲಿ prima facie ಕಂಡುಬಂದರೆ, ಅವನು ತಪ್ಪು ಮಾಡಿದ್ದಾನೆ ಎನ್ನುವ ಮಾಹಿತಿ ಇಲ್ಲದೇ ನಾನು ಮಾಡುವುದಕ್ಕಾಗುವುದಿಲ್ಲ. 1400 ಮನೆಯಲ್ಲಿ ಶೇ.90 ರಷ್ಟು ಅವ್ಯವಹಾರ ಎಂದು ಹೇಳುತ್ತಿದ್ದಾರೆ. ಶೇ 0.1ರಷ್ಟು ತಪ್ಪು ಮಾಡಿದ್ದರು ಎಂದರೆ ಅಂತಹವರು ಎಷ್ಟೇ ದೊಡ್ಡವರಾದರೂ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

(ಮುಂದು)

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

(111) 03–02–2021/ 01–10/ ಕೆಹೆಚ್–ಎಂಡಿ

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಚಿವರೇ ಧನ್ಯವಾದಗಳು. ತಮ್ಮಲ್ಲಿ ಮನವಿ ಮಾಡುವುದೇನೆಂದರೆ, ನಾವು ನೋಡಲ್ ತಾಲ್ಲೂಕನ್ನು ಆಯ್ಕೆ ಮಾಡಿಕೊಂಡಿರುವುದರಿಂದ, ಆ ತಾಲ್ಲೂಕಿಗೆ ನಾವು ಸಹ ಅಧ್ಯಕ್ಷರಾಗಿರುತ್ತೇವೆ. ಒಂದು ತಾಲ್ಲೂಕಿನಲ್ಲಿ ಇಬ್ಬರು ವಿಧಾನಸಭಾ ಶಾಸಕರು . .

**ಶ್ರೀ ವಿ.ಸೋಮಣ್ಣ:–** ಮಾನ್ಯ ಸದಸ್ಯರಾದ ಎಂ.ಎ.ಗೋಪಾಲಸ್ವಾಮಿಯವರೇ, ಈ ಸದನದಲ್ಲಿ ಎಂ.ಡಿ.,ಯವರು ಮತ್ತು ಕಾರ್ಯದರ್ಶಿಯವರು ಇದ್ದಾರೆ. ಅವರಿಗೆ ನಾನು ಇವತ್ತೇ ಸೂಚನೆ ಕೊಡುತ್ತೇನೆ. ಇದರ ಬಗ್ಗೆ ವಿಚಾರಣೆಗೆ ಹೋಗುವಾಗ ತಮ್ಮನ್ನು ಕೂಡ ಕರೆದುಕೊಂಡು ಹೋಗುತ್ತೇವೆ. ಸಾಧ್ಯವಾದರೆ ತಾವು ಹೋಗಿ. ಇಲ್ಲದಿದ್ದರೆ ತಮ್ಮ ಮಾಹಿತಿಯನ್ನು ಪಡೆದುಕೊಂಡು ತದನಂತರ ವಿಚಾರಣೆ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡುತ್ತೇವೆ.

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರೇ ಒಂದು ನಿಮಿಷದಲ್ಲಿ ತಾವು ಮಾತನಾಡಿ ಮುಗಿಸಬೇಕು. ತಾವು ಪ್ರಶ್ನೆಯನ್ನು ಮಾತ್ರ ಕೇಳಿ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಯಾವುದೂ ಭಾಷಣ ಮಾಡುವುದಿಲ್ಲ. ರಾಜ್ಯದಲ್ಲಿ ಮನೆಗಳು ಇಲ್ಲದೇ ಇರುವಂತಹ ಎಷ್ಟೋ ಜನರು ಇದ್ದಾರೆ. ಇದರ ಬಗ್ಗೆ ಮಾನ್ಯ ಸಚಿವರು ಸರ್ವೆ ಮಾಡಿಸಿದ್ದಾರೆಯೇ, ಇವರು ಸರ್ವೆ ಮಾಡಿಸಿದ್ದರೆ, ಆ ಸರ್ವೆಯನ್ನು ಬಿಟ್ಟು ಬೇರೆಯವರಿಗೆ ಏಕೆ ಮನೆಗಳನ್ನು ಕೊಡುತ್ತಾರೆ? ನಗರದಲ್ಲಿ ಕಟ್ಟುವಂತಹ ಕೆಲವು ಮನೆಗಳಿಗೆ ಕೇಂದ್ರ ಸರ್ಕಾರದಿಂದ ಅನುದಾನ ಬಂದಿಲ್ಲವೆಂದು ಆ ಮನೆಗಳು ಅರ್ಧಕ್ಕೆ ನಿಂತುಕೊಂಡಿವೆ. ಕೆಲವು ಮನೆಗಳಿಗೆ ಸಾಲ ತೆಗೆದುಕೊಂಡಿದ್ದಾರೆ. ಕೆಲವು ಮನೆಗಳು ಮಳೆಯಿಂದಾಗಿ ಬಿದ್ದುಹೋಗಿವೆ. ಮತ್ತೆ ಏನಾದರೂ ಅಂತಹವರಿಗೆ ಮನೆಗಳನ್ನು ಕೊಡುತ್ತಾರೆಯೇ ಅಥವಾ ಸಾಲ ಮಾಡಿಕೊಂಡು ಅರ್ಧಂಬರ್ಧ ಮನೆಗಳನ್ನು ಕಟ್ಟಿಕೊಂಡಿರುವವರಿಗೆ ಮುಕ್ತಿ ಕೊಡುತ್ತಾರೆಯೇ ಎನ್ನುವ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಮಾನ್ಯ ಸಚಿವರೇ, ಒಂದು ನಿಮಿಷ. ಇನ್ನೂ ಇಬ್ಬರು ಮಾನ್ಯ ಸದಸ್ಯರುಗಳು ಪ್ರಶ್ನೆಯನ್ನು ಕೇಳುತ್ತಾರೆ. ಅದಕ್ಕೆ ಒಟ್ಟಾಗಿ ಉತ್ತರವನ್ನು ಕೊಡಿ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎಂ.ನಾರಾಯಣಸ್ವಾಮಿ (ವಿರೋಧ ಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ವಂದನೆಗಳು. ಮಾನ್ಯ ಸಚಿವರ ಕಾಳಜಿ ನಿಜಕ್ಕೂ ಶ್ಲಾಘನೀಯ. ಯಾರೇ ಆದರೂ ಕೂಡ ಸೂರು ಇಲ್ಲದೇ ಇರುವವರಿಗೆ ಸೂರು ಕೊಡುವಂತಹದ್ದು ಬಹಳ ಉತ್ತಮವಾದ ಕಾರ್ಯಕ್ರಮ. ತಾವು ಮಾಡುತ್ತಿರುವಂತಹ ಆ ಕಾರ್ಯಕ್ರಮವನ್ನು ನಾನು ಶ್ಲಾಘಿಸುತ್ತೇನೆ. ಆದರೆ, ಸ್ಥಳೀಯ ಸಂಸ್ಥೆಯಿಂದ ಆಯ್ಕೆಯಾಗಿ ಬಂದಿರುವಂತಹ ನಮ್ಮ ಕಷ್ಟವನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ಮಾನ್ಯ ಸಚಿವರು ಮೇಲ್ಮನೆಯಲ್ಲಿ ಇದ್ದಂತಹವರು. ನಾವು ನೋಡಲ್ ಜಿಲ್ಲೆಯಲ್ಲಿ ಯಾವ ತಾಲ್ಲೂಕನ್ನು ತೆಗೆದುಕೊಂಡಿರುತ್ತೇವೆಯೋ, ಅಲ್ಲಿ ನಾವು ಉಪಾಧ್ಯಕ್ಷರಾಗಿರುತ್ತೇವೆ. ಕೆಲವೊಂದು ಕಡೆ ಏನಾಗುತ್ತಿದೆ ಎಂದರೆ, ಗ್ರಾಮಸಭೆಗಳನ್ನು ಮಾಡಿ, ಅಲ್ಲಿ ಅರ್ಜಿಗಳನ್ನು ಆಹ್ವಾನಿಸಿ, ಅರ್ಹ ಫಲಾನುಭವಿಗಳನ್ನು ಗುರುತು ಮಾಡಿ ಪಟ್ಟಿಯನ್ನು ಕಳುಹಿಸಿಕೊಟ್ಟರೆ, ಆ ಸ್ಥಳೀಯ ಶಾಸಕರು ಆ ಎಲ್ಲಾ ಪಟ್ಟಿಯನ್ನು ಬದಿಗೊತ್ತಿ, ಇವರೇ ಒಂದು ಪಟ್ಟಿಯನ್ನು ತಯಾರು ಮಾಡಿ, ಇದಕ್ಕೆ ಅಧಿಕಾರಿಗಳಿಂದ ಬಲವಂತವಾಗಿ ಸಹಿಯನ್ನು ಹಾಕಿಸಿಕೊಂಡು, ಇವತ್ತಿನ ದಿವಸ ಅಂತಹವರಿಗೆ ಮನೆಗಳನ್ನು ಕೊಡುವಂತಹ ಕೆಲಸ ಆಗುತ್ತಿದೆ. ನಮ್ಮ ಬೆಂಗಳೂರು ನಗರ ಜಿಲ್ಲೆಯಲ್ಲಿಯೇ ಸುಮಾರು 97 ಗ್ರಾಮ ಪಂಚಾಯಿತಿಗಳು ಇವೆ. ನಾನು ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಹೋಗುತ್ತೇನೆ. ಅಲ್ಲಿ ಸಭೆಗಳನ್ನು ಮಾಡಿ ಈಗಾಗಲೇ ಫಲಾನುಭವಿಗಳನ್ನು ಗುರುತಿಸಲಾಗಿದೆ. ನಾವು ಮಾಡಿರುವಂತಹ ಪಟ್ಟಿಯನ್ನು ಏನು ಮಾಡುತ್ತಾರೆ ಎಂದರೆ, ಕೊನೆಗೆ Roster System ನಲ್ಲಿ ಶೇಕಡಾ 0.1 ರಷ್ಟು ತಪ್ಪದೇ ಕ್ರಮ ಕೈಗೊಳ್ಳುತ್ತೇವೆ ಎಂದು ಮಾನ್ಯ ಸಚಿವರು ಹೇಳುತ್ತಾರೆ. ಶೇಕಡಾ 100 ರಲ್ಲಿ ಶೇಕಡಾ 60 ರಷ್ಟು ತಪ್ಪಾಗಿದೆ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಕೆ.ಸಿ.ಕೊಂಡಯ್ಯನವರೇ, ಈಗಾಗಲೇ ಸಮಯವಾಗಿದೆ. ತಾವು ಹಿರಿಯ ಸದಸ್ಯರಾಗಿದ್ದೀರಿ. ತಾವೇ ನೋಡಿ.

**ಶ್ರೀ ಕೆ.ಸಿ.ಕೊಂಡಯ್ಯ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಈಗಾಗಲೇ ಮನೆಗಳ ವಿಷಯಕ್ಕೆ ಸಂಬಂಧಿಸಿದಂತೆ ಸುದೀರ್ಘವಾಗಿ ತಿಳಿಸಿದ್ದಾರೆ. ಮಾನ್ಯ ಸಚಿವರು ಮಂತ್ರಿಗಳಾಗಿ ತಮ್ಮ discretionary power ನಿಂದ ಕೆಲವು ಪಂಚಾಯಿತಿಗಳಿಗೆ ಎಂ.ಎಲ್.ಎ., ಗಳ ಶಿಫಾರಸ್ಸಿನ ಮೇರೆಗೆ ಮನೆಗಳನ್ನು ಕೊಡುತ್ತಿದ್ದಾರೆ. ಆ ಗ್ರಾಮ ಪಂಚಾಯಿತಿಯಲ್ಲಿ ಫಲಾನುಭವಿಗಳ ಪಟ್ಟಿಯಲ್ಲಿ notify ಆಗಿದ್ದರೆ ಮಾತ್ರ ಮನೆಗಳನ್ನು ಕೊಡಬೇಕೆಂದು ತಮ್ಮ ಸುತ್ತೋಲೆಯಲ್ಲಿ ಇದೆ. ಅದನ್ನು ಬಿಟ್ಟು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾನ್ಯ ಸದಸ್ಯರಾದ ಎಂ.ನಾರಾಯಣಸ್ವಾಮಿಯವರು ಹೇಳಿದ ಹಾಗೆ ಕೆಲವು ಪಂಚಾಯಿತಿಗಳಲ್ಲಿ ಎಂ.ಎಲ್.ಎ., ಗಳೇ ನೇರವಾಗಿ ಪಟ್ಟಿಯನ್ನು ಮಾಡಿಕೊಡುತ್ತಾರೆ. ಅದನ್ನು cross-check ಮಾಡುವುದಕ್ಕೆ ತಮ್ಮ ಹತ್ತಿರ ಏನಾದರೂ mechanism ಇದೆಯೇ? ಏಕೆಂದರೆ, ಪ್ರತಿ ಗ್ರಾಮ ಪಂಚಾಯಿತಿಯೊಳಗೆ houseless ಎಷ್ಟು ಮಂದಿ ಇದ್ದಾರೆ ಎಂದು census ಮಾಡಿದ್ದಾರೆ. ಆ ಪಟ್ಟಿಯ ಮೇಲೆ ಮನೆಗಳನ್ನು ಕೊಡಬೇಕೆಂದು ನಿರ್ದೇಶನವನ್ನು ಕೊಟ್ಟಿದ್ದಾರೆ. ನಾವು ತಮ್ಮ ಅಧಿಕಾರಿಗಳನ್ನು ಕೇಳುತ್ತಿಲ್ಲ. ಇದಕ್ಕೆ discretionary power ಇರುತ್ತದೆ. ದಯವಿಟ್ಟು, ಇದಕ್ಕೆ cross-check ಮಾಡುವುದರ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳುತ್ತೇನೆ.

**ಶ್ರೀ ವಿ.ಸೋಮಣ್ಣ:–** ಮಾನ್ಯ ಸಭಾಪತಿಯವರೇ, ಇದೊಂದು ಬಹಳ ಗಂಭೀರವಾದ ಪ್ರಶ್ನೆಯಾಗಿದೆ. ಮಾನ್ಯ ಆರ್.ಬಿ.ತಿಮ್ಮಾಪೂರರವರು, ಮಾನ್ಯ ಎಂ.ನಾರಾಯಣಸ್ವಾಮಿಯವರು, ಮಾನ್ಯ ಕೆ.ಸಿ.ಕೊಂಡಯ್ಯನವರು ಮತ್ತು ಮಾನ್ಯ ಎಸ್.ಆರ್.ಪಾಟೀಲ್‌ರವರಂತಹ ಹಿರಿಯ ಸದಸ್ಯರು ಸದನದಲ್ಲಿದ್ದಾರೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ಯಾವುದೇ ಒಬ್ಬ ಎಂ.ಎಲ್.ಸಿ., ಯಾವುದಾದರೂ ಒಂದು ಕ್ಷೇತ್ರವನ್ನು ನೋಡಲ್ ತಾಲ್ಲೂಕಾಗಿ ಆಯ್ಕೆ ಮಾಡುವುದಕ್ಕೆ ಅವಕಾಶ ಇದೆ. ಅದಕ್ಕಾಗಿ ಆ ಕ್ಷೇತ್ರದ ಆಗು–ಹೋಗುಗಳಿಗೆ ಮಾನ್ಯ ಶಾಸಕರುಗಳಿಗೆ ಸರ್ಕಾರದ protocol ಇದೆಯೋ, ಅದೆಲ್ಲವೂ ಕೂಡ ತಮಗೆ ಇರುತ್ತದೆ. ಅದೊಂದು limitation. ಸ್ಥಳೀಯ ಸಂಸ್ಥೆಯಿಂದ ಗೆದ್ದಿರುವಂತಹ ಬಹುತೇಕರಿಗೆ ಒಂದು ಜಿಲ್ಲೆ ಇರುತ್ತದೆ. ಎರಡೆರಡು ಜಿಲ್ಲೆಗಳು ಸೇರಿರುತ್ತವೆ. ಇವೆಲ್ಲವೂ ಕೂಡ ಇರುತ್ತವೆ. ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರು ಸಮೀಕ್ಷಾ ಪಟ್ಟಿಯ ಬಗ್ಗೆ ಏನು ಕೇಳಿದ್ದಾರೆ. ಇದರಿಂದಲೇ ತೊಂದರೆ ಆಗಿರುವುದು. ಮಾನ್ಯ ಸದಸ್ಯರಾದ ಎಸ್.ಆರ್.ಪಾಟೀಲ್‌ರವರೇ, ಕೆಲವೊಮ್ಮೆ ನಮಗೆ ಬೇಜಾರು ಆಗುತ್ತದೆ. ನಮ್ಮಲ್ಲಿ ಎಲ್ಲೋ ಕುಳಿತುಕೊಂಡು 25 ಲಕ್ಷ ಜನರು ನಿವೇಶನ ಮತ್ತು ಮನೆ ಇಲ್ಲದೆ ಇರುವವರು ಇದ್ದಾರೆ ಎಂದು ವರದಿಯನ್ನು ಕೊಟ್ಟಿದ್ದಾರೆ. ಆದಾದ ನಂತರ ಕೇಂದ್ರ ಸರ್ಕಾರ ಒಂದು ತಂಡವನ್ನು ಕಳುಹಿಸಿಕೊಡುತ್ತದೆ. ಕೇಂದ್ರ ಸರ್ಕಾರದ ತಂಡಕ್ಕೂ ಮತ್ತು ಈ ತಂಡಕ್ಕೂ ಹೊಂದಾಣಿಕೆಯಾಗಿರುವುದಿಲ್ಲ. ನಾನು ಶಾಸಕನಾಗಿ ಬಂದ ಮೇಲೆ ನಾನೇ ಸ್ವತಃ ಡೆಲ್ಲಿಗೆ ಎರಡು ಬಾರಿ ಹೋಗಿ, ಅದೆಲ್ಲವನ್ನೂ ಮಾಡಿ ಈಗ ಒಂದು ಹಂತಕ್ಕೆ ತಂದಿದ್ದೇನೆ. ನಾನು ಈ ಇಲಾಖೆಯನ್ನು ವಹಿಸಿಕೊಂಡು ಒಂದು ವರ್ಷದ ನಂತರ ಹತ್ತಾರು ಸಭೆಗಳನ್ನು ಮಾಡಿ, ಅನೇಕ ಸುತ್ತುಗಳ Cross-check ಗಳೆಲ್ಲಾ ಮಾಡಿ, ನಾವು ವಾಸ್ತವಾಂಶಗಳನ್ನು ಪತ್ತೆ ಮಾಡದೇ ಹೋದರೆ ಮುಂದೆ ಜನ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮನ್ನು ಶಪಿಸುತ್ತಾರೆ ಎನ್ನುವ ದೃಷ್ಟಿಯಿಂದ ನಾವು ಕೆಲಸವನ್ನು ಮಾಡುತ್ತಿದ್ದೇವೆ. ಇವತ್ತು ಎಂ.ಎಲ್.ಎ.,ಗಳು ಕುಳಿತುಕೊಂಡು ಅವರು ಕಳುಹಿಸಿರುವುದೇ ಪಟ್ಟಿ ಬೇರೆ. ತಾವು ಮಾಡಿರುವ ಪಟ್ಟಿಯೇ ಬೇರೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಆ ರೀತಿ ಮಾಡುವ ಸಾಧ್ಯತೆಯೇ ಇಲ್ಲ. ಮೊನ್ನೆಯ ದಿವಸ ನಾನು ಪಂಚಾಯಿತಿ ಚುನಾವಣೆಯಲ್ಲಿ ಇಲ್ಲದೇ ಇರುವಂತಹ ಸಂದರ್ಭದಲ್ಲಿಯೂ ಕೂಡ ಪಂಚಾಯಿತಿ ಛೇರ್‌ಮನ್ ಮಾಡಬೇಕೆಂದು ಅಲ್ಲ. ಪಂಚಾಯಿತಿಯಲ್ಲಿರುವಂತಹ ಅಧಿಕಾರಿಗಳಾದ Executive Officer, Panchayat Development Officer, Nodal Officer ಗಳು ಯಾರು ಇರುತ್ತಾರೋ ಇವರೆಲ್ಲಾ ಸಭೆಯನ್ನು ಮಾಡಿ, ಆ ಸಭೆಯಲ್ಲಿ ಬರುವಂತಹ ಒಂದು ಪೂರ್ತಿ ತೀರ್ಮಾನ, ಆಯಾಯ ಪಂಚಾಯಿತಿಯಲ್ಲಿ ಯಾರಿಗೆ ಅರ್ಹತೆ ಇದೆ, ಅವರಿಗೆ ಕಳುಹಿಸುವಂತಹ ಕೆಲಸವನ್ನು ಮಾಡಿದ್ದೇವೆ. ಆ ರೀತಿಯಾಗಿ ಮಾನ್ಯ ಸದಸ್ಯರಾದ ಎಂ.ಎ.ಗೋಪಾಲಸ್ವಾಮಿಯವರು ದೂರಿದ್ದಾರೆ. ಆ ರೀತಿ ದೂರು ಏನಾದರೂ ಇದ್ದರೆ ಅದನ್ನು ಕೂಡ ಪರಿಹಾರ ಮಾಡುತ್ತೇವೆ.

ನಾನು ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ಬೇರೆ ಬೇರೆ ರೂಪದಲ್ಲಿ ಆಗಿರುವಂತಹ ಕೆಲವು ಕಹಿ ಘಟನೆಗಳು ಮರುಕಳಿಸಬಾರದೆನ್ನುವ ದೃಷ್ಟಿಯಿಂದ ನಾವು ಇವತ್ತಿನ ದಿವಸ Vigil App ಅನ್ನು ತಂದಿದ್ದೇವೆ. GPS ಜೊತೆಗೆ Vigil App ಅನ್ನು ತಂದು ದುಡ್ಡು ಬಿಡುಗಡೆಯಾಗುವುದಕ್ಕೆ ತೊಂದರೆಯಾಯಿತೆನ್ನುವ ದೃಷ್ಟಿಯಿಂದ ನಾವು ಎರಡು ತಿಂಗಳ ಕಾಲ Vigil App ಅನ್ನು ವಾಪಸ್ಸು ತೆಗೆದುಕೊಂಡು, ಬಡವರಿಗೆ ಮನೆಗಳನ್ನು ಕೊಡುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ಮಾನ್ಯ ಸದಸ್ಯರಾದ ಆರ್.ಬಿ.ತಿಮ್ಮಾಪೂರರವರು ತುಂಬಾ ಚೆನ್ನಾಗಿ ಹೇಳಿದ್ದಾರೆ. ಕೆಲವು ಜನರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಕೆಲವು ಮನೆಗಳು ಬಿದ್ದು ಹೋಗಿವೆ. ಇದರಲ್ಲಿ ಏನಾಗಿದೆ ಎಂದರೆ, ಅರ್ಹತೆ ಇರುವಂತಹವರಿಗೆ ಅನಾನುಕೂಲವಾಗಿದೆ. ಅನರ್ಹರು ಯಾರಿದ್ದಾರೆ, ಅವರು ಎಲ್ಲವನ್ನೂ ಪಡೆದುಕೊಂಡಿರುವಂತಹ ಉದಾಹರಣೆಗಳು ಕೂಡ ಇವೆ. ಈ ರೀತಿ ಸಾಕಷ್ಟು ಆಗಿತ್ತು. ಅದನ್ನು ಸರಿಪಡಿಸುವಂತಹ ಕೆಲಸವನ್ನು ನಾವು ಸಮರೋಪಾದಿಯಲ್ಲಿ ಮಾಡಿದ್ದೇವೆ. ಇಲ್ಲೊಂದು ಅಲ್ಲೊಂದು ಅಂತಹ ಸಂಗತಿಗಳಿದ್ದರೆ ತಾವು ಏನು ದೂರು ಕೊಡುತ್ತೀರಿ, ಅದನ್ನು ಕೂಡ ನಾವು ಪರಿಗಣಿಸುತ್ತೇವೆ. ಇವತ್ತಿನ ದಿವಸ ವಸತಿ ಇಲಾಖೆಯಲ್ಲಿ ವಿಶೇಷವಾಗಿ 'ಪ್ರಧಾನಮಂತ್ರಿ ಆವಾಸ್ ಯೋಜನೆ' ಇರಬಹುದು. 'ಬಸವ ವಸತಿ ಯೋಜನೆ' ಇರಬಹುದು, 'ಡಾ॥ ಬಿ.ಆರ್.ಅಂಬೇಡ್ಕರ್ ವಸತಿ ಯೋಜನೆ' ಇರಬಹುದು, 'ಡಾ॥ ದೇವರಾಜ್ ಅರಸ್ ವಸತಿ ಯೋಜನೆ' ಇರಬಹುದು, 'ಡಾ॥ ವಾಜಪೇಯಿ ವಸತಿ ಯೋಜನೆ'

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇರಬಹುದು, ಈ ಎಲ್ಲಾ ಯೋಜನೆಗಳಲ್ಲಿಯೂ ಕೂಡ ರಾಜ್ಯ ಸರ್ಕಾರದ ಪಾಲುದಾರಿಕೆ ಮತ್ತು ಕೇಂದ್ರ ಸರ್ಕಾರದ ಪಾಲುದಾರಿಕೆಯಲ್ಲಿ ಸಮನ್ವಯತೆಯನ್ನು ಕಾಪಾಡಿ ಕೆಲಸವನ್ನು ಮಾಡುತ್ತೇವೆ. ಎಲ್ಲಿಯೇ ದೂರುಗಳಿದ್ದರೂ ಕೂಡ, ಈ ದೂರುಗಳಿಗೆ ತಾವು ಕೂಡ ಸಹಕಾರ ಕೊಟ್ಟರೆ, ಒಬ್ಬ ಮಂತ್ರಿ ಕೆಲಸ ಮಾಡುವುದಕ್ಕೆ ಕೊನೆಯ ಹಂತದಲ್ಲಿರುವ ಬಡವರಿಗೆ ತಲುಪುವಂತಹ ಒಂದು ವ್ಯವಸ್ಥೆಯಾಗುತ್ತದೆ. ಈ ವ್ಯವಸ್ಥೆಯನ್ನು ನಾನು ಒಬ್ಬನೇ ಮಾಡುವುದಕ್ಕೆ ಸಾಧ್ಯ ಇಲ್ಲ. ಸರ್ಕಾರ ಏನೇ ಮಾಡಬೇಕಾದರೂ ಕೂಡ ಮಾಹಿತಿಯ ಅವಶ್ಯಕತೆ ಕೂಡ ಇದೆ. ಆ ಮಾಹಿತಿಯನ್ನು ತಾವು ಕೊಟ್ಟರೆ ತಕ್ಷಣ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, . . .

**ಉಪ ಸಭಾಪತಿಯವರು:–** ಮಾನ್ಯ ಸದಸ್ಯರಾದ ಅಲ್ಲಂ ವೀರಭದ್ರಪ್ಪನವರೇ, ಈಗಾಗಲೇ ಸಮಯ ಆಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## ಪ್ರಶ್ನೆ ಸಂಖ್ಯೆ: 325

## (ಉತ್ತರವನ್ನು ಲಗತ್ತಿಲಾಗಿದೆ)

**ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ:–** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು ಇದು ನನಗೆ 6ನೇ ಅಧಿವೇಶನವಾಗಿದೆ. ಈ 6ನೇ ಅಧಿವೇಶನದಿಂದ ಇಲ್ಲಿಯವರೆಗೂ ಹಿಂದುಳಿದ ವರ್ಗದಲ್ಲಿ ಇರುವಂತಹ 102 ಜಾತಿಗಳ ಜನಸಂಖ್ಯೆ ಅಥವಾ ವಿಶ್ವಕರ್ಮ ಸಮಾಜದ ಜನಸಂಖ್ಯೆ ಎಷ್ಟಿದೆ? ಸರ್ಕಾರದಿಂದ ಯಾವ ಯಾವ ರೀತಿಯ ಅವಕಾಶಗಳು ಮತ್ತು ಅನುಕೂಲಗಳು ಸಿಗುತ್ತಿವೆ ಎಂಬ ಬಗ್ಗೆ ನಾನು ಒಂದೇ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಆಗಿನಿಂದಲೂ ಕೂಡ ಜಾತಿವಾರು ಜನಗಣತಿ ಪ್ರಶ್ನೆ ಬಂದರೆ, ಹಿಂದೆ ಸಚಿವರಾಗಿದ್ದಂತಹ ಶ್ರೀ ಪುಟ್ಟರಂಗ ಶೆಟ್ಟಿಯವರು ಇದರ ಬಗ್ಗೆ ಆದಷ್ಟು ಬೇಗ ಸದನದಲ್ಲಿ ಮಂಡಿಸುತ್ತೇವೆ ಎನ್ನುವಂತಹ ಒಂದು ಕಾರಣವನ್ನು ಕೊಡುತ್ತಾರೆ. ಆದಾದ ನಂತರ ಇದಕ್ಕೆ ಇನ್ನೊಂದು ಕಾರಣವನ್ನು ಕೊಡುತ್ತಾರೆ. ಅದನ್ನು ಯಾರು ಒಪ್ಪುವಂತಹ ಕಾರಣವಲ್ಲ. ಮಾನ್ಯ ಸಚಿವರಾದ ಬಿ.ಶ್ರೀರಾಮುಲುರವರು ಕಳೆದ ಬಾರಿಯ ಅಧಿವೇಶನದಲ್ಲಿ ಹೇಳುತ್ತಾರೆ. ಆಯೋಗದ ಅಧ್ಯಕ್ಷರನ್ನು ನಾವು ಇನ್ನು ನೇಮಕ ಮಾಡಿಲ್ಲ, ಆಯೋಗದ ಅಧ್ಯಕ್ಷರನ್ನು ನೇಮಕ ಮಾಡಿದ ಕೂಡಲೇ 162 ಕೋಟಿ ರೂಪಾಯಿಗಳನ್ನು ಏನು ಖರ್ಚು ಮಾಡಿದ್ದೇವೆಯೋ, ಆ ಬಗ್ಗೆ ಆಯೋಗದ ವರದಿಯನ್ನು ಮತ್ತು ಜಾತಿವಾರು ಜನಗಣತಿಯನ್ನು ತಂದು ಸದನದಲ್ಲಿ ಮಂಡಿಸುತ್ತೇವೆ ಎಂದು ಹೇಳಿದ್ದರು. ಎರಡು ತಿಂಗಳ ಹಿಂದೆ ಆಯೋಗದ ಅಧ್ಯಕ್ಷರಾಗಿ ಶ್ರೀ ಜಯಪ್ರಕಾಶ್ ಹೆಗ್ಡೆಯವರನ್ನು ಸರ್ಕಾರ ನೇಮಕ ಮಾಡಿದೆ. ಇದರಲ್ಲಿ ನನ್ನದೊಂದು ಪ್ರಶ್ನೆಯೇನೆಂದರೆ, ಶಕ್ತಿ ಇರುವಂತಹ ಸಮಾಜಗಳು ಪಾದಯಾತ್ರೆಯನ್ನು ಮಾಡುತ್ತಾರೆ. ರಾಜಕೀಯ ಸಂಘಟನೆಗಳನ್ನು ಮಾಡುತ್ತಾರೆ ಮತ್ತು ಎಲ್ಲವನ್ನೂ ಮಾಡುತ್ತಾರೆ. ಆದರೆ ಹಿಂದುಳಿದ ವರ್ಗದಲ್ಲಿ ಇರುವಂತಹ 103 ಜಾತಿಗಳು ಏನು ಮಾಡಬೇಕು? ನಮ್ಮ ನಮ್ಮ ಜಾತಿಗಳ ಜನಸಂಖ್ಯೆ ಎಷ್ಟಿದೆ ಎಂದು ಹೇಳಿದರೆ ಸಾಕು, ನಾವು ಎಲ್ಲಿದ್ದೇವೆ ಎಂದು ಗೊತ್ತಾಗುತ್ತದೆ. ದಯಮಾಡಿ ಮಾನ್ಯ ಸಚಿವರು ಈ ವಿಚಾರದಲ್ಲಿ ಹೃದಯ ಮುಟ್ಟಿ ಉತ್ತರವನ್ನು ಕೊಡಬೇಕು. ಅವರು ಕೂಡ ಹಿಂದುಳಿದ ವರ್ಗಕ್ಕೆ ಸೇರಿರುವವರು. ಮತ್ತೆ ಯಾವುದೇ ನೆಪ ಒಡ್ಡುವಂತಹ ಪ್ರಶ್ನೆ ಇಲ್ಲ. ಇದರ ಬಗ್ಗೆ ನಿಖರವಾಗಿ ಹೇಳಬೇಕು. ಯಾವಾಗ ನಮ್ಮ ಜನಸಂಖ್ಯೆಗೆ ಸಂಬಂಧಪಟ್ಟಂತೆ ಜಾತಿವಾರು ಜನಗಣತಿ ಸಂಖ್ಯೆಯನ್ನು ಹೇಳುತ್ತಾರೆ ಅಥವಾ ಹೇಳುವುದಕ್ಕೆ ಆಗದಿದ್ದರೆ ಅದನ್ನು ಸಹ ಹೇಳಲಿ. ನಾವು ಹೇಗಿದ್ದರೂ ಕೈ–ಕೆಲಸಗಳನ್ನು ನಂಬಿ ಬದುಕಿಕೊಂಡು ಬಂದಿರುವಂತಹವರು. ಹೋರಾಟಗಳನ್ನು ನಮ್ಮ ಇಷ್ಟಾನುಸಾರವಾಗಿ ಮಾಡುತ್ತೇವೆ. ಸರ್ಕಾರದ ಬಗ್ಗೆ ತಮಗೆ ಮುಜುಗರ ತರಬೇಕೆನ್ನುವ ಪ್ರಶ್ನೆ ಇಲ್ಲ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದರೆ, ಇದರ ಬಗ್ಗೆ ಎಲ್ಲಿಯವರೆಗೂ ಕೇಳುವುದು? ಎರಡನೆಯ ಪ್ರಶ್ನೆಯೇನೆಂದರೆ, 'ಹಿಂದುಳಿದ ವರ್ಗಕ್ಕೆ ಸೇರುವ ಒಟ್ಟು ಜನಸಂಖ್ಯೆ ಎಷ್ಟು; ಅದೇ ರೀತಿ ಎಸ್.ಸಿ. ಎಸ್.ಟಿ. ಸಾಮಾನ್ಯ ವರ್ಗದ ಶೇಕಡವಾರು ಜನಸಂಖ್ಯೆ ಪ್ರಮಾಣ ಎಷ್ಟು? ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೂ ಸಹ ಒಂದೇ ಮದ್ದು. ಜಾತಿವಾರು ಜನಗಣತಿ ಬಂದರೆ ಅದು ಎಲ್ಲದಕ್ಕೂ ಮದ್ದು. ಆದ್ದರಿಂದ, ದಯಮಾಡಿ ಮಾನ್ಯ ಸಚಿವರು ಸರಿಯಾದ ಉತ್ತರವನ್ನು ಕೊಡಬೇಕು. ಮಾನ್ಯ ಸಚಿವರ ಉತ್ತರ ಇತಿಹಾಸದಲ್ಲಿ ಉಳಿಯಬೇಕು. ಆ ರೀತಿಯಲ್ಲಿ ಉತ್ತರವನ್ನು ಹೇಳಬೇಕೆಂದು ವಿನಂತಿಸುತ್ತೇನೆ.

(ಮುಂದು)

**(112) 03/02/2021/1:20/ಎಸ್‌ಪಿಆರ್/ಎಕೆ**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪಿ.ನಂಜುಂಡಿ ವಿಶ್ವಕರ್ಮರವರು ಕೇಳಿರುವ ಪ್ರಶ್ನೆಗೆ ಉತ್ತರ ಒದಗಿಸಲಾಗಿದ್ದು, ಅವರು ಉಪಪ್ರಶ್ನೆಗಳನ್ನು ಕೇಳಿದ್ದಾರೆ. ಕರ್ನಾಟಕ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದಿಂದ ಕೈಗೊಳ್ಳಲಾದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ಕುರಿತಾದ ವಿವರಗಳನ್ನು ಸರ್ಕಾರವು ಯಾವಾಗ ಪ್ರಕಟಿಸುತ್ತದೆ ಎನ್ನುವುದೇ ಸದಸ್ಯರ ಒಟ್ಟಾರೆ ಭಾವನೆ ಮತ್ತು ಮೂಲೋದ್ದೇಶವಾಗಿದೆ. ಈ ಸದನವು ಪ್ರಾರಂಭವಾಗಿ ಹಲವು ವರ್ಷಗಳಿಂದ ಈ ವಿಷಯದ ಬಗ್ಗೆ ಚರ್ಚೆಯಾಗುತ್ತಿದೆ. ದಿನಾಂಕ 11/04/2015 ರಿಂದ ದಿನಾಂಕ 30/05/2015 ರವರೆಗೆ ರಾಜ್ಯದಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕ ಕುರಿತಾಗಿ ಹಿಂದುಳಿದ ಆಯೋಗಗಳ ಅಧ್ಯಕ್ಷರಾಗಿದ್ದ ಶ್ರೀ ಕಾಂತರಾಜ್‌ರವರ ನೇತೃತ್ವದಲ್ಲಿ ಈ ಹಿಂದೆ ಸಮೀಕ್ಷೆಯು ನಡೆದಿತ್ತು. ಅದನ್ನು 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' ಎಂದು ಸರ್ಕಾರವು ಕರೆಯಿತು; 'ಜಾತಿ ಗಣತಿ' ಎಂಬುದಾಗಿ ನಾವುಗಳು ಕರೆದೆವು. ಈ ಎರಡೂ ಸತ್ಯವಾಗಿವೆ. ಆದರೆ, ಈ ಸಮೀಕ್ಷೆಯ ವರದಿಯನ್ನು ಯಾವಾಗ ಪ್ರಕಟಿಸಲಾಗುತ್ತದೆ ಎಂಬುದರ ಬಗ್ಗೆ ಸದಸ್ಯರು ಪ್ರಶ್ನೆಯನ್ನು ಕೇಳಿದ್ದಾರೆ. ಈ ಹಿಂದೆ ನಾನೂ ಸಹ ಇದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೆನು. ಆ ಸಂದರ್ಭದಲ್ಲಿ ಸರ್ಕಾರಕ್ಕೆ ಸದರಿ ಸಮೀಕ್ಷೆಯ ವರದಿಯು ಸಲ್ಲಿಕೆಯಾಗಿಲ್ಲವೆಂಬುದಾಗಿ ತಿಳಿಸಿದ್ದರು. ಈಗ ಇದು ಮಾನ್ಯ ಸದಸ್ಯರ ಹಾಗೂ ಎಲ್ಲರ ಮುಂದಿರುವ ಪ್ರಶ್ನೆಯಾಗಿದೆ. ಸದರಿ ವರದಿಯನ್ನು ಬಿಡುಗಡೆ ಮಾಡಿಸಬೇಕು ಹಾಗೂ ಅದರಲ್ಲಿನ ಅಂಕಿ-ಅಂಶಗಳು ಗೊತ್ತಾಗಬೇಕು. ಸದರಿ ಸಮೀಕ್ಷೆಗೆ ಸುಮಾರು 289 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು ಹಾಗೂ ಆ ಪೈಕಿ 162 ಕೋಟಿ ರೂಪಾಯಿಗಳು ವ್ಯಯವಾಗಿರುವ ಮಾಹಿತಿಯು ಇದೆ. ಈ ಮಧ್ಯೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಶ್ರೀ ಕಾಂತರಾಜ್ ರವರ ನಿರ್ಗಮನದ ನಂತರ ಶ್ರೀ ಜಯಪ್ರಕಾಶ್ ಹೆಗಡೆರವರು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದಾರೆ. ನಾನು ಅವರೊಂದಿಗೂ ಸಹ ಮಾತನಾಡಿದ್ದೇನೆ. ಸಮೀಕ್ಷಾ ವರದಿಯ ಪೂರ್ಣ ವಿವರಗಳು ಆಯೋಗದಲ್ಲಿ ಲಭ್ಯ ಇವೆ. ಅಧಿಕೃತವಾಗಿ ಸದರಿ ವರದಿಯನ್ನು ಸರ್ಕಾರಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಯು ಬಾಕಿಯಿದೆ. ನಾನು ಆಯೋಗದ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಗಳೊಂದಿಗೆ ಮಾತನಾಡಿದ್ದೇನೆ ಹಾಗೂ ಇದಕ್ಕೆ ಅಂತಿಮ ರೂಪವನ್ನು ಒದಗಿಸಬೇಕೆಂದು ನನ್ನ ಮನಸ್ಸಿನಲ್ಲಿದೆ. ಸದ್ಯದಲ್ಲಿಯೇ ಇದಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 326**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಅಡಗೂರು ಹೆಚ್.ವಿಶ್ವನಾಥ್:-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಪಿ.ನಂಜುಂಡಿ ವಿಶ್ವಕರ್ಮರವರು ಕೇಳಿರುವ ಪ್ರಶ್ನೆಯು ನಾನು ಕೇಳಿರುವ ಪ್ರಶ್ನೆಯು ಒಂದೇ ರೀತಿಯದ್ದಾಗಿವೆ. ಸುಮಾರು 162 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, 1,35,00,000 ಮನೆ-ಬಾಗಿಲುಗಳಿಗೆ ತಿರುಗಿ ಹಾಗೂ 1,383 ಜಾತಿಗಳನ್ನು ಸಮೀಕ್ಷೆ ಮಾಡಿ ತಯಾರಿಸಿರುವ ವರದಿಯು ಸಿದ್ಧಗೊಂಡಿದ್ದರೂ ಸಹ ಸದರಿ ವರದಿಯು ಏಕೆ ಬಿಡುಗಡೆಗೊಳ್ಳುತ್ತಿಲ್ಲ. ಶ್ರೀ ಸಿದ್ಧರಾಮಯ್ಯನವರ ನೇತೃತ್ವದ ಸರ್ಕಾರವು ಈ ಸಮೀಕ್ಷೆಯನ್ನು ಮಾಡಿತ್ತೋ; ಅದೇ ಸರ್ಕಾರವು ಈ ವರದಿಯನ್ನು ಬಿಡುಗಡೆಗೊಳಿಸಲು ಧೈರ್ಯ ಮಾಡಲಿಲ್ಲ. ನಂತರ ಅಧಿಕಾರಕ್ಕೆ ಬಂದ ಸಮ್ಮಿಶ್ರ ಸರ್ಕಾರವೂ ಸಹ ಸದರಿ ವರದಿಯನ್ನು ಪ್ರಕಟಗೊಳಿಸುವ ಧೈರ್ಯ ಮಾಡಲಿಲ್ಲ. ಆ ನಂತರದಲ್ಲಿ ಅಧಿಕಾರಕ್ಕೆ ಬಂದ ನಮ್ಮ ಸರ್ಕಾರವೂ ಸಹ ಈ ವಿಚಾರದಲ್ಲಿ ಏಕೆ ಧೈರ್ಯವನ್ನು ಮಾಡುತ್ತಿಲ್ಲ ಎನ್ನುವುದು ಅರ್ಥವಾಗುತ್ತಿಲ್ಲ. ಇದರಲ್ಲಿ ಎಲ್ಲರೂ ಸಹ ಸಬೂಬು ಹೇಳಿಕೊಂಡು ಹೋಗುತ್ತಿದ್ದಾರೆ. ಈ ವರದಿಯು ಕೇವಲ ಒಂದು ಜಾತಿಗೆ ಮಾತ್ರವೇ ಸಂಬಂಧಪಟ್ಟಿದ್ದಾಗಿಲ್ಲ. ಕರ್ನಾಟಕ ರಾಜ್ಯದಲ್ಲಿ ಬದುಕುತ್ತಿರುವ ಎಲ್ಲಾ ಜಾತಿ, ಜನಾಂಗ, ಧರ್ಮ ಮತ್ತು ಭಾಷಿಕರನ್ನು ಸಮೀಕ್ಷೆ ಮಾಡುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಾಗಿತ್ತು. ಇದರಿಂದ ಸಾಮಾಜಿಕ ಮತ್ತು ಶೈಕ್ಷಣಿಕ ಅಭಿವೃದ್ಧಿ ಎಷ್ಟರ ಮಟ್ಟಿಗೆಯಾಗಿದೆ ಎಂದು ತಿಳಿದಿಲ್ಲ. ಸರ್ಕಾರವು ವರ್ಷವಾರು ಆಯವ್ಯಯಗಳನ್ನು ಮಂಡಿಸುತ್ತಲೇ ಇದೆ. ಆಯವ್ಯಯದ ಹಿನ್ನೆಲೆಯಲ್ಲಿ ಸಮೀಕ್ಷೆಯು ನಡೆದರೆ, ಆಯವ್ಯಯದಲ್ಲಿ ಅನುದಾನಗಳು ಸರಿಯಾದ ರೀತಿಯಲ್ಲಿ ವಿತರಣೆಯಾಗುವುದಕ್ಕೆ ಮತ್ತು ರಾಜಕಾರಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಬಹಳ ಶೀಘ್ರದಲ್ಲಿ ವರದಿಯನ್ನು ಪ್ರಕಟಗೊಳಿಸುವುದಾಗಿ ಮಂತ್ರಿಗಳು ಹೇಳುತ್ತಿದ್ದಾರೆ. ಮತ್ತೊಂದು ಬಾರಿಯೂ ಸಹ 'ಬಹಳ ಶೀಘ್ರದಲ್ಲಿ ವರದಿಯನ್ನು ಪ್ರಕಟಗೊಳಿಸುತ್ತೇವೆ' ಎನ್ನುವಂತಾಗಬಾರದು. ಏಕೆಂದರೆ, ಹಿಂದುಳಿದ ವರ್ಗದವರು ಉಪೇಕ್ಷೆಗೊಳಗಾಗಬಾರದು. ಬಹುಶಃ ಕರ್ನಾಟಕ ರಾಜ್ಯದಲ್ಲಿ ದಿವಂಗತ ದೇವರಾಜ ಅರಸುರವರು ತಂದ ಶ್ರೀ ಹಾವನೂರುರವರ ಅಧ್ಯಕ್ಷತೆಯ ಆಯೋಗವು ಸಲ್ಲಿಸಿರುವ ವರದಿಯು ಒಂದೇ ವಿಧಾನಸಭೆಯನ್ನು ಪ್ರವೇಶ ಮಾಡಿ, ಒಪ್ಪಿಗೆಯನ್ನು ಪಡೆದು ಸಾರ್ವಜನಿಕರಲ್ಲಿ ಬಹಳವಾಗಿ ಸಮರ್ಥವಾಗಿ ಅನುಷ್ಠಾನಗೊಂಡಿತು. The one and only Backward Class Commission Report which entered the Assembly and got the nod

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

was the Havanur Commission Report. ಶ್ರೀ ಚಿನ್ನಪ್ಪ ರೆಡ್ಡಿರವರ ಅಧ್ಯಕ್ಷತೆಯಲ್ಲಿ ತಯಾರಿಸಿದ ವರದಿಯು ವಿಧಾನಸಭೆಯೊಳಗೆ ಪ್ರವೇಶಿಸುವುದಕ್ಕಾಗಲಿಲ್ಲ. ಅದೇ ರೀತಿಯಾಗಿ ಬೇರೆಯವರ ಅಧ್ಯಕ್ಷತೆಯಲ್ಲಿ ತಯಾರಿಸಿದ ವರದಿಗಳಿಗೆ ಒಪ್ಪಿಗೆ ದೊರೆಯಲಿಲ್ಲ. ಹೀಗಾಗಿ ಪ್ರಸ್ತುತ ವರದಿಯೂ ಸಹ ಅದೇ ದಾರಿಯನ್ನು ಹಿಡಿಯಬಾರದು ಎನ್ನುವುದು ನಮ್ಮ ಆಸೆಯಾಗಿದೆ. ಹೀಗಾಗಿ ಈಗಾಗಲೇ ಸಿದ್ಧಗೊಂಡಿರುವ ಸಮೀಕ್ಷಾ ವರದಿಯನ್ನು ಆದಷ್ಟು ಬೇಗ ಜನರ ಮುಂದಿಟ್ಟು ಚರ್ಚೆಗೆ ಅನುವು ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, . . .

**ಉಪಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರವರೇ ಈಗಾಗಲೇ ಸಾಕಷ್ಟು ಸಮಯವಾಗಿದೆ. ಮಾನ್ಯ ಮಂತ್ರಿಗಳು ಇದಕ್ಕೆ ಉತ್ತರಿಸುತ್ತಾರೆ. ಅದು ನಿಮಗೆ ಸರಿಯೆನಿಸಿಲ್ಲವೆಂದಾದರೆ ನೀವು ಪುನಃ ಪ್ರಶ್ನೆಗಳನ್ನು ಕೇಳಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಯಾವ ಸಮಯದೊಳಗೆ ಸಮೀಕ್ಷಾ ವರದಿಯನ್ನು ಮಂಡಿಸುತ್ತಾರೆಂದು ತಿಳಿಸಿದರೆ, ನಾನು ಮಾತನಾಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಅಡಗೂರು ಹೆಚ್.ವಿಶ್ವನಾಥ್‌ರವರಂತಹ ಹಿರಿಯ ಸದಸ್ಯರು ಈ ಸದನದಲ್ಲಿ ಪ್ರಶ್ನೆಯನ್ನು ಕೇಳಿದಾಗ, ಅದಕ್ಕೆ ಉತ್ತರಿಸುವುದೇ ನಮ್ಮ ಸುಯೋಗವೆಂದು ನಾನು ಭಾವಿಸಿದ್ದೇನೆ. ಅಷ್ಟರಮಟ್ಟಿಗೆ ಅವರಿದ್ದಾರೆ. ಏಕೆಂದರೆ ಹಿಂದುಳಿದ ವರ್ಗಗಳ ಬಗೆಗಿನ ಎಲ್ಲಾ ರೀತಿಯ ಸಮಸ್ಯೆಗಳ ಬಗ್ಗೆ ಆಳವಾದ ಅಧ್ಯಯನವನ್ನು ಅವರು ಮಾಡಿದ್ದಾರೆ ಹಾಗೂ ಹೆಚ್ಚು ಅನುಭವವನ್ನು ಹೊಂದಿದ್ದಾರೆ. ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ ಮತ್ತು ಶ್ರೀ ಅಡಗೂರು ಹೆಚ್.ವಿಶ್ವನಾಥ್‌ರವರುಗಳು ಕೇಳಿರುವ ಪ್ರಶ್ನೆಯು ಒಂದೇ ರೀತಿಯದ್ದಾಗಿರುವುದರಿಂದ ಒಂದೇ ರೀತಿಯ ಉತ್ತರವನ್ನು ನೀಡಬೇಕೆಂದು ತೀರ್ಮಾನಿಸಲಾಗಿದೆ.

**ಶ್ರೀ ಹೆಚ್.ಎಂ.ರಮೇಶ ಗೌಡ:–** ಮಾನ್ಯ ಸಭಾಪತಿಯವರೇ, ಸಚಿವರು ಉತ್ತರ ನೀಡುವ ಮುನ್ನ ಈ ವಿಚಾರದಲ್ಲಿ ನಾನು ಸ್ಪಷ್ಟೀಕರಣವೊಂದನ್ನು ಕೇಳುತ್ತೇನೆ. ಜಾತಿವಾರು ಸಮೀಕ್ಷೆ ನಡೆಸಿದ್ದು,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವರದಿಯು ಸಿದ್ಧಗೊಂಡಿದೆ. ಆದರೆ, ಸದರಿ ಸಮೀಕ್ಷೆಯನ್ನು ರಾಜ್ಯ ಅಥವಾ ಕೇಂದ್ರ ಸರ್ಕಾರ ಯಾರು ಮಾಡಬೇಕು ಎನ್ನುವ ಬಗ್ಗೆ ಸಚಿವರು ಮೊದಲು ಸ್ಪಷ್ಟೀಕರಣ ನೀಡಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಮಾನ್ಯ ಸಭಾಪತಿಯವರೇ, ಈ ವಿಚಾರದಲ್ಲಿ ನಮಗೆ ಯಾವುದೇ ರೀತಿಯಾದ ಗೊಂದಲವಿಲ್ಲ. ಮಾನ್ಯ ಅಡಗೂರು ಹೆಚ್.ವಿಶ್ವನಾಥ್‌ರವರು ಹೇಳಿರುವ ಅಂಶಗಳ ಬಗ್ಗೆ ಸ್ಪಷ್ಟತೆ ಇದೆ. ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ಕುರಿತಾಗಿ ಸರ್ಕಾರವು ಶ್ರೀ ಕಾಂತರಾಜುರವರ ಅಧ್ಯಕ್ಷತೆಯ ಆಯೋಗದ ಮುಂದೆ ಹೇಳಿರುವುದು ಹಾಗೂ ಅವರು ಸದರಿ ಸಮೀಕ್ಷೆಯನ್ನು ಮಾಡಿರುವುದು ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಸಂಸ್ಥೆಯ ಮೂಲಕ ಗಣಕೀಕರಣಗೊಳಿಸಿರುವ ಎಲ್ಲಾ ಅಂಕಿ-ಅಂಶಗಳು, ದಾಖಲೆಗಳು ನಮ್ಮ ಬಳಿ ಇವೆ ಹಾಗೂ ಹಿಂದುಳಿದ ವರ್ಗಗಳ ಆಯೋಗದ ವ್ಯಾಪ್ತಿಯಲ್ಲಿಯೂ ಸಹ ಅವುಗಳು ಲಭ್ಯ ಇವೆ. ಸದರಿ ವರದಿಯನ್ನು ಆಯೋಗವು ಸರ್ಕಾರಕ್ಕೆ ಹಸ್ತಾಂತರಿಸಬೇಕಾಗಿತ್ತು; ಆದರೆ, ಬೇರೆ ಬೇರೆ ಕಾರಣಗಳಿಂದಾಗಿ ಅದು ಆಗಿಲ್ಲ. ಅಲ್ಲಿನ ಪರಿಸ್ಥಿತಿಗಳು ಎಲ್ಲರಿಗೂ ಸಹ ತಿಳಿದಿವೆ. ಎಲ್ಲಾ ಪಕ್ಷಗಳು ಆಡಳಿತವನ್ನು ನಡೆಸಿದಾಗ ಈ ಸಂಕಷ್ಟವನ್ನು ಅನುಭವಿಸಿದ್ದಾರೆ. ಈ ಹಿಂದೆ ಶ್ರೀ ಸಿದ್ಧರಾಮಯ್ಯ ಮತ್ತು ಶ್ರೀ ಹೆಚ್.ಡಿ.ಕುಮಾರಸ್ವಾಮಿ ರವರುಗಳು ಮುಖ್ಯಮಂತ್ರಿಗಳಾಗಿದ್ದಾಗ ನಾನೂ ಸಹ ಈ ವರದಿಯ ಬಗ್ಗೆ ಏನು ಮಾಡಬೇಕೆಂದು ಪ್ರಶ್ನೆಯನ್ನು ಕೇಳಿದ್ದೆನು. ಇವತ್ತಿನ ದಿವಸ ನಮ್ಮ ಪಕ್ಷದ ಸರ್ಕಾರವು ಅಧಿಕಾರದಲ್ಲಿ. ಈ ವಿಚಾರದಲ್ಲಿ ನಮಗೆ ಯಾವುದೇ ರೀತಿಯಾದ ಗೊಂದಲಗಳಿಲ್ಲ. ಆದಷ್ಟು ಬೇಗನೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನು ಭೇಟಿ ಮಾಡಿ ಸಮೀಕ್ಷೆಗೆ ಅಂತಿಮ ರೂಪವನ್ನು ನೀಡಬೇಕೆಂಬ ಇಚ್ಛಾ ಶಕ್ತಿ ನಮಗೆ ಇದೆ. ಅದಕ್ಕೆ ಅವಶ್ಯಕವಾದ ವಾತಾವರಣವನ್ನು ನಿರ್ಮಿಸಿ, ಶೀಘ್ರದಲ್ಲಿ ಇದಕ್ಕೊಂದು ಪರಿಹಾರವನ್ನು ಕಂಡು ಹಿಡಿದು, ವರದಿಯನ್ನು ಪ್ರಕಟಿಸುವುದಕ್ಕೆ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಪರಿಸ್ಥಿತಿಯು ಎಲ್ಲರಿಗೂ ತಿಳಿದಿರುವುದರಿಂದ ಎಲ್ಲರೂ ಈ ವಿಚಾರದಲ್ಲಿ ಸಹಕಾರವನ್ನು ನೀಡಬೇಕು. ಇದರ ಬಗ್ಗೆ ಸರ್ಕಾರವು ಸಂಪೂರ್ಣ ಇಚ್ಛಾ-ಶಕ್ತಿಯನ್ನು ಹೊಂದಿದೆ.

ತಿದ್ದುಪಡಿಯಾಗದ ಪ್ರತಿ - ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ 310**
**(ಉತ್ತರವನ್ನು ಲಗತ್ತಿಸಿದೆ)**

**ಶ್ರೀ ಹೆಚ್.ಎಂ.ರಮೇಶಗೌಡ:–** ಮಾನ್ಯ ಸಭಾಪತಿಯವರೇ, ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮವು 1956 ರ ಇಸ್ವಿಯಲ್ಲಿ ಸ್ಥಾಪನೆಗೊಂಡಿದ್ದು, 1970 ನೇ ಇಸ್ವಿಯಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡುವುದರ ಮೂಲಕ ನಿಗಮದಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಲಾಗಿದೆ. ಇಡೀ ರಾಜ್ಯದಲ್ಲಿ ಇವತ್ತಿನ ದಿವಸ ಮೀನುಗಾರಿಕೆಯು ಒಂದು ಉತ್ತಮ ಹಾಗೂ ಲಾಭದಾಯಕವಾದ ಉದ್ದಿಮೆಯಾಗಿದ್ದು, ಸಾಕಷ್ಟು ಜನರಿಗೆ ಕೆಲಸವನ್ನು ನೀಡುವ ಉದ್ಯೋಗವನ್ನಾಗಿ ಮಾರ್ಪಾಡು ಮಾಡಬಹುದು. 1956 ನೇ ವರ್ಷದಲ್ಲಿ ಸ್ಥಾಪಿತಗೊಂಡ ನಿಗಮವು ಇದುವರೆವಿಗೂ ಸಹ ಲಾಭಗಳಿಸುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಕಾರಣ ಹಾಗೂ ಇದರಲ್ಲಿನ ಲೋಪದೋಷಗಳೇನು? ವಿಧಾನಸೌಧದ ಕೂಗಳತೆಯ ದೂರದಲ್ಲಿರುವ ಕಬ್ಬನ್ ಪಾರ್ಕ್‌ನಲ್ಲಿ ಬಹಳ ಉತ್ತಮವಾದ ಮತ್ಸ್ಯದರ್ಶಿನಿಯನ್ನು ಮಾರಾಟ ಮಾಡುವುದಕ್ಕಾಗಿ ಇಡಲಾಗಿದೆ. ದೇಶದ ಪ್ರಧಾನ ಮಂತ್ರಿಗಳು ಪ್ರತಿಯೊಂದು ವ್ಯವಸ್ಥೆಯು 'ಆನ್‌ಲೈನ್' ಮುಖಾಂತರ ಆಗಬೇಕೆಂದು ಹೇಳುತ್ತಿರುತ್ತಾರೆ. ಆದರೆ, ಅಲ್ಲಿ ಇದುವರೆವಿಗೂ ಸಹ ಡಿಜಿಟಲೀಕರಣ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಬೆಂಗಳೂರು ನಗರದಲ್ಲಿರುವ ಹಾಗೂ ವಿಧಾನಸೌಧದ ಬಳಿಯಿರುವ ನಿಗಮವನ್ನು ಡಿಜಿಟಲೀಕರಣ ಮಾಡುವುದಕ್ಕಾಗಿಲ್ಲವೆಂದಾದರೆ, ಇಡೀ ರಾಜ್ಯದಲ್ಲಿನ ಬೇರೆ ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಯಾವ ರೀತಿಯಾಗಿ ಡಿಜಟಲೀಕರಣವನ್ನು ಮಾಡುವುದಕ್ಕಾಗುತ್ತದೆ?

ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಮಾತನಾಡುವ ಸಂದರ್ಭದಲ್ಲಿ, ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳುವುದರಿಂದ ಯಾವ ರೀತಿಯ ಸಮಸ್ಯೆಗಳಾಗುತ್ತವೆ; ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುವ ವ್ಯಕ್ತಿಗೆ ಸರ್ಕಾರದಿಂದ ನಿಗದಿಗೊಂಡಿರುವ ವೇತನದ ಪೈಕಿ ಎಷ್ಟು ಸಂಬಳವನ್ನು ನೀಡಲಾಗುತ್ತದೆ; ಇದರಲ್ಲಿ ಯಾವ ರೀತಿಯಾಗಿ ಟೋಪಿಯನ್ನು ಹಾಕುವ ಕೆಲಸಗಳನ್ನು ಮಾಡಲಾಗುತ್ತದೆ ಎನ್ನುವ ಅಂಶಗಳ ಬಗ್ಗೆ ಪ್ರಸ್ತಾಪಿಸಿದರು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಉಪಸಭಾಪತಿಯವರು:–** ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗಳಿಗೆ ಸಚಿವರು ಉತ್ತರಿಸುತ್ತಾರೆ.

**ಶ್ರೀ ಹೆಚ್.ಎಂ.ರಮೇಶಗೌಡ:–** ಮಾನ್ಯ ಸಭಾಪತಿಯವರೇ, ಸರ್ಕಾರವು ನೀಡಿರುವ ಉತ್ತರದ ಬಗ್ಗೆ ನಾನು ಕೇಳುತ್ತಿದ್ದೇನೆ. ಸಾಕಷ್ಟು ಹುದ್ದೆಗಳು ಈ ನಿಗಮದಲ್ಲಿ ಖಾಲಿ ಇವೆ. ಈ ಬಗ್ಗೆ ನಾನು ಈ ಹಿಂದೆಯೂ ಸಹ ಪ್ರಶ್ನೆಯನ್ನು ಕೇಳಿದ್ದೆನು. ಆಗ ಇಲಾಖೆಯ ಮಂತ್ರಿಗಳು ಬೇರೆ ಇದ್ದರು.

ಕೋವಿಡ್-19 ರ ಪರಿಸ್ಥಿತಿಯನ್ನು ಅಂದಿನ ದಿನ ಹೇಳಲಾಗಿತ್ತು. ಕೋವಿಡ್-19 ರ ನಂತರ ನಿಗಮದಲ್ಲಿ ನೇಮಕಾತಿಯನ್ನು ಮಾಡಿಲ್ಲ. ಈ ಹಿಂದೆಯೂ ಸಹ ಸಾಕಷ್ಟು ಹುದ್ದೆಗಳು ಖಾಲಿ ಇದ್ದವು.

**(ಮುಂದು)**

(113)/3-2-2021/1-30/ಎಲ್ಎಂ/ಎಕೆ

**ಶ್ರೀ ಹೆಚ್,ಎಂ.ರಮೇಶಗೌಡ(ಮುಂದು):-**
ಹಿಂದಿನಿಂದಲೂ 338 ಹುದ್ದೆಗಳು ಖಾಲಿ ಇವೆ, ಇವುಗಳನ್ನು ಯಾವಾಗ ಭರ್ತಿ ಮಾಡುತ್ತೀರಿ?

**ಶ್ರೀ ಎಸ್.ಅಂಗಾರ:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗಳಿಗೆ ಸ್ಪಷ್ಟವಾದ ಉತ್ತರವನ್ನು ಕೊಡಲಾಗಿದೆ. 9 ಘಟಕಗಳಲ್ಲಿ ಕೇವಲ 3 ಘಟಕಗಳು ಲಾಸ್‌ನಲ್ಲಿ ನಡೆಯುತ್ತಿವೆ. ಹೊನ್ನಾವರ, ಕಾರವಾರ ಈ ಘಟಕಗಳು ಲಾಸ್‌ನಲ್ಲಿವೆ. ಈ ಘಟಕಗಳು ಏಕೆ ನಷ್ಟದಲ್ಲಿವೆ ಎನ್ನುವುದಕ್ಕೆ ಕಾರಣಗಳನ್ನು ಕೊಡಲಾಗಿದೆ. ನಷ್ಟದಲ್ಲಿರುವ ಘಟಕಗಳನ್ನು ಅಭಿವೃದ್ಧಿಪಡಿಸುವುದಕ್ಕೆ ಸಂಬಂಧಪಟ್ಟಂತೆ ಯಾವ-ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎನ್ನುವ ಉತ್ತರವನ್ನು ಕೊಡಲಾಗಿದೆ. ಒಟ್ಟು 220 ಜನ ನೌಕರರು ಈ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇದರಲ್ಲಿ ಖಾಯಂ ನೌಕರರು 82 ಜನ, ಇಬ್ಬರು ಎರವಲು ನೌಕರರಾಗಿದ್ದಾರೆ ಮತ್ತು 138 ನೌಕರರು ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿದ್ದಾರೆ. ಈ ಸಂಬಂಧವಾಗಿ ಇಲಾಖೆಯ ನೌಕರರ ಜೊತೆಯಲ್ಲಿ 138 ಹುದ್ದೆಗಳಲ್ಲಿ ಯಾವ-ಯಾವ ಹುದ್ದೆಗಳ ಅವಶ್ಯಕತೆ ಇದೆ ಆ ಹುದ್ದೆಗಳನ್ನು ಭರ್ತಿ ಮಾಡಲು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

**ಶ್ರೀ ಹೆಚ್.ಎಂ.ರಮೇಶಗೌಡ:-** ಮಾನ್ಯ ಸಭಾಪತಿಗಳೆ, ಹಿಂದೆಯು ಸಹ ನಾನು ಈ ಪ್ರಶ್ನೆಯನ್ನು ಕೇಳಿದ್ದೆ. ಆಗಲೂ ಇದೇ ಉತ್ತರವನ್ನು ಕೊಡಲಾಗಿತ್ತು. ಯಾವಾಗ ಭರ್ತಿ ಮಾಡುತ್ತೀರಿ ಎನ್ನುವುದನ್ನು ನಿರ್ಧಿಷ್ಟವಾಗಿ ಒಂದು time duration ಹೇಳಿ. ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳುವ ಅವಶ್ಯಕತೆ ಏನು ಇದೆ? ಏತಕ್ಕೆ ತೆಗೆದುಕೊಳ್ಳುತ್ತೀರಿ?

**ಶ್ರೀ ಎಸ್.ಅಂಗಾರ:-** ಮಾನ್ಯ ಸಭಾಪತಿಗಳೆ, ಈ ಖಾತೆ ನನಗೆ ಈಗ ಬಂದಿದೆ, ಬೇರೆ-ಬೇರೆ ಘಟಕಗಳಿಗೆ ಭೇಡಿ ನೀಡಲು ದಿನಾಂಕಗಳನ್ನು ನಿರ್ಧರಿಸಿಕೊಂಡಿದ್ದೇನೆ. ಭೇಟಿ ಮಾಡಿ ಅಲ್ಲಿಯ ವಾಸ್ತವಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುತ್ತೇನೆ. ಈ ಗುತ್ತಿಗೆ ನೌಕರರನ್ನು ಬಿಟ್ಟು ಬದಲಿ ವ್ಯವಸ್ಥೆ ಮಾಡಲು,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹುದ್ದೆಗಳನ್ನು ಯಾವ ರೀತಿ ಭರ್ತಿ ಮಾಡಿಕೊಳ್ಳಬೇಕು ಎನ್ನುವುದಕ್ಕೆ ಸಂಬಂಧಪಟ್ಟ ಇಲಾಖೆಯವರ ಜೊತೆಯಲ್ಲಿ ಚರ್ಚೆ ಮಾಡಿ, ನಂತರ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಶ್ರೀ ಹೆಚ್.ಎಂ.ರಮೇಶಗೌಡ:-**ಮಾನ್ಯ ಸಭಾಪತಿಗಳೆ, ನಾನು ಸರ್ಕಾರಕ್ಕೆ ಒಂದು ಸಲಹೆಯನ್ನು ಕೊಡಲು ಬಯಸುತ್ತೇನೆ. ತಾವು ಹೊಸದಾಗಿ ಬಂದಿದ್ದೀರಿ. ನಾಳೆ ಮತ್ತೆ ತಾವು ಬದಲಾಗಬಹುದು ಅದು ನನಗೆ ಗೊತ್ತಿಲ್ಲ. ಸರ್ಕಾರ ಬದಲಾಗಬಹುದು. ಮಾನ್ಯ ಪ್ರಧಾನ ಮಂತ್ರಿಗಳು ಎರಡು ಕೋಟಿ ಹುದ್ದೆಗಳನ್ನು ಸೃಷ್ಟಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಮೀನುಗಾರಿಕೆ ಇಲಾಖೆಯನ್ನು ಸರಿಯಾಗಿ ಅಭಿವೃದ್ಧಿಪಡಿಸಿದರೆ ಬೆಂಗಳೂರು ನಗರದಲ್ಲಿಯೇ ಎರಡು ಸಾವಿರ ಜನರಿಗೆ ಕೆಲಸವನ್ನು ಕೊಡಬಹುದು.

**ಶ್ರೀ ಎಸ್.ಅಂಗಾರ:-** ಮಾನ್ಯ ಸದಸ್ಯರು ಹೇಳಿರುವ ಸಲಹೆಯನ್ನು ಪರಿಶೀಲನೆ ಮಾಡುತ್ತೇವೆ.

**(ಈ ಹಂತದಲ್ಲಿ ಮಾನ್ಯ ಸಭಾಪತಿಗಳು ಪೀಠವನ್ನು ಅಲಂಕರಿಸಿದರು)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 291**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಒದಗಿಸಿದ್ದಾರೆ. ಮಾನ್ಯ ಸದಸ್ಯರಾದ ಗೋಪಾಲಸ್ವಾಮಿಯವರು ಕೇಳಿರುವ ಪ್ರಶ್ನೆಗೆ ಸಂಬಂಧವಾಗಿ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಪ್ರಶ್ನೆಗೂ ಸ್ಪಷ್ಟವಾದ ಮತ್ತು ಸುದೀರ್ಘವಾದ ಉತ್ತರವನ್ನು ನೀಡಿದ್ದಾರೆ. 2017-18ನೇ ಸಾಲಿನವರೆಗೆ 6,04,386 ಫಲಾನುಭವಿಗಳನ್ನು ಆಯ್ಕೆ ಮಾಡಿ ಮನೆಗಳನ್ನು ಕಟ್ಟಿ ಕೊಡುವ ಕಾಮಗಾರಿಗೆ ಆದೇಶವನ್ನು ನೀಡಲಾಗಿದೆ. ಇದರಲ್ಲಿ 2.49,747 ಮನೆಗಳು ಪೂರ್ಣಗೊಂಡಿವೆ. ಪೂರ್ಣಗೊಳ್ಳದ ಫಲಾನುಭವಿಗಳು ನೋವಿನಲ್ಲಿದ್ದಾರೆ. ನಮ್ಮ ಕೊಪ್ಪ ಗ್ರಾಮದಲ್ಲಿ 127 ಮನೆಗಳಿಗೆ ತಾವು ಮಂಜೂರಾತಿ ಕೊಟ್ಟಿರುವ ವಿವರವಿದೆ. 1 ಮತ್ತು 2 ಕಂತುಗಳನ್ನು ಕೊಟ್ಟಿದ್ದಾರೆ. ಆದರೆ 3 ಮತ್ತು 4 ನೇ ಕಂತುಗಳನ್ನು ಕಳೆದ 10 ತಿಂಗಳಿಂದ ಕೊಟ್ಟಿರುವುದಿಲ್ಲ. ಆದರೆ ಉತ್ತರದಲ್ಲಿ ಕಳೆದ 10 ತಿಂಗಳಿನಿಂದ ಒಟ್ಟು 513.65 ಕೋಟಿಗಳ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎಂದು ಹೇಳಿದ್ದಾರೆ. ಹಾಗಾದರೆ 10 ತಿಂಗಳಿನಿಂದ ಯಾವ ಫಲಾನುಭವಿಗಳಿಗೂ ಅನುದಾನವನ್ನು ತಲುಪಿಸಲು ಸಾಧ್ಯವಾಗಿರುವುದಿಲ್ಲ ಏಕೆ? ಮನೆ ಕಟ್ಟುತಿರುವವರು ಬಡವರು, ಅವರ ಪರಿಸ್ಥಿತಿ ದೇವರಿಗೆ ಪ್ರೀತಿ. ಹೀಗಾದರೆ ಅವರು ಮನೆಗಳನ್ನು ಪೂರ್ಣಗೊಳಿಸುವುದು ಯಾವಾಗ? ಪೂರ್ಣಗೊಳಿಸಿರುವವರು ಸಾಲ, ಬಡ್ಡಿ ಎಂದು ಖಾತೆಗೆ ಸಿಕ್ಕಿಕೊಂಡಿರುತ್ತಾರೆ. ಇದರ ಬಗ್ಗೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕು.

**ಶ್ರೀ ವಿ.ಸೋಮಣ್ಣ:-**ಮಾನ್ಯ ಸಭಾಪತಿಗಳೆ, ಹಿರಿಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡರ ಪ್ರಶ್ನೆಗೆ ಉತ್ತರವನ್ನು ಕೊಡಲ್ಪಾಗಿದೆ. ಅವರು ಕೇವಲ ಹತ್ತು ತಿಂಗಳ ವಿವರವನ್ನು ಕೇಳಿದ್ದಾರೆ. ಅದಕ್ಕೆ ಸಿಮೀತವಾಗಿ ಉತ್ತರವನ್ನು ಕೊಟ್ಟಿದ್ದೇವೆ. 6,04,386 ಫಲನಾನುಭವಿಗಳನ್ನು ಆಯ್ಕೆ ಮಾಡಿದ್ದೇವೆ. ಆದರೆ ಇದಕ್ಕಿಂತ ಮುಂಚೆ ಇದ್ದಿದ್ದು, 15.47,000 ಮನೆಗಳನ್ನು ಆಯ್ಕೆ ಮಾಡಲಾಗಿತ್ತು. ಅದರಲ್ಲಿ ಸರಳೀಕರಣ ಮಾಡಿದ್ದೇವೆ. ನಾನು ಮಂತ್ರಿಯಾದ ಮೇಲೆ ಇಲ್ಲಿಯವರೆಗೆ 1,700 ಕೋಟಿ ರೂ.ಗಳ ಅನುದಾನವನ್ನು ಹಂತ-ಹಂತವಾಗಿ ಬಿಡುಗಡೆ ಮಾಡಿದ್ದೇವೆ. ತಾವು 10 ತಿಂಗಳ ವಿವರವನ್ನು ಕೇಳಿದ್ದೀರಿ ಅದಕ್ಕೆ ಸಂಬಂಧಪಟ್ಟ ಹಾಗೆ ಹೇಳುತ್ತಿದ್ದೇವೆ. ನಾವು ಬಂದ ಮೇಲೆ Vigil App ಮಾಡಿದ್ದೇವೆ. ಆ Vigil App ಕೊಟ್ಟಮೇಲೆ ಜಿಪಿಎಸ್ ಗೆ ಅಳವಡಿಸುವಂತಹ ಕೆಲಸವನ್ನು ಮಾಡಲಾಗಿದೆ. ಮೊದಲು ಜಿಪಿಎಸ್ ಅವರೆ ಅಳವಡಿಸಬೇಕಾಗಿತ್ತು. ಇದರಿಂದ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಚಿತುಜ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಲಾಗುತ್ತಿತ್ತು. ಂತರುಜ ಮಾಡುತ್ತಿರುವುದನ್ನು ಅರ್ಥ ಮಾಡಿಕೊಂಡು ನಾನು ನಮ್ಮ ಕಾರ್ಯದರ್ಶಿಯವರು ಮತ್ತು ವ್ಯವಸ್ಥಾಪಕ ನಿರ್ದೇಶಕರು ಕುಳಿತು ಚರ್ಚೆ ಮಾಡಿ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ. ಯಾರ ಮನೆಗಳಿಗೆ ಜಿಪಿಎಸ್ ಅವಳವಡಿಸಿ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ ಅವರಿಗೆ 3 ಮತ್ತು 4ನೇ ಕಂತು ಬಂದಿಲ್ಲ ಆ ವಿವರವನ್ನು ಮಾನ್ಯ ಸದಸ್ಯರು ಕೊಟ್ಟರೆ ಒಂದು ತಿಂಗಳ ಸಮಯದಲ್ಲಿ ಯಾವ-ಯಾವ ಮನೆಗಳು ಈ ರೀತಿ ನಿಂತಿವೆ ಅವುಗಳಿಗೆ ಗುರುಟ ಂರಿತಿ ಮಾಡಿ ಜಿಪಿಎಸ್ ಮಾಡಿಕೊಡಲಾಗುತ್ತದೆ. ಮಾಡದೆ ಇರುವುದು ಸ್ವಲ್ಪ ಇವೆ. ಅದಕ್ಕಾಗಿ ಈಗ Vigil App ನ್ನು ಮೂರು ದಿನಗಳ ಹಿಂದೆ ತೆಗೆಯಲಾಗಿದೆ. ಮಾರ್ಚ್ 31ರೊಳಗೆ ಜಿಪಿಎಸ್ ನಲ್ಲಿ ಏನು ಇವೆ ಅವೆಲ್ಲವನ್ನು ಬಿಡುಗಡೆ ಮಾಡಲು ಆಲೋಚನೆ ಮಾಡಿದ್ದೇವೆ. ತಮ್ಮ ಕೊಪ್ಪ ಗ್ರಾಮದಲ್ಲಿ ನೂರು ಚಿಲ್ಲರೆ ಮನೆಗಳಿಗೆ ಅನುದಾನ ಬಂದಿಲ್ಲ ಎಂದು ಹೇಳಿದ್ದೀರಿ, ಅದು 6,04,386 ಫಲಾನುಭವಿಗಳ ಪಟ್ಟಿಯಲ್ಲಿ ಇದ್ದರೆ ದಯಮಾಡಿ ಲಿಸ್ಟ್‌ನ್ನು ಕಳುಹಿಸಿ, ತಾವು ಲಿಸ್ಟ್ ಕಳುಹಿಸಿದ ಒಂದು ಗಂಟೆಯಲ್ಲಿ ಅವರ ಖಾತೆಗೆ RTGS ಮಾಡಿಸುವ ವ್ಯವಸ್ಥೆಯನ್ನು ಮಾಡುತ್ತೇನೆ. ನನ್ನ ಎಲ್ಲಾ ಸದಸ್ಯರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದು, housing ಎನ್ನುವುದು ಬಹಳ ಸೂಕ್ಷ್ಮವಾದ ವಿಚಾರ. ಇದು ಬಡವರಿಗೆ ಕೊಡುವಂತಹ ವ್ಯವಸ್ಥೆ. ಇದರ ಬಗ್ಗೆ ಮಾನ್ಯ ಸದಸ್ಯರಾದ ತಿಮ್ಮಾಪೂರರವರು ಬಹಳ ಚೆನ್ನಾಗಿ ಬೆಳಕು ಚೆಲ್ಲಿದರು. ನಾನು ಎಲ್ಲಾ ಸುತ್ತಾಡಿ ತಿಳಿದುಕೊಂಡಿದ್ದೇನೆ. ಆದರೂ ಕೂಡಾ ನನಗೆ ಇನ್ನು ಸರಿಯಾಗಿ ತಿಳಿದುಕೊಳ್ಳಲು ಸಾಧ್ಯವಾಗಿರುವುದಿಲ್ಲ. ಇನ್ನೊಂದು ವಿಚಾರವನ್ನು ಗಮನಕ್ಕೆ ತರುತ್ತೇನೆ, ಮಂಡ್ಯ ಜಿಲ್ಲೆಯಲ್ಲಿ ಸಭೆಗಳನ್ನು ಮಾಡಲಾಗುತ್ತದೆ. ಆದರೆ ಹಳ್ಳಿಗಳಿಗೆ ಹೋದಾಗ ನಮ್ಮ  ಮನೆಗಳು ಎಲ್ಲಿ ನಡೆಯುತ್ತಿವೆ ಎಂದು ನನ್ನ ಹಿಡಿದು ಯಾರು ನೋಡುವ ಪರಿಸ್ಥಿತಿ ಇರಲಿಲ್ಲ. ಅದಕ್ಕಾಗಿ ಇವರು ಅಲ್ಲಲ್ಲಿ ಇದರ ಬಗ್ಗೆ ಜಾಗೃತಿಯನ್ನು ಮೂಡಿಸುವಂತಹ ಕೆಲಸವನ್ನು ಮಾಡಬೇಕು. ವಿಧಾನ ಪರಿಷತ್ತಿನ ಸದಸ್ಯರು ಇರಬಹುದು, ಜಿಲ್ಲಾ ಪಂಚಾಯಿತಿ ಸದಸ್ಯರು, ಅಧ್ಯಕ್ಷರು, ಚುನಾಯಿತ ಪ್ರತಿನಿಧಿಗಳಿಗೂ ಬಡವನ ಬವಣೆಯನ್ನು ನೀಗಿಸುವಂತಹ ಜವಾಬ್ದಾರಿ ನಿಮಗೂ ಇದೆ.  ಯಾವ ಫಲಾನುಭವಿಗಳಿಗೆ ಅನುದಾನ ತಲುಪಿರುವುದಿಲ್ಲ ಅದರ ಪಟ್ಟಿಯನ್ನು ಕೊಟ್ಟರೆ ತಕ್ಷಣ RTGS ಮುಖಾಂತರ ಅವರ ಖಾತೆಗೆ ಅನುದಾನವನ್ನು ತಲುಪಿಸುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಗಳೇ, ಮಾನ್ಯ ಮಂತ್ರಿಗಳಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಪ್ರಶ್ನೆ ಸಂಖ್ಯೆ: 270**

**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಪ್ರಸನ್ನಕುಮಾರ್:-** ಮಾನ್ಯ ಸಭಾಪತಿಗಳೆ, ಉತ್ತರವನ್ನು ಕೊಟ್ಟಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ 32 ಪ್ರಸ್ತಾವನೆಗಳು ಸ್ವೀಕೃತವಾಗಿರುತ್ತವೆ. ಅದರಲ್ಲಿ 19 ಗ್ರಾಮಗಳಿಗೆ ಈಗಾಗಲೇ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ ಎಂದು ಹೇಳಿದ್ದಾರೆ. ಒಂದು ಗ್ರಾಮಕ್ಕೆ ಪ್ರಾಥಮಿಕ ಅಧಿಸೂಚನೆಯನ್ನು ಹೊರಡಿಸಲಾಗಿದೆ ಎಂದು ಹೇಳಿದ್ದಾರೆ. ಇನ್ನು 12 ಗ್ರಾಮಗಳ ಪ್ರಸ್ತಾವನೆಗಳಲ್ಲಿ ಸಂಪೂರ್ಣವಾದ ಮಾಹಿತಿ ಇಲ್ಲ ಅದಕ್ಕಾಗಿ ಅವುಗಳನ್ನು ಹಾಗೆ ಇಟ್ಟುಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಈ ಕೆಲಸ ಬಹಳ ನಿಧಾನಗತಿಯಲ್ಲಿ ನಡೆಯುತ್ತಿದೆ. ಜಿಲ್ಲಾಧಿಕಾರಿಗಳೆ ಜಿಲ್ಲೆಯಿಂದ ಪ್ರಸ್ತಾವನೆಗಳನ್ನು ಸರಿಯಾಗಿ ಕಳುಹಿಸದಿದ್ದರೆ ಇನ್ನು ಯಾರಿಗೆ ಕೇಳಬೇಕು? ಯಾರಿಗೆ ಹೇಳಬೇಕು ನಾವು? ಇಷ್ಟೆ ಅಲ್ಲ ಇನ್ನು ವಡ್ಡರಹಟ್ಟಿ, ತಾಂಡಾಗಳು, ಗೊಲ್ಲರಹಟ್ಟಿ, ಮಜರೆಗಳು ಬಹಳಷ್ಟು ಇವೆ. ಇವೆಲ್ಲವುಗಳನ್ನು ತಕ್ಷಣ ಸರ್ಕಾರ ಕ್ರಮ ತೆಗೆದುಕೊಂಡು ಕಂದಾಯ ಗ್ರಾಮಗಳಾಗಿ ಮಾಡುವುದರ ಮೂಲಕ ಜನರಿಗೆ ದಾಖಲೆಗಳು ಸಿಗುವ ರೀತಿಯಲ್ಲಿ ಮಾಡಬೇಕು ಎಂದು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

**ಶ್ರೀ ಆರ್.ಅಶೋಕ್:-** ಮಾನ್ಯ ಸಭಾಪತಿಗಳೆ, ಮಾನ್ಯ ಸದಸ್ಯರಾದ ಶ್ರೀ.ಆರ್.ಪ್ರಸನ್ನಕುಮಾರರವರು ಜನಪರವಾದ ಪ್ರಶ್ನೆಯನ್ನು ಕೇಳಿದ್ದಾರೆ. ನಿಜವಾಗಿಯು ಬಹಳ ವರ್ಷಗಳಿಂದ ಮಜರೆ, ಕ್ಯಾಂಪ್, ತಾಂಡಾ, ಗೋಲ್ಲರಹಟ್ಟಿ, ವಡ್ಡರಹಟ್ಟಿ, ಕಾಲೋನಿ ಈ ಪ್ರದೇಶಗಳಲ್ಲಿ ಜನರು ವಾಸ ಮಾಡುತ್ತಿದ್ದಾರೆ. ಎಲ್ಲಿವರೆಗೆ ಸರ್ಕಾರ ಘೋಷಣೆ ಮಾಡುವುದಿಲ್ಲ ಅಲ್ಲಿಯವರಿಗೆ ಆ ಜನವಸತಿ ದಾಖಲೆಗಳಲ್ಲಿ ಎಂಟ್ರಿ ಆಗುವುದಿಲ್ಲ. ಶಿವಮೊಗ್ಗ ವಿಚಾರವನ್ನು ಕೇಳಿದ್ದಾರೆ. ಅದಕ್ಕೆ ಉತ್ತರವನ್ನು ಕೊಡಲಾಗಿದೆ.

(ಮುಂದು)

(114)03-02-2021(01-40)ಬಿಎಸ್‌ಡಿ-ಆರ್‌ಎನ್

**ಶ್ರೀ ಆರ್. ಅಶೋಕ್ (ಮುಂದು):-**

ಮಾನ್ಯ ಸದಸ್ಯರ ಪ್ರಶ್ನೆ ಬಂದ ನಂತರ ನಾನು ಇವತ್ತು ಅಧಿಕಾರಿಗಳ ಜೊತೆ ಸಭೆ ಮಾಡಿದ್ದೇನೆ. ಈಗಾಗಲೇ ಆರ್‌ಡಿಪಿಆರ್ ಇಲಾಖೆಯವರು ಸುಮಾರು 26 ಸಾವಿರಕ್ಕೂ ಹೆಚ್ಚು ಇವೆ ಎಂದು ಹೇಳಿದೆ. ಇದರಲ್ಲಿ ಒಂದು ಮಾನದಂಡ ಏನೆಂದರೆ, ಘೋಷಣೆ ಮಾಡಲು ಸುಮಾರು 50 ಕುಟುಂಬಗಳು ಹಾಗೂ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

250 ಜನ ವಾಸವಾಗಿರಬೇಕು. ಗ್ರಾಮಕ್ಕೆ 100 ಎಕರೆ ಜಮೀನಿನ ವಿಸ್ತೀರ್ಣ ಇದ್ದು, ಮೂಲ ಗ್ರಾಮ ಠಾಣಾ ವ್ಯಾಪ್ತಿಯಿಂದ ಒಂದು ಕಿ.ಮೀ ವಿಸ್ತೀರ್ಣದ ವ್ಯಾಪ್ತಿಯಲ್ಲಿರಬೇಕು. ಈ ರೀತಿ ಇದ್ದರೆ ಮಾತ್ರ ಕಂದಾಯ ಗ್ರಾಮ ಎಂದು ಘೋಷಣೆ ಮಾಡಲು ಸಾಧ್ಯವಿದೆ. ಇಡೀ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಆದ್ಯತೆ ಮೇಲೆ ಮಾಡಬೇಕೆಂದು ಪತ್ರ ಬರೆಯುತ್ತೇನೆ. ಇಡೀ ರಾಜ್ಯದಲ್ಲಿ ಜಿಲ್ಲಾಧಿಕಾರಿಗಳಿಗೆ 2,761 ಪ್ರಸ್ತಾವನೆಗಳು ಬಂದಿದ್ದು, 1,419 ಗ್ರಾಮಗಳಿಗೆ ಮಾತ್ರ ಅಧಿಸೂಚನೆ ಹೊರಡಿಸಲಾಗಿದೆ. ಇನ್ನೂ ಹೊರಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತಿದ್ದು, ಇದರಿಂದ ಸಮಸ್ಯೆ ಬಗೆಹರಿಯುವುದಿಲ್ಲ. ಇನ್ನೂ ಸಮಸ್ಯೆ ಜಾಸ್ತಿ ಇದ್ದು, ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮೂರು ತಿಂಗಳ ಸಮಯ ನೀಡಿ, ಈ ಅವಧಿಯೊಳಗೆ ಇಡೀ ರಾಜ್ಯದಲ್ಲಿ ಕಂದಾಯ ಗ್ರಾಮಗಳಲ್ಲಿ ವಾಸ ಮಾಡುವವವರಿಗೆಲ್ಲಾ ರೀತಿಯ ಅವಕಾಶ ಇದೆ. Pension ಇರಬಹುದು, ತಠಣಜಡಿ identification card ವ್ಯವಸ್ಥೆ ಇರಬಹುದು, ಇವೆಲ್ಲವನ್ನೂ ಮಾಡಬೇಕಾಗುತ್ತದೆ. ಆ ದೃಷ್ಟಿಯಿಂದ ಆದ್ಯತೆ ಮೇಲೆ ತೆಗೆದುಕೊಳ್ಳಬೇಕು. ಈ ಪ್ರಶ್ನೆ ಬಂದ ಮೇಲೆ ಇಡೀ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಮೂರು ತಿಂಗಳೊಳಗೆ ಅವಶ್ಯಕತೆ ಇರುವಲ್ಲಿ ಕಂದಾಯ ಗ್ರಾಮ ಎಂದು ಘೋಷಿಸಲು ಸೂಚನೆ ಕೊಡುತ್ತೇನೆ.

**ಶ್ರೀ ಆರ್. ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ಕ್ರಮ ತೆಗೆದುಕೊಳ್ಳುವ ಬಗ್ಗೆ ಮಾನ್ಯ ಸಚಿವರು ತಿಳಿಸಿದ್ದು, ಅದರಲ್ಲಿ ಷರತ್ತುಗಳ ಬಗ್ಗೆ ಹೇಳುವಾಗ 100 ಎಕರೆ ಇರಬೇಕು ಎಂದು ಹೇಳಿದರು. ಹಟ್ಟಿಗಳಲ್ಲಿ 100 ಎಕರೆ ಇರುತ್ತದೋ, ಇಲ್ಲವೋ ಗೊತ್ತಿಲ್ಲ.

**ಶ್ರೀ ಆರ್. ಅಶೋಕ್:–** ಅಂದರೆ ವ್ಯವಸಾಯ ಮಾಡುವ ಜಮೀನು 100 ಎಕರೆ ಇರಬೇಕು.

**ಶ್ರೀ ಆರ್. ಪ್ರಸನ್ನ ಕುಮಾರ್:–** ಮಾನ್ಯ ಸಭಾಪತಿಯವರೇ, ವ್ಯವಸಾಯ ಮಾಡುವ ಜಮೀನು ಇರುತ್ತದೆ. ಆದ್ದರಿಂದ ಆದಷ್ಟು ಬೇಗ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ಬೇಗ ಮಾಡುವ ಮಾನ್ಯ ಸಚಿವರ ಕಾಳಜಿಗೆ ನಾನು ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಇದು ದಾಖಲೆಯಲ್ಲಿಯೇ ಇರದೇ, ಇಷ್ಟೊಂದು ನಿಧಾನ ಗತಿಯಾದರೆ ಬಹಳ ತೊಂದರೆಯಾಗುತ್ತದೆ. ಈಗ initiate ತೆಗೆದುಕೊಂಡಿರುವಂತೆ ಬೇಗ ಮಾಡಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸದಸ್ಯರು ಪ್ರಶ್ನೆ ಹಾಕಿದ ಇಡೀ ರಾಜ್ಯದಲ್ಲಿ ಮಾಡಬೇಕೆಂದು ಗಮನಹರಿಸುತ್ತಿದ್ದೇನೆ. ಮಾನ್ಯ ಸದಸ್ಯರು ಶಿವಮೊಗ್ಗ ಜಿಲ್ಲೆಗೆ ಮಾತ್ರ ಪ್ರಶ್ನೆ ಕೇಳಿದ್ದು, ಇಡೀ ರಾಜ್ಯದಲ್ಲಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆಗುವಂತೆ ಇನ್ನೊಂದು ವಾರದಲ್ಲಿ ಪತ್ರ ಬರೆದು, ಮೂರು ತಿಂಗಳ ಗಡುವು ಕೊಡುತ್ತೇನೆ. ಇದರ ಬಗ್ಗೆ ಡಿಜತುಜತಿ meeting ಮಾಡಲು ಹೇಳಿ, ಆದ್ಯತೆ ಮೇಲೆ ಮಾಡುವಂತೆ ಸೂಚಿಸುತ್ತೇನೆ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಶ್ನೆ ಸಂಖ್ಯೆ: 295**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಉತ್ತರವನ್ನು ಒದಗಿಸಿದ್ದಾರೆ. ನಾನು ಬೆಳಗಾವಿ ವಿಭಾಗ ವ್ಯಾಪ್ತಿಯಲ್ಲಿನ ಕೃಷಿ ಇಲಾಖೆಯ ಅಧೀನದ ಕಛೇರಿಗಳಲ್ಲಿ ಒಟ್ಟು ಮಂಜೂರಾದ ಹುದ್ದೆಗಳು ಹಾಗೂ ಖಾಲಿ ಇರುವ ಹುದ್ದೆಗಳ ಬಗ್ಗೆ ಪ್ರಶ್ನೆ ಕೇಳಿದ್ದೇನೆ. ಮಾನ್ಯ ಸಚಿವರು ಸಂಪೂರ್ಣ ವಿವರಗಳನ್ನು ಕೊಟ್ಟಿದ್ದು, ಬೆಳಗಾವಿ ವಿಭಾಗದಲ್ಲಿ 2,091 ಹುದ್ದೆಗಳು ಮಂಜೂರಾಗಿದ್ದು, 914 ಹುದ್ದೆಗಳು ಖಾಲಿ ಇವೆ. ಖಾಲಿ ಇರುವ ಹುದ್ದೆಗಳನ್ನು ಯಾವ ಮಿತಿಯಲ್ಲಿ ಭರ್ತಿ ಮಾಡುತ್ತೀರಿ ಎಂಬ ಪ್ರಶ್ನೆಯನ್ನು ಕೇಳಿದ್ದು, ಇದಕ್ಕೆ ಉತ್ತರವನ್ನು ಒದಗಿಸಿದ್ದಾರೆ. 914 ಹುದ್ದೆಗಳಲ್ಲಿ ಕೆಲವು ಹುದ್ದೆಗಳನ್ನು ಮುಂಬಡ್ತಿ ಮೂಲಕ ತುಂಬುವ ಕೆಲಸವನ್ನು ಮಾಡಿದ್ದಾರೆ. ಆದರೂ ಇನ್ನೂ ಅನೇಕ ಹುದ್ದೆಗಳು ಖಾಲಿಯಿವೆ. ನೇರ ನೇಮಕಾತಿ ಮೂಲಕ 178 ಕೃಷಿ ಅಧಿಕಾರಿಗಳನ್ನು, 1,026 ಸಹಾಯಕ ಕೃಷಿ ಅಧಿಕಾರಿಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಪೂರ್ತಿಯಾಗಿದೆ. ಆದರೆ ನೇಮಕಾತಿ ಆದೇಶವನ್ನು ಕೊಡದೇ, ನೇಮಕಗೊಂಡಿರುವ ಅಧಿಕಾರಿಗಳಿಗೆ ಆದಷ್ಟು ಬೇಗ ಆದೇಶವನ್ನು ಕೊಟ್ಟು ಖಾಲಿ ಇರುವ ಹುದ್ದೆಗಳನ್ನು ತುಂಬುವ ಮೂಲಕ ಕೃಷಿ ಇಲಾಖೆಯನ್ನು ಮತ್ತಷ್ಟು ಬಲಪಡಿಸಬೇಕೆಂದು ವಿನಂತಿಸುತ್ತೇನೆ. ಸುಮಾರು ಒಂದು ವರ್ಷಗಳಿಂದ ನೇಮಕಾತಿ ಆದೇಶವನ್ನು ಕಾಯುತ್ತಿದ್ದು, ಶೀಘ್ರದಲ್ಲಿ ಅವರಿಗೆ ನೇಮಕಾತಿ ಅದೇಶವನ್ನು ಕೊಡಬೇಕೆಂದು ವಿನಂತಿಸುತ್ತೇನೆ.

ಇನ್ನು ಬಹಳ ಸಂತೋಷದ ವಿಚಾರವೆಂದರೆ ಹೊರಗುತ್ತಿಗೆ ಆಧಾರದ ಮೇಲೆ ಈ ವಿಭಾಗದಲ್ಲಿ ಯಾರನ್ನೂ ತೆಗೆದುಕೊಳ್ಳದೇ ಕೆಲಸ ಮಾಡುತ್ತಿರುವ ಬಗ್ಗೆ ಮಾನ್ಯ ಸಚಿವರು ಮಾಹಿತಿಯನ್ನು ಕೊಟ್ಟಿದ್ದಾರೆ. ಅಂದರೆ ಹೊರಗುತ್ತಿಗೆ ಕೆಲಸಗಾರರು ಇಲ್ಲದ ಇಲಾಖೆ ಬಹಳ ಮಟ್ಟಿಗೆ ಇದೊಂದೇ ಇಲಾಖೆ ಇರಬಹುದು ಎಂದು ನನಗೆ ಅನಿಸುತ್ತಿದೆ. ಅದಕ್ಕಾಗಿ ಮಾನ್ಯ ಸಚಿವರನ್ನು ಅಭಿನಂದಿಸುತ್ತೇನೆ. ಖಾಲಿ ಇರುವ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿದ್ದು, ಆದಷ್ಟು ಬೇಗ ಅವರನ್ನು ತುಂಬಿಕೊಂಡು ಕೃಷಿ ಇಲಾಖೆಯನ್ನು ಮತ್ತಷ್ಟು ಬಲಪಡಿಸಬೇಕೆಂದು ಕೋರುತ್ತೇನೆ.

**ಶ್ರೀ ಬಿ.ಸಿ. ಪಾಟೀಲ್:–** ಮಾನ್ಯ ಸಭಾಪತಿಯವರೇ, ರಾಜ್ಯದಲ್ಲಿ ಒಟ್ಟು 8,144 ಹುದ್ದೆಗಳಲ್ಲಿ 4,245 ಹುದ್ದೆಗಳು ಭರ್ತಿಯಾಗಿದ್ದು, 3,899 ಹುದ್ದೆಗಳು ಖಾಲಿ ಇವೆ. ಮಾನ್ಯ ಸದಸ್ಯರು ಹೊರಗುತ್ತಿಗೆ ತೆಗೆದುಕೊಳ್ಳದ ಬಗ್ಗೆ ಹೇಳಿದ್ದು, ನಾವು ಖಾಯಂ ಗುತ್ತಿಗೆ ಆಧಾರದ ಮೇಲೆ ಯಾವುದೇ ನೌಕರರು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕಾರ್ಯನಿರ್ವಹಿಸುತ್ತಿಲ್ಲ ಎಂದು ಹೇಳಿದ್ದೇನೆ. 2,255 ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ತೆಗೆದುಕೊಂಡಿದ್ದೇವೆ. ಏಕೆಂದರೆ ಇಷ್ಟೊಂದು ಕೊರತೆಯನ್ನು ನೀಗಿಸಲು ಸಾಧ್ಯವಿಲ್ಲ. ಆದರೆ ಮಾನ್ಯ ಸದಸ್ಯರು ಕೇಳಿದಂತೆ ಖಾಯಂ ಗುತ್ತಿಗೆ ನೌಕರರನ್ನು ತೆಗೆದುಕೊಂಡಿಲ್ಲ ಎಂದು ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರು ಆ ರೀತಿ ತಿಳಿದುಕೊಂಡಿದ್ದಾರೆ. ಈಗಾಗಲೇ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಆರ್ಥಿಕ ಇಲಾಖೆಗೆ ಪತ್ರವನ್ನು ಬರೆದಿದ್ದು, ಕೋವಿಡ್–19 ನಿಂದ ಹೊಸ ನೇಮಕಾತಿ ಆಗಬಾರದು ಎನ್ನುವ ಆದೇಶ ಇರುವುದರಿಂದ ನೇಮಕಾತಿ ಆದೇಶವನ್ನು ತಡೆಹಿಡಿಯಲಾಗಿದೆ. ಆದಾಗ್ಯೂ ಕೃಷಿ ಇಲಾಖೆಯಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇದ್ದು, ನಮಗೂ manage ಮಾಡಲು ಬಹಳ ಕಷ್ಟವಾಗುತ್ತಿದೆ. ಮೇಲ್ಮಟ್ಟದಲ್ಲಿ ಅಧಿಕಾರಿಗಳು ಸಾಕಷ್ಟು ಇದ್ದು, ಕೆಳಮಟ್ಟದಲ್ಲಿ ಕಡಿಮೆ ಸಿಬ್ಬಂದಿ ಇದ್ದು, ಆದಷ್ಟು ಬೇಗ ಕೋವಿಡ್–19 ನಿಂದ ಹೊರಗೆ ಬರುತ್ತೇವೆ ಎಂಬ ಭರವಸೆ ಇದೆ. ಆರ್ಥಿಕ ಇಲಾಖೆಯ ಆದೇಶವನ್ನು ಆದಷ್ಟು ಬೇಗ ಪಡೆದು ಹುದ್ದೆಗಳ ನೇಮಕ ಮಾಡಿ ಇಲಾಖೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತೇನೆ.

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ:–** ಮಾನ್ಯ ಸಭಾಪತಿಯವರೇ, ಅದನ್ನು ಹೊರತುಪಡಿಸಿದರೂ ಇನ್ನೂ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ ಹುದ್ದೆಗಳು ಖಾಲಿ ಉಳಿಯುತ್ತಿವೆ. ಅವನ್ನು ತುಂಬುವ ಪ್ರಕ್ರಿಯೆಯನ್ನು ಮಾಡಬೇಕೆಂದು ವಿನಂತಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಪ್ರಶ್ನೆ ಸಂಖ್ಯೆ: 372**
**(ಉತ್ತರವನ್ನು ಲಗತ್ತಿಸಲಾಗಿದೆ)**

**ಶ್ರೀ ಆರ್.ಬಿ. ತಿಮ್ಮಾಪೂರ:–** ಮಾನ್ಯ ಸಭಾಪತಿಯವರೆ, ಉತ್ತರವನ್ನು ನೀಡಿದ್ದು, 2019ರಲ್ಲಿ ಪ್ರವಾಹವಾಗಿದ್ದು, ಬೆಳೆ ಹಾನಿಯಾದ 1,063 ಸಂತ್ರಸ್ತರ ಬ್ಯಾಂಕ್ ಖಾತೆ ಮಾಹಿತಿ ಸರಿಯಾಗಿ ಸಿಕ್ಕಿಲ್ಲ, ನಮೂದಿಸಿಲ್ಲ ಎಂದು ತಿಳಿಸಿದ್ದಾರೆ. ಹಣ ಬರುತ್ತದೆ ಎಂದರೆ ಯಾರಾದರೂ ಬ್ಯಾಂಕ್ ಖಾತೆಯನ್ನು ಕೊಡುತ್ತಾರೆ. ಇದು ಎಲ್ಲಿ ತಪ್ಪು ಆಗುತ್ತಿದೆ ಎಂದು ಅಧಿಕಾರಿಗಳನ್ನು ಕರೆಸಿ ಕೇಳಬೇಕು. ಹಣ ಕೊಡುತ್ತಾರೆ ಎಂದರೆ ಬ್ಯಾಂಕ್ ಖಾತೆಯನ್ನು ಯಾರು ಕೊಡುವುದಿಲ್ಲ? ಮಾನವ ಸಹಜವಾಗಿ ಹಣ ಬರುತ್ತದೆ ಎಂದರೆ ಬ್ಯಾಂಕ್ ಖಾತೆ ನಂಬರ್ ಕೊಡುತ್ತಾರೆ. ಆದರೆ ಇದರಲ್ಲಿ ಏನು ತಪ್ಪಾಗಿದೆ ಎಂಬುದನ್ನು ಸರಿ ಮಾಡಬೇಕು. ಆದಷ್ಟು ಬೇಗ ಅಧಿಕಾರಿಗಳನ್ನು ಕರೆದು ಕೇಳಬೇಕು.

ಇನ್ನು ಪ್ರವಾಹ, ಮಳೆ ಬಂದಾಗ ರಾಜಕೀಯ ಆಟಗಳು ನಡೆದು ಬಿಡುತ್ತವೆ. ಇವರು ನಮ್ಮವರಲ್ಲ, ಇವನು ಅರ್ಜಿ ಸಲ್ಲಿಸಿಲ್ಲ ಎಂದೆಲ್ಲಾ ನಡೆದುಬಿಡುತ್ತದೆ. ಅಂತಹದ್ದರಲ್ಲಿ ಸಣ್ಣ ಪುಟ್ಟ ರಾಜಕೀಯ ಪುಡಾರಿಗಳ ಮಾತನ್ನು ಕೇಳದೇ at-least ಅಲ್ಲಿ ತಪ್ಪಾಗಿದೆಯೋ, ಸರಿಯಾಗಿದೆಯೋ ಎಂಬುದನ್ನು ನೋಡದಿದ್ದರೆ ಹೇಗೆ? ಅವರಿಗೂ ಏನೂ ಲಾಭವಾಗುವುದಿಲ್ಲ. ಯಾವುದೋ ಒಬ್ಬ ಬಡ ಮತದಾರನು ಮನೆ ಕಟ್ಟಿಕೊಳ್ಳುವಾಗ ರಾಜಕೀಯ ನಡೆದು ಹೋದರೆ ತುಂಬಾ ಕಷ್ಟವಾಗುತ್ತದೆ. ಇದರ ಬಗ್ಗೆ ನಾನು ಹೋದ ಅಧಿವೇಶನದಲ್ಲಿಯೇ ಹೇಳಿದ್ದೇನೆ. ನನ್ನ ಹತ್ತಿರ ಒಬ್ಬ ಕೆಲಸ ಮಾಡುತ್ತಾನೆಂದಾಗ, ಆತನ ಮನೆ ಬಿದ್ದರೆ ಆತ ತಿಮ್ಮಾಪೂರ್ ಹತ್ತಿರ ಕೆಲಸ ಮಾಡುತ್ತಾನೆ ಎಂದು ಕೊಡುವುದು ಬೇಡ. ಇದನ್ನು ಕಳೆದ ಅಧಿವೇನದಲ್ಲಿಯೇ ಹೇಳಿದ್ದೇನೆ. ಇದರ ಬಗ್ಗೆ cross verification ಮಾಡಿಕೊಂಡು ಮಾಡಿದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಕೆಳಹಂತದಲ್ಲಿ ಕಾರ್ಯಕರ್ತರ ಮಾತು ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಕೆಲಸ ಆಗಬಾರದು. ಕೆಲವು ಕಡೆ ಮನೆ ಬಿದ್ದವರಿಗೆ ಹಣ ಕೊಟ್ಟಿದ್ದಾರೆ, ಕೆಲವು ಕಡೆ ಮನೆ ಬೀಳದಿರುವವರಿಗೆ ಹಣ ಕೊಟ್ಟಿದ್ದಾರೆ. ರೂ.5 ಲಕ್ಷ ಬರುತ್ತದೆ ತೆಗೆದುಕೋ ಎಂದು ಕೊಟ್ಟಿದ್ದಾರೆ. ಸರ್ಕಾರದ ಹಣ ದುರುಪಯೋಗವಾಗದಂತೆ cross-verification ಮಾಡಿ, ದಾಖಲೆಗಳನ್ನು ತರಿಸಿಕೊಂಡು ನೋಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಆರ್. ಅಶೋಕ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಹೇಳಿದಂತಹ ಸಲಹೆಗಳನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಏಕೆಂದರೆ ಈಗಾಗಲೇ ಬೆಳಗಾವಿ ಮತ್ತು ಬೇರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಬೇರೆ ಜಿಲ್ಲೆಗಳಲ್ಲಿ ನಾಲ್ಕೈದು ಸಾವಿರ extra ಅರ್ಜಿಗಳು ಬಂದಿವೆ. ನಾವು ಯಾವುದಕ್ಕೆ ಪರಿಹಾರ ಕೊಡಬೇಕು ಎಂದು ಘೋಷಣೆ ಮಾಡಿ ಗಡುವನ್ನು ಕೊಟ್ಟಿದ್ದೆವು, ಆ ಗಡುವನ್ನು ಮೀರಿ ಇನ್ನೂ ಮೂರ್‍ನಾಲ್ಕು ಸಾವಿರ ಅರ್ಜಿಗಳು ಬಂದಿವೆ.

(ಮುಂದು)

**(115)/03.02.2021/1.50/ಹೆಚ್‌ವಿಃಆರ್‌ಎನ್**

**ಶ್ರೀ ಆರ್.ಅಶೋಕ್(ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ರಾಜಕೀಯ ಒತ್ತಡ ಮತ್ತು ಇನ್ನಿತರೆ ಕಾರಣಗಳಿಂದಾಗಿ ಈ ರೀತಿ ಹೆಚ್ಚುವರಿ ಅರ್ಜಿಗಳು ಸೇರುವುದಕ್ಕೆ ಅವಕಾಶ ಕೊಡಬಾರದೆನ್ನುವುದು ಸರ್ಕಾರದ್ದ ಉದ್ದೇಶವಾಗಿದೆ. ಮಳೆ ಬಂದಂತಹ ಸಂದರ್ಭದಲ್ಲಿ ಬಿದ್ದು ಹೋಗಿರುವ ಮನೆಗಳಿಗೆ ಮತ್ತು ಯಾರು ಪ್ರಾಮಾಣಿಕವಾಗಿ ಅರ್ಜಿಯನ್ನು ಸಲ್ಲಿಸಿದ್ದಾರೆ ಅವರಿಗೆ ಮಾತ್ರ ಪರಿಹಾರವನ್ನು ನೀಡಲಾಗುತ್ತದೆ. ಪ್ರವಾಹ ಬಂದು ಹೋಗಿ ಒಂದು ವರ್ಷ ಕಳೆದರೂ ಸಹ ಈಗಲೂ ಬಂದು 'ನಮ್ಮ ಮನೆ ಸೇರಿಸಿ' ಎಂದು ಅರ್ಜಿಗಳನ್ನು ಕೊಡುತ್ತಿದ್ದಾರೆ. 'ಇವರನ್ನು ಸೇರಿಸಿ ಅವರನ್ನು ಸೇರಿಸಿ' ಎನ್ನುವ ಒತ್ತಡ ನಮ್ಮ ಮೇಲೆ ಬಹಳಷ್ಟಿದೆ. ಇಡೀ ರಾಜ್ಯದಲ್ಲಿ ಸುಮಾರು 36 ಸಾವಿರ ಅರ್ಜಿಗಳು ಹೆಚ್ಚುವರಿಯಾಗಿ ಬಂದಿವೆ. ಅವುಗಳನ್ನು ಸೇರಿಸಿ, ಪರಿಹಾರ ನೀಡುವುದಕ್ಕೆ ಸುಮಾರು 5-6 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಇವತ್ತಿನ ಪರಿಸ್ಥಿತಿಯಲ್ಲಿ ಇದು ಅಸಾಧ್ಯವಾಗಿದೆ. ಸರಿಯಾಗಿ ಮಾಡಿದರೆ, ಇದೊಂದು ಒಳ್ಳೆಯ ಕೆಲಸವಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರು ಹೇಳಿದಂತೆ, ಬಾಗಲಕೋಟೆ ಜಿಲ್ಲೆಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕಾಗಿ ಒಟ್ಟು 78 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. 2019-20ನೇ ಸಾಲಿನಲ್ಲಿ ಬಾಗಲಕೋಟೆಯಲ್ಲಿ ಉಂಟಾದ ಪ್ರವಾಹ ಪರಿಹಾರಕ್ಕಾಗಿ ಒಟ್ಟು 381.78 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಇಡೀ ರಾಜ್ಯದಲ್ಲಿ ಕಳೆದ ಎರಡು ವರ್ಷಗಳಲ್ಲಿ ಎಲ್ಲ ಇಲಾಖೆಗಳಿಗೆ ಸಂಬಂಧಪಟ್ಟಂತೆ ಅಂದರೆ, ಲೋಕೋಪಯೋಗಿ ಇಲಾಖೆ, ಶಾಲೆಗಳ ಕಟ್ಟಡ ನಿರ್ಮಾಣ ಮತ್ತು ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು, ವಸತಿ ಇಲಾಖೆಗೆ ಮತ್ತು ಇಂಧನ ಇಲಾಖೆಗೆ ಹೀಗೆ ಒಟ್ಟು 6984 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿಯೂ ವಸತಿ ಇಲಾಖೆಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡಲಾಗಿದೆ. ಮನೆಗಳ ನಿರ್ಮಾಣಕ್ಕಾಗಿ ಬಂದಿರುವ ಅರ್ಜಿಗಳ ಪೈಕಿ ಬಾಕಿ ಉಳಿದಿರುವ ಅರ್ಹ ಅರ್ಜಿಗಳನ್ನು ಪರಿಗಣಿಸಿ ಹಣ ಬಿಡುಗಡೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾಡಲಾಗುತ್ತದೆ. ಯಾವ ಫಲಾನುಭವಿಗಳಿಗೆ 5 ಲಕ್ಷ ರೂಪಾಯಿಗಳ ಪರಿಹಾರ ಘೋಷಣೆ ಮಾಡಿ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ, ಅವರು ಆದಷ್ಟು ಬೇಗನೇ 2ನೇ ಕಂತು, 3ನೇ ಕಂತನ್ನು ಮತ್ತು 4ನೇ ಕಂತನ್ನು ತೆಗೆದುಕೊಳ್ಳಬೇಕೆಂದು ಈ ಸದನದ ಮೂಲಕ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಒಟ್ಟಾರೇಯಾಗಿ ಏನು ಸಮೀಕ್ಷೆ ಮಾಡಿದ್ದೇವೆ ಆ ಪ್ರಕಾರವಾಗಿ ಅಷ್ಟೂ ಜನರಿಗೂ ಹಣ ಸಂದಾಯವಾಗಬೇಕಾಗಿದೆ. ಅವರುಗಳು ಮನೆ ಕಟ್ಟಿಕೊಳ್ಳಬೇಕಾಗಿದೆ. ಎನ್.ಡಿ.ಆರ್.ಎಫ್. ರೂಲ್ಸ್ ಪ್ರಕಾರ ಏನು ಪರಿಹಾರ ಕೊಡಬೇಕು ಆ ಪರಿಹಾರವನ್ನು ಅವರಿಗೆ ತಲುಪಿಸುವಂತಹ ಕೆಲಸ ಮಾಡಲಾಗುತ್ತದೆ.

**ಶ್ರೀ ಆರ್.ಬಿ.ತಿಮ್ಮಾಪೂರಃ–** ಸನ್ಮಾನ್ಯ ಸಭಾಪತಿಯವರೇ, ಪ್ರವಾಹ ಬಂದಂತಹ ಸಂದರ್ಭದಲ್ಲಿ ರಸ್ತೆ ನಿರ್ಮಾಣ ಮಾಡುವಾಗ, ಮತ್ಯಾವುದೋ ಕಾಮಗಾರಿಗಳನ್ನು ಮಾಡುವಾಗ ಯಾರೋ ಒಬ್ಬರಿಗೆ 'ನೀನು ಒಂದು 4 ಲಕ್ಷ ರೂಪಾಯಿಗಳ ಕೆಲಸ ಮಾಡು, ನೀನು 5 ಲಕ್ಷ ರೂಪಾಯಿಗಳ ಕೆಲಸ ಮಾಡು' ಎಂದು ಕಾರ್ಯಕರ್ತರಿಗೆ ಹಣ ಹಂಚುವ ರೀತಿಯಲ್ಲಿ ಕೆಲಸಗಳನ್ನು ಹಂಚಿಕೆ ಮಾಡಿರುವುದರಿಂದ ಸರ್ಕಾರದ ಹಣ ದುರುಪಯೋಗವಾಗಿರುವಂತಹ ಉದಾಹರಣೆಗಳು ಬಹಳಷ್ಟಿವೆ. ಪ್ರವಾಹದಿಂದ ಕೊಚ್ಚಿ ಹೋಗಿರುವಂತಹ ರಸ್ತೆಗಳಲ್ಲಿ ಎಷ್ಟು ರಸ್ತೆಗಳು ದುರಸ್ತಿಗೊಂಡಿವೆ ಎನ್ನುವುದನ್ನು ಮಾನ್ಯ ಸಚಿವರು ಪರಿಶೀಲನೆ ಮಾಡಬೇಕು. ಸರ್ಕಾರದ ಹಣ ದುರುಪಯೋಗವಾಗಬಾರದು ಮತ್ತು ಆ ಹಣ ಯಾರದೋ ಬೊಕ್ಕಸಕ್ಕೆ ಹೋಗಿ ಬೀಳಬಾರದು ಎನ್ನುವುದು ನಮ್ಮ ಕಳಕಳಿಯಾಗಿದೆ. ಆ ಹಣ ಸದುಪಯೋಗವಾಗುವ ಕಡೆ ಸರ್ಕಾರ ಗಮನಹರಿಸಬೇಕಾಗುತ್ತದೆ.

**ಶ್ರೀ ಎಸ್.ಆರ್.ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ತಿಮ್ಮಾಪೂರ್‌ರವರು ಹೇಳಿದಂತೆ ಸರ್ಕಾರದ ಹಣ ಪೋಲಾಗಬಾರದು. ಯಾರೋ ಒಬ್ಬರಿಗೆ 'ನೀನು ಈ ಕೆಲಸ ಮಾಡು, ನೀನು ಈ ಕೆಲಸ ಮಾಡು' ಎಂದು ಹರಿದು ಹಂಚಿಕೆ ಮಾಡಿರುವುದರಿಂದ ಶೇಕಡಾ 50ರಷ್ಟು ಕೆಲಸಕಾರ್ಯಗಳು ಆಗಿಲ್ಲ. ಸರ್ಕಾರದ ಹಣ ದುರುಪಯೋಗವಾಗಿದೆ. ಕೊಚ್ಚಿ ಹೋಗಿರುವ ರಸ್ತೆಗೆ 4 ಪುಟ್ಟಿ ಮಣ್ಣು ಸುರಿದು ಬಿಲ್ ತೆಗೆದುಕೊಂಡು ಹೋಗುತ್ತಾರೆ. ಸರ್ಕಾರದ ಹಣ ಈ ರೀತಿ ಹಂಚಿಕೆಯಾಗುತ್ತಿದೆ. ಎಂ.ಬಿ. ಹೇಗೆ ರೆಕಾರ್ಡ್ ಮಾಡುತ್ತಾರೆನ್ನುವುದು ನನಗೆ ಗೊತ್ತಾಗುತ್ತಿಲ್ಲ.

ಎರಡನೆಯದಾಗಿ, ಪರಿಹಾರ ನೀಡುವುದರಲ್ಲಿ ಬಹಳಷ್ಟು ತಾರತಮ್ಯವಾಗುತ್ತಿದೆ. ನಾನು ಕೆಲವು ಮನೆಗಳ ಉದಾಹರಣೆ ಕೊಡುತ್ತೇನೆ. ಪರಿಹಾರದ ರೂಪದಲ್ಲಿ 5 ಲಕ್ಷ ರೂಪಾಯಿಗಳು ಬರುತ್ತದೆಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಗಟ್ಟಿಮುಟ್ಟಾಗಿರುವ ಮನೆಗಳನ್ನು ಕೆಡವಿ ಹೊಸ ಮನೆಗಳನ್ನು ಕಟ್ಟಿಕೊಳ್ಳುತ್ತಿದ್ದಾರೆ. ಅವರಿಗೆ ಬೇಡದವರು, ಅವರ ಪಕ್ಷದವರಲ್ಲದೇ ಇರುವವರ ಮನೆ ಬಿದ್ದಿದ್ದರು ಸಹ ಅವರಿಗೆ ಪರಿಹಾರ ಸಿಗುವುದಿಲ್ಲ. ಈ ರೀತಿ ತಾರತಮ್ಯ ಮಾಡಬಾರದು. ಯಾರಿಗೆ ಅನ್ಯಾಯವಾಗಿದೆ, ಯಾರು ಅತಿವೃಷ್ಟಿಗೀಡಾಗಿ ಸಂಕಷ್ಟಕ್ಕೊಳಗಾಗಿದ್ದಾರೆ, ಅವರು ನಮ್ಮ ಕಡುವೈರಿಗಳಾಗಿದ್ದರೂ ಪರಿಹಾರ ನೀಡಬೇಕಾಗಿದೆ. ಪ್ರವಾಹ ಪೀಡಿತ ಪ್ರದೇಶಗಳಿಗೆ ಮೂಲಭೂತಸೌಲಭ್ಯಗಳನ್ನು ನಿರ್ಮಾಣ ಮಾಡುವುದರಲ್ಲಿ ಯಾವುದೇ ರೀತಿಯ ತಾರತಮ್ಯ ಮಾಡಬಾರದು. ಈ ಕಾಮಗಾರಿಗಳಿಗೆ ಟೆಂಡರ್ ಕರೆಯುವುದಿಲ್ಲ, 'ಇವರಿಗೆ ಈ ಕೆಲಸದ ಗುತ್ತಿಗೆ ನೀಡಿ' ಎಂದು ಅಧಿಕಾರಿಗಳಿಗೆ ಸೂಚಿಸಿದರೆ, ಅಧಿಕಾರಿಗಳು ಅವರಿಗೆ ಆ ಕೆಲಸ ಕೊಡುತ್ತಾರೆ. ಗುತ್ತಿಗೆ ಪಡೆದುಕೊಂಡವರು ಯಾವುದೇ ರೀತಿಯ ಕೆಲಸ ಮಾಡುವುದಿಲ್ಲ. ಸರ್ಕಾರದ ಹಣ ಪೋಲಾಗುವುದರ ಜೊತೆಗೆ ಸರ್ಕಾರಕ್ಕೂ ಕೆಟ್ಟ ಹೆಸರನ್ನು ತರುತ್ತಾರೆ. ಜನರು ಇದೆಲ್ಲವನ್ನೂ ನೋಡುತ್ತಿರುತ್ತಾರೆ. ಇಂತಹ ಕೆಲಸಗಳಿಂದ ಸರ್ಕಾರದ ಇಮೇಜ್ ಹಾಳಾಗುತ್ತದೆ. ಆ ಕ್ಷೇತ್ರದ ಸಾರ್ವಜನಿಕ ಬದುಕಿನಲ್ಲಿರುವ ಜನಪ್ರತಿನಿಧಿಗಳ ಹೆಸರೂ ಕೆಡುತ್ತದೆ. ಈ ಬಗ್ಗೆ ಸರ್ಕಾರ ಗಮನಹರಿಸಬೇಕಾಗುತ್ತದೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಕಂದಾಯ ಸಚಿವರು ವಿವರವಾಗಿರುವ ಉತ್ತರವನ್ನು ಕೊಟ್ಟಿದ್ದಾರೆ ಮತ್ತು ಪ್ರವಾಹ ಸಂದರ್ಭದಲ್ಲಿ ಬೆಳಗಾವಿ ಜಿಲ್ಲೆಗೆ ಹಲವಾರು ಬಾರಿ ಖುದ್ದು ಭೇಟಿ ನೀಡಿ ಆಗಿರುವಂತಹ ಹಾನಿಯನ್ನು ಸ್ವತಃ ನೋಡಿದ್ದಾರೆ. ಪರಿಹಾರವನ್ನು ಸಹ ಘೋಷಣೆ ಮಾಡಿದ್ದಾರೆ. ಫಲಾನುಭವಿಗಳ ಸಂಖ್ಯೆ ಹೆಚ್ಚಾಗುವುದರ ಜೊತೆಗೆ ಉಳಿದಿರುವ ಫಲಾನುಭವಿಗಳಿಗೆ ಪರಿಹಾರವನ್ನು ಕೊಡುವುದಕ್ಕೆ ಬಹಳಷ್ಟು ಹಣದ ಅವಶ್ಯಕತೆ ಇದೆಯೆಂದು ಮಾನ್ಯ ಸಚಿವರು ಹೇಳಿದ್ದಾರೆ. ನಿಜವಾದ ಫಲಾನುಭವಿಗಳಿಗೆ ಪರಿಹಾರ ಸಿಗದೇ ಉಳಿದು ಹೋಗಿದ್ದಾರೆ, ಜಿಲ್ಲಾಧಿಕಾರಿಗಳ ಮೂಲಕ ಮತ್ತೊಮ್ಮೆ ವರದಿ ತರಿಸಿ ಹಣಕಾಸಿನ ಸ್ಥಿತಿ ಸರಿಯಾದ ನಂತರ ಅರ್ಹ ಫಲಾನುಭವಿಗಳು ಯಾರಾದರು ಉಳಿದು ಹೋಗಿದ್ದರೆ ಅವರಿಗೆ ಪರಿಹಾರವನ್ನು ಕೊಡಬೇಕೆನ್ನುವುದು ನನ್ನ ಮನವಿಯಾಗಿದೆ.

ಎರಡನೆಯದಾಗಿ, ಮಾನ್ಯ ಎಸ್.ಆರ್.ಪಾಟೀಲ್‌ರವರಿಗೆ ತಿಳಿದಿರುವಂತೆ ಬೆಳಗಾವಿ ಜಿಲ್ಲೆಯಲ್ಲಿ ಪ್ರತಿ ಬಾರಿ ಕೃಷ್ಣ ನದಿಯಿಂದ ಉಂಟಾಗುವ ಪ್ರವಾಹದಿಂದಾಗಿ ಬೆಳಗಾವಿಯ ಚಿಕ್ಕೋಡಿ, ಅಥಣಿ ಮತ್ತು ರಾಯಬಾಗ್ ತಾಲ್ಲೂಕುಗಳಲ್ಲಿ ಸುಮಾರು 20 ರಿಂದ 30 ಗ್ರಾಮಗಳು ಪ್ರತಿ ಬಾರಿಯೂ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಾಧಿತವಾಗುತ್ತವೆ. ಇವುಗಳನ್ನು ಹತ್ತಿರದಲ್ಲಿರುವ ಶಾಲೆಗಳಿಗೆ ಸ್ಥಳಾಂತರಿಸಲಾಗುತ್ತದೆ. ನಾನು ಮಾನ್ಯ ಕಂದಾಯ ಸಚಿವರನ್ನು ಭೇಟಿ ಮಾಡಿದಂತಹ ಸಂದರ್ಭದಲ್ಲಿ ' ನಮಗೆ ಜಾಗವನ್ನು ಕೊಟ್ಟರೆ, ಪ್ರವಾಹ ಬಂದಂತಹ ಸಂದರ್ಭದಲ್ಲಿ ಅಲ್ಲಿನ ಜನರನ್ನು ಶಿಫ್ಟ್ ಮಾಡುವುದಕ್ಕೆ ಶಾಶ್ವತವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವಂತಹ ಯೋಜನೆಯನ್ನು ರೂಪಿಸುತ್ತೇವೆ' ಎಂದು ಹೇಳಿದ್ದಾರೆ. ಇದಕ್ಕಾಗಿಯೇ ಬೆಳಗಾವಿ ಜಿಲ್ಲೆಯ ಸಿರಗುಪ್ಪೆ ಗ್ರಾಮದಲ್ಲಿ ಸ್ಥಳ ಕೊಡಲು ಯೋಜಿಸಲಾಗಿದೆ. ಪ್ರವಾಹ ಬಂದಂತಹ ಸಂದರ್ಭದಲ್ಲಿ ಶಾಲೆಗಳನ್ನು ಮುಚ್ಚದೇ, ಶಾಲೆಗಳಲ್ಲಿ ಈ ಜನರನ್ನು ಇಳಿಸದೇ, ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಅಲ್ಲಿ ಸಾವಿರಾರು ಜನರು ತಂಗುವುದಕ್ಕೆ ಖಾಯಂ ಆಗಿ ವ್ಯವಸ್ಥೆ ಮಾಡುತ್ತೇವೆ ಎನ್ನುವ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಈ ವಿಚಾರವನ್ನು ಸದನದ ಮೂಲಕ ರಾಜ್ಯದ ಜನತೆಗೆ ತಿಳಿಸಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ಕ್ರಮವನ್ನು ಕೈಗೊಳ್ಳುವುದರಿಂದ ಸುಮಾರು ಒಂದು ತಿಂಗಳವರೆಗೆ ಶಾಲೆಗಳು ಬಾಧಿತವಾಗುವುದನ್ನು ತಪ್ಪಿಸಬಹುದು ಮತ್ತು ಜನರಿಗೆ ಪುನರ್ವಸತಿ ಕಲ್ಪಿಸಿಕೊಡುವ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕೆಂದು ಈ ಸದನದ ಮೂಲಕ ವಿನಂತಿ ಮಾಡುತ್ತಿದ್ದೇನೆ.

**ಶ್ರೀ ಆರ್.ಅಶೋಕ್:–** ಸನ್ಮಾನ್ಯ ಸಭಾಪತಿಯವರೇ, ಗೌರವಾನ್ವಿತ ಸದಸ್ಯರುಗಳು ನೀಡಿರುವ ಸಲಹೆಗಳನ್ನು ನಾನು ಸ್ವೀಕರಿಸುತ್ತಿದ್ದೇನೆ. ಪರಿಹಾರಧನವಾಗಿ ನಾವು 5 ಲಕ್ಷ ರೂಪಾಯಿಗಳನ್ನು ಘೋಷಣೆ ಮಾಡಿ ಮೊದಲ ಕಂತಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಯಾರು ಪ್ರಾಮಾಣಿಕರಿದ್ದಾರೆ ಅವರು ಆ ಹಣವನ್ನು ತೆಗೆದುಕೊಂಡು ಮನೆಯನ್ನು ರಿಪೇರಿ ಮಾಡಿಕೊಂಡು ಉಳಿದ 4 ಲಕ್ಷ ರೂಪಾಯಿಗಳನ್ನು ಕೇಳುತ್ತಲೇ ಇಲ್ಲ. ಯಾರು ಯಾವುದೇ ತೊಂದರೆಗೆ ಒಳಗಾಗಿಲ್ಲ ಅವರು ಬಂದು 'ನಮ್ಮ ಅರ್ಜಿ ಸೇರಿಸಿ' ಎಂದು ಕೇಳಿಕೊಳ್ಳುತ್ತಿದ್ದಾರೆ. 'ಸಿ' ಗ್ರೇಡ್ ಅಡಿಯಲ್ಲಿ 50 ಸಾವಿರ ರೂಪಾಯಿಗಳನ್ನು ಮಾತ್ರ ಕೊಡುತ್ತೇವೆ. ಈ 'ಸಿ' ಗ್ರೇಡ್ ಅಡಿಯಲ್ಲಿ ಬರುವವರು ನಮ್ಮನ್ನು 'ಬಿ' ಗ್ರೇಡ್‌ಗೆ ಸೇರಿಸಿ ಎಂದು ಹೇಳುತ್ತಿದ್ದಾರೆ, 'ಬಿ' ಗ್ರೇಡ್‌ನಲ್ಲಿರುವವರು ನಮ್ಮನ್ನು 'ಎ' ಗ್ರೇಡ್‌ಗೆ ಸೇರಿಸಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಈ ರೀತಿಯ ರಾಜಕೀಯ ನಡೆಯುತ್ತಿದೆ. ನಿಜವಾದ ಫಲಾನುಭವಿಗಳು ಯಾರಿದ್ದಾರೆ ಅವರು ಒಂದು ಲಕ್ಷ ರೂಪಾಯಿಗಳಿಗೇ ತೃಪ್ತರಾಗಿದ್ದಾರೆ. ಉಳಿದಿರುವ 4 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕೆ ನಾವು 3 ನೋಟೀಸ್‌ಗಳನ್ನು ಕೊಟ್ಟಿದ್ದೇವೆ ಆದರೂ ಅವರು ಬರುತ್ತಿಲ್ಲ. ಈ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಅದನ್ನು ರದ್ದುಪಡಿಸಬೇಕೇ ಎನ್ನುವುದರ ಬಗ್ಗೆ ಚರ್ಚೆ ನಡೆಸುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಶಾಶ್ವತವಾಗಿ ಪುನರ್ವಸತಿ ಕೇಂದ್ರವನ್ನು ತೆರೆಯುವ ಬಗ್ಗೆ ಮಾನ್ಯ ಕವಟಗಿಮಠ್‌ರವರು ಪ್ರಸ್ತಾಪ ಮಾಡಿದ್ದಾರೆ, ಇದರ ಬಗ್ಗೆ ನಾನು ಈಗಾಗಲೇ ಕೇಂದ್ರ ಸರ್ಕಾರದ ಜೊತೆಗೆ ಮಾತನಾಡಿದ್ದೇನೆ. ಶಾಲೆಗಳಲ್ಲಿ ಪುನರ್ವಸತಿ ಕೇಂದ್ರಗಳನ್ನು ತೆರೆದರೆ, ಅಲ್ಲಿ ಶೌಚಾಲಯವಿರುವುದಿಲ್ಲ, ಮಲಗುವುದಕ್ಕೆ ಸರಿಯಾದ ವ್ಯವಸ್ಥೆ ಇರುವುದಿಲ್ಲ, ಅಡಿಗೆ ಮನೆ ಇರುವುದಿಲ್ಲ. ಈ ಎಲ್ಲ ತೊಂದರೆಗಳನ್ನು ತಪ್ಪಿಸಬೇಕಾಗಿದೆ. ಈಗಾಗಲೇ ಮಂಗಳೂರು ಮತ್ತು ಉಡುಪಿ ಜಿಲ್ಲೆಗಳಲ್ಲಿ ಶಾಶ್ವತ ಪುನರ್ವಸತಿ ಕೇಂದ್ರವನ್ನು ತೆರೆದಿದ್ದೇವೆ. ಸಮುದಾಯ ಭವನಗಳನ್ನು ನಿರ್ಮಾಣ ಮಾಡಿ ಪುನರ್ವಸತಿ ಕೇಂದ್ರವನ್ನಾಗಿ ಇವುಗಳನ್ನು ಕಾಯ್ದಿರಿಸಲಾಗಿದೆ. ಉಳಿದಂತಹ ಸಂದರ್ಭಗಳಲ್ಲಿ ಅವುಗಳನ್ನು ಕೆ.ಡಿ.ಪಿ. ಮೀಟಿಂಗ್ ಮಾಡುವುದಕ್ಕೆ ಉಪಯೋಗಿಸಿಕೊಳ್ಳಬಹುದಾಗಿದೆ. ಪ್ರವಾಹ ಬಂದಂತಹ ಸಂದರ್ಭದಲ್ಲಿ ಅಡಿಗೆ ಮನೆ, ಮಲಗುವ ವ್ಯವಸ್ಥೆ ಮತ್ತು ವೈದ್ಯಕೀಯ ವ್ಯವಸ್ಥೆ ಮುಂತಾದವುಗಳನ್ನು ಕಲ್ಪಿಸಿಕೊಡುವುದಕ್ಕೆ ಒಂದೊಂದು ಕೇಂದ್ರಗಳಿಗೆ 5 ಕೋಟಿ ರೂಪಾಯಿಗಳನ್ನು ಕೊಟ್ಟು ಪುನರ್ವಸತಿ ಕೇಂದ್ರಗಳನ್ನು ಮಾಡುವುದಕ್ಕೆ ಪ್ರಸ್ತಾವನೆಗಳನ್ನು ಕಳುಹಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ಸಹ ಪರಿಗಣಿಸಲಾಗುತ್ತದೆ. ಒಂದು ವೇಳೆ ಪ್ರವಾಹ ಬಂದರೆ, ತಕ್ಷಣವೇ ಅಲ್ಲಿರುವ ಜನರನ್ನು ರಕ್ಷಣೆ ಮಾಡಿ ಅಲ್ಲಿಗೆ ಇಂತಹ ಕೇಂದ್ರಗಳಿಗೆ ಸ್ಥಳಾಂತರಿಸುವುದಕ್ಕೆ ಅನುಕೂಲವಾಗುತ್ತದೆ ಮತ್ತು ಶಾಲೆಗಳ ಕಾರ್ಯಚಟುವಟಿಕೆಗಳನ್ನು ಸ್ಥಗಿತಗೊಳಿಸದೇ ಇರುವುದಕ್ಕೆ ಸಾಧ್ಯವಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮಾನ್ಯ ವಿರೋಧ ಪಕ್ಷದ ನಾಯಕರು ಅನರ್ಹ ಫಲಾನುಭವಿಗಳನ್ನು ಗುರುತಿಸಬೇಕು ಮತ್ತು ಕಾಮಗಾರಿಗಳಲ್ಲಿ ಮೋಸ ನಡೆಯುತ್ತಿದೆ ಎನ್ನುವ ಮಾತುಗಳನ್ನು ಹೇಳಿದ್ದಾರೆ. ಅವರು ಸಚಿವರಾಗಿ ಕಾರ್ಯವನ್ನು ನಿರ್ವಹಿಸಿದ್ದಾರೆ. ಎನ್.ಡಿ.ಆರ್.ಎಫ್.ಗೆ ಮಾನ್ಯ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ, ಕಂದಾಯ ಸಚಿವನಾಗಿ ನಾನು ಉಪಾಧ್ಯಕ್ಷನಾಗಿರುತ್ತೇನೆ. ಲೋಕೋಪಯೋಗಿ ಇಲಾಖೆಗೆ, ಇಂಧನ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಗೆ ಹಣ ಬಿಡುಗಡೆ ಮಾಡುತ್ತೇನೆ. ಸಂಬಂಧಪಟ್ಟ ಇಲಾಖೆಯವರು ಸರಿಯಾದ ರೀತಿಯಲ್ಲಿ ಕೆಲಸಕಾರ್ಯ ನಡೆಯುವುದನ್ನು ನೋಡಿಕೊಳ್ಳಬೇಕಾಗುತ್ತದೆ. ನಾನು ಅವರ ಮೇಲುಸ್ತುವಾರಿ ಮಾಡುತ್ತೇನೆ. ಇದೇ ಮೊದಲನೆ ಬಾರಿಗೆ ಎಲ್ಲಾ ಇಲಾಖೆಗಳಿಗೆ ಪತ್ರವನ್ನು ಬರೆದು, 'ನಾವು ಎಷ್ಟು ಹಣವನ್ನು ಕೊಟ್ಟಿದ್ದೇವೆ, ಎಷ್ಟು ಕೆಲಸವಾಗಿದೆ ಎನ್ನುವುದಕ್ಕೆ ಸಂಬಂಧಪಟ್ಟಂತೆ ಫೋಟೋಗ್ರಾಫ್ ಕೊಡಿ' ಎಂದು ವರದಿಯ ಜೊತೆಗೆ ದಾಖಲೆಗಳನ್ನು ಕೇಳುತ್ತಿದ್ದೇನೆ. ಇಷ್ಟು ದಿನ ದಾಖಲೆಗಳನ್ನು ಕೇಳುತ್ತಿರಲಿಲ್ಲ. ಈಗ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ದಾಖಲೆಗಳನ್ನು ತೆಗೆದುಕೊಂಡು ಪಾರದರ್ಶಕವಾಗಿ ಯಾವ ಕ್ರಮವನ್ನು ತೆಗೆದುಕೊಳ್ಳಬಹುದು, ಅದನ್ನು ನಾನು ತೆಗೆದುಕೊಳ್ಳುತ್ತೇನೆ.

**ಸಭಾಪತಿಯವರು:–** ಮಾನ್ಯ ತಿಮ್ಮಾಪೂರ್‌ರವರೇ, ಉಳಿದಿರುವ ಹಣವನ್ನು ತೆಗೆದುಕೊಳ್ಳುವುದಕ್ಕೆ ಫಲಾನುಭವಿಗಳೇ ಬರುತ್ತಿಲ್ಲವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

(ಮುಂದುವರಿದಿದೆ)

(116) 3.2.2021 2.00 ಪಿಕೆ:ಬಿಎನ್‌ಎಸ್

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಒಂದು ನಿಮಿಷ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

**ಸಭಾಪತಿಯವರು:–** ದುಡ್ಡು ತೆಗೆದುಕೊಂಡು ಹೋಗುವುದಕ್ಕಾಗಿಯೇ ಅವರು ಬರುವುದಿಲ್ಲ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಅಲ್ಲಿ ಯಾವ ಪ್ರಕ್ರಿಯಗಳು ನಡೆಯುತ್ತಿವೆ ಎಂದು ಗಮನಿಸಲು ಒಂದು ಪ್ರತ್ಯೇಕ ಆ್ಯಕ್ಟ್ ತಂದು ಸೂಪರ್‌ವೈಸ್ ಮಾಡಲಿ. ಅವರು ದುಡ್ಡು ತೆಗೆದುಕೊಂಡು ಹೋಗಲು ಬರುವುದಿಲ್ಲ ಎಂದರೆ, ಆ ದುಡ್ಡು ಪೋಲಾಗುತ್ತಾ ಹೋಗಬೇಕೇ?

**ಶ್ರೀ ಆರ್.ಅಶೋಕ್:–** ಮಾನ್ಯ ಸಭಾಪತಿಯವರೇ, ನಾವೇನು ಮನೆ ಕಟ್ಟಿಸಿಕೊಳ್ಳಲು ರೂ. 5 ಲಕ್ಷಗಳನ್ನು ಮಂಜೂರು ಮಾಡಿದ್ದೆವೋ ಅದರಲ್ಲಿ ರೂ. 1 ಲಕ್ಷ ಕೊಟ್ಟ ತಕ್ಷಣ ಆ ಹಣದಲ್ಲಿ ಅವರು ರಿಪೇರಿ ಮಾಡಿಕೊಂಡು ಬಿಟ್ಟಿದ್ದಾರೆ. ನಾವು, ಮನೆಯನ್ನು ಪೂರ್ತಿ ಒಡೆದು ಹಾಕಿ ಹೊಸದಾಗಿ ಕಟ್ಟಿಕೊಳ್ಳಿ ಎಂದು ಹೇಳಿದ್ದೆವು. ಆದ್ದರಿಂದ, ಮಿಕ್ಕ ಹಣವನ್ನು ಪಡೆದುಕೊಳ್ಳಿ ಎಂದು ನಾವು ಅವರಿಗೆ ಪತ್ರ ಬರೆಯುತ್ತಿದ್ದೇವೆ.

**ಶ್ರೀ ಆರ್.ಬಿ.ತಿಮ್ಮಾಪೂರ:–** ನಿಮ್ಮ ಕಡೆಯಿಂದ ಸೂಪರ್‌ವಿಷನ್ ಮಾಡುವುದಕ್ಕೆ ತಹಸೀಲ್ದಾರರಿರುತ್ತಾರೆ, ಇತರ ಅಧಿಕಾರಿಗಳೂ ಇರುತ್ತಾರೆ. ಅವರಿಂದ ಪರಿಶೀಲನೆ ಮಾಡಿಸಿ, ಸರಿಯಾಗಿಲ್ಲ ಎಂದರೆ ವರದಿಯನ್ನು ತೆಗೆದುಕೊಂಡು ಲೋಕೋಪಯೋಗಿ ಇಲಾಖೆಗೆ ಕಳುಹಿಸಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## (ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):–** ಮಾನ್ಯ ಸಭಾಪತಿಯವರೇ, ದಿನಾಂಕ 3ನೇ ಫೆಬ್ರವರಿ 2021ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ 4ನೇ ಪಟ್ಟಿಯ ಸಮೂಹ 3ರಲ್ಲಿ ಇರುವ ಒಟ್ಟು 99 ಪ್ರಶ್ನೆಗಳ ಪೈಕಿ 72 ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**03) ಸಭಾಪತಿಯವರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಕ್ಕೆ ಸಚಿವರಿಂದ ಲಿಖಿತ ಹೇಳಿಕೆಯ ಮಂಡನೆ**

ವಿಷಯ: ಕರ್ನಾಟಕ ಲೋಕಸೇವಾ ಆಯೋಗದ ವತಿಯಿಂದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳನ್ನು ತುಂಬಲು ನಡೆಸಲಾಗುವ ಸ್ಪರ್ಧಾತ್ಮಕ ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಬಗ್ಗೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):**–ಮಾನ್ಯ ಸಭಾಪತಿಯವರೇ, ಸ್ಪರ್ಧಾತ್ಮಕ ಪರೀಕ್ಷೆ ಕುರಿತು ಮಾನ್ಯ ಶಾಸಕರಾದ ಶ್ರೀ ಅ.ದೇವೇಗೌಡರವರು ದಿನಾಂಕ 2.2.2021ರಂದು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗೆ ಸದನದಲ್ಲಿ ಲಿಖಿತ ಉತ್ತರವನ್ನು ಮಂಡಿಸುತ್ತಿದ್ದೇನೆ.

(ಉತ್ತರವನ್ನು ಲಗತ್ತಿಸಲಾಗಿದೆ)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 04. ಸಭಾಪತಿಯವರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**ಅ) ವಿಷಯ:** ಖಾಸಗಿ ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳಲ್ಲಿ ಸೇವಾ ವಿಲೀನಗೊಂಡ ಸಹಾಯಕ ಪ್ರಾಧ್ಯಾಪಕರುಗಳು ವಿಭಜಿತ ಪೂರ್ವದಲ್ಲಿ ಸಲ್ಲಿಸಿದ ಖಾಯಂ ಸೇವೆಯನ್ನು ಪರಿಗಣಿಸಿ ಬಡ್ತಿ/ಸ್ಥಾನೀಕರಣ ಸೌಲಭ್ಯ ನೀಡುವ ಬಗ್ಗೆ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ(ಪದವೀಧರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, 2000ನೇ ಇಸವಿಯಲ್ಲಿ ಸರ್ಕಾರದ ನೀತಿ ನಿರ್ಧಾರದನ್ವಯ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಟ್ಟ ಖಾಸಗಿ ಅನುದಾನಿತ ಸಂಯುಕ್ತ ಪದವಿ ಕಾಲೇಜುಗಳಿಂದ ಪದವಿಪೂರ್ವ ಕಾಲೇಜುಗಳನ್ನು ಬೇರ್ಪಡಿಸಿದ್ದರಿಂದ ಪದವಿ ಕಾಲೇಜುಗಳಲ್ಲಿ ಖಾಲಿ ಹುದ್ದೆ ಮತ್ತು ಕಾರ್ಯಭಾರದ ಕೊರತೆಯಿಂದಾಗಿ ಪದವಿಪೂರ್ವ ವಿಭಾಗದ ಖಾಲಿ ಹುದ್ದೆ ಮತ್ತು ಕಾರ್ಯಭಾರವನ್ನು ಪರಿಗಣಿಸಿ ಸರ್ಕಾರ ಸೇವಾ ವಿಲೀನ ಮಾರ್ಗಸೂಚಿಗಳನ್ವಯ ಎಸ್.ಎಲ್.ಇ.ಟಿ., ಎನ್.ಇ.ಟಿ., ಎಂ.ಫಿಲ್., ಪಿಹೆಚ್‌ಡಿ., ಇತ್ಯಾದಿ ವಿದ್ಯಾರ್ಹತೆಗಳನ್ನು ಪೂರೈಸಿದ್ದರೂ ಸಹ ಅರೆಕಾಲಿಕ ಉಪನ್ಯಾಸಕರನ್ನು ಪದವಿಪೂರ್ವ ಕಾಲೇಜುಗಳಲ್ಲಿ ಸೇವಾ ವಿಲೀನಗೊಳಿಸಿ ತಾತ್ಕಾಲಿಕವಾಗಿ ನಿಯೋಜಿಸಲಾಗಿತ್ತು. ಸೇವಾ ವಿಲೀನಗೊಂಡ ಸದರಿ ಉಪನ್ಯಾಸಕರುಗಳಿಗೆ ಕಾಲೇಜು ಶಿಕ್ಷಣ ಇಲಾಖೆಯ ಲೆಕ್ಕ ಶೀರ್ಷಿಕೆ ಅಡಿಯಲ್ಲಿಯೇ ಇಂದಿಗೂ ವೇತನ ಭರಿಸಲಾಗುತ್ತಿದೆ. ತದನಂತರ ಪದವಿ ಕಾಲೇಜುಗಳಲ್ಲಿ ಖಾಲಿ ಹುದ್ದೆ ಮತ್ತು ಕಾರ್ಯಭಾರ ಸೃಷ್ಟಿಯಾದಂತೆ ಸದರಿ ಉಪನ್ಯಾಸಕರನ್ನು ಪದವಿ ಕಾಲೇಜಿಗೆ ಮರು ಹಂಚಿಕೆ ಮಾಡಿ ಯು.ಜಿ.ಸಿ. ನಿಗದಿಪಡಿಸಿದ ವಿದ್ಯಾರ್ಹತೆ ಪೂರೈಸಿದವರಿಗೆ ಯು.ಜಿ.ಸಿ. ವೇತನ ಶ್ರೇಣಿ ವಿಸ್ತರಿಸಲಾಗಿದೆ.

2000ನೇ ಇಸವಿಯಲ್ಲಿ ಸಂಯುಕ್ತ ಪದವಿ ಕಾಲೇಜುಗಳು ಪ್ರತ್ಯೇಕಗೊಂಡಾಗ ಪದವಿಪೂರ್ವ ಕಾಲೇಜುಗಳಿಗೆ ನಿಯೋಜನೆಗೊಂಡ ಸ್ಟಾಪ್‌ಗ್ಯಾಪ್ ಉಪನ್ಯಾಸಕರು ಹಾಗೂ ಅವರಿಗಿಂತ ಮೊದಲು ಸೇವೆಗೆ ಸೇರಿದ ಎಲ್ಲಾ ಉಪನ್ಯಾಸಕರುಗಳಿಗೆ ಅವರು ವಿಭಜಿತ ಪದವಿಪೂರ್ವ ವಿಭಾಗದಲ್ಲಿ ಸಲ್ಲಿಸಿದ ಸೇವೆಯನ್ನು ಬಡ್ತಿ/ಪದೋನ್ನತಿಗೆ ಪರಿಗಣಿಸಿ 2006ರ ಯು.ಜಿ.ಸಿ. ವೇತನ ಬಾಕಿಯನ್ನು ನೀಡಲಾಗಿದೆ. ಹೀಗಾಗಿ ಪದವಿ ಕಾಲೇಜುಗಳಿಗೆ ಮರು ಹಂಚಿಕೆಯಾಗಿರುವ ಸಹಾಯಕ ಪ್ರಾಧ್ಯಾಪಕರುಗಳಿಗೆ ಸ್ಟಾಪ್‌ಗ್ಯಾಪ್ ಉಪನ್ಯಾಸಕರ ರೀತಿಯಲ್ಲಿಯೇ ಅವರುಗಳು ಪದವಿಪೂರ್ವ ವಿಭಾಗದಲ್ಲಿ ಸಲ್ಲಿಸಿದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಯಂ ಸೇವೆಯನ್ನು ಬಡ್ತಿ/ಪದೋನ್ನತಿ/ಸ್ಥಾನೀಕರಣಕ್ಕೆ (Promotion/Placement) ಪರಿಗಣಿಸಬೇಕೆಂದು ಈ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಸದರಿ ಶೂನ್ಯವೇಳೆಯ ಪ್ರಸ್ತಾಪಕ್ಕೆ ಸಂಬಂಧಪಟ್ಟಂತೆ ಮಾನ್ಯ ಉಪಮುಖ್ಯಮಂತ್ರಿಗಳೂ ಆದ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುತ್ತೇನೆ.

ಆ) ವಿಷಯ: ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಗ್ರಾಮದ ಎಂ.ಜಿ.ಆರ್. ಕ್ರಷರ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಪ್ರಾಪ್ತ ಬಾಲಕಿಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿರುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವ ಬಗ್ಗೆ.

**ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನ ಗ್ರಾಮ ಒಂದರಲ್ಲಿ 15 ವರ್ಷದ ಅಪ್ರಾಪ್ತ ಬಾಲಕಿಯ ಮೇಲೆ ಹಲವಾರು ದಿನಗಳಿಂದ ನಿರಂತರವಾಗಿ ಸಾಮೂಹಿಕ ಅತ್ಯಾಚಾರ ನಡೆಸಿರುವ ಘಟನೆಯು ಅತ್ಯಂತ ಹೀನ ಕೃತ್ಯವಾಗಿರುವ ಈ ವಿಚಾರವು ಸಾರ್ವಜನಿಕವಾಗಿ ಅತ್ಯಂತ ಮಹತ್ವದ ಸಂಗತಿಯಾಗಿರುವುದರಿಂದ ಈ ವಿಷಯವನ್ನು ಸದನದಲ್ಲಿ ಶೂನ್ಯವೇಳೆಯ ಅಡಿಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಈ 15 ವರ್ಷದ ಬಾಲಕಿಯು ಎಂ.ಜಿ.ಆರ್. ಕ್ರಷರ್‌ನಲ್ಲಿ ಕೆಲಸವನ್ನು ನಿರ್ವಹಿಸುತ್ತಿರುತ್ತಾಳೆ. ಬಡ ಕುಟುಂಬದಿಂದ ಬಂದವಳಾಗಿದ್ದು, ಈ ಬಾಲಕಿಗೆ ದೂರನ್ನು ನೀಡಲು ಭಯಭೀತಳಾಗಿ ದಾಖಲಾಗಿಸಲಿಲ್ಲ. ಇದನ್ನೂ ಬಂಡವಾಳವನ್ನಾಗಿ ಮಾಡಿಕೊಂಡು ಆರೋಪಿಗಳು ದಿನಾಂಕ 1.9.2020 ರಿಂದ 27.1.2021ರವರೆಗೆ ನಿರಂತರವಾಗಿ ಸಾಮೂಹಿಕ ಅತ್ಯಾಚಾರವನ್ನು ಎಸಗಿದ್ದಾರೆ. ರಾಜ್ಯದಲ್ಲಿ ಈ ರೀತಿಯ ಘಟನೆಗಳು ಮರುಕಳಿಸುತ್ತಿರುವುದರಿಂದ ಜನತೆಯು ಜೀವನವನ್ನು ನಡೆಸಲು ಭಯ ಭೀತಿಯ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ.

ಆದುದರಿಂದ, ಈ ನಿರಂತರ ಅತ್ಯಾಚಾರವನ್ನು ನಡೆಸಿದವರ ವಿರುದ್ಧ ಕಠಿಣ ಕಾನೂನು ಕ್ರಮಗಳನ್ನು ಜರುಗಿಸಿ, ಈ ಅಪ್ರಾಪ್ತೆಯನ್ನು ಕೆಲಸಕ್ಕೆ ಬಳಸಿಕೊಳ್ಳುತ್ತಿದ್ದ ಎಂ.ಜಿ.ಆರ್. ಕ್ರಷರ್ ಮಾಲೀಕನ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರುದ್ಧ ಕಾರ್ಮಿಕ ಕಾಯ್ದೆಯಡಿ ಕಠಿಣ ಕ್ರಮವನ್ನು ಜರುಗಿಸಿ ಹಾಗೂ ಕೆಲಸದ ವೇಳೆಯಲ್ಲಿಯೇ ಈ ಘೋರ ಕೃತ್ಯವು ಜರುಗಿರುವುದರಿಂದ ಇವರ ವಿರುದ್ಧವೂ ಸಹ ಕಾನೂನು ಕ್ರಮ ಜರುಗಿಸಿ, ಇಂತಹ ಹೇಯ ಕೃತ್ಯಗಳು ರಾಜ್ಯದಲ್ಲಿ ಪುನರಾವರ್ತನೆಯಾಗದಂತೆ ಕಾನೂನು ಕ್ರಮವನ್ನು ಕೈಗೊಳ್ಳುವಂತೆ ಈ ಸದನದ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿರುವುದಿಲ್ಲ ಎನ್ನುವುದು ನನಗೆ ಗೊತ್ತು. ಆದರೆ ಇದು heinous offense and offense involving moral turpitude. ಇಂತಹ ಅಪ್ರಾಪ್ತ ಬಾಲಕಿಯ ಮೇಲೆ ಸತತವಾಗಿ 5 ತಿಂಗಳವರೆಗೆ ಸಾಮೂಹಿಕವಾಗಿ ಅತ್ಯಾಚಾರವೆಸಗುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಈ ವಿಷಯ ಶೂನ್ಯವೇಳೆಯಲ್ಲಿ ಬರುವ ಪ್ರಶ್ನೆಯಲ್ಲ. ಈ ಕುರಿತು ಸುದೀರ್ಘವಾದ ಚರ್ಚೆ ಆಗಬೇಕು, ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ಕೊಡುವಂತಹ ಗುರುತರವಾದ ಜವಾಬ್ದಾರಿ ಸರ್ಕಾರದ ಮೇಲೆ ಇದೆ. 15 ವರ್ಷದ ಬಾಲ ಕಾರ್ಮಿಕಳ ಮೇಲೆ 5 ತಿಂಗಳು ಸತತವಾಗಿ ಅತ್ಯಾಚಾರವೆಸಗಿದ್ದಾರೆ. ಇದೊಂದು ಕಂಡರಿಯದಂತಹ, ಕೇಳರಿಯದಂತಹ ವಿಚಿತ್ರ ಘಟನೆಯಾಗಿದೆ. ಇದನ್ನು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು. ಮಾನ್ಯ ಸಭಾಪತಿಯವರೇ, ಈ ವಿಷಯವನ್ನು ನಿಯಮ 68ಕ್ಕೆ ಪರಿವರ್ತಿಸಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಸಭಾಪತಿಯವರು:-** ಮಾನ್ಯ ಸಭಾನಾಯಕರೇ ಈ ಕುರಿತು ಮಧ್ಯಾಹ್ನ ಚರ್ಚೆಗೆ ತೆಗೆದುಕೊಳ್ಳಬಹುದೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಎಂ.ನಾರಾಯಣಸ್ವಾಮಿಯವರು ಬಹಳ ಗಂಭೀರವಾದ ವಿಚಾರವನ್ನು ಉಲ್ಲೇಖ ಮಾಡಿದ್ದಾರೆ. ಪೀಠ ಏನಾದರೂ ತೀರ್ಮಾನ ತೆಗೆದುಕೊಂಡು ಬೇರೆ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಬಹುದು.

**ಶ್ರೀ ಎಸ್.ಆರ್.ಪಾಟೀಲ್:-**ಮಾನ್ಯ ಸಭಾಪತಿಯವರೇ, ಇದನ್ನು ನಿಯಮ 68ಕ್ಕೆ ಪರಿವರ್ತಿಸಬೇಕೆಂದು ಕೇಳಿಕೊಳ್ಳುತ್ತೇನೆ.

ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಮಾನ್ಯ ಸಭಾಪತಿಯವರೇ, ಇದನ್ನು ನಿಯಮ 68ಕ್ಕೆ ಪರಿವರ್ತನೆ ಮಾಡಬಹುದು. ಸರ್ಕಾರ ಚರ್ಚೆ ಮಾಡುವುದಕ್ಕೆ ಮತ್ತು ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಸಿದ್ಧವಿದೆ. ತಾವು ಯಾವಾಗ ಚರ್ಚೆಗೆ ಅವಕಾಶ ಕೊಡುತ್ತೀರೋ ಅದಕ್ಕೆ ಸರ್ಕಾರ ಸಿದ್ಧವಿರುತ್ತದೆ. ನಾಳೆ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದು ಒಳ್ಳೆಯದು.

**ಸಭಾಪತಿಯವರು:–** ಮಧ್ಯಾಹ್ನ ಚರ್ಚೆಗೆ ತೆಗೆದುಕೊಳ್ಳಲು ಆಗುವುದಿಲ್ಲವೇ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಗೃಹಮಂತ್ರಿಗಳಿಗೆ ಸಮಯ ಕೇಳುತ್ತೇನೆ.

**ಸಭಾಪತಿಯವರು:–** ಸಮಯವಿದ್ದರೆ ಇವತ್ತು ಮಧ್ಯಾಹ್ನ ತೆಗೆದುಕೊಳ್ಳೋಣ, ಇಲ್ಲದಿದ್ದರೆ ನಾಳೆ ತೆಗೆದುಕೊಳ್ಳೋಣ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–**ಹಾಗೆಯೇ ಮಾಡೋಣ.

ಇ) ವಿಷಯ: ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ ಶೇಕಡ 30ರಷ್ಟು ಶುಲ್ಕ ಕಡಿತ ಮಾಡಿರುವುದರಿಂದ ಶಿಕ್ಷಕ ಮತ್ತು ಶಿಕ್ಷಕೇತರ ಸಿಬ್ಬಂದಿಗಳ ವೇತನಕ್ಕೆ ತೊಂದರೆಯಾಗುವ ಬಗ್ಗೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಸರ್ಕಾರ 30% ಶುಲ್ಕ ಕಡಿತ ಆದೇಶ ಮಾಡಿರುವುದು ಸರಿಯಷ್ಟೇ. ಕೇವಲ 2% ರಿಂದ 3% ಲಕ್ಷಕ್ಕೂ ಹೆಚ್ಚು ಶುಲ್ಕ ಪಡೆಯುವಂತಹ ವಿದ್ಯಾ ಸಂಸ್ಥೆಗಳ ಸಮಸ್ಯೆಗಳನ್ನು ಗಮನದಲ್ಲಿಟ್ಟು 95% ಶಾಲೆಗಳು ರಾಜ್ಯಾದ್ಯಂತ ರೂ. 10000 ರಿಂದ ರೂ. 50000 ಶುಲ್ಕ ತೆಗೆದುಕೊಂಡು ವರ್ಷಪೂರ್ತಿ ಗುಣಮಟ್ಟದ ಶಿಕ್ಷಣ ನೀಡುತ್ತಾ ಜವಾಬ್ದಾರಿ ಹೊಂದಿದ್ದು ಇದರಲ್ಲಿ 60% ಮಾಸಿಕ ಶುಲ್ಕ ಪಡೆದು ಸಂಬಳ ಹಾಗೂ ಇತರೇ ಖರ್ಚು ನಿಭಾಯಿಸುವಂತಹ ಶಾಲೆಗಳು, ಇಂತಹ ಶಾಲೆಗಳಲ್ಲಿ ಈಗಾಗಲೇ ಶೇಕಡ 30% ರಿಂದ 40% ದಾಖಲಾತಿಯನ್ನು ಪಾಲಕ ಪೋಷಕರು ಮಾಡದೇ ಒಂದೆಡೆ ಕೋವಿಡ್–19 ಸಂಕಷ್ಟದ ಹಿನ್ನೆಲೆಯಲ್ಲಿ ಬಹುತೇಕ ಶಾಲೆಗಳಲ್ಲಿ ಹೊಸ ದಾಖಲಾತಿಯೂ ಆಗದೇ ಹಾಗೂ ಆರ್.ಟಿ.ಇ. ಶುಲ್ಕ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮರುಪಾವತಿಯೂ ಆಗದೇ ಮತ್ತು ಕಳೆದ ವರ್ಷದ ಬಹುತೇಕ ಶುಲ್ಕ ಬಾಕಿ ಇರಿಸಿಕೊಂಡಿರುವುದರಿಂದ ಶಿಕ್ಷಣ ಸಂಸ್ಥೆಗಳು ಈಗಾಗಲೇ ತುಂಬಾ ಆರ್ಥಿಕ ಸಂಕಷ್ಟ ಅನುಭವಿಸುತ್ತಿದ್ದಾರೆ.

ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳಿಗೆ ಕೋವಿಡ್-19ರ ಸಂಕಷ್ಟ ದಿನಗಳಲ್ಲಿ ಸರ್ಕಾರ ಹಾಗೂ ಇತರೇ ಇಲಾಖೆಗಳು ಒಂದು ನಯಾ ಪೈಸೆ ರಿಯಾಯಿತಿ ನೀಡಿರುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಭರವಸೆಯಂತೆ, ಶಿಕ್ಷಕರು/ಶಿಕ್ಷಕೇತರ ವರ್ಗಕ್ಕೆ ಯಾವುದೇ ಆರ್ಥಿಕ ನೆರವು ನೀಡಿರುವುದಿಲ್ಲ. ಇದೀಗ ಶುಲ್ಕದಲ್ಲಿ ಶೇಕಡ 30% ಕಡಿತ ಎಂದು ಆದೇಶಿಸಿ, ಜೊತೆಗೆ ಶೇಕಡ 10% ಐಚ್ಛಿಕ ಶುಲ್ಕ ಮತ್ತು ಅಭಿವೃದ್ಧಿ ಶುಲ್ಕ ಮತ್ತು ಇತರೇ ಶುಲ್ಕ ಉಲ್ಲೇಖಿಸಿ ಆದೇಶಿಸಿರುವುದರಿಂದ ನೇರವಾಗಿ 55 ರಿಂದ 60% ಶುಲ್ಕ ಕಡಿತ ಮಾಡಿದಂತಾಗಿದೆ. ಆದಾಯ ತೆರಿಗೆ ಸಲ್ಲಿಸುವ ಸರ್ಕಾರಿ ಅಧಿಕಾರಿಗಳು ಮತ್ತು ನೌಕರರು ಹಾಗೂ ಶ್ರೀಮಂತರಿಗೂ ಶೇಕಡ 30% ಶುಲ್ಕ ಕಡಿತ ಮಾಡಿರುವುದು ಸಮಂಜಸವಲ್ಲ.

ಆದ್ದರಿಂದ ಮುಂದಿನ ದಿನಗಳಲ್ಲಿ ಈ ಕ್ರಮವು ಶಿಕ್ಷಕರು/ಶಿಕ್ಷಕೇತರ ಸಿಬ್ಬಂದಿಯ ಸಂಬಳಕ್ಕೆ ಕುತ್ತುಂಟು ಮಾಡಿದಂತಾಗಿದೆ. ಇದು ಅತ್ಯಂತ ಅವೈಜ್ಞಾನಿಕ ಹಾಗೂ ಮಲತಾಯಿ ಧೋರಣೆಯಾಗಿರುತ್ತದೆ. ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಶಿಕ್ಷಣ ಸಚಿವರ ಧೋರಣೆ ಸರಿಯಲ್ಲ. ಖಾಸಗಿ ಶಿಕ್ಷಣ ಸಂಸ್ಥೆಯ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಗುಣಾತ್ಮಕ ಶಿಕ್ಷಣದ ಹಿತದೃಷ್ಟಿಯಿಂದ ಶೇಕಡ 30% ಅನುಪಾತವನ್ನು 25%ಕ್ಕೆ ಇಳಿಕೆ ಮಾಡಿ ಮತ್ತು ಆದಾಯ ತೆರಿಗೆ ಪಾವತಿಸುವವರಿಗೆ ಶುಲ್ಕ ವ್ಯಾಪ್ತಿಯಿಂದ ಕೈಬಿಟ್ಟು ಆದೇಶವನ್ನು ಮಾರ್ಪಡಿಸಬೇಕೆಂದು ಮಾನ್ಯ ಪ್ರಾಥಮಿಕ, ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರನ್ನು ಕೋರುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ(ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ಪ್ರಸ್ತಾಪ ಮಾಡಿದಂತಹ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸಲಾಗುವುದು.

(ಮುಂದು . . .)

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(117) 3–2–2021/2.10/ ಡಿಎಸ್–ಬಿಎನ್ಎಸ್

(ಈ) ವಿಷಯ: ರಾಜ್ಯದ ಉಪ ನೋಂದಣಾಧಿಕಾರಿಗಳ ಕಚೇರಿಗಳಲ್ಲಿ ಆಸ್ತಿ ನೋಂದಣಿಗೆ ಗಣಕ ಯಂತ್ರಗಳ ಸರ್ವರ್ ಸ್ಥಗಿತಗೊಂಡು ನೋಂದಣಿ ಕಾರ್ಯವಿಲ್ಲದೇ ಸಾರ್ವಜನಿಕರಿಗೆ ಅನಾನುಕೂಲವಾಗಿರುವ ಬಗ್ಗೆ.

-----

**ಶ್ರೀ ಎಸ್.ರುದ್ರೇಗೌಡ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ರಾಜ್ಯದ ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಸೋಮವಾರ ಸರ್ವರ್ ಸ್ಥಗಿತಗೊಂಡಿದ್ದು ಆಸ್ತಿ ನೋಂದಣಿ ಕೆಲಸಕ್ಕೆ ಸಮಸ್ಯೆಯಾಗಿ ಕಾಡಿತು. ರಾಜ್ಯದ 282 ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಆಸ್ತಿ ನೋಂದಣಿಗೆ online ವ್ಯವಸ್ಥೆ ಜಾರಿಯಲ್ಲಿದೆ. ಈ ಕಚೇರಿಗಳಲ್ಲಿ ದಿನವೂ ನೋಂದಣಿ ಪ್ರಕ್ರಿಯೆಗೆ ಜನ ಮುಗಿ ಬೀಳುವುದು ಸಾಮಾನ್ಯ. ಕಚೇರಿಗೆ ಬಂದು ಕಾದು ಕುಳಿತುಕೊಳ್ಳುವುದನ್ನು ತಪ್ಪಿಸಲು ಅರ್ಜಿ ಸಲ್ಲಿಸಿದವರಿಗೆ ಮೊದಲೇ ದಿನಾಂಕ ನಿಗದಿಪಡಿಸಿ ಅದೇ ದಿನದಂದು ಬಂದು ನೋಂದಣಿ ಮಾಡಿಕೊಳ್ಳಲು ಅವಕಾಶ ನೀಡಲಾಗುತ್ತಿದೆ.

ಅದೇ ರೀತಿ ನೋಂದಣಿಗೆ ಸೋಮವಾರ ದಿನಾಂಕ:01.02.2021 ರಂದು ಸಮಯ ಪಡೆದಿದ್ದವರು ಉಪ ನೋಂದಣಾಧಿಕಾರಿಗಳ ಕಚೇರಿ ಎದುರು ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದರು. ಬೆಳಿಗ್ಗೆ ಕಚೇರಿ ಆರಂಭವಾದ ಹೊತ್ತಿನಲ್ಲಿ ಕೆಲ ಕಚೇರಿಗಳಲ್ಲಿ ನಾಲ್ಕೈದು ಆಸ್ತಿಗಳ ನೋಂದಣಿಯಾಗಿದ್ದರೆ, ಬಹುತೇಕ ಕಚೇರಿಗಳಲ್ಲಿ ಒಂದೇ ಒಂದು ಆಸ್ತಿಯು ನೋಂದಣಿಯಾಗಲಿಲ್ಲ. ದಿನಾಂಕ:01.02.2021 ಸೋಮವಾರದಂದು ಸ್ಥಗಿತಗೊಂಡಿದ್ದ ಸರ್ವರ್‌ಗಳು ಇಂದಿನವರೆಗೂ ಸರಿಯಾಗದಿರುವುದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ. ಈ ಸಮಸ್ಯೆ ಉಂಟಾಗಿರುವುದು ಇದೇ ಮೊದಲಲ್ಲ. ಆಗಾಗ್ಗೆ ಸರ್ವರ್ ಸ್ಥಗಿತಗೊಳ್ಳುವುದು ಸಾಮಾನ್ಯವಾಗಿದೆ. ಇದಕ್ಕೆ ಸರ್ಕಾರ ಶಾಶ್ವತ ಪರಿಹಾರವನ್ನು ಕಂಡುಕೊಳ್ಳಬೇಕು.

**ಶ್ರೀ ಆರ್.ಅಶೋಕ್ (ಕಂದಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಕಾವೇರಿ ತಂತ್ರಾಂಶ ಅಳವಡಿಸಿರುವುದು ತುಂಬಾ ಹಳೆಯದು. ಈ ತಂತ್ರಾಂಶ 2003 ರಲ್ಲಿ ಬಂದಿದೆ. 2014 ರಲ್ಲಿ ಬದಲಾವಣೆ ಮಾಡಬೇಕೆಂದು ಪ್ರಸ್ತಾವನೆ ಬಂದು ಹಾಗೆ ಪೆಂಡಿಂಗ್ ಆಗಿ ಕುಳಿತಿದೆ. ಈ ಸಮಸ್ಯೆ ಏಕೆ ಆಗಿದೆ ಎಂದರೆ 2008 ರಲ್ಲಿ ಏನು ತಂತ್ರಾಂಶ ಇತ್ತು ಅದಕ್ಕೆ ಬಹಳಷ್ಟು add ಮಾಡುತ್ತಿದ್ದೇವೆ. 2014 ರಲ್ಲಿ ಇ–ಸ್ವತ್ತು ತಂತ್ರಾಂಶವನ್ನು ಅಳವಡಿಸಿದ್ದೇವೆ. 2018 ರಲ್ಲಿ ಕೆ–2 ಸೇರಿಸಿದ್ದೇವೆ. 2019 ರಲ್ಲಿ ಇ–ಆಸ್ತಿ ಅನ್ನು ಸೇರಿಸಿದ್ದೇವೆ. ಈಗ 2020 ರಲ್ಲಿ ಬಿಡಿಎ ಸೇರಿಸಿದ್ದೇವೆ. ಈ ರೀತಿ ಸೇರಿಸುತ್ತಾ ಹೋಗಿ ಈ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ತಂತ್ರಾಂಶದ ಮೇಲೆ ಹೆಚ್ಚು ಒತ್ತಡ ಆಗಿದೆ. ಅದಕ್ಕೆ ಬದಲಾವಣೆ ಮಾಡಬೇಕು. ಅದನ್ನು ಬದಲಾವಣೆ ಮಾಡುವಂತಹ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದೇವೆ. ಅದಕ್ಕೆ ಸುಮಾರು 8–10 ತಿಂಗಳು ಬೇಕಾಗುತ್ತದೆ. ಆದ್ದರಿಂದ ಈ ಸರ್ವರ್‌ಗಳ ಮೇಲಿರುವ ಒತ್ತಡವನ್ನು ಕಡಿಮೆ ಮಾಡುವ ದೃಷ್ಟಿಯಿಂದ ನಾವು ಹೊಸ ವ್ಯವಸ್ಥೆಯನ್ನು ತರಬೇಕಾಗಿದೆ. ಅದನ್ನು ಈಗ ತರುತ್ತಿದ್ದೇವೆ. ಅಲ್ಲಿಯವರೆವಿಗೂ ಏನು ಸಮಸ್ಯೆ ಇದೆ ಅದನ್ನು ಪರಿಹಾರ ಮಾಡಲು ನಾನು ಸಭೆ ಕರೆದಿದ್ದೇನೆ. ನಿನ್ನೆ ಏನು ಸಮಸ್ಯೆಯಾಗಿತ್ತು ಅದೆಲ್ಲಾ ಇವತ್ತು ಬಗೆಹರಿದಿದೆ. ಎಲ್ಲಾ ಕಡೆ ನೋಂದಣಿಗಳು ಪ್ರಾರಂಭವಾಗಿದೆ. ಉಳಿದಂತಹ ಸಮಸ್ಯೆಗಳು, ಅಲ್ಲಿ ಯು.ಪಿ.ಎಸ್. ಈ ರೀತಿಯ ಸಮಸ್ಯೆಗಳಿದ್ದರೆ ಅದನ್ನು ಪರಿಹಾರ ಮಾಡುವುದಕ್ಕೆ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಇನ್ನು ಮುಂದೆ ಈ ರೀತಿ ನೋಂದಣಿ ಮಾಡುವುದನ್ನು ನಿಲ್ಲಿಸುವಂತಹ ತೊಂದರೆಗಳೇನು ಬರುತ್ತಿದೆ ಅದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಸೂಚನೆಯನ್ನು ಕೊಟ್ಟಿದ್ದೇನೆ.

**ಶ್ರೀ ಎಸ್.ರುದ್ರೇಗೌಡ:–** ಧನ್ಯವಾದಗಳು.

ಉ) ವಿಷಯ: ಸಂಕಷ್ಟದಲ್ಲಿರುವ ಬಡ ನೇಕಾರರುಗಳಿಗೆ ನೆರವಾಗಲು
ನೇಕಾರರ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡುವ ಬಗ್ಗೆ.

------

**ಶ್ರೀ ಕೆ.ಸಿ.ಕೊಂಡಯ್ಯ(ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ತಾವು ಅವಕಾಶ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಕರ್ನಾಟಕ ರಾಜ್ಯದಲ್ಲಿ ನೇಕಾರರಿಗೆ ಸಂಬಂಧಪಟ್ಟಂತೆ ಮೂರು ಅಭಿವೃದ್ಧಿ ನಿಗಮಗಳಿರುತ್ತವೆ. ಒಂದ್ನನೆಯದು, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ: ಈ ನಿಗಮದಿಂದ ಸುಮಾರು 5 ರಿಂದ 6 ಸಾವಿರ ಮಂದಿಗೆ ಮಾತ್ರ ಅನುಕೂಲವಾಗುತ್ತಿದ್ದು, ಕೇವಲ ವೃತ್ತಿಪರವಾಗಿ ನೂಲು ತೆಗೆಯುವುದು, ಬಟ್ಟೆ ತಯಾರು ಮಾಡುವುದು, ಈ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ. ಇವರಿಗೆ ಯಾವುದೇ ರೀತಿ ಆರ್ಥಿಕ ಸೌಲಭ್ಯಗಳಿರುವುದಿಲ್ಲ. ಎರಡನೆಯದು, ಕರ್ನಾಟಕ ರಾಜ್ಯ ಜವಳಿ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ: ವಿದ್ಯುತ್ ಕೈಮಗ್ಗಗಳನ್ನು ಬಳಕೆ ಮಾಡುತ್ತಿರುವವರ ಪ್ರಮಾಣ 8 ರಿಂದ 10 ಸಾವಿರ ಮಾತ್ರ ಇರುತ್ತಾರೆ. ಇವರಿಗೆ ಯಾವುದೇ ರೀತಿಯ ಸೌಲಭ್ಯಗಳು ಇರುವುದಿಲ್ಲ. ಮೂರನೆಯದಾಗಿ, ಕಾವೇರಿ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ: ಇದು ಸೊಸೈಟಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ವ್ಯಾಪ್ತಿ ಅಡಿಯಲ್ಲಿ ನೋಂದಣಿಗೊಂಡಿರುತ್ತದೆ. ಇಲ್ಲಿಯೂ ಸಹ ನೇಕಾರರಿಗೆ ಯಾವುದೇ ಸೌಲಭ್ಯಗಳು ಇರುವುದಿಲ್ಲ.

ರಾಜ್ಯದಲ್ಲಿ ನೇಕಾರರು ಸುಮಾರು 60 ರಿಂದ 70 ಲಕ್ಷ ಜನಸಂಖ್ಯೆಯನ್ನು ಹೊಂದಿದ್ದು, ಬಹಳಷ್ಟು ಜನ ತಮ್ಮ ಕುಲಕಸುಬನ್ನು ತೊರೆದು ಬೇರೆ ಬೇರೆ ಸಣ್ಣ ಸಣ್ಣ ವೃತ್ತಿಗಳಲ್ಲಿ ಕಿರಾಣಿ ಅಂಗಡಿ, ಬೀದಿ ಬದಿ ಹೋಟೆಲ್‌ಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಸರ್ಕಾರದಿಂದ ಯಾವುದೇ ಆರ್ಥಿಕ ಸೌಲಭ್ಯಗಳಿಲ್ಲದ ಕಾರಣ ಬಡ ನೇಕಾರರು ಸಂಕಷ್ಟದಲ್ಲಿದ್ದು, ಸಾಲದ ಬಾಧೆಯಿಂದಾಗಿ ಆತ್ಮಹತ್ಯೆಗೆ ಮುಂದಾಗುತ್ತಿದ್ದಾರೆ.

ಆದಕಾರಣ, ಈ ಹಿಂದೆ ಸಫಾಯಿ ಕರ್ಮಚಾರಿ ವೃತ್ತಿಯಲ್ಲಿ ತೊಡಗಿಕೊಂಡಿದ್ದವರು ಯಾವ ರೀತಿ ತಮ್ಮ ವೃತ್ತಿಯನ್ನು ತೊರೆದು ತಮ್ಮ ಬದುಕನ್ನು ಪುನರುಜ್ಜೀವನಗೊಳಿಸಿಕೊಳ್ಳಲು ಅನುಕೂಲವಾಗುವಂತೆ ಸರ್ಕಾರ ಸಫಾಯಿ ಕರ್ಮಚಾರಿ ನಿಗಮವನ್ನು ಮಾಡಿದೆಯೋ ಅಲ್ಲದೆ, ಇತ್ತೀಚೆಗೆ ವಿವಿಧ ಜಾತಿ ಜನಾಂಗದವರು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಬೇಕೆನ್ನುವ ದಿಸೆಯಲ್ಲಿ ಸರ್ಕಾರ ಹಲವು ಜಾತಿ ನಿಗಮಗಳನ್ನು ಸ್ಥಾಪನೆ ಮಾಡಿದೆಯೋ ಅದೇ ಮಾದರಿಯಲ್ಲಿ ನೇಕಾರರ ಅಭಿವೃದ್ಧಿ ಸಲುವಾಗಿಯೇ ಒಂದು ನಿಗಮವನ್ನು ಸ್ಥಾಪನೆ ಮಾಡಿ ಎಲ್ಲಾ ರೀತಿಯ ಸೌಲಭ್ಯಗಳು ಅವರಿಗೆ ಸಿಗುವಂತೆ ಅನುಕೂಲ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾನಾಯಕರು):-** ಮಾನ್ಯ ಸಭಾಪತಿಯವರೇ, ಮಾನ್ಯ ಕೆ.ಸಿ.ಕೊಂಡಯ್ಯನವರು ನೇಕಾರರ ಸಮಸ್ಯೆಗಳ ಬಗ್ಗೆ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸದಸ್ಯರಿಗೆ ಮಾನ್ಯ ಮುಖ್ಯಮಂತ್ರಿಗಳಿಂದ ಉತ್ತರವನ್ನು ಒದಗಿಸುತ್ತೇವೆ.

**ಸಭಾಪತಿಯವರು:-** ಈಗ ಸದನವನ್ನು 3 ಗಂಟೆ 30 ನಿಮಿಷದವರೆಗೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 2 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 3 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)**

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(118)03–02–2021(4–00)ಎಂವಿ–ಎಂಡಿ

**ಭೋಜನಕ್ಕಾಗಿ ಮಧ್ಯಾಹ್ನ 2 ಗಂಟೆ 17 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಮತ್ತೆ ಸಾಯಂಕಾಲ 4 ಗಂಟೆ 2 ನಿಮಿಷಕ್ಕೆ ಸಮಾವೇಶಗೊಂಡಿತು**

**ಮಾನ್ಯ ಸಭಾಪತಿಯವರು ಪೀಠದಲ್ಲಿ ಉಪಸ್ಥಿತರಿದ್ದರು**

**ಸಭಾಪತಿಯವರು:–** ಮಾನ್ಯ ಸಭಾ ನಾಯಕರೆ, ಕರ್ನಾಟಕ ಜಾನುವಾರು ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ, 2020ರ ಬಗ್ಗೆ ತಿಳಿಸಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ಮಾನ್ಯ ಪಶುಸಂಗೋಪನೆ ಸಚಿವರು ಲಭ್ಯವಿರುವುದಿಲ್ಲ. ಮತ್ತೊಮ್ಮೆ ಅದನ್ನು ಪಟ್ಟಿ ಮಾಡುವಾಗ ನಾನು ತಮ್ಮ ಬಳಿ ಮಾತನಾಡುತ್ತೇನೆ. ಈಗ ಇರುವಂತಹ ವಿಧೇಯಕಗಳನ್ನು ತೆಗೆದುಕೊಳ್ಳಿ. ಏನು ತೊಂದರೆ ಇಲ್ಲ ನಾವು ಮತ್ತು ವಿರೋಧ ಪಕ್ಷದ ನಾಯಕರು ಮಾತನಾಡಿಕೊಂಡಿದ್ದೇವೆ.

**ಸಭಾಪತಿಯವರು:–** ಆಯಿತು.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸಭಾ ನಾಯಕರು ಆ ವಿಧೇಯಕವನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಿ ಎಂದು ಗಟ್ಟಿಯಾಗಿ ಹೇಳಲಿ. ಇದು ಪ್ರತಿದಿನ ಅಜೆಂಡಾದಲ್ಲಿ ಬರುತ್ತಿದೆ ಮತ್ತು ಮಾನ್ಯ ಪಶುಸಂಗೋಪನೆ ಮಂತ್ರಿಗಳು ಬರುತ್ತಾರೆಂದು ಹೇಳುತ್ತಾರೆ.

**<u>05) ಸಭೆಯ ಮುಂದಿಡಲಾದ ಕಾಗದ ಪತ್ರ.</u>**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು) (ಮುಖ್ಯಮಂತ್ರಿಯವರ ಪರವಾಗಿ):** ಭಾರತ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್, 2019ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಸಾರ್ವಜನಿಕ ವಲಯ ಉದ್ಯಮಗಳ ಮೇಲಿನ ವರದಿಯನ್ನು (2020ನೇ ವರ್ಷದ ವರದಿ ಸಂಖ್ಯೆ–5) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

**ಸಭಾಪತಿಯವರು:–** ಮಂಡಿಸಲಾಯಿತು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 6) ಕಾರ್ಯದರ್ಶಿಯವರ ವರದಿ

**ಕಾರ್ಯದರ್ಶಿ, ಕವಿಪ:–** ಮಾನ್ಯ ಸಭಾಪತಿಯವರೇ, ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

01. ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕ, 2021.

02. ಬೆಂಗಳೂರು ಡಾ:ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2021.

03. ವಿದ್ಯಾಶಿಲ್ಪ್ ವಿಶ್ವವಿದ್ಯಾಲಯ ವಿಧೇಯಕ, 2020.

04. ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ, 2020.

05. ಸೆಂಟ್ ಜೋಸೆಫ್ ವಿಶ್ವವಿದ್ಯಾಲಯ ವಿಧೇಯಕ, 2021.

06. ಶ್ರೀ ಜಗದ್ಗುರು ಮುರುಘಾರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕ, 2020

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೆ ತಾವು ಏನೋ ಹೇಳುತ್ತಿದ್ದೀರಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಈ ಗೋಹತ್ಯೆ ಮಸೂದೆ ವಿಧೇಯಕ ಮೂರು ದಿನಗಳಿಂದ ಪ್ರತಿದಿನ ಈ ವಿಷಯ ಅಜೆಂಡಾದಲ್ಲಿ ಬರುತ್ತಿದೆ. ಮಾನ್ಯ ಸಭಾ ನಾಯಕರು ಮಾನ್ಯ ಪಶುಸಂಗೋಪನಾ ಮಂತ್ರಿಗಳು ಬರುತ್ತಾರೆಂದು ಹೇಳುತ್ತಿದ್ದಾರೆ. ಅವರು ಸದರಿ ವಿಧೇಯಕವನ್ನು ನಾಳೆ ತೆಗೆದುಕೊಳ್ಳುತ್ತೇವೆಂದು ಹೇಳಲಿ ಅಥವಾ ಮುಂದಿನ ಅಧಿವೇಶನದಲ್ಲಿ ತರುತ್ತೇವೆಂದು ಹೇಳಲಿ. ಮಾನ್ಯ ಸಭಾ ನಾಯಕರು ಸುಮ್ಮನೆ ಮಂತ್ರಿಗಳು ಬರುತ್ತಾರೆಂದು ಹೇಳುತ್ತಾರೆ.

**ಸಭಾಪತಿಯವರು:–** ಮಾನ್ಯ ಸಭಾ ನಾಯಕರು ನಿನ್ನೆ ಹೇಳಿದ್ದಾರೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಚರ್ಚೆ ಮಾಡಿ, ಅದನ್ನು ನಿಗದಿಪಡಿಸುತ್ತೇನೆಂದು ಹೇಳಿದ್ದೆ. ಅದನ್ನು ಸರಿಪಡಿಸಿಕೊಳ್ಳುತ್ತೇನೆಂದು ಮಾನ್ಯ ಮರಿತಿಬ್ಬೇಗೌಡರಿಗೆ ತಿಳಿಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅವರು ಸರಿ ಮಾಡುವುದು ಬೇಡ. ಆ ವಿಧೇಯಕವನ್ನು ಇವತ್ತು ತರುತ್ತಾರೋ ಅಥವಾ ಮುಂದಿನ ಅಧಿವೇಶನಕ್ಕೆ ತರುತ್ತಾರೋ ಎಂದು ಹೇಳಲಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ನಾನು ತಮ್ಮೊಂದಿಗೆ ಚರ್ಚೆ ಮಾಡುತ್ತೇನೆಂದು ಹೇಳಿದ್ದೇನೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ತಾವು ಇಲ್ಲೇ ಕುಳಿತ್ತಿದ್ದೀರಿ. ಇನ್ನು ಚರ್ಚೆ ಎಂದರೆ ಎದ್ದು ಹೊರಗೆ ಹೋಗಬೇಕು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಆ ರೀತಿ ಏನೂ ಇಲ್ಲ. ಮಾನ್ಯ ಸದಸ್ಯರು ಮುಕ್ತವಾಗಿ ಮಾತನಾಡಬಹುದು.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಆ ವಿಧೇಯಕ ಇವತ್ತು ಚರ್ಚೆಗೆ ಬರುತ್ತದೆಯೋ, ನಾಳೆ ಚರ್ಚೆಗೆ ಬರುತ್ತದೆಯೋ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸಭಾ ನಾಯಕರು):–** ಮಾನ್ಯ ಸಭಾಪತಿಯವರೇ, ನಾನು ಕೆಲವು ಮಾರ್ಗಗಳನ್ನು ಸದಸ್ಯರಾದ ಮಾನ್ಯ ಸಿ.ಎಂ.ಇಬ್ರಾಹಿಂ ಸಾಹೇಬರಿಂದಲೇ ಕಲಿತ್ತಿದ್ದೇನೆ. ಅವರು ಆಗಾಗ ನನಗೆ ಮಾರ್ಗದರ್ಶನ ಕೊಡುತ್ತಿರುತ್ತಾರೆ.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಅವರಿಗೆ ಏನೇ ಮಾರ್ಗವಿದ್ದರು, ನಾವು ಅವರು ವಿಧೇಯಕವನ್ನು ತರುತ್ತಾರೆಂದು ಭಂಡ್ ಬಿದ್ದು ಕುಳಿತ್ತಿದ್ದೇವೆ. ಅವರು ಏನೇ ಮಾಡಿದರು ನಾವು ಇಲ್ಲಿಂದ ಹೋಗುವುದಿಲ್ಲ. ಅದು ಇವತ್ತು ಆಗುತ್ತದೆಯೋ ನಾಳೆ ಆಗುತ್ತದೆಯೋ. ನಾಳೆಗೆ ಆದರೆ ಆಗಲಿ. ಏಕೆಂದರೆ, ಇನ್ನು ಅಧಿವೇಶನ ಇರುವುದೇ ಎರಡು ದಿವಸ ಮಾತ್ರ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 07.ಶಾಸನ ರಚನೆ

## ವಿಧೇಯಕಗಳ ಪರ್ಯಾಲೋಚನೆ ಹಾಗೂ ಅಂಗೀಕಾರ

### ಅ) ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕ, 2021

### ಪರ್ಯಾಲೋಚನಾ ಪ್ರಸ್ತಾವ

**ಡಾ|| ಅಶ್ವಥ್‌ನಾರಾಯಣ್ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):-** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

### ಪ್ರಸ್ತಾವವನ್ನು ಮಂಡಿಸಲಾಯಿತು

**ಡಾ|| ಅಶ್ವಥ್‌ನಾರಾಯಣ್ ಸಿ.ಎನ್:-** ಮಾನ್ಯ ಸಭಾಪತಿಯವರೇ, ನಾನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುವುದೇನೆಂದರೆ, ಒಟ್ಟಾರೆ ಐದು ವಿಶ್ವವಿದ್ಯಾಲಯದ ವಿಧೇಯಕಗಳ ಪಯಾಲೋಚನೆಗೆ ತೆಗೆದುಕೊಳ್ಳುವ ಪ್ರಸ್ತಾವನೆ ಇದೆ. ಒಟ್ಟಾರೆ ಐದು ಸಹ ಖಾಸಗಿ ವಿಶ್ವವಿದ್ಯಾಲಯಗಳಿರುವುದರಿಂದ, ಐದು ವಿಶ್ವವಿದ್ಯಾಲಯಗಳ ವಿಧೇಯಕಗಳನ್ನು ಒಟ್ಟಿಗೆ ತೆಗೆದುಕೊಂಡು ಚರ್ಚೆ ಮಾಡೋಣ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಭಾಪತಿಯವರೇ, ಈ ಐದು ವಿಧೇಯಕಗಳು ಖಾಸಗಿ ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟಿರುವುದರಿಂದ, ಈ ಐದು ವಿಧೇಯಕಗಳನ್ನು ಒಟ್ಟಿಗೆ ತೆಗೆದುಕೊಳ್ಳುವುದು ಸೂಕ್ತ. ಏಕೆಂದರೆ, ಐದು ಸಹ ಒಂದೇ ತರಹ ಇದೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸಭಾಪತಿಯವರೇ, ಐದು ವಿಶ್ವವಿದ್ಯಾಲಯಗಳ ಉದ್ದೇಶಗಳು ಒಂದೇ ರೀತಿ ಇದೆ. ಆದುದರಿಂದ ಸಾಮಾನ್ಯವಾಗಿ ಚರ್ಚೆ ಆಗಲಿ. ಆದರೆ, ವಿಧೇಯಕಗಳು ಪ್ರತ್ಯೇಕವಾಗಿ ಪಾಸ್ ಆಗಬೇಕು.

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ವಿಧೇಯಕದ ಮೇಲೆ ಚರ್ಚೆ ಒಂದೇ ಬಾರಿಗೆ ಆಗಲಿ. ಆದರೆ, ವಿಧೇಯಕಗಳು ಪ್ರತ್ಯೇಕವಾಗಿ ಪಾಸ್ ಆಗಲಿ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ. ಆದುದರಿಂದ ಸದಸ್ಯರಾದ ಮಾನ್ಯ ಪುಟ್ಟಣ್ಣ ಮತ್ತು ವೈ.ಎ.ನಾರಾಯಣಸ್ವಾಮಿಯವರನ್ನು ಕುಳಿತುಕೊಳ್ಳುವಂತೆ ತಿಳಿಸಿ.

**ಡಾ॥ ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾನು ಸದಸ್ಯರಾದ ಮಾನ್ಯ ಮರಿತಿಬ್ಬೇಗೌಡರಷ್ಟು ಬುದ್ಧಿವಂತನಲ್ಲ.

**(ಗೊಂದಲ)**

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮಾನ್ಯ ಪುಟ್ಟಣ್ಣನವರಿಗೆ ಹೇಳಿದ್ದೇನೆ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಅಶ್ವಥ್ ನಾರಾಯಣ್‌ರವರು ಸಮರ್ಥರಿದ್ದಾರೆ.

**(ಗೊಂದಲ)**

**ಡಾ॥ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಮಗೂ ಸಹ ಮಾತನಾಡುವುದಕ್ಕೆ ಅವಕಾಶವಿದೆ. ದಯವಿಟ್ಟು ಮಾನ್ಯ ಮರಿತಿಬ್ಬೇಗೌಡರನ್ನು ಕುಳಿತುಕೊಳ್ಳುವಂತೆ ತಿಳಿಸಿ. ಈಗ ಐದು ವಿಧೇಯಕಗಳು ಒಂದೇ ರೀತಿ ಇದ್ದು, ಅವುಗಳ ಮೇಲೆ ಸಮಗ್ರವಾಗಿ ಚರ್ಚೆ ಆಗಲಿ. ಆದರೆ, ವಿಧೇಯಕಗಳು ಬೇರೆ ಬೇರೆಯಾಗಿ ಪಾಸ್ ಆಗಲಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಬೆಂಗಳೂರಿನವರಿಗೆ ಇದರ ಬಗ್ಗೆ ಏನು ಇಷ್ಟೊಂದು ಆಸಕ್ತಿ ಇದೆ.

**ಶ್ರೀಎನ್.ಅಪ್ಪಾಜಿಗೌಡ:–** ಮಾನ್ಯ ಸಭಾಪತಿಯವರೇ, ಮಾನ್ಯ ವೈ.ಎ.ನಾರಾಯಣ ಸ್ವಾಮಿಯವರಿಗೆ ಏನು ಇಷ್ಟೊಂದು ಆಸಕ್ತಿ ಇದೆ.

**ಶ್ರೀ ಪುಟ್ಟಣ್ಣ:–** ಮಾನ್ಯ ಸಭಾಪತಿಯವರೇ, ಈ ಎಲ್ಲಾ ವಿಧೇಯಕಗಳು ಒಟ್ಟಿಗೆ ಚರ್ಚೆಯಾಗಲಿ.

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**(ಗೊಂದಲ)**

**ಡಾ॥ ವೈ.ಎ.ನಾರಾಯಣಸ್ವಾಮಿ:-** ಮಾನ್ಯ ಸಭಾಪತಿಯವರೇ, ಮಾನ್ಯ ಮರಿತಿಬ್ಬೇಗೌಡರು ವಿಧೇಯಕಗಳ ಮೇಲೆ ಒಂದು ಗಂಟೆಯವರೆಗೆ ಮಾತನಾಡುತ್ತಾರೆ. ಅದನ್ನು ತಡೆದುಕೊಳ್ಳುವುದಕ್ಕೆ ಆಗುತ್ತದೆಯೇ? ಈಗ ಐದು ವಿಧೇಯಕಗಳಿವೆ, ಅದಕ್ಕೆ ಐದು ಗಂಟೆಗಳಾದರೆ ಗತಿ ಏನು? ಅದಕ್ಕಾಗಿ ಐದು ವಿಧೇಕಗಳಿಗೆ ಒಂದು ಗಂಟೆಯ ಸಮಯ ಮಾತನಾಡಿಬಿಡಲಿ.

**ಸಭಾಪತಿಯವರು:-** ಮಾನ್ಯ ಸಚಿವರೆ, ತಾವು ವಿವರಣೆ ಕೊಡುವಾಗ ಈ ಎಲ್ಲಾ ವಿಧೇಯಕಗಳ ಬಗ್ಗೆ ಒಟ್ಟಿಗೆ ಸೇರಿಸಿ ವಿವರಣೆ ನೀಡಿ. ವಿಧೇಯಕವನ್ನು ಒಟ್ಟಿಗೆ on record ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ನೀವು ವಿವರಣೆ ನೀಡುವಾಗ ಒಟ್ಟಿಗೆ ಹೇಳಿ. ಆಗ ಎಲ್ಲಾ ಸದಸ್ಯರು ಒಟ್ಟಿಗೆ ಸೇರಿಸಿಕೊಂಡು ಮಾತನಾಡುತ್ತಾರೆ. ವಿಧೇಕವನ್ನು ಪಾಸ್ ಮಾಡುವಾಗ ಬೇರೆ ಬೇರೆಯಾಗಿ ಮಾಡಬೇಕು. ಆದರೆ, ವಿವರಣೆ ನೀಡುವಾಗ ಒಟ್ಟಾಗಿ ಹೇಳಿ.

**ಡಾ॥ ಅಶ್ವಥ್‌ನಾರಾಯಣ್ ಸಿ.ಎನ್:-** ಮಾನ್ಯ ಸಭಾಪತಿಯವರೇ, ಆಯಿತು. The New Horizon Educational and Cultural Trust, Bengaluru ರವರು ಖಾಸಗಿ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಈಗಾಗಲೇ ಹಲವಾರು ವರ್ಷ ಈ ಸಂಸ್ಥೆ ಶಿಕ್ಷಣ ಕ್ಷೇತ್ರದಲ್ಲಿ ಬಹಳ ಉತ್ತಮವಾಗಿ ಕೆಲಸ ಕಾರ್ಯವನ್ನು ಮಾಡಿ ಸಮಾಜದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮವಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಗುಣಮಟ್ಟದ ಶಿಕ್ಷಣವನ್ನು ಹೆಚ್ಚಿಸುವುದಕ್ಕೆ ಮತ್ತು Gross Enrolment Ratio ವನ್ನು ಹೆಚ್ಚಿಸುವುದಕ್ಕೆ, ಇವತ್ತು ಏನು ನಮ್ಮ ರಾಜ್ಯದಲ್ಲಿ Gross Enrolment Ratio ಶೇಕಡಾ 28ರಷ್ಟು ಇದೆ. National Average 26% ಇದೆ. ನಮ್ಮ ಸುತ್ತಮುತ್ತಲಿನ ರಾಜ್ಯದ Gross Enrolment Ratio ಎಷ್ಟಿದೆ ಎಂದರೆ, ತಮಿಳುನಾಡು ರಾಜ್ಯದಲ್ಲಿ ಶೇಕಡಾ 50ರಷ್ಟು ಇದೆ. ಕೇರಳ ರಾಜ್ಯದಲ್ಲಿ ಶೇಕಡಾ 47ರಷ್ಟು ಇದೆ. ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ರಾಜ್ಯಗಳಲ್ಲಿ ಶೇಕಡಾ 32 ರಿಂದ 33ರಷ್ಟು ಇದೆ. ಗೋವಾ ರಾಜ್ಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ Gross Enrolment Ratio ಇದೆ. ಮುಖ್ಯವಾಗಿ ಈ ಒಂದು ಖಾಸಗಿ ವಿಶ್ವವಿದ್ಯಾಲಯಗಳ ಅವಶ್ಯಕತೆ ಬಹಳಷ್ಟು ಇದೆ. ಇಲ್ಲಿ ಗುಣಮಟ್ಟ ಮತ್ತು ಅವಶ್ಯಕತೆಗಳನ್ನು ಮತ್ತು ಬದಲಾಗುತ್ತಿರುವಂತಹ ಅವಶ್ಯಕತೆಗಳು, demand and supply; ಈಗ formal ಆಗಿ ನಮ್ಮಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಬಹಳಷ್ಟು Traditional Courses ಗಳಿವೆ. ಆದರೆ, ಇವತ್ತು ಈ job scenario ಅಥವಾ Technology and Services ಮತ್ತು ನೂತನವಾಗಿ emerge ಆಗುತ್ತಿರುವಂತಹ emerging areas ಗಳಲ್ಲಿ ಬೇರೆ ಬೇರೆ ರೀತಿ ಇರುವಂತಹ ಬೇಡಿಕೆಗಳಿವೆ. ಬಹಳಷ್ಟು ಬೇಡಿಕೆಗಳಿರುಂತಹ ಮತ್ತು ಬದಲಾಗುತ್ತಿರುವಂತಹ ಪರಿಸ್ಥಿತಿಗಳಲ್ಲಿ ಈ ಬೇಡಿಕೆಗಳನ್ನು ಪೂರೈಸಬೇಕೆಂದರೆ, ಇಂತಹ ಖಾಸಗಿ ವಿಶ್ವವಿದ್ಯಾಲಯಗಳಿಗೆ ಸ್ವಾಯತ್ತತೆಯನ್ನು ಕೊಟ್ಟು, ಹೆಚ್ಚಿನ ರೀತಿಯಂತಹ ಕ್ಷೇತ್ರದಲ್ಲಿ ಕೋರ್ಸ್‌ಗಳನ್ನು ಪ್ರಾರಂಭ ಮಾಡುವಂಥದ್ದು ಮತ್ತು ಈ demand and supply ಗಳನ್ನು ಪೂರೈಸುವುದು ಬಹಳಷ್ಟು ಅವಶ್ಯಕತೆ ಇದೆ. ಹಾಗಾಗಿ ಈ ದಿಕ್ಕಿನಲ್ಲಿ Gross Enrolment Ratio ವನ್ನು ನೋಡಿದಾಗ, ನಾವು ಬಹಳ ದೂರ ಇದ್ದೇವೆ.

**(ಮುಂದು...)**

(119) 03.02.2021 04.10 LL-AK

**ಡಾ: ಅಶ್ವತ್ಥ್ ನಾರಾಯಣ .ಸಿ.ಎನ್.** (ಮುಂದುವರೆದಿದ್ದು...):-

ಇದರಿಂದ ಎಚ್ಚೆತ್ತುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. Facilitate ಮಾಡಿಕೊಡಬೇಕು. ಈಗಾಗಲೇ ತಮಗೆಲ್ಲಾ ಗೊತ್ತಿರುವ ಹಾಗೆ, ನಮ್ಮ ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ವಿದ್ಯಾ ಸಂಸ್ಥೆಗಳೂ ಸಹ, ಇಡೀ ದೇಶದಲ್ಲಿ ಅದರಲ್ಲಿಯೂ ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಪಾತ್ರವನ್ನು ವಹಿಸಿರುತ್ತವೆ. ಇವೊತ್ತಿನ ದಿವಸ ಮಾಹಿತಿ ತಂತ್ರಜ್ಞಾನ ಕ್ಷೇತ್ರ ನಮ್ಮ ಕರ್ನಾಟಕ ರಾಜ್ಯದಲ್ಲಿ ಯಾವ ರೀತಿ ಬೆಳವಣಿಗೆಯಾಗಿದೆ ಎಂದರೆ, ಜಿ.ಎಸ್.ಡಿ.ಪಿ.ಯಲ್ಲಿ ಶೇಕಡ 25 ರಿಂದ 30 ರಷ್ಟು ಷೇರು ಇರುವಂಥದ್ದಾಗಿದೆ, ಒಟ್ಟಿನಲ್ಲಿ ಸರ್ವೀಸ್ ಸೆಕ್ಟರ್ ಅನ್ನು ತೆಗೆದುಕೊಂಡಾಗ ಶೇಕಡ 60 ರಿಂದ 65 ರಷ್ಟು ಇರುವುದು ಇದೆ. ಹಾಗಾಗಿ, ಈ ಕ್ಷೇತ್ರದಲ್ಲಿ ಹಾಗೂ ಇತರ ಕ್ಷೇತ್ರಗಳಾದ ವ್ಯವಸಾಯ ಕ್ಷೇತ್ರದಲ್ಲಾಗಲಿ, ಲಾಜಿಸ್ಟಿಕ್ಸ್‌ನಲ್ಲಾಗಲಿ, ಟೂರಿಸಮ್‌ನಲ್ಲಾಗಲಿ, hospitality ನಲ್ಲಾಗಲಿ ಅಥವಾ Artisans ನಲ್ಲಾಗಲಿ ಎಲ್ಲಾ ಕ್ಷೇತ್ರಗಳಲ್ಲಿಯೂ ಸಹ ಕೌಶಲ್ಯತೆ ಬಹಳ ಪ್ರಮುಖವಾದ ವಿಚಾರವಾಗಿದೆ. ಇವೊತ್ತಿನ ದಿವಸ ಫಾರ್ಮಲ್ ಡಿಗ್ರಿ ಜೊತೆಯಲ್ಲಿಯೇ hands-on training ಮತ್ತು skill ಸಿಗುವುದಕ್ಕೆ ಬಹಳಷ್ಟು ಅವಕಾಶ ಮಾಡಿಕೊಡಬೇಕಾಗಿರುತ್ತದೆ. ಎಲ್ಲಾ ಇಂಟಿಗ್ರೇಷನ್ ಮತ್ತು ಕಾಂಬಿನೇಷನ್‌ಗಳನ್ನು ಮಾಡುವುದಕ್ಕೆ ಇಂತಹ ಒಂದು ಯುನಿವರ್ಸಿಟಿ ಸಹಾಯಕವಾಗಿರುತ್ತವೆ. ಈ ನಿಟ್ಟಿನಲ್ಲಿ ಈ ಯುನಿವರ್ಸಿಟಿಗಳು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎಷ್ಟರಮಟ್ಟಿಗೆ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಮತ್ತು ಬಡತನದಿಂದ ಅಥವಾ ಆರ್ಥಿಕ ಸಬಲರಾಗಿಲ್ಲದ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಎಷ್ಟರಮಟ್ಟಿಗೆ ಅವಕಾಶ ಆಗುತ್ತದೆ ಎನ್ನುವಂತಹ ಪ್ರಶ್ನೆಗಳು ನಮ್ಮೆಲ್ಲರನ್ನೂ ಕಾಡುತ್ತಿದೆ. ಹಾಗಾಗಿ, ಈ ದಿಕ್ಕಿನಲ್ಲಿ ಸಾಕಷ್ಟು ನಿಯಂತ್ರಣಗಳನ್ನು ಈ ಖಾಸಗಿ ವಿಶ್ವವಿದ್ಯಾಲಯ ವಿಧೇಯಕದಲ್ಲಿ ತರಲಾಗಿದೆ.

ತಮಗೆಲ್ಲಾ ಗೊತ್ತಿರುವ ಹಾಗೆ, ಪ್ರೊಫೆಷನಲ್ ಎಜುಕೇಷನ್‌ನಲ್ಲಿ ಶೇಕಡ 40 ರಷ್ಟು ಸೀಟುಗಳನ್ನು ನಮ್ಮ Consensual Agreement ನಲ್ಲಿಯೇ ಅದನ್ನು ನಾವು ಪಡೆದುಕೊಳ್ಳುವಂಥದ್ದಾಗಿದೆ. 2006ರ ಪ್ರೊಫೆಷನಲ್ ಎಜುಕೇಷನ್ ಬಿಲ್ ಇದಕ್ಕೆ ಅನ್ವಯವಾಗುತ್ತದೆ. ಅದರಂತೆ, ನಾವು ಏನು ಶುಲ್ಕ ನಿಗದಿ ಮಾಡುತ್ತೇವೆ, ಆ ಶುಲ್ಕದ ಪ್ರಕಾರವೇ ವಿದ್ಯಾರ್ಥಿಗಳಿಗೆ ಸೀಟ್ ನೀಡಬೇಕಾಗುತ್ತದೆ. ಅದನ್ನು ಹೊರತುಪಡಿಸಿ, ಪ್ರೊಫೆಷನಲ್ ಎಜುಕೇಷನ್‌ಗೆ ಶೇಕಡ 40 ರಷ್ಟು ವಿದ್ಯಾರ್ಥಿಗಳಿಗೆ ನಾವು ಏನು ಆಯ್ಕೆ ಮಾಡಿ ಕಳುಹಿಸುತ್ತೇವೆ, ಅಷ್ಟು ಸೀಟುಗಳಿಗೆ ದಾಖಲಾತಿ ನೀಡಬೇಕಾಗುತ್ತದೆ. ಇನ್ನುಳಿದ ಶೇಕಡ 60 ರಷ್ಟು ಸೀಟುಗಳಿಗೆ ಶುಲ್ಕವನ್ನು ನಿಗದಿ ಮಾಡುವುದಕ್ಕೆ ಮಾನ್ಯ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರನ್ನೊಳಗೊಂಡ ಸಮಿತಿಗೆ ಅವಕಾಶ ಮಾಡಲಾಗಿದೆ. It is binding. ಅದರ ಬಗ್ಗೆ ಆಕ್ಟ್‌ನಲ್ಲಿ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಅದು ಯಾವುದೇ ಕೋರ್ಸ್ ಇರಬಹುದು ಉದಾಹರಣೆಗೆ, ಬಿ.ಎ., ಬಿ,ಕಾಂ. ಅಥವಾ ಯಾವುದೇ ಪ್ರೋಗ್ರಾಮ್ ಇರಬಹುದು ಅದೆಲ್ಲದರ ಶುಲ್ಕ ನಿಗದಿಯನ್ನು Fee Fixation Committee ಮೂಲಕವೇ ನಿಗದಿ ಮಾಡುವುದು ಆಗುತ್ತದೆ. ಇದು ಬಹಳ ಮುಖ್ಯವಾಗಿರುವಂತಹ ವಿಚಾರವಾಗಿದೆ.

ಇನ್ನೂ ಇಂತಹ ಖಾಸಗಿ ವಿಶ್ವವಿದ್ಯಾಲಯಗಳಿಗೆ ನಮ್ಮ ಸರ್ಕಾರ ಕ್ರಮ ವಹಿಸುವುದಕ್ಕೆ ಆಗುತ್ತದೆಯೇ ಅಥವಾ ಇಲ್ಲವೇ ಎಂಬ ಕೆಲವು ಅನುಮಾನಗಳು ಇವೆ. ಆದರೆ, ಅಂತಹ ಯುನಿವರ್ಸಿಟಿಗಳನ್ನು ಸಂಪೂರ್ಣವಾಗಿ ವಿತ್‌ಡ್ರಾ ಮಾಡುವುದಕ್ಕೆ ಇದರಲ್ಲಿ ನಮಗೆ ಅವಕಾಶ ಇದೆ ಮತ್ತು ಆಕ್ಟ್‌ನ ಪ್ರಕಾರವೇ ಎಲ್ಲಾ ಕಾರ್ಯನಿರ್ವಹಿಸದೇ ಇದ್ದರೆ ಉದಾಹರಣೆಗೆ, Statute, Act, Regulation, Rules ನ ಪ್ರಕಾರ ಮಾಡದೇ, ಆ ರೂಲ್ಸ್ ಏನೇ ಉಲ್ಲಂಘನೆಯಾಗಿದ್ದರೂ ಸಹ ತಕ್ಷಣ ಕ್ರಮ ವಹಿಸುವುದಕ್ಕೆ ಅವಕಾಶ ಇದೆ. ಇದರ ಜೊತೆಗೆ, ಸರ್ಕಾರ ಯಾವಾಗ ಬೇಕಾದರೂ ಅಂತಹ ಯುನಿವರ್ಸಿಟಿಗಳಿಗೆ ಭೇಟಿ ನೀಡಿ ತಪಾಸಣೆ ಮಾಡುವುದಕ್ಕೆ ಅವಕಾಶ ಇದೆ ಮತ್ತು ಅಂತಹ ಯುನಿವರ್ಸಿಟಿಗಳು ಪ್ರತಿ ವರ್ಷ ಆಡಿಟ್ ಸ್ಟೇಟ್‌ಮೆಂಟ್ ಅನ್ನು ಸರ್ಕಾರಕ್ಕೆ ಸಲ್ಲಿಸಬೇಕು. ಸದರಿ ಆಡಿಟ್

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಟೇಟ್‌ಮೆಂಟ್ ಅನ್ನು ಆಯಾ ಆರ್ಥಿಕ ವರ್ಷದ ನವೆಂಬರ್ ತಿಂಗಳೊಳಗೆ ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. ಹಾಗಾಗಿ, ಈ ವಿಧೇಯಕದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಸಾಕಷ್ಟು ನಿಯಂತ್ರಣಗಳನ್ನು ಹಾಕಲಾಗಿರುತ್ತದೆ. ಇದು ಸ್ವಾಯತ್ತ ಸಂಸ್ಥೆ ಎಂದು ಹೇಳಿದರೂ ಸಹ ಇದಕ್ಕೆ ನಿಯಂತ್ರಣಗಳು ಸಹ ಬಹಳ ಹೆಚ್ಚಾಗಿಯೇ ಇವೆ. ಇಂತಹ ಖಾಸಗಿ ವಿಶ್ವವಿದ್ಯಾಲಯದಲ್ಲಿ ಚಾನ್ಸೆಲರ್ ಅನ್ನುವ ಘನತೆವೆತ್ತ ರಾಜ್ಯಪಾಲರನ್ನು 'Visitor' ಎಂದು ಕರೆಯುತ್ತೇವೆ. ಈ 'ವಿಸಿಟರ್' ಅನ್ನುವಂಥ ಪದಬಳಕೆ ಬೇರೆ ಬೇರೆ ಸೆಂಟ್ರಲ್ ಯುನಿವರ್ಸಿಟಿಗಳಲ್ಲಿ, ಐ.ಐ.ಎಂ.ಗಳಲ್ಲಿಯೂ ಸಹ 'ವಿಸಿಟರ್' ಎಂಬ ಪದವನ್ನು ಬಳಕೆ ಮಾಡುವಂಥದ್ದು ಇದೆ. ಅಲ್ಲದೇ, 'ಪ್ರೆಸಿಡೆಂಟ್ ಆಫ್ ಇಂಡಿಯಾ' ರವರಿಗೂ ಸಹ ಸೆಂಟ್ರಲ್ ಯುನಿವರ್ಸಿಟಿಗಳಲ್ಲಿ, ನಮ್ಮ ಬೇರೆ ಬೇರೆ ಸಂಸ್ಥೆಗಳಲ್ಲಿ ಮತ್ತು ಐ.ಐ.ಎಂ. ಹಾಗೂ ಇತರ ಸಂಸ್ಥೆಗಳಲ್ಲಿ 'ವಿಸಿಟರ್' ಎನ್ನುವ ಪದವನ್ನು ಬಳಕೆ ಮಾಡುವಂಥದ್ದು ಇದೆ. ಸಂಪೂರ್ಣವಾಗಿ ಈ ಆಕ್ಟ್ ಅಡಿಯಲ್ಲಿಯೇ ಈ ಖಾಸಗಿ ವಿಶ್ವವಿದ್ಯಾಲಯಗಳು ಬರುತ್ತವೆ. ಈ ಬಗ್ಗೆ ಸೆಕ್ಷನ್ 13 ರಲ್ಲಿ ನಮ್ಮ 'ವಿಸಿಟರ್' ಆಗುವಂತಹ ಘನತೆವೆತ್ತ ರಾಜ್ಯಪಾಲರು ಖಾಸಗಿ ವಿಶ್ವವಿದ್ಯಾಲಯಗಳಿಗೆ ಎಲ್ಲಾ ರೀತಿಯ ಡೈರೆಕ್ಷನ್ ಕೊಡುವಂತಹ ಅಧಿಕಾರದ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಲಾಗಿದೆ. ಆ ಎಲ್ಲಾ ಡೈರೆಕ್ಷನ್‌ಗಳು ಘನತೆವೆತ್ತ ರಾಜ್ಯಪಾಲರಿಗೆ comply ಆಗಲೇಬೇಕು. ಒಂದು ವೇಳೆ ಅದು comply ಆಗದೇ ಇದ್ದರೆ ಅದು ಉಲ್ಲಂಘನೆಯಾಗುತ್ತದೆ. ಆ ಆಧಾರದಲ್ಲಿ ಅವರು ಯಾವುದೇ ಕ್ರಮ ವಹಿಸುವುದಕ್ಕೂ ಸಹ ಅವರಿಗೆ ಅವಕಾಶ ಇದೆ. ಈ ರೀತಿ ಖಾಸಗಿ ವಿಶ್ವವಿದ್ಯಾಲಯಗಳ ಮೇಲೆ ಎಲ್ಲಾ ಹಂತಗಳಲ್ಲಿ ಸಾಕಷ್ಟು ನಿಯಂತ್ರಣಗಳನ್ನು ಈ ಕಾಯಿದೆಯಲ್ಲಿ ತರಲಾಗಿದೆ. ಅದೇ ರೀತಿ ಸೆಕ್ಷನ್ 13, 24, 39, 54, 56, 57, 58, ಅಥವಾ 59 ರಲ್ಲಿ ನಿಯಂತ್ರಣ ತರಲಾಗಿದೆ ಮತ್ತು ಇಂತಹ ಖಾಸಗಿ ವಿಶ್ವವಿದ್ಯಾಲಯಗಳನ್ನು ನಮ್ಮ ಕರ್ನಾಟಕ ಸ್ಟೇಟ್ ಹೈಯರ್ ಎಜುಕೇಷನ್ ಕೌನ್ಸಿಲ್‌ನಿಂದ ಮಾನಿಟರ್ ಮಾಡಲಾಗುತ್ತದೆ. ಅದರಂತೆ, ಖಾಸಗಿ ವಿಶ್ವವಿದ್ಯಾಲಯಗಳು ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಿದಾಗ, ಕರ್ನಾಟಕ ಸ್ಟೇಟ್ ಹೈಯರ್ ಎಜುಕೇಷನ್ ಕೌನ್ಸಿಲ್‌ನ ಮೂಲಕ ಈ ಸಂಸ್ಥೆಗಳನ್ನು ತಪಾಸಣೆ ಮಾಡಲಾಗುತ್ತದೆ. ಒಂದು ವೇಳೆ ಈ ಖಾಸಗಿ ವಿಶ್ವವಿದ್ಯಾಲಯಗಳು ಯೋಗ್ಯವಾಗಿದ್ದರೆ ಅದಕ್ಕೆ ಅನುಮತಿ ನೀಡಲಾಗುತ್ತದೆ. ಇಂತಹ ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ಕನಿಷ್ಠ ಅವಶ್ಯಕತೆಗಳನ್ನು ನಿಗದಿಪಡಿಸಿದ್ದು, ಅದರಂತೆ ಬೆಂಗಳೂರು ನಗರದಂತಹ ಪ್ರದೇಶದಲ್ಲಿ ಕನಿಷ್ಠ 25 ಎಕರೆ ಜಮೀನು ಇರಬೇಕು ಮತ್ತು 25 ಕೋಟಿ ರೂಪಾಯಿಗಳ ಎಂಡೋಮೆಂಟ್ ಫಂಡ್ ಇರಬೇಕು. ಒಂದು ವೇಳೆ ಈ ಖಾಸಗಿ ವಿಶ್ವವಿದ್ಯಾಲಯಗಳು ಬೆಂಗಳೂರಿನಿಂದ ಹೊರಗಡೆ ಪ್ರದೇಶದಲ್ಲಿ ಅಂದರೆ, ಮಹಾನಗರ ಪಾಲಿಕೆಯಲ್ಲಿ ಕನಿಷ್ಠ 35 ಎಕರೆ ಜಮೀನು ಇರಬೇಕು

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು 15 ಕೋಟಿ ರೂಪಾಯಿ ಡೆಪಾಸಿಟ್ ಇರಬೇಕು. ಇನ್ನೂ ಗ್ರಾಮೀಣ ಪ್ರದೇಶದಲ್ಲಿ 50 ಎಕರೆ ಜಮೀನು ಮತ್ತು 15 ಕೋಟಿ ರೂಪಾಯಿ ಡೆಪಾಸಿಟ್ ಅನ್ನು ನಿಗದಿ ಮಾಡಲಾಗಿದೆ. ಈ ರೀತಿ ಆ ಖಾಸಗಿ ವಿಶ್ವವಿದ್ಯಾಲಯಗಳು ಮೂಲಭೂತವಾಗಿ ಆ ಸಂಸ್ಥೆಯ ಹೆಸರಿನಲ್ಲಿಯೇ ನೋಂದಣಿಯಾಗಿರಬೇಕು ಮತ್ತು ಎಲ್ಲಾ ದಾಖಲೆಗಳು ಆ ಸಂಸ್ಥೆಯ ಹೆಸರಿನಲ್ಲಿರಬೇಕು. ಇಷ್ಟು ಕನಿಷ್ಠ ಅವಶ್ಯಕತೆಗಳು ಇರುವಂತಹ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅರ್ಹತೆ ಇರುವಂಥದ್ದು ಇರುತ್ತದೆ. ಹಾಗಾಗಿ, ಇಷ್ಟು ವಿಚಾರಗಳನ್ನು ತಿಳಿಸಿ, ವಿಶ್ವವಿದ್ಯಾಲಯಗಳಲ್ಲಿ ನಮ್ಮ ಬೇಡಿಕೆಗಳು ಬಹಳ ಅಪಾರವಾಗಿದೆ. ಶೇಕಡ 28 ರಷ್ಟು Gross Enrolment Ratio ಈಗ ಇರುವಂಥದ್ದು, ಅದನ್ನು ಶೇಕಡ 50 ಕ್ಕೆ ತಲುಪಿಸುವುದಕ್ಕೆ ಇಂತಹ ಖಾಸಗಿ ವಿಶ್ವವಿದ್ಯಾಲಯದ ಅವಶ್ಯಕತೆ ಇರುತ್ತದೆ. ಶ್ರೀ ಸ್ಯಾಮ್ ಪಿಟ್ರೋಡಾ ರವರು 2005ರಲ್ಲಿ ಅವರ National Knowledge Commission ವರದಿಯಲ್ಲಿನ recommendation ಗಳಲ್ಲಿಯೂ ಸಹ ಕನಿಷ್ಠ 1500 ವಿಶ್ವವಿದ್ಯಾಲಯಗಳು ಸ್ಥಾಪನೆಯಾಗಬೇಕು. ಇದು ಕೇವಲ ಸರ್ಕಾರದಿಂದಲೇ ಸ್ಥಾಪನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ, ಖಾಸಗಿ ಸಂಸ್ಥೆಗಳಿಗೂ ಸಹ ಅವಕಾಶ ಮಾಡಿಕೊಡಬೇಕೆಂದು ತಿಳಿಸಿರುವುದು ಇದೆ. ಪ್ರಸ್ತುತ ಹೈಯರ್ ಎಜುಕೇಷನ್‌ನಲ್ಲಿ ಇಡೀ ದೇಶದಲ್ಲಿಯೇ ಸುಮಾರು 3 ಕೋಟಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇನ್ನು ಮುಂದಿನ 10 ವರ್ಷದೊಳಗೆ ಸುಮಾರು 14 ಕೋಟಿ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುವುದಾಗುತ್ತದೆ. ಈ ವಿಷಯದಲ್ಲಿ ಬಹಳಷ್ಟು ದೊಡ್ಡ ಬೇಡಿಕೆ ಇದೆ. ಇದನ್ನು ಈಡೇರಿಸಬೇಕಾದರೆ ನಮಗೆ ಸಾಕಷ್ಟು ಸವಾಲುಗಳು ಇವೆ. ಹಾಗಾಗಿ, ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಇಂತಹ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಯ ಅವಶ್ಯಕತೆ ಇರುತ್ತದೆ. ಈ ಅವಶ್ಯಕತೆಯನ್ನು ತಾವೆಲ್ಲರೂ ಅರಿತುಕೊಂಡು ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟು, ಸಮಾಜದ ಯುವಕ-ಯುವತಿಯರು ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಪ್ರಸ್ತುತವಾಗಿರುವಂತಹ ವಿದ್ಯಾಭ್ಯಾಸ ಮತ್ತು ಕೌಶಲ್ಯತೆಗಳ ಮುಖಾಂತರ ಅವರು ಮುಂದೆ ಸಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಎಲ್ಲಾ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಂಡು, ಅವರ ಅಭಿಪ್ರಾಯ ತಿಳಿಸಬೇಕೆಂದು ಕೋರುತ್ತೇನೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ(ಪದವೀಧರರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಅವಕಾಶಕ್ಕಾಗಿ ಧನ್ಯವಾದಗಳು. ನಾನು ಈ ಶೈಕ್ಷಣಿಕ ವಲಯದಿಂದ ಬಂದಂತಹವನು. ಅಂದರೆ, ಸುಮಾರು 7

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವರ್ಷಗಳ ಕಾಲ ಉಪನ್ಯಾಸಕನಾಗಿ ಮತ್ತು ಸುಮಾರು 24 ವರ್ಷಗಳ ಕಾಲ ಪ್ರಾಂಶುಪಾಲರಾಗಿ ಕೆಲಸ ಮಾಡಿದಂತಹವನು. ಅಷ್ಟೇ ಅಲ್ಲದೇ, ವಿಶ್ವವಿದ್ಯಾಲಯಗಳಲ್ಲಿ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಮತ್ತು ಸಿಂಡಿಕೇಟ್‌ನಲ್ಲಿಯೂ ಸಹ ಕೆಲಸ ಮಾಡಿರುತ್ತೇನೆ. ಒಂದು ಅರ್ಥದಲ್ಲಿ ಹೇಳುವುದಾದರೆ, ಇಂತಹ ಖಾಸಗಿ ವಿಶ್ವವಿದ್ಯಾಲಯಗಳು ಈ ರಾಜ್ಯದಲ್ಲಿ ನಾಯಿಕೊಡೆಗಳಂತೆ ಹುಟ್ಟುತ್ತಿರುವುದರ/ಬೆಳೆಯುತ್ತಿರುವುದರ ಬಗ್ಗೆ ಬಹಳ ದೊಡ್ಡ ಆತಂಕ ಇದೆ. ನಾನು ಓದಿದ್ದು ಮೈಸೂರು ವಿಶ್ವವಿದ್ಯಾಲಯದಲ್ಲಿ. ನಾನು ಓದಿದ ಪ್ರಥಮ ದರ್ಜೆ ಕಾಲೇಜಿನಲ್ಲಿಯೇ ನಾನು ನನ್ನ ವೃತ್ತಿ ಜೀವನವನ್ನು ಆರಂಭ ಮಾಡಿರುತ್ತೇನೆ. ಒಂದು ಕಾಲಕ್ಕೆ ಮೈಸೂರು ಮಹಾರಾಜರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು ಪ್ರಾರಂಭ ಮಾಡಿದಂತಹ ವಿಶ್ವವಿದ್ಯಾಲಯ ಇಡೀ ರಾಜ್ಯದ ವ್ಯಾಪ್ತಿಗೆ ಇತ್ತು. ಆ ನಂತರ ಅದು ಕರ್ನಾಟಕ ವಿಶ್ವವಿದ್ಯಾಲಯ ಆಯಿತು. ಆ ವಿಶ್ವವಿದ್ಯಾಲಯದಲ್ಲಿ ಓದಿದವರು ನಾನು ಅಲ್ಲಿ ಓದಿದ್ದೇನೆಂದು ಹೇಳಿಕೊಳ್ಳುವುದೇ ಒಂದು ದೊಡ್ಡ ಹೆಮ್ಮೆಯಾಗಿತ್ತು. ಮೈಸೂರು ಸಿಟಿ ಪ್ರಾಡಕ್ಟ್ ಅಥವಾ ನಾನು ಅಲ್ಲಿ ಓದಿದ್ದೇನೆಂದರೆ, ಅದಕ್ಕೆ ಇಡೀ ಜಗತ್ತಿನಲ್ಲಿಯೇ ಬಹು ದೊಡ್ಡ ಗೌರವ ಇತ್ತು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸರ್ಕಾರ ಇವೊತ್ತಿನ ದಿವಸ ಮಾಡಬೇಕಾಗಿರುವಂತಹ ಅತಿ ದೊಡ್ಡ ಜವಾಬ್ದಾರಿಯುತ ಕೆಲಸವೇನೆಂದರೆ, ಸರ್ಕಾರದ ವಿಶ್ವವಿದ್ಯಾಲಯಗಳನ್ನು ಬಲಿಷ್ಠಗೊಳಿಸುವ ಅದರ ಘನತೆ ಮತ್ತು ಗೌರವಗಳನ್ನು ಹೆಚ್ಚು ಮಾಡುವಂತಹ ಕೆಲಸಕ್ಕೆ ಕೈ ಹಾಕದೇ, ಖಾಸಗಿ ವಿಶ್ವವಿದ್ಯಾಲಯಗಳ ಬೆನ್ನು ತಟ್ಟುವಂತಹ ಕೆಲಸಕ್ಕೆ ಮುಂದಾಗುತ್ತಿದೆ. ಆ ಖಾಸಗಿ ವಿಶ್ವವಿದ್ಯಾಲಯಗಳು ಸರ್ಕಾರಿ ವಿಶ್ವವಿದ್ಯಾಲಯಗಳನ್ನು ಮೀರಿ ಇದರ ಸಂಖ್ಯೆ ನಾಗಾಲೋಟದಲ್ಲಿ ಓಡುತ್ತಿರುವುದನ್ನು ನೋಡಿ ನಮ್ಮ ಎಲ್ಲಾ ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಇಂದಲ್ಲಾ ನಾಳೆ ಕುತ್ತು ಬರುತ್ತದೆ ಎನ್ನುವಂತಹ ಆತಂಕ ನಮ್ಮಲ್ಲಿ ಆರಂಭವಾಗಿ ಹೋಗಿದೆ.

(...ಮುಂದುವರೆದಿದೆ

(120) 03.02.2021 4.20 ವೈಎಲ್–ಎಕೆ

**ಶ್ರೀ ಕೆ.ಟಿ.ಶ್ರೀಕಂಠೇಗೌಡ (ಮುಂದು):–**

ಅದಕ್ಕೆ ಹತ್ತಾರು ಕಾರಣಗಳಿವೆ. ಮೈಸೂರು ವಿಶ್ವವಿದ್ಯಾಲಯಗಳಲ್ಲಿ ಎಷ್ಟೋ ವಿಶ್ವವಿದ್ಯಾಲಯಗಳಿಗೆ ಖಾಯಂ ಉಪನ್ಯಾಸಕರು/ಪ್ರಾಧ್ಯಾಪಕರು ಇಲ್ಲ. ಅತಿಥಿ ಉಪನ್ಯಾಸಕರೇ ಇದ್ದಾರೆ. ಶೇ.60 ರಿಂದ 65 ಭಾಗದಷ್ಟು ಖಾಲಿ ಹುದ್ದೆಗಳಿವೆ. ಅಲ್ಲಿ ಗುಣಮಟ್ಟದ ಶಿಕ್ಷಣವನ್ನು ನಾವು ಹೇಗೆ ನಿರೀಕ್ಷೆ ಮಾಡುವುದು?

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಒಬ್ಬ Post-Graduate ವಿಭಾಗದ HoD ಗೆ ಖಾಯಂ ಹುದ್ದೆ ಇಲ್ಲದಂಥ ಪರಿಸ್ಥಿತಿ ಈ ರಾಜ್ಯದಲ್ಲಿ ನಿರ್ಮಾಣವಾಗಿದೆ. ಇದು ಕೇವಲ ಮೈಸೂರು ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಲ್ಲ. ಈ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಬಹಳ ದೊಡ್ಡ ಸಂಖ್ಯೆಯಲ್ಲಿ ಅಧ್ಯಾಪಕೇತರರ ದೊಡ್ಡ ಕೊರತೆ ಕಾಣುತ್ತಿದೆ. ಅವುಗಳನ್ನು ಭರ್ತಿ ಮಾಡಲು ಅನುಮತಿ ನೀಡುವುದಿಲ್ಲ. ಹಾಗಾಗಿ ಗುಣಮಟ್ಟದ ಶಿಕ್ಷಣ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಸಿಗುತ್ತಿಲ್ಲ. ಇದರಿಂದಾಗಿ ದೂರುಗಳು ಪ್ರಾರಂಭವಾಗಿವೆ. ಮೊದಲು ನಮ್ಮ ವಿಶ್ವವಿದ್ಯಾಲಯಗಳನ್ನು ಸಶಕ್ತಗೊಳಿಸಬೇಕಲ್ಲವೇ? ಅಲ್ಲಿಗೆ ಅಗತ್ಯವಿರುವ ಅಧ್ಯಾಪಕರನ್ನು ನೀಡಬೇಕು. ಬೇರೆ ವಿಚಾರಗಳಲ್ಲಿ ನಿಧಾನ ಮಾಡಲಿ ತೊಂದರೆ ಇಲ್ಲ. ಆದರೆ, ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಸಮರ್ಥವಾದ/ಖಾಯಂ ಆದ ಅಧ್ಯಾಪಕರನ್ನು ನೀಡಲಿಲ್ಲವೆಂದರೆ, ವಿಶ್ವವಿದ್ಯಾಲಯಗಳ quality, sanctity ಎಲ್ಲಿ ಉಳಿಯುತ್ತದೆ. ಆ ದಿಸೆಯಲ್ಲಿ ಸರ್ಕಾರ ಏತಕ್ಕೆ ಗಮನಿಸುತ್ತಿಲ್ಲ. ಈಗ ಖಾಸಗಿ ವಿಶ್ವವಿದ್ಯಾಲಯಗಳ ಸ್ಥಿತಿ ಏನಾಗಿದೆ! ನಮ್ಮ ಕಡೆ ಏನೆಂದು ಮಾತನಾಡಿಕೊಳ್ಳುತ್ತಾರೆ ಎಂದರೆ, 'ಖಾಸಗಿ ವಿಶ್ವವಿದ್ಯಾಲಯದಲ್ಲಿ ಲಕ್ಷಾಂತರ ರೂಪಾಯಿ ಶುಲ್ಕ ಕೇಳುತ್ತಾರೆ. ಒಂದು ಸಲ ಹೋದರೆ ಆತ High First Class ನಲ್ಲಿ ಉತ್ತೀರ್ಣನಾಗಿ ಹೊರಗೆ ಬರುತ್ತಾನೆ ಅಷ್ಟೇ, ಅದು ಹೇಗೆ ಬರುತ್ತಾನೆ, ಏನೋ ಎಂಬುದು ನಮಗೆ ಗೊತ್ತಿಲ್ಲ' ಎಂದು ಮಾತನಾಡಿಕೊಳ್ಳುತ್ತಾರೆ. 'ಮಗ, ಪದವಿ ಹೊಂದಬೇಕೇ ಖಾಸಗಿ ವಿಶ್ವವಿದ್ಯಾಲಯಕ್ಕೆ ಸೇರಿಸಿ ಬಿಡು' ಎಂದೆಲ್ಲಾ ಮಾತನಾಡಿಕೊಳ್ಳುತ್ತಾರೆ. ಖಾಸಗಿ ವಿಶ್ವವಿದ್ಯಾಲಯದಲ್ಲಿ ಹೇಳುವವರು, ಕೇಳುವವರು ಯಾರಿದ್ದಾರೆ? ನಾನು ಮಾನ್ಯ ಸಚಿವರಿಗೆ ಒಂದು ಮಾತನ್ನು ಕೇಳುವುದಕ್ಕೆ ಬಯಸುವುದೇನೆಂದರೆ, ಖಾಸಗಿ ವಿಶ್ವವಿದ್ಯಾಲಯಕ್ಕೆ ಉಪ ಕುಲಪತಿಯವರನ್ನು ಸರ್ಕಾರವೇ ಏತಕ್ಕೆ ನೇಮಕ ಮಾಡಬಾರದು, ಮಾಡಲಿ. ಎರಡು ಕುಲಸಚಿವರ ಹುದ್ದೆಗಳು ಖಾಲಿ ಇವೆ. ಅಡ್ಮಿಷನ್ ಬೇಕಾದರೆ ಖಾಸಗಿಯವರಿಗೆ ಮಾಡಿಕೊಳ್ಳಲು ಬಿಡಿ. ಒಂದು Registrar (Evaluation) ರವರನ್ನು academic affairs ನೋಡಿಕೊಳ್ಳಲು, ಸರ್ಕಾರವೇ ನೇಮಕ ಮಾಡಲಿ. ಈ ಮಾತನ್ನು ಖಾಸಗಿ ವಿಶ್ವವಿದ್ಯಾಲಯದವರು ಒಪ್ಪಿಕೊಳ್ಳುತ್ತಾರೆಯೇ ಎಂಬುದನ್ನು ನೋಡಲಿ. ಉಪ ಕುಲಪತಿಯವರನ್ನು ಸರ್ಕಾರವೇ ನೇಮಕ ಮಾಡಲಿ. ಒಬ್ಬರು ಕುಲಸಚಿವರನ್ನು ಸರ್ಕಾರವೇ ನೇಮಕ ಮಾಡಲಿ. ಕೆ.ಎ.ಎಸ್. ಅಧಿಕಾರಿಯನ್ನೇ ನೇಮಕ ಮಾಡಿ. ಯಾರಾದರೂ ಖಾಸಗಿ ವಿಶ್ವವಿದ್ಯಾಲಯದವರು ಇದಕ್ಕೆ ಒಪ್ಪಿಕೊಂಡರೆ, ಬೇಕಾದರೆ ನನಗೆ ಮಾನ್ಯ ಸಚಿವರೇ ಪ್ರಶ್ನೆ ಮಾಡಲಿ. Academic affairs ನೋಡಿಕೊಳ್ಳಲು ಒಬ್ಬರು ಕೆ.ಎ.ಎಸ್. ಅಧಿಕಾರಿ ಹೋದರೆ, ಆ ಹಂತದಲ್ಲಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಮ್ಮಲ್ಲಿರುವ ಕೆ.ಎ.ಎಸ್. ಅಧಿಕಾರಿಯೇ ಹೋಗುವುದು. ಇಂತಹ ವ್ಯವಸ್ಥೆಯನ್ನು ಮಾಡದೇ ಇದ್ದರೆ, Syndicate ಗೆ ಯಾರು ಹೋಗುತ್ತಾರೆ? ಎಂ.ಎಲ್.ಎ., ಎಂ.ಎಲ್.ಸಿ. ಗಳನ್ನು ಕಳುಹಿಸುತ್ತೀರಿ, ನಾಮಕರಣ ಮಾಡುತ್ತೀರಿ. ಅಲ್ಲಿ Syndicate ನ್ನು ಪ್ರಶ್ನೆ ಮಾಡುವವರ್ಯಾರು? ಅಲ್ಲಿನ ಉಪ ಕುಲಪತಿಯವರನ್ನು ಪ್ರಶ್ನೆ ಮಾಡುವವರ್ಯಾರು? ಯಾರನ್ನು ಬೇಕಾದರೂ ನೇಮಕ ಮಾಡಿಕೊಳ್ಳುತ್ತಾರೆ, ಆತ ಎಷ್ಟು ವರ್ಷ ಬೇಕಾದರೂ ಆ ಹುದ್ದೆಯಲ್ಲಿ ಇರಬಹುದು. He will join as a Vice-Chancellor and retire as a Vice-Chancellor. ಬಹಳ ಜನ ಸಾಯುವವರೆಗೂ ಉಪ ಕುಲಸಚಿವರಾಗಿಯೇ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ, ಅಲ್ಲಿ ಯಾರೂ ಪ್ರಶ್ನೆ ಮಾಡುವವರಿಲ್ಲ. ಹಾಗಾಗಿ ಎಲ್ಲಿಯೋ ಒಂದು ಕಡೆ, ಇಡೀ ಶೈಕ್ಷಣಿಕ ವ್ಯವಸ್ಥೆಯನ್ನು ಖಾಸಗಿ ವಿಶ್ವವಿದ್ಯಾಲಯಗಳು ಆತಂಕಕ್ಕೆ ದೂಡುವಂಥದು ಹತ್ತಿರಕ್ಕೆ ಬರುತ್ತಿದೆ. ಮಾನ್ಯ ಸಿ.ಟಿ.ರವಿರವರು ತಂದಾಗ ಅವರ ಕಾಲದಲ್ಲಿ ಸುಮಾರು 20 ಕ್ಕಿಂತ ಹೆಚ್ಚು ಖಾಸಗಿ ವಿಶ್ವವಿದ್ಯಾಲಯಗಳು ಆಗಿದೆ. ನಾವೆಲ್ಲರೂ ಆಗ ಏತಕ್ಕೆ ಈ ರೀತಿ ಆಗುತ್ತದೆ ಎಂದು ಮಾತನಾಡಿಕೊಂಡಿದ್ದೆವು. ಎಲ್ಲಿಯೋ ಒಂದು ಕಡೆ ಶೈಕ್ಷಣಿಕ ಕ್ಷೇತ್ರಕ್ಕೆ ದೊಡ್ಡ ಒತ್ತಡ ಕೊಡುವಂಥ ಪ್ರಯತ್ನ ಆಗುತ್ತಿದೆ. ನಾವೇ ಖಾಸಗಿ ವಿಶ್ವವಿದ್ಯಾಲಯಗಳ ಪರ ನಿಲ್ಲುವುದಾದರೆ, ಆರ್ಥಿಕವಾಗಿ ಹಿಂದುಳಿದಿರುವ ದುರ್ಬಲ ವರ್ಗದವರು, ಬಡವರ ವಿಶ್ವವಿದ್ಯಾಲಯಗಳಿಗೆ ಹೇಗೆ ಸಹಾಯ ಮಾಡಿದಂಥಾಗುತ್ತದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಖಾಸಗಿ ವಿಶ್ವವಿದ್ಯಾಲಯಗಳಿಗೆ ಹೋಗುವವರೆಲ್ಲಾ ಲಕ್ಷಾಧೀಶ್ವರರು, ಕೋಟ್ಯಾಧೀಶ್ವರರು. ನಾನು ಎಲ್ಲಾ ವಿಶ್ವವಿದ್ಯಾಲಯವನ್ನು ಪ್ರಶ್ನೆ ಮಾಡುವುದಿಲ್ಲ. ಕೆ.ಎಲ್.ಇ., ಜೆ.ಎಸ್.ಎಸ್., ಆದಿಚುಂಚನಗಿರಿ ವಿಶ್ವವಿದ್ಯಾಲಯಗಳನ್ನು ಪ್ರಶ್ನಿಸುವುದಿಲ್ಲ. Sanctity ಉಳಿಸಿಕೊಳ್ಳುವಂಥ ಖಾಸಗಿ ವಿಶ್ವವಿದ್ಯಾಲಯಗಳಿದ್ದು, ಅದಕ್ಕೆ ಅದರದೇ ಆದ ಘನತೆ–ಗೌರವ ಇದೆ. ಒಂದು ಶಾಲೆ, ಒಂದು ಕಾಲೇಜು ನಡೆಸುತ್ತಾರೆ ಎಂದು ಅವರಿಗೆ ಒಂದು ವಿಶ್ವವಿದ್ಯಾಲಯವನ್ನು ನೀಡುತ್ತಿದ್ದಾರೆ. ಈಗ ನೀಡಿರುವ ವಿಶ್ವವಿದ್ಯಾಲಯಗಳ ಪಟ್ಟಿಯ ಜೊತೆಗೆ ಕೆ.ಎಲ್.ಇ. ವಿಶ್ವವಿದ್ಯಾಲಯವನ್ನು ಹೋಲಿಕೆ ಮಾಡುವುದಕ್ಕೆ ಸಾಧ್ಯವೇ? ಇಂತಹ ವಿಶ್ವವಿದ್ಯಾಲಯಗಳಿಗೆ ನೀಡಿದರೆ ಘನತೆ ಹೆಚ್ಚಾಗುತ್ತದೆ, healthy competition ಬರುತ್ತದೆ. ಈಗ ಮಾಡಿರುವಂಥ ಪಟ್ಟಿಯನ್ನು ನೋಡಿದರೆ, ಕೆ.ಎಲ್.ಇ. ವಿಶ್ವವಿದ್ಯಾಲಯವೇ ಬೇಡ ವಾಪಸ್ಸು ತೆಗೆದುಕೊಳ್ಳಿ ಎಂದು ಅವರು ಹೇಳಬೇಕು. ಜೆ.ಎಸ್.ಎಸ್. ವಿಶ್ವವಿದ್ಯಾಲಯ ಬೇಡ ವಾಪಸ್ಸು ಸ್ವಾಯತ್ತತೆಗೆ ತೆಗೆದುಕೊಳ್ಳಿ ಎಂದು ಹೇಳಬೇಕು. ಅಂತಹ ಪರಿಸ್ಥಿತಿಯಲ್ಲಿ ನಾವು ಹೋಗುತ್ತಿದ್ದೇವೆ. ಈ ವಿಶ್ವವಿದ್ಯಾಲಯವನ್ನು

ಮಾರಿಕೊಳ್ಳಬೇಕು ಎನ್ನುವುದೇ ಒಂದು ಅರ್ಥದಲ್ಲಿದ್ದು, ಆ ಪದವನ್ನು ನಾನು ಬಳಸಿದರೆ ತಪ್ಪಾಗುತ್ತದೆಯೋ, ಏನೋ ಗೊತ್ತಿಲ್ಲ. ಆ ರೀತಿಯಲ್ಲಿ ದಂಧೆಯಾಗುತ್ತಿದೆ. ಒಂದು ವಿಶ್ವವಿದ್ಯಾಲಯವನ್ನು ತೆರೆದರೆ, 'ಆತ ಬದುಕಿದ ಬಿಡಯ್ಯಾ' ಎನ್ನುವ ಮಾತನ್ನು ಜನ ಆಡುತ್ತಿದ್ದಾರೆ. ನಾನು ಈ ಮಾತನ್ನು ಹೇಳುತ್ತಿಲ್ಲ, ಜನರು ಹೇಳುತ್ತಿದ್ದಾರೆ. ಒಂದು ವಿಶ್ವವಿದ್ಯಾಲಯವನ್ನು ಕಷ್ಟಪಟ್ಟು ಪಡೆದರೆ ಸಾಕು, 'ಬಿಡಯ್ಯಾ ಆತ-ಆತನ ತಲೆಮಾರು ಎಲ್ಲಾ ಬದುಕಿದರು' ಎಂದು ಹೇಳುತ್ತಾರೆ. ಹಾಗಾಗಿ ದೊಡ್ಡ-ದೊಡ್ಡ ಎತ್ತರದ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಸ್ವರೂಪವನ್ನು ನೀಡುವುದಕ್ಕೆ ನನ್ನ ತಕರಾರಿಲ್ಲ. ಆದರೆ, ಸಣ್ಣ-ಸಣ್ಣ ಸಂಸ್ಥೆಗಳೇನಿವೆ, ಈ ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿ ಇನ್ನೂ 5, 6 ವರ್ಷಗಳಾಗಿಲ್ಲ. ಅಲ್ಲದೇ ಈ ಸಂಸ್ಥೆಗಳ ಹೆಸರನ್ನೇ ಕೇಳಿಲ್ಲ, ಇಂತಹ ಸಂಸ್ಥೆಗಳಿಗೆ ವಿಶ್ವವಿದ್ಯಾಲಯದ ಸ್ವರೂಪ ನೀಡುತ್ತೇವೆ ಎಂದರೆ, ವಿಶ್ವವಿದ್ಯಾಲಯದ sanctity ಎಲ್ಲಿ ಹೋಗಿ ನಿಲ್ಲುತ್ತದೆ. ಉನ್ನತ ಶಿಕ್ಷಣದ ವ್ಯವಸ್ಥೆ ಎಲ್ಲಿ ಹೋಗಿ ನಿಲ್ಲುತ್ತದೆ. No, it is not advisable. ಮಾನ್ಯ ಸಚಿವರು ಮನಬಂದ ಹಾಗೆ ಖಾಸಗಿ ವಿಶ್ವವಿದ್ಯಾಲಯಕ್ಕೆ ಮಂಜೂರು ಮಾಡುವುದು ಏನಿದೆ, ಅದು ಆರೋಗ್ಯಕರ ಬೆಳವಣಿಗೆ ಅಲ್ಲ, ಅದು ಅನಾರೋಗ್ಯಕರವಾದ ಬೆಳವಣಿಗೆ. ಗುಣಮಟ್ಟ ನಿರೀಕ್ಷೆ ಮಾಡುವುದಕ್ಕೆ ಬದಲಾಗಿ, ಮತ್ತೇನೋ ಆರ್ಥಿಕ ಮೂಲಕ್ಕೆ, ಆದಾಯಕ್ಕೆ ಅನುವು ಮಾಡಿಕೊಟ್ಟಂಥ ಕೆಲಸವಾಗುತ್ತದೆ. ಹಾಗಾಗಿ ಮಾನ್ಯ ಸಚಿವರು ಎತ್ತರದ ಖಾಸಗಿ ಸಂಸ್ಥೆಗಳನ್ನು ಗೌರವಿಸಿ ವಿಶ್ವವಿದ್ಯಾಲಯಕ್ಕೆ recognize ಮಾಡಲಿ. ಅದೇ ರೀತಿ ಕೆ.ಎಲ್.ಇ. ಗೆ ನೀಡಿದ್ದಾರೆ, ಅದಕ್ಕೆ ದೊಡ್ಡ ನಮಸ್ಕಾರ ಸಲ್ಲಿಸುತ್ತೇನೆ. ಬಹಳ ಹೋರಾಟ ಮಾಡಿ ಪಡೆದುಕೊಂಡಿದ್ದಾರೆ. ಅಲ್ಲಿ meritorious students ಹೋಗುತ್ತಾರೆ. ಜೆ.ಎಸ್.ಎಸ್. ವಿಶ್ವವಿದ್ಯಾಲಯವನ್ನು ಬಂದು ನೋಡಲಿ, ಅಷ್ಟು ಸುಲಭವಲ್ಲ. ಎಲ್ಲಾ meritorious students ಹೊರಗೆ ಬರುತ್ತಾರೆ. ಈ ಬೆಂಗಳೂರು ವಿಶ್ವವಿದ್ಯಾಲಯದ ಕಥೆ ಯಾವ ರೀತಿ ಇದೆ ಎಂದರೆ, ಒಂದೊಂದು ವಿಶ್ವವಿದ್ಯಾಲಯದ ಮೇಲೆ 3, 4 ಜನ ಮಾತನಾಡುತ್ತಾರೆ. ಈ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಹೇಗೆ ನಡೆಯುತ್ತಿದೆ, ಏನಾಗುತ್ತದೆ ಎಂಬುದನ್ನು ವಿಶ್ವವಿದ್ಯಾಲಯದ ಒಳಗೆ ಹೋಗಿ, ಹೊರಗೆ ಬರುತ್ತಾರೆ. ಏನಿದು? ಮಾನ್ಯ ಸಚಿವರು ಉಪ ಮುಖ್ಯಮಂತ್ರಿಗಳು ಹಾಗೂ ವೈದ್ಯರಾಗಿದ್ದು, ವಿದ್ಯಾರ್ಥಿ ನಾಯಕರಾಗಿ senate, syndicate ನಲ್ಲಿ ಹೋರಾಟ ಮಾಡಿದ್ದು, ಇದರಲ್ಲೆಲ್ಲಾ ಬಹಳ ಅನುಭವ ಇದೆ. ಮಾನ್ಯ ಸಚಿವರು ಖಾಸಗಿ ವಿಶ್ವವಿದ್ಯಾಲಯಕ್ಕೆ ಬೆನ್ನು ತಟ್ಟಿ ನಿಂತುಕೊಂಡರೆ, ವಿಶ್ವವಿದ್ಯಾಲಯದ ಕಲ್ಪನೆ ಎಲ್ಲಿ ಹೋಗಿ ನಿಲ್ಲುತ್ತದೆ? ದಯಮಾಡಿ ಇದರ ಬಗ್ಗೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮರುಚಿಂತನೆ ಮಾಡಬೇಕು. ಹಾಗೆಯೇ ಡಾ॥ ಬಿ.ಆರ್.ಅಂಬೇಡ್ಕರ್ ವಿಶ್ವವಿದ್ಯಾಲಯದ ತಿದ್ದುಪಡಿಗೆ ಸಂಬಂಧಿಸಿದಂತೆ, 'ಬೆಂಗಳೂರು' ಎಂಬ ಹೆಸರನ್ನು ಸೇರಿಸಲಾಗುತ್ತಿದೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ಉಳಿದ ವಿಶ್ವವಿದ್ಯಾಲಯಗಳ ಬಗ್ಗೆ ಮತ್ತೊಮ್ಮೆ ಯೋಚನೆ ಮಾಡಬೇಕೆಂದು ಈ ನಾಡಿನ ಶಿಕ್ಷಣದ ಎಲ್ಲಾ ಪ್ರೇಮಿಗಳ ಪರವಾಗಿ ನಾನು ಮನವಿ ಮಾಡಿಕೊಳ್ಳುತ್ತೇನೆ.

**ಶ್ರೀ ಸಿ.ಎಂ.ಇಬ್ರಾಹಿಂ (ವಿಧಾನಸಭೆಯಿಂದ ಚುನಾಯಿತರಾದವರು):–** ಮಾನ್ಯ ಸಭಾಪತಿಯವರೇ, ಬಹುತೇಕವಾಗಿ ನೋಡಿದರೆ ಇದು 'ಮರಣ ಶಾಸನ' ಎಂದು ಹೇಳಬಹುದು. ಇವತ್ತು ಈ ವಿಶ್ವವಿದ್ಯಾಲಯಗಳ ಗುಣಮಟ್ಟ ಏನು? ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಫಲಿತಾಂಶ ಏನಾಗಿದೆ? ನಾನು ಸುಮಾರು 20 ವರ್ಷಗಳಿಂದ ಇಂಜಿನಿಯರಿಂಗ್ ಕಾಲೇಜನ್ನು ನಡೆಸುತ್ತಿದ್ದು, ಇವತ್ತು ಆ ಕಾಲೇಜಿನ ಮೇಲೆ ರೂ.8.00 ಕೋಟಿಗಳಷ್ಟು ಸಾಲ ಇದೆ. ನಮ್ಮ ಕಾಲೇಜ್‌ನಲ್ಲಿ donation ಇಲ್ಲ, ಜಾತಿ ಇಲ್ಲ. ಶೇ.85 ರಷ್ಟು ಫಲಿತಾಂಶ ಇದೆ. Strict ಆಗಿ ಇರುವುದರಿಂದ ಹೆಚ್ಚಿನ ಸಂಖ್ಯೆ ವಿದ್ಯಾರ್ಥಿಗಳು strict ಎಂದು ನಮ್ಮ ಕಾಲೇಜಿಗೆ ಬರುತ್ತಿಲ್ಲ. ಇದು deemed university ಆಗಿದೆ. Question Paper ಬರೆಯುವವರು ಅವರೇ, ಅದನ್ನು ಪರಿಶೀಲಿಸುವುದು ಅವರೇ. ದುಡ್ಡು ನೀಡಿ ಪ್ರಮಾಣಪತ್ರ ತೆಗೆದುಕೊಂಡು ಹೋರಡುತ್ತಾರೆ. ನಮ್ಮಲ್ಲಿ AICTE ಮತ್ತು ಇತರೆ ಎಲ್ಲಾ committee ಗಳು ಸರ್ಕಾರಿ ಕಾಲೇಜುಗಳಿಗೆ ಹತ್ತತ್ತು ಸಲ inspection ಮಾಡುತ್ತಾರೆ. ಆದರೆ, deemed ಮಹಾ ಪತಿವ್ರತೆ. A declared marriage... ಇವರಿಗೆ ಯಾವುದೇ ಪ್ರಮಾಣ ಪತ್ರದ ಅವಶ್ಯಕತೆಯು ಬೇಕಾಗಿಲ್ಲ. ಮಾನ್ಯ ಸಚಿವರು ವೈದ್ಯರಾಗಿದ್ದು, ಸರ್ಕಾರಿ ಕಾಲೇಜುಗಳ ಗುಣಮಟ್ಟವನ್ನು ಕಾಪಾಡುತ್ತಾರೆಯೇ ಎಂಬುದನ್ನು ಯೋಚನೆ ಮಾಡಲಿ. ನಾವೆಲ್ಲರೂ ಮಠಗಳಲ್ಲಿ ಓದಿದವರು. ಮುದ್ದೆ ತಿಂದು, 4 ಗಂಟೆಗೆ ಎದ್ದು, ತಣ್ಣೀರಿನ ಸ್ನಾನ ಮಾಡಿ ಓದುತ್ತಿದ್ದಾಗ ಗುಣಮಟ್ಟ ಇತ್ತು. ಆದರೆ, ಈಗ 12 ಗಂಟೆ ಎದ್ದೇಳುತ್ತಾರೆ, 2 ಗಂಟೆಗೆ ತರಗತಿಗೆ ಹಾಜರಾಗುತ್ತಾರೆ, ರಾತ್ರಿ 3.00 ಗಂಟೆಗೆ ಮಲಗುತ್ತಾರೆ. ದಯವಿಟ್ಟು ಇದನ್ನು ಆತುರದಲ್ಲಿ ಮಾಡುವುದಕ್ಕೆ ಹೋಗುವುದು ಬೇಡ. ಇದನ್ನು ಸೆಲೆಕ್ಟ್ ಕಮಿಟಿಗೆ ಉಲ್ಲೇಖ ಮಾಡಿ, ಅಲ್ಲಿ ಅಧ್ಯಯನ ಮಾಡಲಿ. ಆ ಕಮಿಟಿಗೆ ಶ್ರೀ ಕೆ.ಟಿ.ಶ್ರೀಕಂಠೇಗೌಡರು, ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು, ಶ್ರೀ ಸಂಕನೂರರವರು ಇಂಥವರನ್ನು ಸದಸ್ಯರನಾಗಿ ನೇಮಕ ಮಾಡಿ, ಮಾನ್ಯ ಸಚಿವರು ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ವರದಿ ತೆಗೆದುಕೊಳ್ಳಲಿ. ಯಾವಾಗ ಸರ್ಕಾರಿ ವಿಶ್ವವಿದ್ಯಾಲಯಗಳಿಗೆ ಪೂರ್ಣ ಅಧಿಕಾರವನ್ನು ನೀಡುತ್ತೀರೋ,...

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ:–** ಶ್ರೀ ನಾರಾಯಣಸ್ವಾಮಿಯವರ ಹೆಸರನ್ನು ಹೇಳಿ. ಅವರು ಇಂಜಿನಿಯರ್ ಕಾಲೇಜ್‌ನ ಪ್ರಾಧ್ಯಾಪಕರಾಗಿದ್ದವರು.

**ಶ್ರೀ ಸಿ.ಎಂ.ಇಬ್ರಾಹಿಂ:–** ಮಾನ್ಯ ಸಭಾಪತಿಯವರೇ, ಹಾಗಾಗಿ ಇವತ್ತು ಕರ್ನಾಟಕ ರಾಜ್ಯ.... ನಾವು ಶಿಕ್ಷಣದಿಂದ ಮುಂದೆ ಬಂದಂಥವರು. ದಯವಿಟ್ಟು ಮಾನ್ಯ ಸಚಿವರ ನೇತೃತ್ವದಲ್ಲಿ ಆ ರೀತಿ ಆಗಬಾರದು. ನನಗೆ ಒಂದು ಆಸೆ ಇದೆ. ದಯವಿಟ್ಟು ಇದನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸಿ, ಸರ್ಕಾರದ ಮಟ್ಟದಲ್ಲಿಯೇ ಉಪ ಕುಲಪತಿ ಹಾಗೂ ಇಬ್ಬರು ಕುಲಸಚಿವರನ್ನು ನೇಮಕ ಮಾಡಬೇಕು. Question Paper set ಮಾಡುವಂಥವರು, Answer Sheet ನ್ನು ನೋಡುವಂಥವರು ಇವೆರಡರ ಕಡೆ ಗಮನಹರಿಸಬೇಕು. ಈಗಾಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಶುಲ್ಕಕ್ಕೆ ಸಂಬಂಧಿಸಿದಂತೆ ನಾಯಿಕೊಡೆಗಳಂತೆ ಬೆಳೆಯುತ್ತಿದೆ. ಇಂಜಿನಿಯರಿಂಗ್ ಕಾಲೇಜುಗಳೆಲ್ಲಾ ಬಂದ್ ಆಗುವ ಸ್ಥಿತಿಗೆ ಬಂದಿದೆ. ವಿಶ್ವವಿದ್ಯಾನಿಲಯಕ್ಕೆ ಏನು ಬರದಿಂದ ನೀಡಲಾಗುತ್ತಿದೆಯೋ, ಹತ್ತು ವರ್ಷಗಳ ನಂತರ ಹಾಗೆಯೇ ಮುಚ್ಚಿಕೊಂಡು ಹೋಗುವ ಪರಿಸ್ಥಿತಿ ಮುಂದೆ ಕರ್ನಾಟಕ ರಾಜ್ಯಕ್ಕೆ ಬರಬಾರದು. ಆದ್ದರಿಂದ ಇದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ದಯವಿಟ್ಟು ಇದನ್ನು ಸೆಲೆಕ್ಟ್ ಕಮಿಟಿಗೆ ಪರಿಶೀಲನೆಗೆ ಕಳುಹಿಸಿ, ಅಲ್ಲಿಂದ ವರದಿ ತರಿಸಿಕೊಳ್ಳಿ.

(ಮುಂದು...)

(121)03.02.2021/4.30/ಎಸ್‌ಕೆ–ಆರ್.ಎನ್.

**ಶ್ರೀ ಸಿ.ಎಂ. ಇಬ್ರಾಹಿಂ (ಮುಂದು):–**

ಇದು ಈಗಲೇ ಆಗಬೇಕಾಗುವಂತಹದ್ದಿಲ್ಲ. Let the Select Committee gives a report, after that we will discuss.

**ಸಭಾಪತಿಯವರು:–** ಮಾನ್ಯ ಹರಿಪ್ರಸಾದ್‌ರವರೇ ಮಾತನಾಡಿ.

**ಶ್ರೀ ಬಿ.ಕೆ. ಹರಿಪ್ರಸಾದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನನಗೆ ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟಿದ್ದಕ್ಕಾಗಿ ಧನ್ಯವಾದಗಳು. ಮಾನ್ಯ ಉಪ ಮುಖ್ಯಮಂತ್ರಿಯವರು ಹಲವಾರು Deemed University ವಿಧೇಯಕಗಳನ್ನು ತಂದಿದ್ದಾರೆ. ಒಂದೊಂದೇ ವಿಶ್ವವಿದ್ಯಾನಿಲಯಗಳನ್ನು

ಮಾಡುವ ಬದಲು ಎಲ್ಲವೂ ಒಟ್ಟಿಗೆ ತೆಗೆದುಕೊಳ್ಳೋಣ ಎಂದು ಹೇಳಿ, ತಂದಿದ್ದಾರೆ. ಅಂದರೆ wholesale ಎಲ್ಲವನ್ನೂ ಒಟ್ಟಿಗೆ ತೆಗೆದುಕೊಳ್ಳುವುದು. retail ಬೇಡ ಎಂದು ಹೇಳಿ. ಸ್ವಾತಂತ್ರ್ಯ ಬಂದಾಗ, ನಮ್ಮಲ್ಲಿ ಶೇಕಡ 16 ರಷ್ಟು ಸಾಕ್ಷರತಾ ಪ್ರಮಾಣ ಇತ್ತು. Sri MPL Sastry 70 ವರ್ಷ ಕಾಂಗ್ರೆಸ್ ಸರ್ಕಾರವಿದ್ದಾಗ ಏನೂ ಮಾಡಲಿಲ್ಲವೆಂದು ಆಗಾಗ ಹೇಳುತ್ತಿರುತ್ತಾರೆ. ಈಗ ಸುಮಾರು 65-75 ರಷ್ಟು ಶೇಕಡದವರೆಗೂ ಬಂದಿದೆ. ಹೆಚ್ಚಿನದಾಗಿ ಖಾಸಗಿ ಕ್ಷೇತ್ರದಲ್ಲಿ ಕಾಲೇಜುಗಳು ಬಹಳ ಕಡಿಮೆ ಇತ್ತು. ಎಲ್ಲಾ ಸರ್ಕಾರಿ ಕ್ಷೇತ್ರದಲ್ಲಿದ್ದಂತಹ ಈ ಒಂದು ವಿಶ್ವವಿದ್ಯಾನಿಲಯಗಳಾಗಲೀ ಸ್ವಾಯತ್ತ ಸಂಸ್ಥೆಗಳಿದ್ದರೂ ಸಹ ಸರ್ಕಾರದ ಸಹಾಯದಿಂದ ಒಳ್ಳೊಳ್ಳೆಯ ವಿಶ್ವವಿದ್ಯಾನಿಲಯಗಳಿವೆ. ನಾನು ಏಕೆ ಹೇಳುತ್ತಿದ್ದೇನೆಂದರೆ, ನನಗೆ ಇಬ್ಬರು ಗುರುಗಳಿದ್ದರು. ಈ ಸದನದಲ್ಲಿ ಅವರು ಸದಸ್ಯರಾಗಿದ್ದರು. ಶೈಕ್ಷಣಿಕವಾಗಿ ಗುರುಗಳಾಗಿದ್ದಂತಹ Sri M.P.L Sastry ಮತ್ತು ರಾಜಕೀಯವಾಗಿ ಗುರುವಾಗಿದ್ದಂತಹ ಶ್ರೀ ಹೆಚ್.ನರಸಿಂಹಯ್ಯನವರು. ಇವರಿಬ್ಬರೂ ಸಹ ಗುರುಗಳಾಗಿದ್ದಂತಹವರು. ನಾವು ಅವರ ಬಳಿ ಹೋದಾಗ, ನಾವು ಏನೇ ಮಾಡಿದ್ದರೂ ಸಹ ಅವರು ನಮಗೆ ಜೀವನದಲ್ಲಿ ಹೇಗೆ ಇರಬೇಕು ಎಂಬ ಬಗ್ಗೆ ಒಂದು ಗಂಟೆ ಉಪನ್ಯಾಸ ಕೊಡುತ್ತಿದ್ದರು. ಅವರು ಇದ್ದಾಗ ಈ ತರಹವೇನಾದರೂ ಆಗಿದ್ದರೆ, ಅವರಿಗೆ ಹೃದಯಾಘಾತ ಆಗಿರುವುದರಲ್ಲಿ ಯಾವುದೇ ಸಂಶಯ ಬೇಕಾಗಿರಲಿಲ್ಲ. ಖಾಸಗೀಕರಣವಾದರೆ ಏನು ತೊಂದರೆ ಎಂಬ ಬಗ್ಗೆ ಮಾನ್ಯ ಶ್ರೀಕಂಠೇಗೌಡರು ಮಾತನಾಡುವಾಗ ಹೇಳಿದರು. ಕೆಲವೆಲ್ಲಾ ವಿಶ್ವವಿದ್ಯಾನಿಲಯಗಳು ಬಹಳ ಚೆನ್ನಾಗಿವೆ. ಅಲ್ಲಿಗೆ ಹೋಗುವುದಕ್ಕೆ ಪುಣ್ಯ ಕೋಟಿ ಇದ್ದಂತೆ. ನಾವು ಕೆಲವರ ಬಗ್ಗೆ ಮಾತನಾಡುವುದಕ್ಕಾಗುವುದಿಲ್ಲ.

ಮಾನ್ಯ ಸಭಾಪತಿಯವರೇ, ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ. ಖಾಸಗೀಕರಣದಲ್ಲಿ ಯಾವುದೇ ಮೀಸಲಾತಿ ಇರುವುದಿಲ್ಲ. ಖಾಸಗೀಕರಣದ ಮೂಲ ಉದ್ದೇಶ ಲಾಭ ಮಾಡತಕ್ಕಂಥ ವ್ಯಾಪಾರವಷ್ಟೆ. ಅದು ಸರ್ಕಾರದ ಸ್ವಾಮ್ಯದಲ್ಲಿದ್ದಾಗ, ಅಲ್ಲಿ ಲಾಭದ ಪ್ರಶ್ನೆ ಬರುವುದಿಲ್ಲ. Social obligation, ಸಾಮಾಜಿಕ ಕಳಕಳಿಯಿರುವಂತಹ ಒಂದು ಮನೋಭಾವನೆ ಇರುತ್ತದೆ. ಅದು ಎಲ್ಲರಿಗೂ ಸಹ ಅವಕಾಶ ಮಾಡಿಕೊಟ್ಟಿರುವಂತಹದ್ದನ್ನು ನಾವು ನೋಡಿರುವಂತಹದ್ದು. ಈಗ ಖಾಸಗೀಕರಣವಾದ ನಂತರ, 2006 ರಲ್ಲಿ ಮಾನ್ಯ ಅರ್ಜುನ್ ಸಿಂಗ್‌ರವರು ಇದ್ದಾಗ, ಉಚ್ಚ ಶಿಕ್ಷಣ Post Graduation ನಲ್ಲಿ ಶೇಕಡ 27 ರಷ್ಟು ಮೀಸಲಾತಿಯನ್ನು ಕೊಡಬೇಕೆಂದು ಮಾಡಿದ್ದರು. ಈ ಬಾರಿ ಕರ್ನಾಟಕವನ್ನು ತೆಗೆದುಕೊಂಡು ನೋಡಿದಾಗ, ವೈದ್ಯಕೀಯ ಶಿಕ್ಷಣದಲ್ಲಿ zero percent.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಲ್ಲಾ ಖಾಸಗಿ ಕಾಲೇಜುಗಳ ಮಾಲೀಕರು ಹೆಚ್ಚು ಕಡಿಮೆ ನಮಗೂ ಮತ್ತು ತಮಗೂ ಪರಿಚಯ. ನಾವು ಅವರನ್ನು ಏನೂ ಸ್ವಾಮಿ ಈಗೆಲ್ಲಾ ಸೇರಿಸಿಕೊಳ್ಳುತ್ತಿದ್ದೀರಾ, ಮೆರಿಟ್ ತೆಗೆದುಕೊಂಡುವರದು ಏನಿಲ್ವಾ ಎಂದು ಕೇಳುತ್ತೇವೆ. ಮೆರಿಟ್‌ನಲ್ಲಿ ಮೀಸಲಾತಿ ಎನ್ನುವುದು ಬಂದಾಗ, ಏನೋ ಮೆರಿಟ್‌ನಲ್ಲಿ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಬಹಳ ದೊಡ್ಡ ಅಬ್ಬರವಾಗುತ್ತಿತ್ತು. ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರೇ ತಮ್ಮ ಕಾಲೇಜಿನ ಬಗ್ಗೆ ಮಾತನಾಡುತ್ತಿದ್ದೇನೆ. ದಯವಿಟ್ಟು, ಕುಳಿತುಕೊಳ್ಳಿ. ಇದರ ಬಗ್ಗೆ ದೊಡ್ಡ ಚರ್ಚೆಯಾಗುತ್ತಿತ್ತು. ಸರ್ಕಾರದವರು ಮೀಸಲಾತಿಯನ್ನು ತಂದು ಶಿಕ್ಷಣ ಕ್ಷೇತ್ರವನ್ನು ಮುಗಿಸಿಬಿಡುತ್ತಾರೆ. ಆದರೆ donation ಕೊಟ್ಟು ಸೇರುತ್ತಾರಲ್ಲಾ, ಅದು ಯಾವ ಮೆರಿಟ್ ಸ್ವಾಮಿ.

ಮಾನ್ಯ ಸಭಾಪತಿಯವರೇ, ಒಂದು ಉದಾಹರಣೆಯನ್ನು ಹೇಳುತ್ತೇನೆ. ಒಬ್ಬರ್‍ಯಾರೋ ಸಾಮಾಜಿಕ ಕಳಕಳಿ ಇರುವವರು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಕ್ಯಾಪಿಟೇಷನ್ ವಿರುದ್ಧ ಒಂದು PIL (Public Interest Litigation) ಹಾಕಿದ್ದರು. ಆ ಕ್ಯಾಪಿಟೇಷನ್ ವಿರುದ್ಧ ಒಳ್ಳೆಯ ವಕೀಲರು ಸಿಗಲಿಲ್ಲ. ದೇಶದಲ್ಲಿರುವ ವಕೀಲರು ಐವತ್ತು ಲಕ್ಷ, ಒಂದು ಕೋಟಿ ರೂಪಾಯಿಗಳಷ್ಟು ಶುಲ್ಕ ತೆಗೆದುಕೊಳ್ಳುವ ವಕೀಲರುಗಳಿದ್ದರು. ಎಲ್ಲಾ ಕಾಲೇಜಿನವರೆಲ್ಲರೂ ಬುಕ್ ಮಾಡಿಬಿಟ್ಟರು. ಅದರೊಳಗೆ ನಮ್ಮ ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರು ಸಹ ಇದ್ದಾರೆ. ಕ್ಯಾಪಿಟೇಷನ್ ವಿರುದ್ಧ ಮಾತನಾಡುವುದಕ್ಕೆ ಒಬ್ಬ ವಕೀಲರು ಸಿಗಲಿಲ್ಲ. ಕೊನೆಗೆ ಸರ್ಕಾರಿ ವಕೀಲರು ಹೋಗಿ, ಕ್ಯಾಪಿಟೇಷನ್ ವಿರುದ್ಧ ಮಾತನಾಡಿದರು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಹರಿಪ್ರಸಾದ್‌ರವರೇ, ಈ ದೇಶದಲ್ಲಿ ಸ್ವಾತಂತ್ರ್ಯ ಬಂದ ನಂತರ ಕಾನೂನು ಯಾರ ಮನೆಯ ಸ್ವತ್ತು ಅಲ್ಲ. ಯಾವುದೇ ನ್ಯಾಯವಾದಿಗಳನ್ನು ಅಷ್ಟೊಂದು ದೊಡ್ಡ ಮಟ್ಟದಲ್ಲಿ ಯಾರ ಪರವಾಗಿ ವಾದ ಮಾಡಬೇಡಿ ಎಂದು ಹೇಳುವಂತಹ ವ್ಯವಸ್ಥೆ ಭಾರತ ದೇಶದಲ್ಲಿ ಇನ್ನು ಬಂದಿಲ್ಲ ಎಂಬುದು ನನ್ನ ಭಾವನೆಯಾಗಿದೆ. ಯಾವುದೋ ಒಂದು ಸಂದರ್ಭದಲ್ಲಿ, ಯಾರೋ ಮಾಡಿದಂತಹದ್ದನ್ನು ವ್ಯಕ್ತಿಗತವಾಗಿ ಅಥವಾ ಸಂಸ್ಥೆಯ ಮೇಲೆ ಮಾತನಾಡುವುದು ದಯವಿಟ್ಟು ಬೇಡ ಎಂದು ಹೇಳುತ್ತೇನೆ.

**ಶ್ರೀ ಬಿ.ಕೆ. ಹರಿಪ್ರಸಾದ್:–** ನಾನು ಮಾತನಾಡಿರುವ ಬಗ್ಗೆ ತಮಗೆ ಏನಾದರೂ ನೋವಾಗಿದ್ದರೆ, ನಾನು ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ನನಗೆ ನೋವಾಗಿಲ್ಲ. We are in 21st Century and under Baba Saheb Ambedkar's Constitution. ಈ ಸಂವಿಧಾನದ ಅಡಿಯಲ್ಲಿ ನಾವು ಯಾರೂ ಸಹ ಸಂವಿಧಾನವನ್ನು ಅಷ್ಟೊಂದು ಹಗುರವಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅತ್ಯಂತ ಬಡವರಿಗೂ ಸಹಿತ ಸಂವಿಧಾನದಲ್ಲಿ ತನ್ನದೇ ಆಗಿರತಕ್ಕಂಥ ನ್ಯಾಯ ವಾದವನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಡಾ. ಬಾಬಾ ಸಾಹೇಬ ಅಂಬೇಡ್ಕರ್‌ರವರು ಮಾಡಿಕೊಟ್ಟಿದ್ದಾರೆ. ನಾವ್ಯಾರೂ ಸಹಿತ ಒಂದು ನ್ಯಾಯಾಂಗ ವ್ಯವಸ್ಥೆಯನ್ನು ಅಷ್ಟೊಂದು ಹಗುರವಾಗಿ ಮಾತನಾಡುವುದು ಬೇಡ ಎನ್ನುವುದು ನನ್ನ ವಿನಂತಿಯಾಗಿದೆ.

**ಶ್ರೀ ಬಿ.ಕೆ. ಹರಿಪ್ರಸಾದ್:-** ಎಲ್ಲಾ most costliest Lawyeres ಇದ್ದಾರೆ ನೋಡಿ, ಅವರನ್ನೆಲ್ಲಾ ಬುಕ್ ಮಾಡಿದ್ದಾರೆ. ಇದರ ಪರವಾಗಿ ವಾದ ಮಾಡುವವರು ಯಾರು ಇರಲಿಲ್ಲ ಎಂದು ನಾನು ಹೇಳಿದ್ದು. ನಾನು ವ್ಯಕ್ತಿಗತವಾಗಿ ಯಾರನ್ನೂ ಟೀಕೆ ಮಾಡಲಿಲ್ಲ. ಅದು ಕೆಟ್ಟದ್ದು ಎಂದು ಹೇಳಲಿಲ್ಲ.

**ಡಾ. ಅಶ್ವತ್ಥನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿ, ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):-** ಮಾನ್ಯ ಸಭಾಪತಿಯವರೇ, costliest Lawyers ನ್ಯಾಯ ಕೊಡಿಸುವುದಕ್ಕಾಗಲಿಲ್ಲವೇ?

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಉಪ ಮುಖ್ಯಮಂತ್ರಿಯವರೇ ಕುಳಿತುಕೊಳ್ಳಿ. ಆ ಪರಿಸ್ಥಿತಿಯಲ್ಲಿ ಕ್ಯಾಪಿಟೇಷನ್ ಶುಲ್ಕ ಬ್ಯಾನ್ ಆಗಿದೆ. ಯಾವ ಕಾಲೇಜಿನಲ್ಲಿ ಕ್ಯಾಪಿಟೇಷನ್ ಶುಲ್ಕವನ್ನು ತೆಗೆದುಕೊಳ್ಳುವುದಿಲ್ಲ ಸ್ವಾಮಿ. ಈಗಾಗಲೇ ಸುಮಾರು ಹತ್ತು-ಹನ್ನೆರಡು ವರ್ಷಗಳಾಗಿ ಹೋಯಿತು. ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ಕೊಡಬೇಕೆಂದು ಹೇಳಿ, ಕೇಂದ್ರ ಸರ್ಕಾರ ಶೇಕಡ 27 ರಷ್ಟು ಯಾವುದೇ ಒಂದು ಕಾಲೇಜುಗಳಲ್ಲಿ ಕೊಟ್ಟಿಲ್ಲ. ಬೆಳಗ್ಗೆ ಒಂದು ಪ್ರಶ್ನೆ ಬಂದಿದ್ದು, ಅದಕ್ಕೆ ಉತ್ತರ ಕೊಡುವುದಕ್ಕೆ ಸಚಿವರು ಇದ್ದಿದ್ದರೆ ಚೆನ್ನಾಗಿರುತ್ತಿತ್ತು. Higher Education ನಲ್ಲಿ ಮೀಸಲಾತಿ ಬಂದ ನಂತರ, ಮೀಸಲಾತಿಯ ಬಗ್ಗೆ ಎಲ್ಲಿಯೂ ಚರ್ಚೆಯಾಗುವುದಿಲ್ಲ. ಹಣ ಕೊಟ್ಟ ಸೇರಿದವರಿಗೆ ಮೆರಿಟ್ ಇರುತ್ತದೆ ಅಥವಾ ಶೇಕಡ 60ರಷ್ಟು ಮೆರಿಟ್ ತೆಗೆದುಕೊಂಡವನಿಗೆ ಮೆರಿಟ್ ಇಲ್ಲ ಎಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಳುವುದು ಬಹಳ ತಪ್ಪಾಗುತ್ತದೆ. ಆದ್ದರಿಂದ ವಿಶ್ವವಿದ್ಯಾನಿಲಯಗಳನ್ನು ತಾವೇನೂ ಮಾಡುತ್ತಿದ್ದೀರಲ್ಲಾ, ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಗೆ ಅವಕಾಶ ಇದೆಯಾ ಅಥವಾ ಇಲ್ಲವೆ ಎಂಬುದನ್ನು ಹೇಳಿ. ಏಕೆಂದರೆ, ಕೇಂದ್ರದಲ್ಲಿ ಭಾರತೀಯ ಜನತಾ ಪಕ್ಷ ಸರ್ಕಾರ ಬಂದ ಮೇಲೆ, ಎಲ್ಲವೂ ಕೂಡ ಖಾಸಗೀಕರಣವಾಗುತ್ತಿದೆ. ಅಲ್ಲಿ ಮೀಸಲಾತಿಗೆ ಅವಕಾಶವಿರುವುದಿಲ್ಲ. ಅದೇ ರೀತಿ ಶಿಕ್ಷಣ ಕ್ಷೇತ್ರದಲ್ಲಿ ಬಡವರಿಗೆ ಏನು ಅವಕಾಶವಿತ್ತು ಅಥವಾ ದುರ್ಬಲ ವರ್ಗದವರಿಗೆ ಏನು ಅವಕಾಶವಿತ್ತು? ಆ ಮೀಸಲಾತಿಯ ಬಗ್ಗೆ ತಮ್ಮ ಅನಿಸಿಕೆ ಮತ್ತು ಈ ಸರ್ಕಾರ ಏನು ಮಾಡುತ್ತದೆ ಎಂಬ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಏಕೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳು, ಸರ್ಕಾರಿ ಎಂಜಿನೀಯರಿಂಗ್ ಕಾಲೇಜು, UVCE, ಗುಲ್ಬರ್ಗಾ ವೈದ್ಯಕೀಯ ಕಾಲೇಜು, ಹುಬ್ಬಳ್ಳಿ ವೈದ್ಯಕೀಯ ಕಾಲೇಜು, ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಮಂಗಳೂರು ವೈದ್ಯಕೀಯ ಕಾಲೇಜು ಇರಬಹುದು. ಇವೆಲ್ಲಾ ಕಾಲೇಜುಗಳು high standard ಕಾಲೇಜುಗಳಾಗಿತ್ತು. ಅದು ಖಾಸಗೀಕರಣವಾದ ಮೇಲೆ ಬಹಳಷ್ಟು ವೈದ್ಯಕೀಯ ಕಾಲೇಜುಗಳು ಬಂದ ಮೇಲೆ ಆ ಕಾಲೇಜುಗಳ ಸ್ಥಿತಿ ಏನಾಗಿದೆ ಎಂಬುದು ಯಾರಿಗೂ ಸಹ ಗೊತ್ತಿಲ್ಲ. ಆದರೆ ಖಾಸಗೀಕರಣ ಮಾಡಿ, ಸರ್ಕಾರಿ ಹಿಡಿತದಲ್ಲಿದ್ದಂತಹ ಒಳ್ಳೊಳ್ಳೆಯ ಕಾಲೇಜುಗಳು ಕೂಡ ನಿರ್ನಾಮವಾಗುತ್ತಿದೆ. ಆದ್ದರಿಂದ ಖಾಸಗೀಕರಣದಿಂದ ಅದಕ್ಕೆ ತೊಂದರೆಯಾಗಬಾರದು. ಮಾನ್ಯ ಸಿ.ಎಂ. ಇಬ್ರಾಹಿಂ ಸಾಹೇಬರು ಹೇಳಿದ ಹಾಗೇ ಈ ನಿಟ್ಟಿನಲ್ಲಿ ಇದನ್ನು ಇನ್ನು ಸ್ವಲ್ಪ ಚರ್ಚೆ ಮಾಡುವುದಕ್ಕೆ ಒಂದು ಕಮಿಟಿ ಮಾಡಿದರೆ ಒಳ್ಳೆಯದು. ಮಾನ್ಯ ಶ್ರೀಕಂಠೇಗೌಡರು 'mushrooming of university' ನಾಯಿ ಕೊಡೆ ತರಹ ಬಂದಿದೆ ಎಂದು ಬಹಳ ಚೆನ್ನಾಗಿ ಹೇಳಿದ್ದಾರೆ. ಎಲ್ಲಿ ನೋಡಿದರೂ ಅಲ್ಲಿ ವಿಶ್ವವಿದ್ಯಾನಿಲಯ, ವೈದ್ಯಕೀಯ ಕಾಲೇಜು ಮತ್ತು ಎಂಜಿನೀಯರಿಂಗ್ ಕಾಲೇಜುಗಳಿವೆ. ಇದು ಬಹಳ ಒಳ್ಳೆಯದು. ವರ್ಷಕ್ಕೆ ಒಂದು ಲಕ್ಷ seat ಎಂಜಿನೀಯರಿಂಗ್‌ನಲ್ಲಿ ಕೊಡುತ್ತೇವೆ ಎಂದು ನಾವು ಗರ್ವದಿಂದ ಹೇಳುತ್ತೇವೆ. ಆದರೆ ಗುಣಮಟ್ಟ ಶಿಕ್ಷಣ ಎನ್ನುವುದು ಇದೆ ನೋಡಿ, ಅದು donation ನಲ್ಲಿ ಕೊಟ್ಟಾಗ ಏನು ಬರುತ್ತದೆ? ಮೀಸಲಾತಿಯಲ್ಲಿ ಬಂದಾಗ ಏನಾಗುತ್ತದೆ ಎಂಬುದರ ಬಗ್ಗೆ ಸ್ಟಡಿ ಮಾಡಿದ್ದೀರಾ. ಈಗಾಗಲೇ ಇನ್ಫೋಸಿಸ್ ಮಾಲೀಕರು, founder ನಮ್ಮಲ್ಲಿ ಪಾಸ್ ಆಗುವಂತಹ ಎಂಜಿನೀಯರ್ ಕಾಲೇಜಿನಲ್ಲಿ ಶೇಕಡ 50 ರಷ್ಟು ಮಾತ್ರ ಗುಣಮಟ್ಟದ ಎಂಜಿನೀಯರ್ ಇದ್ದಾರೆ. ಬಾಕಿಯವರು ಇಲ್ಲವೆಂದು ಹೇಳಿದರು. ಶೇಕಡ 50 ರಷ್ಟು ಎಂದರೆ, it is a big number.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಆದ್ದರಿಂದ ಇತರ ವಿಶ್ವವಿದ್ಯಾನಿಲಯಗಳನ್ನು wholesale ಆಗಿ deemed university ಮಾಡುವ ಬದಲು ಅದರ ಬಗ್ಗೆ ಸ್ವಲ್ಪ background ತಿಳಿದುಕೊಂಡು ಮಾಡುವುದು ಒಳ್ಳೆಯದು ಎಂದು ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನರವರೇ ಮಾತನಾಡಿ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:–** ಮಾನ್ಯ ಸಭಾಪತಿಯವರೇ, ಇದರ ಬಗ್ಗೆ ಬಹಳ ಅರ್ಥಪೂರ್ಣವಾಗಿ ಚರ್ಚೆ ನಡೆಯುತ್ತಿದೆ. ನಾವು ಇಪ್ಪತ್ತೊಂದನೇ ಶತಮಾನದಲ್ಲಿದ್ದೇವೆ. ಮಾನ್ಯ ಎ.ಪಿ.ಜೆ. ಅಬ್ದುಲ್ ಕಲಂ ಅವರು ಇಪ್ಪತ್ತೊಂದನೇ ಶತಮಾನ ಭಾರತೀಯರ ಶತಮಾನ ಎಂದು ಹೇಳಿದ್ದಾರೆ. ವಿಶ್ವವಿದ್ಯಾನಿಲಯಗಳು ಬರುವುದು ಹಿಂದಿನ ಅವಶ್ಯಕತೆ. ಆದರೆ ಇಲ್ಲಿ ಆತಂಕವೇನೆಂದರೆ, ಖಾಸಗಿ ವಿಶ್ವವಿದ್ಯಾನಿಲಯಗಳು ಬರುವುದರಿಂದ ಸರ್ಕಾರಿ ವಿಶ್ವವಿದ್ಯಾನಿಲಯಗಳು ತೊಂದರೆಗೀಡಾಗುತ್ತವೆ ಎನ್ನುವುದು ಮಾನ್ಯ ಹರಿಪ್ರಸಾದ್, ಶ್ರೀಕಂಠೇಗೌಡರು ಮತ್ತು ಎಲ್ಲಾ ಸದಸ್ಯರ ಅಭಿಪ್ರಾಯವಿರಬಹುದು. Survival of fittest, ಮುಂದಿನ ದಿನಮಾನಗಳಲ್ಲಿ ಯಾರಲ್ಲಿ ಶೈಕ್ಷಣಿಕ ಕ್ಷಮತೆಯಿದೆ ಅಂತಹ ವಿಶ್ವವಿದ್ಯಾನಿಲಯಗಳು ಮಾತ್ರ ಉಳಿಯುತಕ್ಕಂತಹ ಸಂದರ್ಭ ಇವತ್ತು ನಮ್ಮ ಮುಂದಿದೆ. ಇವತ್ತು ವಿ.ಟಿ.ಯು. ಅನ್ನು ತೆಗೆದುಕೊಂಡರೆ, ಅದು ಸರ್ಕಾರಿ ವಿಶ್ವವಿದ್ಯಾನಿಲಯ. ಆದರೆ ಅದು ಅತ್ಯುತ್ತಮವಾಗಿ ನಡೆಯುವಂತಹ ಭಾರತದ ವಿಶ್ವವಿದ್ಯಾನಿಲಯಗಳಲ್ಲಿ ಸಹ ವಿ.ಟಿ.ಯು. ಒಂದು ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯವು ಸಹ ಅತ್ಯಂತ ಯಶಸ್ವಿಯಾಗಿ ಇವತ್ತು ಕಾರ್ಯನಿರ್ವಹಿಸುತ್ತಿದೆ. ಆ ಹಿನ್ನೆಲೆಯಲ್ಲಿ ಯಾವುದೇ ವಿಶ್ವವಿದ್ಯಾನಿಲಯ ಅಥವಾ ಯಾವುದೇ ಕಾಲೇಜು ಸ್ಥಾಪನೆಗೊಂಡಾಗ ಮಾತ್ರ ಅದರ ಕಾರ್ಯಕ್ಷಮತೆಯನ್ನು ಅಳೆಯುವುದಕ್ಕೆ ಆಗುವುದಿಲ್ಲ. ಅದು ಬರುವಂತಹ ದಿನಮಾನಗಳಲ್ಲಿ ಅದು ತನ್ನ ಆಡಳಿತ ವ್ಯವಸ್ಥೆ ಮತ್ತು ಅಲ್ಲಿರುವಂತಹ ಶೈಕ್ಷಣಿಕ ವ್ಯವಸ್ಥೆಯಿಂದ ಆ ಸಂಸ್ಥೆ ತನ್ನನ್ನು ತಾನು ಗುರುತಿಸಿಕೊಳ್ಳುವುದಕ್ಕೆ ಸಾಧ್ಯ.

(ಮುಂದು)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(122)03.02.2021,4.40, ಟಿಸಿಹೆಚ್-ಆರ್‌ಎನ್

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:- (ಮುಂದು):-**

ಇವತ್ತಿನ ದಿವಸ ಯಾವುದೇ ವಿಶ್ವವಿದ್ಯಾಲಯ ಹುಟ್ಟಿತೆಂದು ಅದರ ಮೇಲೆ ನಾವು ಯಾವುದೇ ಆರೋಪಗಳನ್ನು ನಾವು ಮಾಡಬಾರದು ಎನ್ನತಕ್ಕಂಥ ವಿನಂತಿಯನ್ನು ನಾನು ಈ ಸಂದರ್ಭದಲ್ಲಿ ಮಾಡುತ್ತಾ, ಇನ್ನೂ ಕೆಲವೊಂದು ವ್ಯವಸ್ಥೆಗಳು ಬದಲಾವಣೆಗಳಾಗಬೇಕೆಂದು ವಿನಂತಿಯನ್ನು ತಾವು ಮಾಡಿದ್ದೀರಿ. ನಾನು ಮಾನ್ಯ ಸಚಿವರಿಗೆ ವಿನಂತಿ ಮಾಡುತ್ತೇನೆ. ಬರತಕ್ಕಂಥ ದಿನಮಾನಗಳಲ್ಲಿ ಸರ್ಕಾರವು ಸಹಿತ ಆ ವಿಶ್ವವಿದ್ಯಾಲಯಗಳಲ್ಲಿರತಕ್ಕಂಥ ಆಡಳಿತಾತ್ಮಕ ವ್ಯವಸ್ಥೆಯನ್ನು ಯಾವ ರೀತಿ ನಾವು ನೋಡಬಹುದು, ಅದರಲ್ಲಿ ಬದಲಾವಣೆಗಳನ್ನು ಸೂಚಿಸಬಹುದು ಎನ್ನುವುದನ್ನು ತಮ್ಮ ವಿವೇಚನೆಗೆ ಬಿಟ್ಟಂತ ವಿಚಾರ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇಂತಹ ವಿಶ್ವವಿದ್ಯಾಲಯಗಳು ಬರುವುದರಿಂದ ಮಾತ್ರ ಇವತ್ತು ಕರ್ನಾಟಕವನ್ನು ಇಡೀ ವಿಶ್ವ ನೋಡುತ್ತಿದೆ ಏಕೆ? ಕರ್ನಾಟಕದಲ್ಲಿರತಕ್ಕಂಥ ಶೈಕ್ಷಣಿಕ ವ್ಯವಸ್ಥೆಗೆ, ಇಲ್ಲಿ ಇರತಕ್ಕಂಥ ಅನೇಕ ಖಾಸಗಿ ಸಂಸ್ಥೆಗಳ ಕೊಡುಗೆ ಇಡೀ ಭಾರತವನ್ನು, ಭಾರತದಲ್ಲಿ ಕರ್ನಾಟಕವನ್ನು ಶೈಕ್ಷಣಿಕ ನಕ್ಷೆಯಲ್ಲಿ ಬಹಳ ದೊಡ್ಡ ಸ್ಥಾನವನ್ನು ತಂದು ಕೊಟ್ಟಿದೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಅದಕ್ಕೆ ಅನೇಕ ಮಠಾಧೀಶರ ಕೊಡುಗೆ ಇರಬಹುದು, ಅನೇಕ ಶೈಕ್ಷಣಿಕ ಸಂಸ್ಥೆಗಳ ಕೊಡುಗೆ ಇರಬಹುದು; ಆ ಹಿನ್ನೆಲೆಯಲ್ಲಿ ಇಂತಹ ಸಂಸ್ಥೆಗಳು ಬರುವುದರಿಂದ ನಮ್ಮ ಖಾಸಗಿ ಮತ್ತು ಸರ್ಕಾರಿ ವಿಶ್ವವಿದ್ಯಾಲಯಗಳಿಗೂ ಕೂಡ competition ಆಗುತ್ತದೆ. ನಮ್ಮಲ್ಲಿರತಕ್ಕಂಥ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸರ್ಕಾರಿ ವ್ಯವಸ್ಥೆಯಲ್ಲಿ ಜಡ್ಡುಗಟ್ಟಿರತಕ್ಕಂಥ ವಾತಾವರಣಕ್ಕೆ we need a competition ಎಂದಾಗ ಮಾತ್ರ ನಮ್ಮ ಬದಲಾವಣೆಗೆ ನಾವು ಒಗ್ಗಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸಂದರ್ಭದಲ್ಲಿ ಹೇಳಿ, ಈ ಎಲ್ಲಾ ವಿಧೇಯಕಗಳನ್ನು ಸ್ವಾಗತ ಮಾಡುತ್ತಾ, ನಾನು ಈ ವಿಧೇಯಕಗಳು ಜಾರಿಗೆ ಬರಬೇಕೆಂದು ತಮ್ಮ ಮುಖಾಂತರ ಒತ್ತಾಯವನ್ನು ಮಾಡುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಪಾಯಿಂಟ್ ಆಫ್ ಆರ್ಡರ್. ಪಾರ್ಲಿಮೆಂಟರಿ ಸಿಸ್ಟಂನಲ್ಲಿ Profit of Interest ಎಂದು ಬಂದಾಗ ಕೆಲವು ಸಂದರ್ಭದಲ್ಲಿ ಯಾರೂ ಮಾತನಾಡಬಾರದು ಎಂದು ಇದೆ. ಇಲ್ಲಿ ಏನಾದರೂ ಆ ರೀತಿ ಇದೆಯೇ ಎಂದು ತಮ್ಮಲ್ಲಿ ಒಂದು ರೂಲಿಂಗ್ ಕೇಳುತ್ತಿದ್ದೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈ ದಿನ ಖಾಸಗಿ ವಿಧೇಯಕಗಳ ಬಗ್ಗೆ ಮಾತನಾಡಬೇಕೆಂದರೆ, ಸ್ವಲ್ಪ ಸಾಕಷ್ಟು ಸಮಯ ಬೇಕು. ದಯವಿಟ್ಟು ತಮ್ಮಲ್ಲಿ ಅದಕ್ಕೆ ಅನುಮತಿ ಕೋರುತ್ತೇನೆ. ಕಾರಣವೇನೆಂದರೆ, ಒಮ್ಮೆ ಮಾನ್ಯ ಹೆಚ್.ನರಸಿಂಹಯ್ಯನವರು ವಿದೇಶಕ್ಕೆ ಹೋದಾಗ, ಅವರು ವಾಪಸ್ಸು ಬರುವುದಕ್ಕೆ ಮುಂಚೆ ವಿಶ್ವವಿದ್ಯಾಲಯದಲ್ಲಿ ಈ ದೇಶ ಈ ರೀತಿ ಬೆಳೆಯಬೇಕಾದರೆ ಏನು ಕಾರಣ ಎಂದು ಒಂದು ಪ್ರಶ್ನೆ ಹಾಕಿದರಂತೆ. ಈ ದೇಶದ ಹಿರಿಮೆ ಮತ್ತು ಗರಿಮೆ ಏನೆಂದು ಕೇಳಿದರಂತೆ. ಅದಕ್ಕೆ ಅವರು ಈ ದೇಶದಲ್ಲಿರತಕ್ಕಂಥ Education Policy ಮತ್ತು ಶ್ರಮದಾನ ಇವೆರಡೂ ಕೂಡ ಈ ದೇಶದ ಹಿರಿಮೆ ಎಂದು ಆ ವಿದೇಶಿಗರು ಮಾನ್ಯ ಹೆಚ್.ನರಸಿಂಹಯ್ಯ ನವರಿಗೆ ಹೇಳಿದರಂತೆ. ಮಾನ್ಯ ಹೆಚ್.ನರಸಿಂಹಯ್ಯನವರು ತಮ್ಮ ಜೀವನ ಚರಿತ್ರೆಯಲ್ಲಿ ಇದನ್ನು ಬರೆದಿದ್ದಾರೆ. ಏಕೆಂದರೆ, ಮಾನ್ಯ ಹೆಚ್.ನರಸಿಂಹಯ್ಯನವರನ್ನು ನಾವು ನಮ್ಮ ನಾಡು ಕಂಡಂತಹ ಅಪರೂಪದ ವ್ಯಕ್ತಿತ್ವವನ್ನು ಹೊಂದಿದ್ದರು. ಇವತ್ತು ಈ ಖಾಸಗಿ ಈ ವಿಶ್ವವಿದ್ಯಾನಿಲಯಗಳು ನಮ್ಮ ನಾಡಿನಲ್ಲಿ ಬಹಳ ಕೊಡುಗೆ ಇದೆಯೆಂದು ಹೇಳಿದರೆ ಏನೋ ಗೊತ್ತಿಲ್ಲ. ಈ ಹಿಂದೆ ಮಾನ್ಯ ಸಿ.ಟಿ.ರವಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ 22 ವಿಶ್ವವಿದ್ಯಾಲಯಗಳಿಗೆ ಅನುಮತಿ ಕೊಟ್ಟರು. ಈಗ ಮಾನ್ಯ ಉಪ ಮುಖ್ಯಮಂತ್ರಿಗಳು, ಹಾಗೂ ಉನ್ನತ ಶಿಕ್ಷಣ ಸಚಿವರಾದ ಅಶ್ವಥ್‌ನಾರಾಯಣ್‌ರವರು 5 ವಿಧೇಯಕಗಳನ್ನು ತಂದಿದ್ದಾರೆ. ಈ ರಾಜ್ಯದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ಸಂಪೂರ್ಣವಾಗಿ ಬಿ.ಜೆ.ಪಿ ಆಡಳಿತ ಇದ್ದಾಗಲೇ ಬಂದಿರತಕ್ಕಂಥದ್ದು. ಇವತ್ತು ಯು.ಜಿ.ಸಿ., ನಿಯಮಾವಳಿಗಳ ಪ್ರಕಾರ ಭಾರತ ದೇಶದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರದ ಧನ ಸಹಾಯ ಆಯೋಗ ಅವಕಾಶ ಕೊಟ್ಟಿದೆ. ಆದರೆ ಅವರು ದೂರದೃಷ್ಟಿ ಇಟ್ಟುಕೊಂಡು ಖಾಸಗಿ ಸಹಭಾಗಿತ್ವ ಇಲ್ಲದೇ ಹೋದರೆ, ಸರ್ಕಾರಿ ಸ್ವಾಮ್ಯದಿಂದಲೇ ಗುಣಾತ್ಮಕವಾದಂಥ ಶಿಕ್ಷಣವನ್ನು ಕೊಡುವುದಕ್ಕೆ ಆಗುವುದಿಲ್ಲ ಎಂಬ ದೂರದೃಷ್ಟಿ ಇಟ್ಟುಕೊಂಡು ಕೊಟ್ಟಿದ್ದಾರೆ. ಆದರೆ ಇಲ್ಲೆಲ್ಲಾ ಆ ಉದ್ದೇಶವೇ ಬೇರೆ ಆಗುತ್ತಿದೆ. ಈಗಾಗಲೇ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ನಾವು ಶುಲ್ಕವನ್ನು ನಿಗದಿಗೊಳಿಸತಕ್ಕಂಥ ಅಧಿಕಾರವನ್ನು ಶೇ.40 ಏನು ವಿದ್ಯಾರ್ಥಿಗಳು ನಮ್ಮ ರಾಜ್ಯ ಸರ್ಕಾರದಿಂದ ನಾವು ಸೀಟ್‌ನ್ನು ಹಂಚಿಕೆ ಮಾಡುತ್ತೇವೆ. ಅದರ ಶುಲ್ಕವನ್ನು ರಾಜ್ಯ ಸರ್ಕಾರ ನಿಗದಿ ಮಾಡುತ್ತದೆ. ಶೇ.60 ಆ ಸಂಸ್ಥೆಗಳು ನೇಮಕ ಮಾಡಿಕೊಳ್ಳತಕ್ಕಂಥ ವಿದ್ಯಾರ್ಥಿಗಳಿಗೆ, ಅಡ್ಮಿಷನ್ ಕೊಡತಕ್ಕಂಥ ವಿದ್ಯಾರ್ಥಿಗಳಿಗೆ ಹೈಕೋರ್ಟ್ ನ್ಯಾಯಾಧೀಶರ ಸಮಿತಿ ತೀರ್ಮಾನದಂತೆ ಶುಲ್ಕ ವಿಧಿಸುವುದು. ಮತ್ತೊಂದು ವಿಚಾರದ ಬಗ್ಗೆ ಹೇಳುವುದಾದರೆ, ಈ ವಿಶ್ವವಿದ್ಯಾಲಯದಲ್ಲಿ ಏನೇ ಆಗು–

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೋಗುಗಳಾದರೂ ಕೂಡ ಘನತೆವೆತ್ತ ರಾಜ್ಯಪಾಲರು ಮತ್ತು ರಾಜ್ಯ ಸರ್ಕಾರ ಉನ್ನತ ಶಿಕ್ಷಣ ಸಚಿವರು ಅದನ್ನೆಲ್ಲವನ್ನೂ ಕೂಡ ಗಮನಿಸಬಹುದು ಎನ್ನತಕ್ಕಂಥದ್ದು ಇದೆ. ಮೂರನೆಯದಾಗಿ, ಈ ವಿಶ್ವವಿದ್ಯಾಲಯಗಳು ಏನಾದರೂ ಸರಿಯಾಗಿ ಕಾರ್ಯವನ್ನು ನಿರ್ವಹಿಸದಿದ್ದರೆ ವಿಶ್ವವಿದ್ಯಾಲಯಗಳನ್ನು ಬಂದ್ ಮಾಡುವಂಥ ಅಧಿಕಾರ ಸರ್ಕಾರಕ್ಕೆ ಇದೆ ಎನ್ನತಕ್ಕಂಥದ್ದು ಇದೆ. ನಾಲ್ಕನೆಯದಾಗಿ, ನಮ್ಮ ವಿಶ್ವವಿದ್ಯಾನಿಲಯದ ಈಗ ಉನ್ನತ ಶಿಕ್ಷಣ ಪರಿಷತ್ತು ಈ ಖಾಸಗಿ ವಿಶ್ವವಿದ್ಯಾಲಯಗಳ ನಿರ್ವಹಣೆಯನ್ನು ಗಮನಿಸುತ್ತದೆ ಎನ್ನತಕ್ಕಂಥ ಬಹಳ ಪ್ರಮುಖವಾದಂಥ ವಿಚಾರಗಳನ್ನು ತಾವು ನಮಗೆ ಮುಟ್ಟಿಸಿದ್ದೀರಿ. ಆದರೆ ನಾನು ಒಂದು ವಿಚಾರವನ್ನು ಕೇಳುವುದೇನೆಂದರೆ, ಈ ವಿಶ್ವವಿದ್ಯಾಲಯಗಳಲ್ಲಿ 25 ಎಕರೆ ಸ್ಥಳದಲ್ಲಿ ವಿಶ್ವವಿದ್ಯಾಲಯವನ್ನು ಮಾಡಬೇಕು ಎಂದು ಇದೆ. ಆದರೆ, ಈ ವಿಶ್ವವಿದ್ಯಾಲಯ ಘಟಕ ಕಾಲೇಜುಗಳು, ಸಂಶೋಧನಾ ಕೇಂದ್ರಗಳು ಮತ್ತು ತರಬೇತಿ ಕೇಂದ್ರಗಳನ್ನು ನಾಡಿನ ಉದ್ದಗಲಕ್ಕೂ ತೆರೆಯಬಹುದು ಎನ್ನತಕ್ಕಂಥದ್ದನ್ನು ನೀವು ಕೊಟ್ಟಿದ್ದೀರಿ. ಇದು ಎಲ್ಲೋ ಒಂದು ಕಡೆ ತಪ್ಪಾಗುತ್ತದೆ. ಸರ್ಕಾರಿ ವಿಶ್ವವಿದ್ಯಾನಿಲಯಗಳು ಬೆಂಗಳೂರು. ಇಲ್ಲಿ ತಾವೇ ವ್ಯಾಸಂಗ ಮಾಡಿದಂಥ ವಿಶ್ವವಿದ್ಯಾನಿಲಯಗಳಿಗೆ ಒಂದು territory ಇದೆ. ಆ ಟೆರಿಟರಿಯನ್ನು ದಾಟಬಾರದು. ಕಾಡಿನಲ್ಲಿ ಹುಲಿಗಳು territory ಮಾಡಿಕೊಂಡಿರುತ್ತವೆ. ಆ ರೀತಿ ಇಲ್ಲಿ ಯೂನಿವರ್ಸಿಟಿಗಳಿಗೆ ಬೆಂಗಳೂರು ಯೂನಿವರ್ಸಿಟಿ ಸೆಂಟ್ರಲ್ ಎಂದರೆ, ಒಂದು territory. ಅವರು ಅದರಿಂದ ಆಚೆ ಹೋಗಬಾರದು. ಮೈಸೂರು ಯೂನಿವರ್ಸಿಟಿ ಎಂದರೆ ನಾಲ್ಕು ಜಿಲ್ಲೆಗಳು ಬರುತ್ತದೆ. ಅದು ನಮ್ಮ ಕ್ಷೇತ್ರ ವ್ಯಾಪ್ತಿ. ಅವರು ಆ ನಾಲ್ಕು ಜಿಲ್ಲೆ ಕ್ಷೇತ್ರ ವ್ಯಾಪ್ತಿ ಬಿಟ್ಟು ಬೇರೆ ಕಡೆ ಹೋಗುವಂತಿಲ್ಲ ಮತ್ತು ಯಾವ ಸೆಂಟರ್‌ಗಳನ್ನೂ ತೆರೆಯುವಂತಿಲ್ಲ. ಇದು ಸರ್ಕಾರಿ ವಿಶ್ವವಿದ್ಯಾನಿಯಗಳಿಗೆ ಇರತಕ್ಕಂಥದ್ದು. ಆದರೆ ಖಾಸಗಿ ವಿಶ್ವವಿದ್ಯಾಲಯದವರು ರಾಜ್ಯದಲ್ಲಿ ಎಲ್ಲಿ ಬೇಕಾದರೂ ಯಾವ ಜಿಲ್ಲೆಯಲ್ಲಿ ಬೇಕಾದರೂ ಕೂಡ ಘಟಕ ಕಾಲೇಜ್‌ಗಳು, ತರಬೇತಿ ಕೇಂದ್ರಗಳು ಮತ್ತು ಸಂಶೋಧನಾ ಕೇಂದ್ರಗಳನ್ನು ತೆರೆಯುವುದಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಇದು ನಮ್ಮ ಸರ್ಕಾರಿ ವಿಶ್ವವಿದ್ಯಾಲಯಗಳ ಕತ್ತನ್ನು ಹಿಸುಕಿವಂಥ ಕೆಲಸ. ದಯಮಾಡಿ ಸರ್ಕಾರಿ ಯೂನಿವರ್ಸಿಟಿಗಳಿಗೂ ಕೂಡ ಈ ವಿಶ್ವವಿದ್ಯಾನಿಲಯದ ಸುತ್ತ 5 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ನೀವು ಎಲ್ಲಾದರೂ ಅಂತಹವುಗಳನ್ನು ಮಾಡಿಕೊಡಿ ಎಂದು ಹೇಳಿ. ಅವರಿಗೂ ಕೂಡ ಆ 25 ಎಕರೆ ಕಾಂಪೌಂಡ್‌ನೊಳಗೆ ಮಾಡಬೇಕು ಎಂದು ಹೇಳುವುದಕ್ಕೆ ಆಗುವುದಿಲ್ಲ. ಬೇಕಾದರೆ 5 ಕಿಲೋಮೀಟರ್ ವಿಸ್ತೀರ್ಣ ಅಥವಾ 10 ಕಿಲೋ ಮೀಟರ್ ವಿಸ್ತೀರ್ಣದಲ್ಲಿ ನೀವು ಘಟಕ ಕಾಲೇಜ್, ತರಬೇತಿ ಕೇಂದ್ರ ಹಾಗೂ ಸಂಶೋಧನಾ ಕೇಂದ್ರಗಳನ್ನು ಮಾಡಿಕೊಳ್ಳುವುದಕ್ಕೆ ಅವಕಾಶ ಇದೆಯೆಂದು ಹೇಳಿ. ಅದುಬಿಟ್ಟು,

ಇದಕ್ಕೆ ರಾಜ್ಯವಾಪಿ ಕೊಡತಕ್ಕಂಥದ್ದು. ನಾವು ಸರ್ಕಾರಿ ಕಾಲೇಜ್‌ಗಳ ಗುಣಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ಬಹಳ ಅಡ್ಡಿಯಾಗುತ್ತದೆ.

ಮತ್ತೊಂದು ವಿಚಾರದ ಬಗ್ಗೆ ಹೇಳುವುದಾದರೆ, ಮಾನ್ಯ ಸಭಾಪತಿಯವರೇ, ಈಗ ತಾಂತ್ರಿಕ ವಿಶ್ವವಿದ್ಯಾಲಯ ಎಂದು ಇದೆ. ತಾಂತ್ರಿಕ ವಿಶ್ವವಿದ್ಯಾಲಯ ಅಧೀನದಲ್ಲಿರತಕ್ಕಂಥ ಕಾಲೇಜುಗಳೇನಿವೆ, ಕಂಪ್ಯೂಟರ್ ಸೈನ್ಸ್, ಸಿವಿಲ್ ವಿಭಾಗಗಳಲ್ಲಿ ಯಾವುದೇ ಕೋರ್ಸ್ ನೋಡಿದರೂ ಕೂಡ ವಿದ್ಯಾರ್ಥಿಗಳ ಅಡ್ಮಿಷನ್ ಬರೀ 80, 120 ಮತ್ತು 180 ಇರುತ್ತಾರೆ. ಸರ್ಕಾರಿ ಯೂನಿವರ್ಸಿಟಿ ಕಾಲೇಜ್‌ಗಳಲ್ಲಿ 180 ವಿದ್ಯಾರ್ಥಿಗಳು ಮಾತ್ರ ಪ್ರವೇಶಾತಿ ಪಡೆದಿರುತ್ತಾರೆ. 180 ವಿದ್ಯಾರ್ಥಿಗಳಿಗಿಂತ ಹೆಚ್ಚು ಯಾವುದೇ ಯೂನಿವರ್ಸಿಟಿ ಕಾಲೇಜ್‌ಗಳಲ್ಲಿಲ್ಲ. ಆದರೆ ಒಂದೊಂದು ಖಾಸಗಿ ಕಾಲೇಜ್‌ನಲ್ಲಿ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ 900 ವಿದ್ಯಾರ್ಥಿಗಳು ಅಡ್ಮಿಷನ್ ಆಗಿದ್ದಾರೆ. ಸಿವಿಲ್ ವಿಭಾಗದಲ್ಲಿ 700 ವಿದ್ಯಾರ್ಥಿಗಳು ಅಡ್ಮಿಷನ್ ಆಗಿದ್ದಾರೆ. ಇ & ಸಿ 800 ವಿದ್ಯಾರ್ಥಿಗಳು ಅಡ್ಮಿಷನ್ ಆಗಿದ್ದಾರೆ. ಈ ರೀತಿ ಮಾಡಿದರೆ ಅವರಿಗೆ ಈ ಆಕ್ಟ್‌ನಲ್ಲಿ controlling system ಇಲ್ಲ. ಇದನ್ನು ಸರ್ಕಾರ ಇಟ್ಟುಕೊಳ್ಳಬೇಕು. ಅವರಿಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಮತ್ತೊಂದು ಮಾಡಬೇಕು ಎನ್ನುವುದನ್ನು ಈಗ ಎಲ್ಲಾ ಸರ್ಕಾರಿ ಯೂನಿವರ್ಸಿಟಿಗಳು ಈ ರೀತಿ ಕುಳಿತಿವೆ. ಮತ್ತೆ ನಮ್ಮ ಸರ್ಕಾರಿ ಯೂನಿವರ್ಸಿಟಿಗಳಲ್ಲಿ ಯಾವುದೇ ಕೋರ್ಸ್‌ನ್ನು ಪ್ರಾರಂಭ ಮಾಡಬೇಕಾದರೆ ಸರ್ಕಾರದ ಅನುಮತಿ ಬೇಕು. ಆದರೆ ಖಾಸಗಿ ಯೂನಿವರ್ಸಿಟಿಗಳು ದೇಶದಲ್ಲಿ ಅವರಿಗೆ ಬೇಕಾಗಿರತಕ್ಕಂಥ ಯಾವುದೇ ಕೋರ್ಸ್‌ನ್ನು ಪ್ರಾರಂಭ ಮಾಡಬಹುದು. ಹೊಸ ಕೋರ್ಸ್‌ಗಳನ್ನು ತೆಗೆದುಕೊಳ್ಳುವುದಕ್ಕೆ ಮತ್ತು ಪ್ರಾರಂಭ ಮಾಡುವುದಕ್ಕೆ ಸರ್ಕಾರದ ಅನುಮತಿ ಬೇಕು. Seat matrix ಹೆಚ್ಚು ಮತ್ತು ಕಡಿಮೆ ಮಾಡಿಕೊಳ್ಳುವುದಕ್ಕೆ ಪ್ರತಿಯೊಂದಕ್ಕೂ ಕೂಡ ಸರ್ಕಾರದ ಅನುಮತಿ ಬೇಕು ಎನ್ನತಕ್ಕಂಥದ್ದನ್ನು ಮಾಡಿದ್ದೀರಿ. ಮಾನ್ಯ ಸಚಿವರೇ, ತಾವು ಕೊಡಿ. ಅಲ್ಲಿ ಮೂಲಭೂತ ಸೌಕರ್ಯಗಳು ಇದ್ದಲ್ಲಿ ನೀವು 500 ಸೀಟ್‌ಗಳನ್ನು ಕೊಡಬಹುದು ಎಂದು ಹೇಳಿದ್ದೀರಿ ಕೊಡಿ. ಆದರೆ, ನೀವು ಅವರಿಗೆ ಯಾವುದೇ ಕಡಿವಾಣವಿಲ್ಲದೇ ಅವರಿಗೆ ಕೊಟ್ಟರೆ, ಈಗ ಏರ್‌ಪೋರ್ಟ್ ರಸ್ತೆಯಲ್ಲಿ ಒಂದು ಕಾಲೇಜ್ ಇದೆ. ಅಲ್ಲಿ ಸುಮಾರು 15000 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**(ಮುಂದು...)**

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(123)03.02.2021/4.50/ಎಂ.ಎಂ–ಬಿ.ಎನ್.ಎಸ್**

**ಶ್ರೀ ಮರಿತಿಬ್ಬೇಗೌಡ (ಮುಂದು):–**

ಅದರಲ್ಲಿ 15,000ದಲ್ಲಿ ಹೊರದೇಶದವರು, ಹೊರರಾಜ್ಯದವರು ಸುಮಾರು 10,000 ಇರಬೇಕು. ಅವರಿಗೆಲ್ಲಾ ರಾಜ್ಯ ಸರ್ಕಾರದಿಂದ ಯಾವುದೇ ನಿಯಂತ್ರಣ ಇಲ್ಲ. ಅವರೇ ಅಲ್ಲಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಅಂತಹದ್ದು ಆಗಬಾರದು. ಮತ್ತೊಂದು ವಿಚಾರವೆಂದರೆ ನೇಮಕಾತಿ ಬಗ್ಗೆ. ಯಾವುದೇ ಸರ್ಕಾರಿ ವಿಶ್ವವಿದ್ಯಾನಿಲಯಗಳಿಗೆ ಅಥವಾ ಮತ್ತೊಂದಕ್ಕೆ ನೇಮಕಾತಿ ಮಾಡಬೇಕೆಂದರೆ ಮೊದಲು ಸರ್ಕಾರ ಹುದ್ದೆ ಮಂಜೂರಾತಿ ಮಾಡಬೇಕು. ಅನಂತರ ಅದನ್ನು ನಾವು ಭರ್ತಿ ಮಾಡುವುದಕ್ಕೆ ಅನುಮತಿ ಕೊಡಬೇಕು, ಆನಂತರ ಭರ್ತಿ ಮಾಡಬೇಕು. ಈ ಪದ್ಧತಿ ಸರ್ಕಾರದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿವೆ. ಇವತ್ತು ಹೊರದೇಶದವರೋ, ಹೊರ ರಾಜ್ಯದವರೋ ಬಂದು ಈ ಖಾಸಗಿ ವಿಶ್ವವಿದ್ಯಾನಿಲಯವನ್ನು ಎಲ್ಲೋ ಒಂದು ಕಡೆ ಮಾಡುತ್ತಿದ್ದಾರೆ. ಆದರೆ ಅವರಿಗೆ ಶೇಕಡ ಇಷ್ಟು ಎಂದು ಕರ್ನಾಟಕದ ಜನರಿಗೆ ಉದ್ಯೋಗ ಕೊಡಬೇಕು. Faculty ಇರಬಹುದು, ಟೀಚಿಂಗ್ ಇರಬಹುದು, non-teaching ಇರಬಹುದು ಶೇಕಡ ಇಷ್ಟು ಎಂದು ಉದ್ಯೋಗ ಕೊಡಬೇಕೆಂದು ಷರತ್ತನ್ನು ಹಾಕದೇ ಹೋದರೆ; ಇದರಲ್ಲಿ ಯಾವ ಷರತ್ತೂ ಇಲ್ಲ. ಹುದ್ದೆ ಮಂಜೂರಾತಿಯೂ ಅವರಿಗೆ, ನೇಮಕಾತಿ ಅಧಿಕಾರವೂ ಅವರಿಗೇ ಇದೆ. ಯಾವ ರಾಜ್ಯದವರನ್ನಾದರೂ ಅಥವಾ ಯಾವ ದೇಶದವರನ್ನಾದರೂ ಅವರು ನೇಮಕ ಮಾಡಿಕೊಳ್ಳಬಹುದು. ಇದರಿಂದ ಕರ್ನಾಟಕದ ಜನತೆಗೆ ತುಂಬಾ ಅನ್ಯಾಯವಾಗುತ್ತದೆ. ದಯಮಾಡಿ ಉದ್ಯೋಗದಲ್ಲಿ teaching and non-teaching faculty ಯಲ್ಲಿ ಇಷ್ಟು ಪರ್ಸೆಂಟ್ ಕನ್ನಡ ನಾಡಿನ ಜನರಿಗೆ ಉದ್ಯೋಗ ಕೊಡಬೇಕೆನ್ನುವುದನ್ನು ತಾವು ಇಲ್ಲಿ ಅಳವಡಿಸಿದರೆ ಒಳಿತಾಗುತ್ತದೆ.

ಇನ್ನೊಂದು ಪ್ರಮುಖವಾದ ಅಂಶವೆಂದರೆ ರಾಜ್ಯಪಾಲರೇ ಆಗಲೀ, ತಾವು ಮಂತ್ರಿಗಳೇ ಆಗಲಿ ಸರ್ಕಾರಿ ಕಾಲೇಜುಗಳ ಘಟಿಕೋತ್ಸವಕ್ಕೆ ಹೋಗುವುದೇ ನಿಮಗೆ ದೊಡ್ಡ ಕಷ್ಟ. ಇನ್ನು ಖಾಸಗಿ ಕಾಲೇಜುಗಳು ಬೃಹತ್ತಾಗಿ ಬೆಳೆದಂತಹ ಇಂತಹ ಕಟ್ಟಡಗಳ ನಿರ್ವಹಣೆಯನ್ನು ನಿರ್ವಹಿಸುವುದು ಬಹಳ ಕಷ್ಟಸಾಧ್ಯ. ಇದನ್ನು ತಾವು ಗಮನಿಸತಕ್ಕದ್ದು. ನಾವು ನಮ್ಮ ನಾಡಿನಲ್ಲಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡುವುದಕ್ಕೆ ಅನುಮತಿ ಕೊಡುತ್ತಿದ್ದೇವೆ. ಇಬ್ಬರು ಎಂ.ಎಲ್.ಸಿ. ಗಳು ಮತ್ತು ಮೂವರು ಎಂ.ಎಲ್.ಎ.ಗಳನ್ನು Governing Council ಗೆ ಹಾಕಿ, ಅಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸ್ವಲ್ಪ ನೋಡಲಿ. ಐದು ಜನರನ್ನು ಕಳುಹಿಸಿದರೂ ಕೂಡ ಅವರ ಆಡಳಿತ ಮಂಡಳಿಯ Governing Council ನಲ್ಲಿ 20 ಜನರನ್ನು ಇಟ್ಟುಕೊಳ್ಳುತ್ತಾರೆ. ಮೆಜಾರಿಟಿ ನಿರ್ಣಯವನ್ನು ಬರೆದುಕೊಳ್ಳಿ ಎನ್ನುತ್ತಾರೆ. ಇದೆಲ್ಲಾ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ನಡೆಯುತ್ತದೆ. ಆದರೂ ಕೂಡ ಆ ವಿಶ್ವವಿದ್ಯಾನಿಲಯದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಒಬ್ಬ ಜನಪ್ರತಿನಿಧಿ ಗಮನಿಸಿದ ಹಾಗೆ ಆಗುತ್ತದೆ. ಒಬ್ಬರಲ್ಲ ಒಬ್ಬ ವ್ಯಕ್ತಿ ಅಲ್ಲಿ ಸರ್ಕಾರದ ನಿಯಮಗಳು ಪಾಲನೆಯಾಗುತ್ತಿದೆಯೇ, ವಿದ್ಯಾರ್ಥಿಗಳಿಗೆ ಇಲ್ಲಿ ಅನ್ಯಾಯವಾಗುತ್ತಿಲ್ಲವೇ ಎನ್ನುವುದನ್ನು ನಾಲ್ಕಾರು ಜನಪ್ರತಿನಿಧಿಗಳು Governing Council ನಲ್ಲಿದ್ದರೆ ಗಮನಿಸಬಹುದಲ್ಲವೇ. ಆ ವ್ಯವಸ್ಥೆಯನ್ನು ತರುವುದಕ್ಕೆ ಏನಾದರೂ ಕಾನೂನು ಅಡ್ಡಿ ಬರುತ್ತದೆಯೇ? ಇದರ ಬಗ್ಗೆ ತಾವು ಚಿಂತನೆ ಮಾಡಬೇಕು. ನಾನೇಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಖಾಸಗಿ ವಿಶ್ವವಿದ್ಯಾನಿಲಯ ಮಾಡುವುದಕ್ಕೆ ನನ್ನ ವಿರೋಧವಿಲ್ಲ. ಆದರೆ ಖಾಸಗಿ ವಿಶ್ವವಿದ್ಯಾನಿಲಯ ಬರುತ್ತಾ ಬರುತ್ತಾ ಸರ್ಕಾರಿ ವಿಶ್ವವಿದ್ಯಾನಿಲಯದಲ್ಲಿ ಓದಿದ ಮಕ್ಕಳಿಗೆ ಕೆಲಸ ಸಿಗುತ್ತಿಲ್ಲ. ಟೆಕ್ನಿಕಲ್ ವಿಶ್ವವಿದ್ಯಾನಿಲಯದಲ್ಲಿ ಓದಿದ ಮಕ್ಕಳಿಗೆ ಪಂಚಾಯತ್‌ರಾಜ್ ಇಲಾಖೆಯಿಂದ 50 ಇಂಜಿನಿಯರ್ ಹುದ್ದೆಗಳನ್ನು ಕರೆದಿದ್ದರು. ಆಗ ಶ್ರೀ ಹೆಚ್.ಕೆ. ಪಾಟೀಲರು ಪಂಚಾಯತ್‌ರಾಜ್ ಸಚಿವರಾಗಿದ್ದರು. ಸರ್ಕಾರದ ಟೆಕ್ನಿಕಲ್ ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ ಓದಿದವರಿಗೆ 50 ಹುದ್ದೆಗಳಲ್ಲಿ ಒಬ್ಬನಿಗೂ ಉದ್ಯೋಗ ಸಿಗಲಿಲ್ಲ. ಎಲ್ಲಾ ಉದ್ಯೋಗ ಇಂತಹ ಖಾಸಗಿ ವಿಶ್ವವಿದ್ಯಾನಿಲಯದಲ್ಲಿ ಓದಿದಂತಹ ಮಕ್ಕಳಿಗೆ ಸಿಕ್ಕಿತು.

ಇವತ್ತು ಖಾಸಗಿ ವಿಶ್ವವಿದ್ಯಾನಿಲಯಕ್ಕೆ ಹೋಗುವಂತಹವರು ಬಡವರ ಮಕ್ಕಳಲ್ಲ. ಎಲ್ಲಾ ಶ್ರೀಮಂತರ ಮಕ್ಕಳು, ಐ.ಎ.ಎಸ್., ಕೆ.ಎ.ಎಸ್. ಮತ್ತು ಶಾಸಕರ ಮಕ್ಕಳೇ ಹೋಗುತ್ತಾರೆ. ಏಕೆಂದರೆ ಅವರು ದುಡ್ಡು ಕೊಡುವಂತಹವರು. ಇಲ್ಲೆಲ್ಲಾ ಇವರು ಹೇಳಿದ ಹಾಗೆ ಪ್ಯಾಕೇಜ್ ಆಗಿಹೋಗಿದೆ. ನನ್ನ ಮಗನನ್ನು ಸೇರಿಸಿದರೆ ಅವನು ಸುಮ್ಮನೆ ಬಂದು ಕುಳಿತಿದ್ದರೂ ಕೂಡ ಅಲ್ಲಿ ರ್‍ಯಾಂಕ್ ದೊರೆಯುತ್ತದೆ. ಅದೇ ಸರ್ಕಾರಿ ವಿಶ್ವವಿದ್ಯಾನಿಲಯದಲ್ಲಿ ಓದಿದರೆ ನನ್ನ ಮಗ ಪಾಸ್ ಆಗುವುದೇ ಇಲ್ಲ. ಇಂತಹ ವ್ಯವಸ್ಥೆ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ಬಂದಿದೆ. ಕಾರಣವೆಂದರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವಾ ದೃಷ್ಟಿಯಿಂದ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚು ಮಾಡುವ ದೃಷ್ಟಿಕೋನದಿಂದ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಮಾಡುತ್ತಿರುವಂತಹವರು ಅಪರೂಪ. ಇವತ್ತು ಶಿಕ್ಷಣವನ್ನು ವ್ಯಾಪಾರೀಕರಣ ಮಾಡಿಕೊಂಡಿರುವವರೇ ಅತಿ ಹೆಚ್ಚು ಖಾಸಗಿ ಸಂಸ್ಥೆಗಳನ್ನು, ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಬರುತ್ತಿದ್ದಾರೆ. ಸೇವೆ ಮಾಡಬೇಕೆನ್ನುವವರು, ಗುಣಮಟ್ಟದ ಶಿಕ್ಷಣ ಕೊಡಬೇಕೆನ್ನುವ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೆಲವು ಸಂಸ್ಥೆಗಳಿವೆ. ಅದಕ್ಕೆ ಅದರದ್ದೇ ಆದಂತಹ ಗೌರವವಿದೆ. ಅಂತಹ ಸಂಸ್ಥೆಗಳನ್ನು ಬಹು ಬೇಗ ಮುಚ್ಚುವಂತಹ ಕೆಲಸವನ್ನು ಕೂಡ ಮಾಡುತ್ತಾರೆ. ಆ ದೆಸೆಯಿಂದ ಮಾನ್ಯ ಸಚಿವರು ದಯಮಾಡಿ ಚಿಂತನೆ ಮಾಡಬೇಕು. ಅವರು ವೈದ್ಯರಾಗಿದ್ದಾರೆ, ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ದೆಸೆಯಲ್ಲಿ ಮತ್ತು ಪದವೀಧರರಾದ ಮೇಲೆ ಅವರು ಎಲ್ಲಾ Bodies ನಲ್ಲೂ ಕೂಡ ಕೆಲಸ ಮಾಡಿದ್ದಾರೆ. ವಿಶ್ವವಿದ್ಯಾನಿಲಯಗಳ ಬಗ್ಗೆ ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ಅಲ್ಲದೆ ಅವರು ಒಂದು ದೊಡ್ಡ ಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿರುವಂತಹವರು. ಸರ್ಕಾರಿ ಶಾಲೆಯಲ್ಲಿ, ಸರ್ಕಾರಿ ವಿಶ್ವವಿದ್ಯಾನಿಲಯದಲ್ಲಿ ಓದುವಂತಹವರು ಬಡವರ ಮಕ್ಕಳು. ಸರ್ಕಾರ ಬಡವರ ಮಕ್ಕಳಿಗೋಸ್ಕರ ಇಷ್ಟೆಲ್ಲಾ ವ್ಯವಸ್ಥೆಯನ್ನು ಮಾಡುತ್ತಿದೆ. ಆ ಬಡವರ ಮಕ್ಕಳಿಗೆ ಉದ್ಯೋಗ ಸಿಗಬಾರದೇ? ಬಡವರ ಮಕ್ಕಳೆಲ್ಲಾ ಓದಿಕೊಂಡು ಬೀದಿ ಪಾಲಾಗುತ್ತಿದ್ದಾರೆ. ಶ್ರೀಮಂತರ ಮಕ್ಕಳು ರ್‍ಯಾಂಕ್ ಬರುತ್ತಾರೆ.

ಮಾನ್ಯ ಸಚಿವರೇ, ಒಂದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯವು ಹೆಸರಾಂತ ವಿಶ್ವವಿದ್ಯಾನಿಲಯವಾಗಿದೆ. ಕೆ.ಪಿ.ಎಸ್.ಸಿ. ಇಂದ 1200 ಹುದ್ದೆಗಳಿಗೆ ಸಂದರ್ಶನಕ್ಕೆ ಕರೆದರು. ನಮ್ಮ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಬ್ಬ ರ್‍ಯಾಂಕ್ ಹೋಲ್ಡರ್ 07 ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದ. ಡಿಗ್ರಿ, ಪಿ.ಜಿ., ಮಾರ್ಕ್ಸ್ ಮೇಲೆ 1:5 ratio ದಲ್ಲಿ ಸಂದರ್ಶನಕ್ಕೆ ಕರೆಯುತ್ತಿದ್ದರು. 07 ಚಿನ್ನದ ಪದಕಗಳನ್ನು ಪಡೆದುಕೊಂಡಿದ್ದ ರ್‍ಯಾಂಕ್ ಹೋಲ್ಡರ್‌ಗೆ ಸಂದರ್ಶನಕ್ಕೆ ಕರೆ ಬರಲಿಲ್ಲ. ನಾವೆಲ್ಲಾ ಓದುವಾಗ ಮೈಸೂರು ವಿಶ್ವವಿದ್ಯಾನಿಲಯ ಹೆಸರಾಂತ ವಿಶ್ವವಿದ್ಯಾನಿಲಯವೆಂದು ಹೆಸರುವಾಸಿಯಾಗಿತ್ತು. ಆತ 60% ಪಡೆದವನು ಎಲ್ಲಾ ಚಿನ್ನದ ಪದಕಗಳೂ ಅವನಿಗೇ ದೊರೆಯುತ್ತಿತ್ತು. ಆ ಚಿನ್ನದ ಪದಕ ವಿಜೇತ ಯಾರೆಂದು ನಾವು ಅವನನ್ನು ಹುಡುಕಿಕೊಂಡು ಹೋಗುತ್ತಿದ್ದೆವು. ಧಾರವಾಡ ಅಥವಾ ಗುಲ್ಬರ್ಗಾ ವಿಶ್ವವಿದ್ಯಾನಿಲಯಗಳಲ್ಲಿ ಆಗಲೇ ಅವರು ಶೇ.70 ಕೊಡುತ್ತಿದ್ದರು. ನಮ್ಮ ವಿಶ್ವವಿದ್ಯಾನಿಲಯದಲ್ಲಿ ಏತಕ್ಕೆ ಹೀಗೆ ಮಾಡುತ್ತೀರಿ ಎಂದರೆ ನಮ್ಮ ಪ್ರೊಫೆಸರ್‌ಗಳು ಇದರ ಘನತೆ ಬಹಳ ದೊಡ್ಡದು, ದಯವಿಟ್ಟು ತಾವು ಸುಮ್ಮನಿರಬೇಕು, ನಿಮ್ಮ ಕೈನಲ್ಲಿ ಅಷ್ಟು ಅಂಕಗಳನ್ನು ತೆಗೆಯುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದರು. ನಾನು ಎಂ.ಎ., ನಲ್ಲಿ ಶೇ.52ರಷ್ಟು ಅಂಕ ಗಳಿಸುವುದಕ್ಕೆ ಬಹಳ ಕಷ್ಟ ಪಟ್ಟೆ. ಶೇ.60 ಅಂಕ ಪಡೆದವರು Gold Medallist. ಇಂತಹ ವ್ಯವಸ್ಥೆ . . .

**ಶ್ರೀ ಪುಟ್ಟಣ್ಣ:-** ಮಾನ್ಯ ಮರಿತಿಬ್ಬೇಗೌಡರೇ, ಮಾನ್ಯ ವೈ.ಎ. ನಾರಾಯಣಸ್ವಾಮಿಯವರು ಅದೇ ಜಾಸ್ತಿ ಎಂದು ಹೇಳುತ್ತಿದ್ದಾರೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:–** ಅವರ ವಿಚಾರಕ್ಕೆ ಆಮೇಲೆ ಬರುತ್ತೇನೆ. ಅದನ್ನು ನೋಡಿಕೊಂಡು ಇದೇ ಸದನದಲ್ಲಿ ಮಾನ್ಯ ದೇಶಪಾಂಡೆಯವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಕೆ.ಪಿ.ಎಸ್.ಸಿ., ಸಂದರ್ಶನ ನಿಲ್ಲಬೇಕು, ಇಲ್ಲಿ ಅನ್ಯಾಯವಾಗುತ್ತಿದೆ, ಪ್ರತಿಭಾವಂತರ್ಯಾರೂ ಇಲ್ಲಿ ಉಪನ್ಯಾಸಕರಾಗುತ್ತಿಲ್ಲ, ಟೀಚರ್ ಆಗುತ್ತಿಲ್ಲ ಮತ್ತು ಇಲ್ಲಿ ಭಾರಿ ಭ್ರಷ್ಟಾಚಾರ ಇದೆ. Quality education ಕೊಡಬೇಕಾದರೆ ಸಂದರ್ಶನದಲ್ಲಿ ಪ್ರತಿಭಾನ್ವಿತ ಉಪನ್ಯಾಸಕರನ್ನು ಆಯ್ಕೆ ಮಾಡಬೇಕೆಂದು ಹೊಸ ಪದ್ಧತಿಗೆ ನಾವು ಈ ಸದನದಲ್ಲಿ ಬದಲಾವಣೆ ತಂದಿದ್ದೇವೆ. ಇದಕ್ಕೆ ದೊಡ್ಡ ಇತಿಹಾಸವಿದೆ.

**ಸಭಾಪತಿಯವರು:–** ಮಾನ್ಯ ಮರಿತಿಬ್ಬೇಗೌಡರೇ, ನಿಮ್ಮದು ಮುಗಿಯಿತೇ? ಈಗ ಮಾನ್ಯ ತಿಪ್ಪೇಸ್ವಾಮಿಯವರು ಮಾತನಾಡಲಿದ್ದಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ಸ್ವಲ್ಪ ಇರಿ. ಇದು ಶಿಕ್ಷಣದ, ನಮ್ಮ ಜೀವನದ ಪ್ರಶ್ನೆಯಾಗಿದೆ.

(ಮುಂದು)

(124) 03–02–2021/ 05–00/ ಕೆಹೆಚ್–ಬಿಎಸ್

**ಶ್ರೀ ಮರಿತಿಬ್ಬೇಗೌಡ (ಮುಂದು):–**

ಇನ್ನು ಒಂದೆರಡು ಮಾತುಗಳನ್ನು ಹೇಳುತ್ತೇನೆ. ಆದ್ದರಿಂದ, ದಯಮಾಡಿ ತಮ್ಮಲ್ಲಿ ವಿನಂತಿ ಮಾಡುವುದೇನೆಂದರೆ, ತಮಗೆ ಯಾವುದೋ ಒಂದು ಒತ್ತಡ ಇರಬಹುದು. ಇಲ್ಲದೇ ಇರಬಹುದು, ಮತ್ತೊಂದು ಏನೋ ಗೊತ್ತಿಲ್ಲ. ಆದರೆ, ತಾವು ಉನ್ನತ ಶಿಕ್ಷಣ ಸಚಿವರಾಗಿ ಕೆಲಸ ಮಾಡುತ್ತಿದ್ದೀರಿ. ಈಗ New Education Policy ಜವಬ್ದಾರಿಯನ್ನು ಕರ್ನಾಟಕ ರಾಜ್ಯದಿಂದಲೇ ಮೊದಲು ಮಾಡಬೇಕೆಂದು ತಾವು ಬಹಳ ಗದೆ ಹೊತ್ತುಕೊಂಡು ಹೊರಟು ಬಿಟ್ಟಿದ್ದೀರಿ. ಅದರ ನಡುವೆ ಈ ಖಾಸಗಿ ವಿಶ್ವವಿದ್ಯಾನಿಲಯಗಳನ್ನು ತಂದು ಸರ್ಕಾರಿ ವಿಶ್ವವಿದ್ಯಾನಿಲಯಗಳನ್ನೆಲ್ಲಾ bulldoze ಆಗುವ ಹಾಗೆ ಮಾಡಬೇಡಿ. ಆ ರೀತಿಯಾದರೆ ಈ ದೇಶದಲ್ಲಿ ಮತ್ತು ಈ ರಾಜ್ಯದಲ್ಲಿ ಸರ್ಕಾರಗಳು ಮಾಡುತ್ತಿರುವ ಬಡವರ ಮಕ್ಕಳ ಕಾಳಜಿ, ಬಡವರ ಮಕ್ಕಳ ಉದ್ಯೋಗ, ಬಡವರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಈ ಎಲ್ಲಾ ರೀತಿಯ ವ್ಯವಸ್ಥೆ ಕೂಡ ನಾಶವಾಗುತ್ತದೆ. ಇಲ್ಲಿ ನಾವು ನೀವು ಎಲ್ಲಾ ಕುಳಿತುಕೊಂಡು ಮಾಡುವುದಾದರೆ ಇದೆಲ್ಲಾ ಏತಕ್ಕಾಗಿ ಬೇಕು? ನಾವು ಯಾವುದೇ ಸರ್ಕಾರ ಇರಲಿ, ಯಾವುದೇ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಂತ್ರಿಮಂಡಲ ಇರಲಿ, ದಯಮಾಡಿ ಈ ಶಿಕ್ಷಣದ ಬಗ್ಗೆ priority sector ಇರಬೇಕು. ಯಾವುದೇ ಒಂದು ಹೊಸ ವ್ಯವಸ್ಥೆಯನ್ನು ತರಬೇಕಾದರೂ ಕೂಡ ಸಮಾಜದ ಕಟ್ಟಕಡೆಯ ಜನರ ಶಿಕ್ಷಣದ ವ್ಯವಸ್ಥೆಯನ್ನು ಗಮನದಲ್ಲಿಟ್ಟುಕೊಂಡು ನಾವು ತರಬೇಕು. ನಮ್ಮ ನಾಡಿನಲ್ಲಿ ಶೇಕಡಾ 90 ರಷ್ಟು ಬಡವರ ಮಕ್ಕಳು ಇದ್ದಾರೆ. ಆರ್ಥಿಕವಾಗಿ ಹಿಂದುಳಿದಂತಹ ಮಕ್ಕಳು ಇದ್ದಾರೆ. ಇವತ್ತಿನ ದಿವಸ ಹಣ ಕಟ್ಟಿ ಶಿಕ್ಷಣ ಮಾಡಲಿಕ್ಕೆ ಆಗದೇ ಇರುವಂತಹವರು ಬಹಳ ಮಂದಿ ಇದ್ದಾರೆ. ಅವರಿಗೋಸ್ಕರ ನಾವು ಈ ಶಿಕ್ಷಣ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕು. ಸರ್ಕಾರಿ ಸ್ವಾಮ್ಯದ ಶಿಕ್ಷಣ ಸಂಸ್ಥೆಗಳನ್ನು ಬಹಳವಾಗಿ ಗಟ್ಟಿಗೊಳಿಸಬೇಕು.

**(ಈ ಹಂತದಲ್ಲಿ ಮಾನ್ಯ ಉಪಸಭಾಪತಿಯವರಾದ ಪ್ರಾಣೇಶ್ ಎಂ.ಕೆ ರವರು ಸಭಾ ಪೀಠವನ್ನು ಅಲಂಕರಿಸಿದರು.)**

ಇಂತಹ ಸಂದರ್ಭದಲ್ಲಿ ಸರ್ಕಾರಿ ಸ್ವಾಮ್ಯದ ಶಿಕ್ಷಣ ಸಂಸ್ಥೆಗಳನ್ನು ವಿಶ್ವವಿದ್ಯಾನಿಲಯಗಳಲ್ಲಿ ಗಟ್ಟಿಗೊಳಿಸುವಂತಹದ್ದು ಆಗಬೇಕು. ಅಲ್ಲಿ ಓದುವಂತಹ ಮಕ್ಕಳಿಗೆ ಉದ್ಯೋಗ ಸಿಗುವಂತಹ ಅವಕಾಶವನ್ನು ಮಾಡಬೇಕು. ಆ ವಿಶ್ವವಿದ್ಯಾನಿಲಯಗಳಲ್ಲಿ ಓದುವಂತಹ ಮಕ್ಕಳು meritorious ಆಗುವಂತೆ ಮಾಡಬೇಕು. ಆ ರೀತಿ ಮಾಡಬೇಕೆಂದರೆ ಇವರಿಗೆ ಈ ರೀತಿ ಕೊಟ್ಟರೆ ಯಾವುದೇ ಕಡಿವಾಣ ಇಲ್ಲ. ಅಂಕುಶ ಇಲ್ಲ. ಏನೂ ಇಲ್ಲ. ಇವರಿಗೆ ಇಷ್ಟ ಬಂದ ಹಾಗೆ ಬಾರಿಸುತ್ತಾರೆ. ಇವರೆಲ್ಲಾ ಬರೀ ಸಿಕ್ಸರ್ ಹೊಡೆಯುವವರೇ. ಈ ರೀತಿ ಮಾಡಿದರೆ ವಿಶ್ವವಿದ್ಯಾನಿಲಯಗಳಿಗೆ ಯಾವುದೇ ಕಡಿವಾಣ ಇಲ್ಲವೆಂದರೆ ಹೇಗೆ? ಪ್ರಾಮಾಣಿಕವಾಗಿ ಒಂದು ಅಥವಾ ಎರಡು ವರ್ಷ ವಿಶ್ವವಿದ್ಯಾನಿಲಯಗಳನ್ನು ನಡೆಸಬಹುದು. ಈಗ ತೆಗೆದುಕೊಳ್ಳುತ್ತಿರುವವರು ಇರುವ ತನಕ ಈ ವಿಶ್ವವಿದ್ಯಾನಿಲಯವನ್ನು ನಡೆಸಬಹುದು. ಅವರ ಮಕ್ಕಳು–ಮೊಮ್ಮಕ್ಕಳು ಬಂದು ಪೂರ್ತಿ ವ್ಯಾಪಾರೀಕರಣ ಮಾಡುತ್ತಾರೆ. ಈ ಶಿಕ್ಷಣ ವ್ಯವಸ್ಥೆ ಈಗಲೇ ವ್ಯಾಪಾರೀಕರಣ ಆಗಿಬಿಟ್ಟಿದೆ. ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಅಲ್ಲ. ಆದರೆ, ಇದರಿಂದ ಬಡವರ ಮಕ್ಕಳ ಆಶೋತ್ತರಗಳು, ಬಡವರ ಮಕ್ಕಳ ಪ್ರತಿಭೆಗಳು, ಉದ್ಯೋಗವನ್ನು ಗಿಟ್ಟಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ಅವರ ಚಿಂತನೆಗಳನ್ನು ಕೂಡ ಈ ಸಮಾಜಕ್ಕೆ ಕೊಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ, ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾನಿಲಯಗಳನ್ನು ಗಟ್ಟಿಗೊಳಿಸುವಂತಹ ಕೆಲಸ ಮಾಡಬೇಕೆಂದರೆ, ಈ ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ಹಲವಾರು ಕಡಿವಾಣಗಳನ್ನು ಹಾಕಬೇಕು. ಸರ್ಕಾರದ ಅನುಮತಿ ಇಲ್ಲದೇ ಯಾವುದೇ ಹೊಸ ಕೋರ್ಸ್‌ಗಳನ್ನು ಪ್ರಾರಂಭ ಮಾಡುವ ಆಗಿಲ್ಲ. ಸರ್ಕಾರದ ಅನುಮತಿ ಇಲ್ಲದೇ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚು ಮಾಡುವ ಹಾಗಿಲ್ಲ. ಪ್ರತಿಯೊಂದು ಹಂತದಲ್ಲಿಯೂ ಕೂಡ

ತಿದ್ದುಪಡಿಯಾಗದ ಪ್ರತಿ- ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸರ್ಕಾರದ ಅನುಮತಿ ಬೇಕು. ನೇಮಕಾತಿ ಮಾಡಿಕೊಳ್ಳುವಾಗ ಸರ್ಕಾರದ ಅನುಮತಿ ಬೇಕು. ಹುದ್ದೆಗಳನ್ನು ಸೃಜಿಸುವಾಗ ಸರ್ಕಾರದ ಅನುಮತಿ ಬೇಕು. ನೇಮಕಾತಿ ಮಾಡಿಕೊಳ್ಳುವಾಗ ಅಪ್ರೂವಲ್ ಕೂಡ ಸರ್ಕಾರದಿಂದ ಆಗಬೇಕು. ಬೇಕಾದರೆ ಮಾಡಿಕೊಳ್ಳಲಿ. ತಾವು ಎಷ್ಟು ಶೇಕಡವಾರು ಕೊಡುತ್ತೀರೋ ಕೊಡಿ. ಆದರೆ, ಕನ್ನಡ ನಾಡಿನ ಮಕ್ಕಳಿಗೆ, ಕರ್ನಾಟಕದ ಜನತೆಗೆ ಇಷ್ಟು ಶೇಕಡವಾರು ಉದ್ಯೋಗ, teaching and non-teaching ಎರಡು ಕಡೆಗಳಲ್ಲಿಯೂ ಕೊಡಬೇಕು ಎನ್ನುವಂತಹ ಷರತ್ತು ಹಾಕಿದಾಗ ಮಾತ್ರ ಸರಿಯಾಗುತ್ತದೆ. ಯಾವುದೋ ಬೇರೆ ರಾಜ್ಯದವರು, ಬೇರೆ ದೇಶದವರನ್ನು ಕರೆದುಕೊಂಡು ಬಂದು ಇಲ್ಲಿ ವಿಶ್ವವಿದ್ಯಾನಿಲಯಗಳನ್ನು ನಡೆಸುವುದಾದರೆ ಏನು ಸ್ವಾಮಿ, ನಮ್ಮ ನಾಡಿನ ಜನರಿಗೆ ಅನ್ಯಾಯವಾಗುವುದಿಲ್ಲವೇ? ದಯಮಾಡಿ, ಇಂತಹ ಷರತ್ತುಗಳನ್ನು ಹಾಕಿ. ರಾಜ್ಯ ಸರ್ಕಾರದ ಪ್ರತಿನಿಧಿ ಮತ್ತು ತಮ್ಮ ಉನ್ನತ ಶಿಕ್ಷಣದ ಕಾರ್ಯದರ್ಶಿಯವರು ಇರುತ್ತಾರೆ. ಎರಡು ಅಥವಾ ಮೂರು ವರ್ಷಗಳಿಗೊಮ್ಮೆಯಾದರೂ ಕೂಡ ಈ ವಿಶ್ವವಿದ್ಯಾನಿಲಯಗಳ ವರದಿಗಳನ್ನು ತೆಗೆದುಕೊಳ್ಳಬೇಕು. ಮೂರು ವರ್ಷಗಳಿಗೊಮ್ಮೆ annual report ಅನ್ನು ಕೊಡುತ್ತಾರೆ ಎಂದು ಹೇಳಿದ್ದೀರಿ. ಅವರು annual report ಅನ್ನು ಕೊಡುತ್ತಾರೆ. ದೇಶದಲ್ಲಿ ಎಲ್ಲಾ ಆಡಿಟರ್‌ಗಳು ಬರೆಯುತ್ತಾರೆ. ಯಾರಾದರೂ ಆಡಿಟರ್‌ಗಳ ಲೆಕ್ಕಚಾರದಲ್ಲಿ ಸಿಕ್ಕಿಕೊಂಡಿದ್ದಾರೆಯೇ ಸ್ವಾಮಿ. ಅಂತಹ ಆಡಿಟರ್‌ಗಳು ಇದ್ದಾರೆ. ಎಲ್ಲಾ manipulate ಮಾಡುತ್ತಾರೆ. ಇವೆಲ್ಲಾ ವಿಚಾರಗಳು ಗೊತ್ತಿರುವಂತಹದ್ದೇ ಆಗಿದೆ. ಆದರೆ ನಮ್ಮ ಸರ್ಕಾರಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರೇ ಮೂರು ವರ್ಷಗಳಿಗೊಮ್ಮೆ ಈ ವಿಶ್ವವಿದ್ಯಾನಿಲಯಗಳಿಗೆ ಹೋಗಿ ಮೂರು ವರ್ಷಗಳ ಎಲ್ಲಾ ಮಾಹಿತಿಗಳನ್ನು ತಪಾಸಣೆ ಮಾಡುವಂತಹದ್ದು ಮತ್ತು ಮುದ್ರೆ ಒತ್ತುವಂತಹದ್ದು ಆಗಬೇಕು. ಅದರಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅಲ್ಲಿಯೇ ಕಡಿವಾಣ ಹಾಕುವಂತಹದ್ದು ಆಗಬೇಕು. ಈ ಎಲ್ಲಾ ಷರತ್ತುಗಳನ್ನು ಹಾಕಿದರೆ ಸ್ವಲ್ಪಮಟ್ಟಿಗೆ ಸುಧಾರಣೆ ಆಗಬಹುದೇನೋ, ಇಲ್ಲದಿದ್ದರೆ ಇದರಿಂದ ನಮ್ಮ ಸರ್ಕಾರಿ ಸ್ವಾಮ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳ ಮಕ್ಕಳಿಗೆ ಅನ್ಯಾಯವಾಗಿ ಬಿಡುತ್ತದೆ. ಆ ರೀತಿಯ ಕೆಲಸವನ್ನು ತಾವು ಮಾಡುವುದಕ್ಕೆ ಹೋಗಬೇಡಿ. ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ, ಈ ವಿಧೇಯಕವನ್ನು ತೆಗೆದುಕೊಂಡು ಬನ್ನಿ. ನಾವು ಒಪ್ಪೋಣ. ಈ ರೀತಿಯ ಷರತ್ತುಗಳನ್ನು ತಾವು impose ಮಾಡಬೇಕು. ಉದ್ಯೋಗದ ದೃಷ್ಟಿಯಿಂದ ಮತ್ತು faculty ದೃಷ್ಟಿಯಿಂದ, ಈ ನಾಡಿನ ಮಕ್ಕಳ ಭವಿಷ್ಯದ ದೃಷ್ಟಿಯಿಂದ, ಗುಣಮಟ್ಟದ ಶಿಕ್ಷಣದ ದೃಷ್ಟಿಯಿಂದ ಈ ಒಂದು ಷರತ್ತುಗಳನ್ನು ಹಾಕಬೇಕೆಂದು ತಮ್ಮ ಮೂಲಕ ನಾನು ವಿನಂತಿ ಮಾಡುತ್ತೇನೆ. ಇದರ ಬಗ್ಗೆ ಸ್ವಲ್ಪ ನಿಧಾನವಾಗಿ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಶೀಲನೆ ಮಾಡಿ, ಈ ಅಧಿವೇಶದಲ್ಲಿ ಕೊಡದೇ ಇದ್ದರೆ ಬಜೆಟ್ ಅಧಿವೇಶನಕ್ಕಾದರೂ ಕೊಡೋಣ. ಇದಕ್ಕೆ ಯಾವುದೇ ತುರ್ತು ಇಲ್ಲ. ದಯವಿಟ್ಟು, ಆತುರ ಮಾಡಬೇಡಿ. ಇದರಿಂದ ತಮ್ಮ ಕೀರ್ತಿ ಹೆಚ್ಚಾಗಬೇಕು. ಮಾನ್ಯ ಅಶ್ವತ್ಥ ನಾರಾಯಣರವರ ಕಾಲದಲ್ಲಿ ಈ ರೀತಿಯಾಯಿತು ಎಂದು ಇತಿಹಾಸದಲ್ಲಿ ಉಳಿಯಬೇಕು. ಈ ರೀತಿಯ ಒಳ್ಳೆಯ ಕೆಲಸವನ್ನು ಮಾಡಿ ತೋರಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಉನ್ನತ ಶಿಕ್ಷಣ ಸಚಿವರು ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಮಾನ್ಯ ಸಚಿವರು ಪ್ರಸ್ತಾವನೆಯನ್ನು ತಂದಿದ್ದಾರೆ. ನಾನು ಮೊದಲನೆದಾಗಿ ಉಪ ಮುಖ್ಯಮಂತ್ರಿಯವರಾದ ಶಿಕ್ಷಣ ಮಂತ್ರಿ ಮತ್ತು ಭೂವಿಜ್ಞಾನ, ತಂತ್ರಜ್ಞಾನ ಮಂತ್ರಿಗಳಾದ ಇವರು ಏನು ಕೆಲಸ ಮಾಡುತ್ತಾರಪ್ಪಾ ಎಂದು ನಾನು ಹೇಳುತ್ತಿದ್ದೆ. ಬರುಬರುತ್ತಾ ಅವರು ಉನ್ನತ ಶಿಕ್ಷಣದಲ್ಲಿ ಅನೇಕ ಸುಧಾರಣೆಗಳನ್ನು ತಂದಿದ್ದಾರೆ. ಇದರ ಬಗ್ಗೆ ನಾನು ಬಹಳ ಸಾರಿ ಹೇಳಿದ್ದೇನೆ. ಅದಕ್ಕೆ ನಾನು ಅವರಿಗೆ ಅಭಿನಂದಿಸುತ್ತೇನೆ. ಇವತ್ತಿನ ದಿವಸ ಈ ವಿಷಯಕ್ಕೆ ಬಂದಾಗ ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಎಲ್ಲಾ ಮಾತನಾಡಿಬಿಟ್ಟರು. ನಾನು ಏನೂ ಬರೆದುಕೊಂಡಿದ್ದೇನೋ, ಅದನ್ನೆಲ್ಲಾ ನೋಡಿಕೊಂಡು ಅವರೆಲ್ಲಾ ಹೇಳಿದ್ದಾರೆ. ಅವರು ಎಲ್ಲಾವನ್ನೂ ಕಾಪಿ ಮಾಡಿದ್ದಾರೆ.

**ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಉಪ ಮುಖ್ಯಮಂತ್ರಿಯವರೇ, ವ್ಯವಸ್ಥೆ ಹೇಗಿದೆ ಎಂದು ಎಲ್ಲಾ ಇಲ್ಲಿಯೇ ಶುರುವಾಯಿತು. ಮಾನ್ಯ ಸದಸ್ಯರಾದ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ಕಾಪಿ ಹೊಡೆದಿದ್ದೇನೆ ಎಂದು ನನ್ನ ಮೇಲೆಯೇ ಹೇಳಿಬಿಟ್ಟರು. ವಿಶ್ವವಿದ್ಯಾನಿಲಯಗಳಲ್ಲಿಯೂ ಹೀಗೆಯೇ ಆಗಿರುವುದು. ಇದರ ಬಗ್ಗೆ ಎಚ್ಚರಿಕೆಯಿಂದ ಇರಿ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರೇ, ತಾವು ಕಾಪಿ ಹೊಡೆದು ಶೇಕಡಾ 52 ರಷ್ಟು ಅಂಕಗಳನ್ನು ತೆಗೆದುಕೊಂಡಿದ್ದೀರಿ.

**(ಈ ಹಂತದಲ್ಲಿ ಸದನದಲ್ಲಿ ನಗುವಿನ ಅಲೆ ತೇಲಿಬಂದಿತು)**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನಾನು ಈಗಾಗಲೇ ಹೇಳಿದ್ದೇನೆ. 2015ರಲ್ಲಿ Sam Pitroda ರವರು ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಆಗಬೇಕೆಂದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಹೇಳಿದ್ದರು. ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಎಂದರೆ, ಆ ವಿಶ್ವವಿದ್ಯಾನಿಲಯದ ಮಟ್ಟ ಯಾವುದು ಇರಬೇಕೋ, ಅದು standard ಇರಬೇಕೆಂಬ ಬಗ್ಗೆ ತಾವು ವರದಿಯನ್ನು ನೋಡಿದ್ದೀರಿ. ಇವರು standard ಬಗ್ಗೆ ಬಹಳಷ್ಟು ಕಾಳಜಿಯನ್ನು ವಹಿಸಬೇಕೆಂಬ ಮಾತನ್ನು ಹೇಳಿದ್ದಾರೆ. ನಮ್ಮ ರಾಜ್ಯದಲ್ಲಿ ತುಮಕೂರು, ರಾಯಚೂರು ಒಂದೊಂದು ಜಿಲ್ಲೆಯೊಳಗೆ ಒಂದೊಂದು ವಿಶ್ವವಿದ್ಯಾನಿಲಯಗಳು ಆಗಿವೆ. ಆ ವಿಶ್ವವಿದ್ಯಾನಿಲಯಗಳಲ್ಲಿ ನಮ್ಮ ಬಡವರ ಮಕ್ಕಳು ಓದುತ್ತಾರೆ. ಅದಕ್ಕೆ ಒಂದು ರೀತಿ-ನೀತಿ ಇದೆ. ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಹೇಳಿದ ಹಾಗೆ ಇವತ್ತಿನ ದಿವಸ ಈ ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ಸರ್ಕಾರ ಕೆಲವು ನಿಯಮಗಳನ್ನು ಮಾಡಬೇಕು. ನಮ್ಮ ವಿಶ್ವವಿದ್ಯಾನಿಲಯಗಳಿಗೆ ತಾವು ಹೇಗೆ ನಿಯಮಗಳನ್ನು ಮಾಡುತ್ತೀರಿ? ನಮ್ಮ ವಿಶ್ವವಿದ್ಯಾನಿಲಯಗಳಿಗೆ ವೈಸ್ ಚಾನ್ಸಲರ್ ಅನ್ನು ನೇಮಕ ಮಾಡಬೇಕಾದರೆ ಅದಕ್ಕೆ ಏನು ನಿಯಮ ಇದೆ? ಅದೇ ನಿಯಮಗಳನ್ನು ಇಲ್ಲಿಗೆ ತೆಗೆದುಕೊಂಡು ಬನ್ನಿ. ವೈಸ್ ಚಾನ್ಸಲರ್ ಅನ್ನು ನೇಮಕಾತಿ ಮಾಡಬೇಕಾದರೆ ನಮ್ಮಲ್ಲಿ panel ಮಾಡಿ ಮಾಡುತ್ತಾರೆ. ಅದೇ ನಿಯಮವನ್ನು ತೆಗೆದುಕೊಂಡು ಬನ್ನಿ. ಅದೇ ನಿಯಮವನ್ನು ತಂದರೆ ಒಂದು ವಿಶ್ವವಿದ್ಯಾನಿಲಯ ಖಾಸಗಿಯಾಗಿ ನಡೆಯುತ್ತದೆ. ತಮಗೆ ಯಾರು ಬೇಕೋ ಅವರನ್ನು ಹಾಕುತ್ತಾರೆ. ನಮ್ಮ ಅಣ್ಣ-ತಮ್ಮಂದಿರು ಅವರು ಇವರು ಎನ್ನುವಂತಹ ಒಂದು ದಂಧೆ ಆಗಿಬಿಟ್ಟಿದೆ. ನಾನು ಬಹಳಷ್ಟು ಸಾರಿ ಹೇಳಿದ್ದೇನೆ. ಅಲ್ಲಿ ಏನಾಗಿದೆಯೆಂದರೆ, ಅಲ್ಲಿ ಯಾವುದೇ ನಿಯಮಗಳನ್ನು ಪಾಲಿಸುವ ಆಗಿಲ್ಲ. ಈ reservation ಬರಲಿ, ಬಡವರ ಮಕ್ಕಳಿಗೆ ಕೊಡಲಿ, ತಾವು ಶೇಕಡಾ 40 ರಷ್ಟು ಎಂದು ಹೇಳುತ್ತೀರಿ. ಶೇಕಡಾ 40 ರಷ್ಟರಲ್ಲಿಯೂ ಕೂಡ ತಮಗೆ ಬೇಕಾದವರನ್ನು ತೆಗೆದುಕೊಳ್ಳುತ್ತಾರೆ. Fees ಎಷ್ಟೇ ಇದ್ದರೂ, ಬೇರೆ fees ಅನ್ನು ತೆಗೆದುಕೊಳ್ಳುತ್ತಾರೆ. ಈ ರೀತಿ ನಡೆದಿವೆ. ನಮ್ಮ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅನೇಕ ಪ್ರಕರಣಗಳು ನಡೆಯುತ್ತವೆಯಲ್ಲವೇ, ಆಂಗ್ಲ ಮಾಧ್ಯಮ ಶಾಲೆಗಳ ಹಣೆಬರಹ ಸಹ ತಮಗೆ ಗೊತ್ತಿದೆ. ಈ ಹಿನ್ನೆಲೆಯಲ್ಲಿ ನಾನು ಏನು ಹೇಳುತ್ತೇನೆ ಎಂದರೆ, ವೈಸ್ ಚಾನ್ಸಲರ್ ಅನ್ನು ನೇಮಕ ಮಾಡುವಂತಹದ್ದು, ನಮ್ಮ ವಿಶ್ವವಿದ್ಯಾನಿಲಯಗಳ ರೀತಿಯೇ ನಿಯಮಗಳನ್ನು ಏಕೆ ಮಾಡಬಾರದು? ಆ ನಿಯಮಗಳನ್ನು ಮಾಡಿ ಅದರಲ್ಲಿ ತಪ್ಪೇನಿದೆ? ಅವರು ಹೇಳಿದ ಹಾಗೆ ಮಾನ್ಯ ಶಾಸಕರನ್ನೋ, ಇದರಲ್ಲಿ experts ಇರುವಂತಹವರನ್ನೋ, ಈ ಶಿಕ್ಷಣದಲ್ಲಿ ಪರಿಣತಿ ಇರುವವರನ್ನೋ ಸರ್ಕಾರದಿಂದ ನಿಯಮಗಳನ್ನು ಹಾಕಿಕೊಂಡು ಮಾಡಿ. ಇದರಲ್ಲಿ ಮಾನ್ಯ ಶಾಸಕರೆಲ್ಲಾ ಬಂದರು. ಮಾನ್ಯ ಶಾಸಕರನ್ನು ಹಾಕಿದರೆ ಬೇರೆ ಬೇರೆ ವಿಶ್ವವಿದ್ಯಾನಿಲಯಗಳಿಗೂ ಹಾಕಬೇಕು. ತಾವು ಆ ರೀತಿ ಹಾಕಿದರೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಳ್ಳೆಯದಾಗುತ್ತದೆ. ತಾವು ಸಹ ವಿಶ್ವವಿದ್ಯಾನಿಲಯದಲ್ಲಿ ಕೆಲಸ ಮಾಡಿಕೊಂಡು ಬಂದ್ದಿದ್ದೀರಿ. ಈ ಹಿಂದೆ ನಾನು ಹೇಳಿದೆ. ವಿಶ್ವವಿದ್ಯಾನಿಲಯದಲ್ಲಿ Senate election ಆಗುತ್ತಿತ್ತು. ಆಗ Syndicate election ಇತ್ತು. ಇದರಲ್ಲಿ ನಾನು ಇದ್ದೇನೆ, ನೀವು ಇದ್ದೀರಿ, ಮಾನ್ಯ ಸದಸ್ಯರಾದ ಸಂಕನೂರರವರು ಇದ್ದಾರೆ. ಮಾನ್ಯ ಸದಸ್ಯರಾದ ಪುಟ್ಟಣ್ಣನವರು ಇದ್ದಾರೆ, ಮಾನ್ಯ ಸದಸ್ಯರಾದ ಮರಿತಿಬ್ಬೇಗೌಡರವರು ಇದ್ದಾರೆ. ನಾವೆಲ್ಲಾ Senate, Syndicate Members ಇದ್ದೆವು. ವಿಶ್ವವಿದ್ಯಾನಿಲಯಗಳಲ್ಲಿ ಕೆಲಸ ಮಾಡುವುದಕ್ಕೆ ನಮಗೆ ಕಳಕಳಿ ಇರುತ್ತಿತ್ತು. ಮಾನ್ಯ ಡಾ. ಪರಮೇಶ್ವರ್‌ರವರು ಮಂತ್ರಿಗಳಿದ್ದಾಗ ತೆಗೆದುಬಿಟ್ಟರು. ಈಗ ಯಾರನ್ನೋ ನಾಮಿನೇಟ್ ಮಾಡುತ್ತಾರೆ. ಈ ನಾಮಿನೇಟ್ ಮಾಡಿದವರು ಏನು ಮಾಡುತ್ತಾರೆ ಎಂದರೆ ವೈಸ್ ಚಾನ್ಸಲರ್‌ರವರು ಆ ಕಡೆ ಒಂದು ಮುಖ ಮಾಡುತ್ತಾರೆ.ಈ ಕಡೆ ಒಂದು ಮುಖ ಮಾಡುತ್ತಾರೆ. ವಿಶ್ವವಿದ್ಯಾನಿಲಯಗಳ ಬಗ್ಗೆ ಏನು ಕಾಳಜಿಯೇ ಇರುವುದಿಲ್ಲ. ಹಾಗಾಗಿ ಅಲ್ಲಿರುವಂತಹ ಪದ್ಧತಿಯನ್ನು ಕನಿಷ್ಠ ಇಲ್ಲಿಯಾದರೂ ತಂದರೆ ಒಳ್ಳೆಯದಾಗುತ್ತದೆ ಎನ್ನುವುದು ನನ್ನ ಸಲಹೆ. ಈ ಪದ್ಧತಿಯನ್ನು ತರಬೇಕಾಗುತ್ತದೆ. ತಾವು ಸಾಕಷ್ಟು ನಿಯಮಗಳನ್ನು ಮಾಡಿದ್ದೀರಿ. ತಾವು ಯಾರನ್ನೂ ಕೇಳಲಿಲ್ಲ. ಸರ್ಕಾರವನ್ನು ಕೇಳಲಿಲ್ಲ. ಸರ್ಕಾರದ ಕಡೆಯಿಂದ ಯಾವುದೇ ರೀತಿ ಹೆಚ್ಚು-ಕಡಿಮೆ ಮಾಡುವ ಆಗಿಲ್ಲ ಎಂದು ಹೇಳಿದ್ದೀರಿ. ಇದನ್ನು ನಾನು ಒಪ್ಪುತ್ತೇನೆ. ಇಷ್ಟೆಲ್ಲಾ ಆದರೂ ಸಹಿತ ಅವರು ಮಾಡುತ್ತಾರೆ.

(ಮುಂದು)

**(125) 03/02/2021/ಎಸ್‌ಪಿಆರ್/ಜಿಆರ್ 5:10**

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ(ಮುಂದು):-**

ಡಾ॥ ಬಿ.ಆರ್.ಅಂಬೇಡ್ಕರ್ ಅರ್ಥಶಾಸ್ತ್ರ ವಿಶ್ವವಿದ್ಯಾಲಯವನ್ನು ಹೊರತುಪಡಿಸಿ, ಮಂಡನೆಯಾಗಿರುವ ಐದು ವಿಶ್ವವಿದ್ಯಾಲಯಗಳಿಗೆ ಸಂಬಂಧಪಟ್ಟಂತೆ ಅದರ ಮೂಲ ವ್ಯಕ್ತಿಗಳು ಯಾರು, ಅವರುಗಳು ಎಲ್ಲಿಯವರು ಎನ್ನುವ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಒದಗಿಸಬೇಕು. ಬೆಂಗಳೂರಿನಂತಹ ನಗರದಲ್ಲಿ 25-30 ಎಕರೆಗಳಷ್ಟು ಪ್ರದೇಶವನ್ನು ಒದಗಿಸುತ್ತಾರೆನ್ನುವುದು ನನಗೆ ಸಂದೇಹವಾಗಿದೆ. ಈ ಹಿಂದೆ ಮಾನ್ಯ ಸಿ.ಟಿ.ರವಿಯವರು ಮಂತ್ರಿಗಳಾಗಿದ್ದಾಗ 22 ವಿಶ್ವವಿದ್ಯಾಲಯ ವಿಧೇಯಕವನ್ನು ಮಂಡಿಸಿದ್ದರು, ಸದರಿ 22 ವಿಧೇಯಕಗಳನ್ನು ಕೇವಲ 15 ನಿಮಿಷಗಳ ಅವಧಿಯಲ್ಲಿ

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅನುಮೋದಿಸಲಾಯಿತು. ಆಗ ಯಾವುದೇ ವಿಷಯದ ಬಗ್ಗೆ ಮಾಹಿತಿಯನ್ನು ಕೇಳಲೇ ಇಲ್ಲ. ಆದರೆ ಇವತ್ತಿನ ದಿವಸ ಅವುಗಳ ಪರಿಸ್ಥಿತಿ ಯಾವ ರೀತಿಯದ್ದಾಗಿದೆ? ಅದೇ ರೀತಿಯಾಗಿ, Alliance University ಇದರ ಪರಿಸ್ಥಿತಿ ಏನಾಗಿದೆ? ಅಲ್ಲಿ ಒಂದೆ ಕೊಲೆ ನಡೆಯಿತು. ಆ ವಿಶ್ವವಿದ್ಯಾಲಯ ಇದ್ದವರೆಲ್ಲರೂ ಸಂಬಂಧಿಕರಾಗಿದ್ದರು. ಅಲ್ಲಿ ಹೇಳುವವರು ಯಾರೂ ಸಹ ಇರಲಿಲ್ಲ. ಆ ವಿಶ್ವವಿದ್ಯಾಲಯದಲ್ಲಿ ಸರ್ಕಾರಕ್ಕೆ ಯಾವ ರೀತಿಯಾದ ಅಧಿಕಾರವಿದೆ? ಈ ನಿಟ್ಟಿನಲ್ಲಿ ಸರ್ಕಾರವು ಏನು ಮಾಡುತ್ತದೆ ಎನ್ನುವ ಬಗ್ಗೆ ನಿಯಮಾವಳಿಗಳಲ್ಲಿ ಅಳವಡಿಸಬೇಕು.

ಖಾಸಗಿ ವಿಶ್ವವಿದ್ಯಾಲಯಗಳಿಗೆ ಸರ್ಕಾರವು ಶುಲ್ಕವನ್ನು ನಿಗದಿಪಡಿಸುತ್ತದೆ. ಆಗ ವಿಶ್ವವಿದ್ಯಾಲಯಗಳು ಶುಲ್ಕದ ವಿಚಾರದಲ್ಲಿ ಏನು ಮಾಡುತ್ತಾರೆ ಎನ್ನುವುದನ್ನು ಪರಿಶೀಲಿಸುವುದು ಸರ್ಕಾರದ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ಲೆಕ್ಕಪರಿಶೋಧಕರು ಅಥವಾ ಆರ್ಥಿಕ ಅಧಿಕಾರಿಯಂತಹ ಇಬ್ಬರು ಅಧಿಕಾರಿಗಳನ್ನು ಸರ್ಕಾರದ ವತಿಯಿಂದ ನೇಮಿಸಬೇಕು. ಇದು ಬಹಳ ಮುಖ್ಯವಾಗಿರುವುದರಿಂದ ಸರ್ಕಾರವು ಇಂತಹ ಕೆಲಸಗಳನ್ನು ಮಾಡಬೇಕಾಗುತ್ತದೆ. ನಾನು ಉಲ್ಲೇಖಿಸಿರುವ 22 ವಿಶ್ವವಿದ್ಯಾಲಯಗಳ ವಿಚಾರವು ದಾಖಲೆಯಲ್ಲಿದೆ. ಬೆಂಗಳೂರಿನಲ್ಲಿ ಬಾಲ್ಡ್‌ವಿನ್ ಎನ್ನುವ ವಿಶ್ವವಿದ್ಯಾಲಯ ಇತ್ತು; ಆದರೆ ಅಲ್ಲಿ ಯಾವುದೇ ಕಾಲೇಜೇ ಇರಲಿಲ್ಲ. ಇವತ್ತಿನ ದಿವಸ ಅಲ್ಲಿ ಕಾಲೇಜು ಇದೆಯೋ ಅಥವಾ ಇಲ್ಲವೋ ತಿಳಿದಿಲ್ಲ; ಆದರೆ ಅದೊಂದು ವಿಶ್ವವಿದ್ಯಾಲಯವಾಗಿದೆ. ರಾಜ್ಯದ ಬೆಂಗಳೂರು, ಮೈಸೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಇದೇ ರೀತಿಯಾಗಿ ಸರ್ಕಾರವು ಖಾಸಗಿಯವರಿಗೆ ವಿಶ್ವವಿದ್ಯಾಲಯವನ್ನು ನೀಡಿದರೆ, ಈ ಊರುಗಳಲ್ಲಿ ಹಾಲಿ ಇರುವ ವಿಶ್ವವಿದ್ಯಾಲಯಗಳ ಗತಿ ಏನು? ಇದಕ್ಕಾಗಿ ಸರ್ಕಾರವು ಒಂದು ಅಳತೆಗೋಲನ್ನು ಇಡಬೇಕು. ಇದರ ಬಗ್ಗೆ ಮಾನ್ಯ ಮರಿತಿಬ್ಬೇಗೌಡರವರು ಪ್ರಸ್ತಾಪಿಸಿದ್ದು, ಈ ಬಗ್ಗೆ ಸರ್ಕಾರವು ವಿಚಾರ ಮಾಡಬೇಕು. ಸರ್ಕಾರವು ಮಂಡಿಸಿರುವ ವಿಧೇಯಕಗಳ ಬಗ್ಗೆ ನಮ್ಮ ಸಲಹೆಗಳನ್ನು ನೀಡುತ್ತೇವೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸರ್ಕಾರಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು ಹೋಲಿಸಿದಾಗ, ಖಾಸಗಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳ ಸ್ಟ್ಯಾಂಡರ್ಡ್, ರೀತಿ-ನೀತಿಗಳು, ಅವರ ಆಯ್ಕೆ ಇತ್ಯಾದಿ ಬೇರೆಯಾಗಿರುತ್ತವೆ. ಶ್ರೀ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಇಡೀ ಭಾರತ ದೇಶದಲ್ಲಿಯೇ ಉತ್ತಮ ವಿಶ್ವವಿದ್ಯಾಲಯವಾಗಿದೆ; ಇದರಲ್ಲಿ ಎರಡು ಮಾತಿಲ್ಲ. ಅದೇ ರೀತಿಯಾಗಿ

ರಾಜೀವ್ ಗಾಂಧಿ ವಿಶ್ವವಿದ್ಯಾಲಯವೂ ಸಹ ಇದೆ. ನಮ್ಮ ರಾಜ್ಯದಲ್ಲಿರುವ ಸರ್ಕಾರಿ ವಿಶ್ವವಿದ್ಯಾಲಯಗಳಾದ ಮೈಸೂರು ಮತ್ತು ಧಾರವಾಡ ವಿಶ್ವವಿದ್ಯಾಲಯಗಳು ಬಹಳ ಹಳೆಯ ವಿಶ್ವವಿದ್ಯಾಲಯಗಳಾಗಿದ್ದು, ಅಲ್ಲಿಂದ ಬಹಳ ಗುಣಮಟ್ಟದ ವಿದ್ಯಾರ್ಥಿಗಳು ವ್ಯಾಸಂಗ ಮುಗಿಸಿ ಹೊರಬರುತ್ತಿದ್ದರು. ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ತಮಗೆ ಬೇಕಾದವರನ್ನು ನೇಮಿಸುತ್ತಾರೆ. ಇದಕ್ಕೂ ಸಹ ಒಂದು ಸಮಿತಿ ಅಥವಾ ಸರ್ಕಾರದ ಪ್ರತಿನಿಧಿಯನ್ನು ನೇಮಿಸುವಂತಹ ಮಾನದಂಡವನ್ನು ನಿಗದಿಪಡಿಸಬೇಕು. ಅದರಲ್ಲಿ ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ, ಪರಿಣಿತರು ಅಥವಾ ಸರ್ಕಾರಿ ವಿಶ್ವವಿದ್ಯಾಲಯದ ಪರಿಣಿತರು ಯಾರಾದರೂ ಸಹ ಅಲ್ಲಿರಬೇಕು. ಇಂತಹ ನಿರ್ಬಂಧಗಳನ್ನು ನಿಗದಿಪಡಿಸದಿದ್ದಲ್ಲಿ ಖಾಸಗಿ ವಿಶ್ವವಿದ್ಯಾಲಯದವರನ್ನು ಒಟ್ಟಾರೆಯಾಗಿ ಫ್ರೀ ಆಗಿ ಬಿಟ್ಟಂತಾಗುತ್ತದೆ. ಅವರುಗಳು ಏನು ಮಾಡಿದರೂ ಸಹ ಯಾರೂ ಕೇಳುವಂತಾಗುವುದಿಲ್ಲ. ಸರ್ಕಾರವೇನೋ ಕಾಯ್ದೆ, ನಿಯಮಗಳನ್ನು ರೂಪಿಸುತ್ತದೆ; ಆದರೆ ಎಷ್ಟು ಜನ ಅದನ್ನು ಪಾಲಿಸುತ್ತಾರೆ? ಹೀಗಾಗಿ ಸರ್ಕಾರವು ಇದನ್ನು ಯಾವ ರೀತಿಯಾಗಿ ಮಾಡುತ್ತದೆ ಎನ್ನುವ ಬಗ್ಗೆ ಸಂದೇಹವಿದೆ.

ಮಾನ್ಯ ಸದಸ್ಯರಾದ ಶ್ರೀ ಸಿ.ಎಂ.ಇಬ್ರಾಹಿಂರವರು ಪ್ರಸ್ತಾಪಿಸಿದಂತೆ, ಎಲ್ಲಾ ವಿಶ್ವವಿದ್ಯಾಲಯಗಳ ಪ್ರಶ್ನೆ ಪತ್ರಿಕೆಗಳು ಒಂದೇ ರೀತಿಯಾಗಿರಬೇಕು. ನಮ್ಮ ವಿಶ್ವವಿದ್ಯಾಲಯಗಳು ಯಾವ ರೀತಿಯಾಗಿ ಮೌಲ್ಯಮಾಪನ ಮಾಡುತ್ತವೆಯೋ ಖಾಸಗಿಯವರೂ ಸಹ ಅದೇ ರೀತಿಯಾದ ಮೌಲ್ಯಮಾಪವನ್ನು ಮಾಡಬೇಕು. ಇಂತಹ ಕ್ರಮಗಳನ್ನು ತೆಗೆದುಕೊಂಡಾಗ ಹಾಗೂ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡಿದಾಗ ಮಾತ್ರವೇ ಶಿಕ್ಷಣದಲ್ಲಿ ಕನಿಷ್ಠ ಮಟ್ಟದ ಸುಧಾರಣೆಯನ್ನು ಕಾಣಬಹುದೆಂದು ನಾನು ಭಾವಿಸುತ್ತೇನೆ. ಶ್ರೀ ಸ್ಯಾಮ್ ಪಿತ್ರೋಡಾರವರು ಉಲ್ಲೇಖಿಸಿದಂತೆ, ಪ್ರತಿಯೊಂದು ಮಗುವಿಗೆ ಓದಿನ ಅವಶ್ಯಕತೆ ಇದೆ; ಆದರೆ ಅದಕ್ಕೆ ಪ್ರವೇಶ ದೊರೆಯುವುದಿಲ್ಲ. ಈ ಅಂಶವನ್ನು ನಾನು ಒಪ್ಪಿಕೊಳ್ಳುತ್ತೇನೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 60 ವಿದ್ಯಾರ್ಥಿಗಳ ಪ್ರವೇಶಕ್ಕೆ ಅವಕಾಶವಿದೆ. ಆಗ 61 ನೇ ವಿದ್ಯಾರ್ಥಿಗೆ ಅವಕಾಶ ದೊರೆಯುವುದಿಲ್ಲ. ಹಿಂದಿನ ಅಂಕಿ-ಅಂಶಗಳನ್ನು ನೋಡಿದಾಗ, 60 ನೇ ವಿದ್ಯಾರ್ಥಿಯು ಶೇಕಡಾ 92 ರಷ್ಟು ಅಂಕಗಳನ್ನು ಗಳಿಸಿದ್ದನು. ಇಂತಹ ನಿರ್ಬಂಧನೆಗಳನ್ನು ತೆಗೆಯಬೇಕೆಂದು ಶ್ರೀ ಸ್ಯಾಮ್ ಪಿತ್ರೋಡಾರವರ ಉಲ್ಲೇಖವು ಸರಿಯಾಗಿದೆ. ಆದರೆ ವಿಶ್ವವಿದ್ಯಾಲಯಗಳು ಯಾವ ರೀತಿಯಾಗಿ ಇರಬೇಕೆಂದು ನೋಡಿದಾಗ, ಅವುಗಳು ಬಹಳ ಗುಣಮಟ್ಟದ್ದಾಗಿರಬೇಕು; ಆ ರೀತಿಯಾಗಿ ನಾವು ಮಾಡಬೇಕು. ಇನ್ನಿತರೆ ವಿಚಾರಗಳನ್ನು ಹೊರತುಪಡಿಸಿ, ಸರ್ಕಾರಿ ವಿಶ್ವವಿದ್ಯಾಲಯಗಳಂತೆ, ಎಲ್ಲಾ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿ, ಮೌಲ್ಯಮಾಪನ ಹಾಗೂ ಪ್ರಶ್ನೆಪತ್ರಿಕೆಗಳು ಒಂದೇ ರೀತಿಯದ್ದಾಗಿರಬೇಕು. ಮೌಲ್ಯಮಾಪನವನ್ನು ಒಂದೇ ರೀತಿಯಾಗಿ ಮಾಡಬೇಕು ಅಥವಾ ಖಾಸಗಿ ವಿಶ್ವವಿದ್ಯಾಲಯಗಳ ಮೌಲ್ಯಮಾಪನವನ್ನು ಸರ್ಕಾರಿ ವಿಶ್ವವಿದ್ಯಾಲಯಗಳು ಮಾಡುವ ವ್ಯವಸ್ಥೆ ಇರಬೇಕು. ಒಂದು ವಿಶ್ವವಿದ್ಯಾಲಯದ ಮೌಲ್ಯಮಾಪನವನ್ನು ಮತ್ತೊಂದು ವಿಶ್ವವಿದ್ಯಾಲಯವು ಮಾಡಲು ಕೋಡಿಂಗ್ ಮತ್ತು ಡಿ–ಕೋಡಿಂಗ್‌ನಂತಹ ವ್ಯವಸ್ಥೆಯನ್ನು ಜಾರಿಗೆ ತರಬೇಕು. ಆಗ ಮಾತ್ರವೇ ಶಿಕ್ಷಣದ ಸುಧಾರಣೆಯಾಗುತ್ತದೆ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಈ ಹಿಂದೆ ನಾನು ಶಿಕ್ಷಣ ಮಂತ್ರಿಯಾಗಿದ್ದಾಗ, ನಡೆದ ಘಟನೆಯೊಂದನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ಆ ಸಮಯದಲ್ಲಿ ಕಿರಿಯ ಕಾಲೇಜಿನ 2,566 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವುದಕ್ಕಾಗಿ, ನೇಮಕಾತಿ ಪ್ರಕ್ರಿಯೆಯನ್ನು ಕೆ.ಪಿ.ಎಸ್.ಸಿ. ಸಂಸ್ಥೆಗೆ ವಹಿಸಿದ್ದೆವು. ಆಗ ಜಗದೀಶ್ ಎನ್ನುವ ಚಿಕ್ಕಮಗಳೂರು ಜಿಲ್ಲೆಯ ವ್ಯಕ್ತಿಯು ನನ್ನನ್ನು ಭೇಟಿ ಮಾಡಲು ಬಂದಾಗ, ತನಗೆ ಬಂದ 7–8 ಚಿನ್ನದ ಪದಕಗಳನ್ನು ತನ್ನ ಜೊತೆ ತೆಗೆದುಕೊಂಡು ಬಂದಿದ್ದರು. ಇತ್ತೀಚೆಗೆ ನಿಧನರಾದ ಶಿವಮೊಗ್ಗ ಜಿಲ್ಲೆಯ ಮಾಜಿ ವಿಧಾನ ಪರಿಷತ್ತಿನ ಸದಸ್ಯರೊಬ್ಬರು ಆತನನ್ನು ನನ್ನ ಬಳಿ ಕರೆದುಕೊಂಡು ಬಂದಿದ್ದು; ಆತನು ಅವರ ಸಂಬಂಧಿಯಾಗಿದ್ದನು. ಸದರಿ ವ್ಯಕ್ತಿಯು ತನಗೆ ಬಂದ ಚಿನ್ನದ ಪದಕಗಳನ್ನು ನನ್ನ ಟೇಬಲ್ ಮೇಲಿಟ್ಟನು. ಈ ಬಗ್ಗೆ ನಾನು ವಿಚಾರಿಸಿದಾಗ, ಸದರಿ ವ್ಯಕ್ತಿಯು ತಾನು ಜಗದೀಶ್ ಎಂಬುದಾಗಿ ತನ್ನನ್ನು ಪರಿಚಯಿಸಿಕೊಂಡನು. ಮಾಜಿ ಶಾಸಕರೂ ಸಹ ಸದರಿ ವ್ಯಕ್ತಿಯು ತಮಗೆ ಗೊತ್ತಿರುವವರ ಮಗನಾಗಿದ್ದು, ನಮ್ಮ ಊರಿನ ಹುಡುಗ ಎಂಬುದಾಗಿ ತಿಳಿಸಿದರು. ಆಗ ಸದರಿ ವ್ಯಕ್ತಿಯು ನೀವು 2,566 ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆಯನ್ನು ಕೆ.ಪಿ.ಎಸ್.ಸಿ.ಸಂಸ್ಥೆಗೆ ವಹಿಸಿದ್ದೀರಿ, ಆದರೆ ಅಲ್ಲಿ ನನ್ನ ಆಯ್ಕೆಯಾಗುವುದಿಲ್ಲವೆಂದು ತಿಳಿಸಿದನು. ಈ ಬಗ್ಗೆ ನಾನು ಪ್ರಶ್ನಿಸಿದಾಗ, ಸದರಿ ವ್ಯಕ್ತಿಯು ‘ಈಗ ಕೆ.ಪಿ.ಎಸ್.ಸಿ.ಯ ನೇಮಕಾತಿ ಪ್ರಕ್ರಿಯೆಯಲ್ಲಿ ಹೊಸ ಪದ್ಧತಿಗಳು ಬಂದಿವೆ, ಅಂಕಗಳ ಆಧಾರದ ಮೇಲೆ ನೇಮಕಾತಿಯು ಆಗುತ್ತದೆ, 1:10 ರ ಅನುಪಾತದಲ್ಲಿ ಸಂದರ್ಶನವನ್ನು ಕರೆಯುತ್ತಾರೆ ಹಾಗೂ ಸೆಮಿಸ್ಟರ್ ಪದ್ಧತಿಯು ಜಾರಿಗೆ ಬಂದಿದೆ. ಇಂತಹ ಅನೇಕ ಬದಲಾವಣೆಗಳಾಗಿವೆ; ಆದರೆ ನಾನು ನಿಜವಾಗಿಯೂ ಓದಿ ಬಂದಿದ್ದು, ನನ್ನ ನೇಮಕಾತಿಯು ಆಗುವುದಿಲ್ಲವೆಂದು’ ತಿಳಿಸಿದನು. ಆಗ ನಾನು ಏನು ಮಾಡುವುದಕ್ಕಾಗುತ್ತದೆ; ನಿಯಮಾನುಸಾರ ನೇಮಕಾತಿಯನ್ನು ಕೆ.ಪಿ.ಎಸ್.ಸಿ.ಗೆ ವಹಿಸಿದ್ದೇವೆ ಎಂದು ಹೇಳಿದೆನು. ಅದಕ್ಕೆ ಪ್ರತ್ಯುತ್ತರಿಸಿದ ಸದರಿ ವ್ಯಕ್ತಿಯು ‘ನೀವು ನನಗೆ 15 ಲಕ್ಷ ರೂಪಾಯಿಗಳನ್ನು ನೀಡಿ’ ಎಂದು ಕೇಳಿದನು. ಆಗ ನಾನು ಈಗ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು.

ನಾನೇನು ಮಾಡಬೇಕೆಂದು ಅವನನ್ನೇ ಕೇಳಿದಾಗ; ಆತನು ದಯಮಾಡಿ ನೇಮಕಾತಿಯನ್ನು ಸಿ.ಇ.ಟಿ., ಮುಖಾಂತರ ಮಾಡಿ ಎಂದು ತಿಳಿಸಿದನು. ಆ ಸಂದರ್ಭದಲ್ಲಿ ಶ್ರೀ ಬಿ.ಎಸ್.ರೆಡ್ಡಿ ಎನ್ನುವವರು ಕಾನೂನು ಇಲಾಖೆಯ ಕಾರ್ಯದರ್ಶಿಗಳಾಗಿದ್ದರು; ಅವರನ್ನು ನಾನು ಕರೆಸಿದೆನು. ಅವರ ಸಲಹೆಯಂತೆ ನಾನು ಕೆ.ಪಿ.ಎಸ್.ಸಿ.ಗೆ ಉಪನ್ಯಾಸಕರ ಹುದ್ದೆಗಳನ್ನು ಸಿ.ಇ.ಟಿ., ಮುಖಾಂತರ ಭರ್ತಿ ಮಾಡುವಂತೆ ತಿಳಿಸಿ ಪತ್ರವನ್ನು ಬರೆದೆನು. ಪಿ.ಯು.ಸಿ. ನಿರ್ದೇಶಕರಾಗಿದ್ದ ಗೋಣಾಳ್ ಭೀಮಪ್ಪ ಎಂಬುವವರು ಆಗ ಕೆ.ಪಿ.ಎಸ್.ಸಿ.ಯ ಅಧ್ಯಕ್ಷರಾಗಿದ್ದು, ಕೇವಲ 2–3 ತಿಂಗಳುಗಳ ಕಾಲ ಮಾತ್ರವೇ ಅಧಿಕಾರದಲ್ಲಿದ್ದರು. ಸದರಿಯವರು ನನಗೆ ಪ್ರತ್ಯುತ್ತರವಾಗಿ ಪತ್ರವೊಂದನ್ನು ಬರೆದು, "ಕೆ.ಪಿ.ಎಸ್.ಸಿ.ಯು ಸ್ವಾಯತ್ತ ಸಂಸ್ಥೆಯಾಗಿದ್ದು, ನಿರ್ದಿಷ್ಟವಾಗಿ ಇದೇ ರೀತಿಯಲ್ಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಹೇಳುವ ಅಧಿಕಾರವು ಸರ್ಕಾರಕ್ಕೆ ಇಲ್ಲ; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಬೇಕು ಎನ್ನುವುದನ್ನು ಮಾತ್ರವೇ ತಿಳಿಸಲು ಸರ್ಕಾರಕ್ಕೆ ಅಧಿಕಾರವಿದೆ; ನೀವು ಹೇಳಿರುವುದನ್ನು ನಾವು ಒಪ್ಪಲು ಸಿದ್ಧರಿಲ್ಲ; ದಯಮಾಡಿ ಈ ಬಗ್ಗೆ ಸರ್ಕಾರಕ್ಕೆ ಮನವರಿಕೆ ಮಾಡಿಕೊಡುವಂತಹ ಕೆಲಸವನ್ನು ಮಾಡಿ" ಎಂಬುದಾಗಿ ತಿಳಿಸಿದರು. ಪತ್ರ ಸ್ವೀಕರಿಸಿದ ನಂತರ ನಾನು ದೂರವಾಣಿ ಕರೆ ಮಾಡಿ ಅವರೊಂದಿಗೆ ಮಾತನಾಡಿದೆನು. ಆ ಸಂದರ್ಭದಲ್ಲಿ ಶ್ರೀಯುತ ಗೌಡರವರು ಕೆ.ಪಿ.ಎಸ್.ಸಿ.ಯ ಸದಸ್ಯರಾಗಿದ್ದರು. ಆಗ ನಾನು 'ನೀನೇ ನನಗೆ ಭೋಧನೆ ಮಾಡುತ್ತಿದ್ದೀಯಾ' ಎಂದು ಕೇಳಿದ್ದು, ಅದಕ್ಕೆ ಪ್ರತಿಕ್ರಿಯಿಸಿದ ಅವರು 'ನಾನೇನು ಮಾಡುವುದಕ್ಕಾಗುತ್ತದೆ, ಸಂಸ್ಥೆಯ ಎಲ್ಲಾ ಸದಸ್ಯರು ಸೇರಿಕೊಂಡು ಆ ರೀತಿಯಾಗಿ ಪತ್ರವನ್ನು ಬರೆಯಲು ತಿಳಿಸಿದ್ದಾರೆ; ಅನಿವಾರ್ಯವಾಗಿ ನಾನು ಆ ರೀತಿಯಾಗಿ ಪತ್ರವನ್ನು ಬರೆದಿದ್ದೇನೆ' ಎಂಬುದಾಗಿ ತಿಳಿಸಿದರು. ಕಾನೂನು ಇಲಾಖೆಯ ಕಾರ್ಯದರ್ಶಿಗಳ ಸಲಹೆಯ ಮೇರೆಗೆ ನಾನು ನೇಮಕಾತಿ ಪ್ರಸ್ತಾವನ್ನು ಹಿಂಪಡೆದೆನ್ನು. ಈ ಎಲ್ಲಾ ಸಂಗತಿಗಳು ದಾಖಲಾಗಿವೆ. ನಂತರದಲ್ಲಿ ಅದನ್ನು ಸಚಿವ ಸಂಪುಟದಲ್ಲಿ ಮಂಡಿಸಿ, ಸಿ.ಇ.ಟಿ., ಮುಖಾಂತರವೇ ನೇಮಕಾತಿಯನ್ನು ಮಾಡಬೇಕೆಂಬ ನಿಯಮವನ್ನು ಮಾಡಿದೆವು. ಆ ನಂತರದಲ್ಲಿ ಸದರಿ ವ್ಯಕ್ತಿಯ ನೇಮಕಾತಿಯು ಆಯಿತು. ಇಂತಹ ಹಲವಾರು ಘಟನೆಗಳಾಗಿವೆ.

ನನ್ನ ಅನುಭವದ ಪ್ರಕಾರ ಸರ್ಕಾರವು ಎಲ್ಲಾ ರೀತಿಯ ಮಾನದಂಡಗಳನ್ನು ಖಾಸಗಿ ವಿಶ್ವವಿದ್ಯಾಲಯಗಳಿಗೆ ನಿಗದಿಪಡಿಸಬೇಕು. ಖಾಸಗಿ ವಿಶ್ವವಿದ್ಯಾಲಯಗಳು ಎಲ್ಲಿ ಬೇಕೆಂದರಲ್ಲಿ ತಮ್ಮ ಶಾಖೆಗಳನ್ನು ತೆರೆಯುವುದನ್ನು ಸರ್ಕಾರವು ದಯಮಾಡಿ ನಿಯಂತ್ರಿಸಬೇಕು. ಉನ್ನತ ಶಿಕ್ಷಣ ಸಚಿವರು ಬಹಳ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರ ಬಗ್ಗೆ ನನಗೆ ವೈಯಕ್ತಿಕವಾಗಿ ಸಮಾಧಾನವಿದೆ.

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಸಚಿವರು ಉನ್ನತ ಶಿಕ್ಷಣ ಹಾಗೂ ವಿಶ್ವವಿದ್ಯಾಲಯಗಳ ವಿಚಾರದಲ್ಲಿ ಸಾಕಷ್ಟು ಬದಲಾವಣೆಗಳನ್ನು ತಂದಿದ್ದಾರೆ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯನ್ನು ಕೂಡಿಸುವಂತಹ ಹಲವಾರು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಈ ಬಗ್ಗೆ ನಾನು ಹಲವಾರು ಬಾರಿ ಪ್ರಸ್ತಾಪಿಸಿದ್ದೇನೆ. ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಮಂತ್ರಿಗಳು ದಯಮಾಡಿ ಅರ್ಥಮಾಡಿಕೊಂಡು ಎಲ್ಲಾ ರೀತಿಯ ಮಾನದಂಡಗಳನ್ನು ನಿಗದಿಪಡಿಸಿ, ಬದಲಾವಣೆಗಳನ್ನು ತರಬೇಕು. ಸರ್ಕಾರಿ ವಿಶ್ವವಿದ್ಯಾಲಯಗಳಿಗಿರುವ ನಿಯಮಗಳನ್ನೇ ಖಾಸಗಿ ವಿಶ್ವವಿದ್ಯಾಲಯಗಳಿಗೆ ಜಾರಿಗೊಳಿಸಿ.

ಬೆಳಗಾವಿ ಜಿಲ್ಲೆಯಲ್ಲಿ ಕೆ.ಎಲ್.ಇ. ಸಂಸ್ಥೆಯ ವಿಶ್ವವಿದ್ಯಾಲಯವಿದೆ. ಅಲ್ಲಿ ಬೆಳಗಾವಿ ವಲಯದ ವಿದ್ಯಾರ್ಥಿಗಳಿಗೆ ಟೆಸ್ಟ್‌ನ್ನು ಮಾಡಿ ಇಂತಿಷ್ಟು ಸೀಟುಗಳನ್ನು ಹಂಚಿಕೆ ಮಾಡಬೇಕೆಂಬ ನಿಯಮವನ್ನು ಮಾಡಿದ್ದಾರೆ. ಅಲ್ಲಿ ಬೇರೆ ರಾಜ್ಯದ ಹಾಗೂ ದೇಶದ ಎಷ್ಟೇ ವಿದ್ಯಾರ್ಥಿಗಳು ಬಂದರೂ ಸಹ ಬೆಳಗಾವಿ ವಲಯದ ವಿದ್ಯಾರ್ಥಿಗಳಿಗೆ ಇಂತಿಷ್ಟು ಸೀಟುಗಳನ್ನು ಮೀಸಲಿಡುತ್ತಾರೆ. ಸದರಿ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳಿಗೆ ಟೆಸ್ಟ್‌ಗಳನ್ನು ಮಾಡಿ ಸೀಟುಗಳನ್ನು ಹಂಚಿಕೆ ಮಾಡುತ್ತಾರೆ. ನನ್ನ ಮಗಳೂ ಸಹ ಅದೇ ರೀತಿಯಾಗಿ ಪ್ರವೇಶಾತಿಯನ್ನು ಪಡೆದು ಡಾಕ್ಟರೇಟ್‌ನ್ನು ಪಡೆದುಕೊಂಡು ಡಾಕ್ಟರ್ ಆಗಿದ್ದಾರೆ. ಇಂತಹ ಕೆಲಸಗಳನ್ನು ಸರ್ಕಾರವು ಮಾಡಬೇಕಾದರೆ, ಖಾಸಗಿ ವಿಶ್ವವಿದ್ಯಾಲಯಗಳಿಗೆ ನಿರ್ಬಂಧಗಳನ್ನು ವಿಧಿಸಬೇಕು. ಸರ್ಕಾರದಿಂದ ವಿದ್ಯಾರ್ಥಿಗಳಿಗೆ ಟೆಸ್ಟ್‌ಗಳನ್ನು ಮಾಡಿ, ಇಂತಿಷ್ಟು ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಮಾಡಬೇಕು ಎನ್ನುವಂತಹ ನಿಯಮಗಳನ್ನು ಜಾರಿಗೊಳಿಸಬೇಕು. ಇಂತಹ ಎಲ್ಲಾ ಕೆಲಸಗಳನ್ನು ಸರ್ಕಾರವು ಮಾಡಿದರೆ, ಖಂಡಿತವಾಗಿಯೂ ಈ ವ್ಯವಸ್ಥೆಯ ಸರಿಯಾಗುತ್ತದೆ. ಈ ಬಗ್ಗೆ ಸರ್ಕಾರವು ವಿಚಾರವನ್ನು ಮಾಡಬೇಕು. ಅವಶ್ಯವಿದ್ದಲ್ಲಿ ಸರ್ಕಾರವು ನಮ್ಮ ಕ್ಷೇತ್ರದ ಎಲ್ಲಾ ಸದಸ್ಯರುಗಳನ್ನು ಕರೆದು ಚರ್ಚೆಯನ್ನು ಕೈಗೊಳ್ಳಲಿ ಅಥವಾ ಒಂದು ಆಯ್ಕೆ ಸಮಿತಿಯನ್ನು ಮಾಡಲಿ. ಏನೇ ಮಾಡಲಿ, ಅವರ ಅಧಿಕಾರಾವಧಿಯಲ್ಲಿ ಉತ್ತಮವಾದ ರೀತಿಯಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕಾಗಿ ಸರ್ಕಾರವು ಮನಸ್ಸನ್ನು ಮಾಡಿದರೆ, ಅದು ಸಾಧ್ಯವಿದೆ ಎನ್ನುವ ಸಂದೇಶವು ಸಚಿವರಿಂದ ಹೋಗಲಿ ಎನ್ನುವ ಮಾತನ್ನು ನಾನು ಹೇಳುತ್ತೇನೆ. ಈ ದೃಷ್ಟಿಯಿಂದ ನಾನು ಕೆಲವು ವಿಷಯಗಳನ್ನು ಸರ್ಕಾರಕ್ಕೆ ಹೇಳಿದ್ದೇನೆ.

ಈಗ ಮಂಡಿಸಿರುವ ಖಾಸಗಿ ವಿಶ್ವವಿದ್ಯಾಲಯಗಳವರು ಎಲ್ಲಿಯವರು, ಇವರ ಆಡಳಿತ ಮಂಡಳಿಯಲ್ಲಿ ಯಾರು ಇದ್ದಾರೆ, ಅವರುಗಳ ಹೆಸರು, ವಿಳಾಸ ಇತ್ಯಾದಿಗಳ ಸಂಪೂರ್ಣ ಮಾಹಿತಿಯ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅವಶ್ಯಕತೆ ಇದೆ. ಮುಂದುವರೆದು, ಅವರುಗಳು ನಮ್ಮ ರಾಜ್ಯದವರೇ ಅಥವಾ ನಮ್ಮ ದೇಶದವರೇ ಎನ್ನುವ ಮಾಹಿತಿಯೂ ಸಹ ಅವಶ್ಯವಾಗಿದೆ. ನಮ್ಮ ಬೆಂಗಳೂರಿನಲ್ಲಿರುವ ಶಾಲೆ, ಕಾಲೇಜುಗಳು ನೆರೆಯ ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕೇರಳ ರಾಜ್ಯದ ಮೂಲದವರದ್ದಾಗಿವೆ. ಆ ಶಾಲೆ ಕಾಲೇಜುಗಳಲ್ಲಿ ಒಂದು ಸೀಟನ್ನು ನಾವು ಕೇಳಿದರೆ, ಅವರುಗಳು ಏನೇನೋ ಮಾತನಾಡುತ್ತಾರೆ. ಅವರುಗಳು ನಮ್ಮ ರಾಜ್ಯ ಮತ್ತು ರಾಜಧಾನಿ ನಗರಕ್ಕೆ ಬಂದಿದ್ದು; ಹಾಲಿ ಬೆಂಗಳೂರು ನಗರವು ಅವರದ್ದೇ ಆಗಿದ್ದು, ಅವರುಗಳೇ ಕಾಲೇಜುಗಳನ್ನು ನಡೆಸುತ್ತಾರೆ. ಅವರುಗಳು ತಮಗೆ ಬೇಕಾದ ಅವ್ಯವಹಾರಗಳನ್ನು ನಡೆಸುತ್ತಾರೆ.

ಕೊನೆಯದಾಗಿ, ಯಾರಿಗೆ ಏನೂ ಉದ್ಯೋಗ ಮಾಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೋ, ಅಂತಹವರುಗಳು ಬೆಂಗಳೂರು ನಗರಕ್ಕೆ ಬಂದು ಕಾಲೇಜೊಂದನ್ನು ಪ್ರಾರಂಭಿಸಿದರೆ ಸಾಕು. ನಂತರದ ದಿನಗಳಲ್ಲಿ ಅವರುಗಳು ಕೋಟ್ಯಾಧೀಶ್ವರರಾಗುತ್ತಾರೆ. ಇಂತಹ ಪ್ರಸಂಗಗಳನ್ನು ಸರ್ಕಾರವು ದಯಮಾಡಿ ದೂರಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ವಿನಂತಿ ಮಾಡುತ್ತೇನೆ.

**(ಮುಂದು)**

(126)/3-2-2021/5-20/ಎಲ್ಎಂ/ಜಿಆರ್

**ಡಾ: ವೈ.ಎ.ನಾರಾಯಣಸ್ವಾಮಿ(ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಅವಕಾಶಕ್ಕಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ರಾಜ್ಯದ ಉಪ ಮುಖ್ಯಮಂತ್ರಿಗಳಾದ ಅಶ್ವಥನಾರಾಯಣಜಿಯವರು ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಲು ಕಾನೂನು ತರಬೇಕೆಂದು, ಇಲ್ಲಿ 5 ಖಾಸಗಿ ವಿಶ್ವವಿದ್ಯಾನಿಲಯಗಳ ಪ್ರಸ್ತಾಪವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಅವರು ಬಹಳ ಉತ್ಸಾಹದಿಂದ ಈ ಇಲಾಖೆಯಲ್ಲಿ ಕೆಲಸ ಮಾಡುತ್ತಾ, ಆ ಇಲಾಖೆಗೆ ಹೊಸ ಕಾಯಕಲ್ಪ ಕೊಡಬೇಕೆಂದು ಹೊಸ ಚಿಂತನೆಗಳನ್ನು ತುಂಬಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಇಡೀ ಭಾರತ ದೇಶದಲ್ಲಿ Number One ರಾಜ್ಯವಾಗಬೇಕೆಂದು ಆಸೆ ಇಟ್ಟುಕೊಂಡಿರುವಂತಹ ಡಾ:ಅಶ್ವಥ ನಾರಾಯಣಜಿಯವರಿಗೆ ಶುಭ ಕಾಮನೆಗಳನ್ನು ಸಲ್ಲಿಸುತ್ತೇನೆ. ಈ ಬಿಲ್ ವಿಚಾರದಲ್ಲಿ ಮಾತನಾಡಬೇಕು ಎಂದರೆ, ಐದು ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಬೇಕೆಂದು ತಂದಿದ್ದಾರೆ. ಇದರಲ್ಲಿ ನನಗೆ ಒಂದು ವಿಚಾರ ಅರ್ಥವಾಗುತ್ತಿಲ್ಲ, ಒಂದು ಕಾಲೇಜು, ಎರಡು ಇಂಜನೀಯರಿಂಗ್

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಲೇಜುಗಳನ್ನು Atria and New Horizon ನವರು ನಡೆಸುತ್ತಿದ್ದಾರೆ. ಸೆಂಟ್ ಜೋಸೆಪ್ಸ್ ಮತ್ತು ಇನ್ನೊಂದು ಸಂಸ್ಥೆಯನ್ನು ಮುರುಘರಾಜ ಮಠದವರು ನಡೆಸುತ್ತಿದ್ದಾರೆ. ಆದರೆ ಈಗ ತಂದಿರುವ ವಿದ್ಯಾಶಿಲ್ಪ ಅಕಾಡಮಿ ಬೆಂಗಳೂರಿನಲ್ಲಿ ಯಾವಾಗ ಕಾಲೇಜು ಪ್ರಾರಂಭವಾಯಿತು, ಯಾವಾಗ ಸ್ಥಾಪನೆ ಮಾಡಿದರು ಗೊತ್ತಿಲ್ಲ. ಈ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಲು ಕನಿಷ್ಠ ಮಾನದಂಡಗಳನ್ನಾದರೂ ಹಾಕಬೇಕು. ಇಲ್ಲದಿದ್ದರೆ ಮುಂದೆ ದೊಡ್ಡ ಅನಾಹುತವಾಗುತ್ತದೆ ಎನ್ನುವುದು ನನ್ನ ಭಾವನೆ. ವಿಶ್ವವಿದ್ಯಾನಿಲಯಗಳ ಸ್ಥಾಪನೆ ಬಗ್ಗೆ ಹಲವಾರು ಹಿರಿಯ ಸದಸ್ಯರು ಬಹಳ ಗಂಭೀರವಾದ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವಿಧಾನಸಭೆಯಲ್ಲಿ ಇವುಗಳ ಬಗ್ಗೆ ಚರ್ಚೆಗಳಾಗುವುದು ಬಹಳ ವಿರಳ. ಶಿಕ್ಷಣದ ಕೆಲಸವಾಗಬೇಕಾದರೆ ವಿಧಾನ ಪರಿಷತ್ತಿನಲ್ಲಿಯೇ ಆಗಬೇಕು. ಆ ಬಿಲ್‌ಗಳ ಇಡೀ ವ್ಯವಸ್ಥೆಯ clause ಗಳನ್ನು one by one ವಿವರವಾಗಿ ಹೇಳುವ ಪ್ರಜ್ಞಾವಂತ ಸದಸ್ಯರು ಇಲ್ಲಿ ಇದ್ದಾರೆ. ಸ್ವಾತಂತ್ರ ಬಂದ ಮೇಲೆ Higher Education ನಲ್ಲಿ Gross Enrolment Ratio (ಉ.ಇ.ಖ.,) ಕರ್ನಾಟಕ ರಾಜ್ಯದಲ್ಲಿ ಬರಿ 28% ಇದೆ. ಪಕ್ಕದ ಕೇರಳಾ ಮತ್ತು ತಮಿಳುನಾಡಿನಲ್ಲಿ 48 ರಿಂದ 50% ಇದೆ. ಉನ್ನತ ಶಿಕ್ಷಣದ ಕೇಂದ್ರದ ಯು.ಜಿ.ಸಿ., ನಾರ್ಮ್ಸ್ ಪ್ರಕಾರ ಉನ್ನತ ಶಿಕ್ಷಣದ ಆಶಯ ಎಂದರೆ, ಕನಿಷ್ಠ 50% G.E.R., reach ಆಗಬೇಕು ಎಂದು. Gross Enrolment Ratio ನ್ನು ಪಿ.ಯು.ಸಿ.., ಪಾಸ್ ಆದಮೇಲೆ atleast 50% ವಿದ್ಯಾರ್ಥಿಗಳು ಡಿಗ್ರಿಗೆ ಹೋಗಬೇಕು ಎನ್ನುವ ಆಶಯ ಇದೆ. ಆ ನಿಟ್ಟಿನಲ್ಲಿ ಇವತ್ತು ಖಾಸಗೀಕರಣಕ್ಕೆ ಒತ್ತು ಕೊಟ್ಟಿದ್ದಾರೆ. ಇಡೀ ವಿಶ್ವದ ಮುಂದುವರೆದ ರಾಷ್ಟ್ರಗಳು ದೊಡ್ಡ ಪ್ರಮಾಣದಲ್ಲಿ ಖಾಸಗೀಕರಣಕ್ಕೆ ಒತ್ತು ಕೊಟ್ಟಿದ್ದಾರೆ. ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳ ಸಂಖ್ಯೆ ಬಹಳ ಕಡಿಮೆ ಇದೆ. ಭಾರತ ಇನ್ನು ಬೆಳೆಯುತ್ತಿರುವ, ಅಭಿವೃದ್ಧಿ ಹೊಂದುತ್ತಿರುವ ದೇಶವಾಗಿರುವುದರಿಂದ ನಮ್ಮಲ್ಲಿ socio-economic fabric ಬಹಳ ದೊಡ್ಡ ಪ್ರಮಾಣದಲ್ಲಿ ಇರುವುದರಿಂದ ಇದರ ಎಲ್ಲಾ ಪರಿಣಾಮಗಳನ್ನು ಅರ್ಥ ಮಾಡಿಕೊಂಡು step by step ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿಕೊಡಲು ಅವಕಾಶ ಕೊಟ್ಟರೆ ಒಳ್ಳೆಯದು. ಇಲ್ಲದಿದ್ದರೆ ಮುಂದೆ ಬಹಳ ಗಂಭೀರವಾದ ವಿಚಾರಗಳನ್ನು ನಾವು ನೀವು ಇಲ್ಲಿಯೇ ಮಾತನಾಡಬೇಕಾಗುತ್ತದೆ. ಉ.ಇ.ಖ., ನ್ನು ಜಾಸ್ತಿ ಮಾಡಬೇಕು ಅದನ್ನು ಒಪ್ಪಿಕೊಳ್ಳುತ್ತೇವೆ. ಅದೇ ಸಮಯದಲ್ಲಿ ಸರ್ಕಾರಿ ಸ್ವಾಮ್ಯದ ಕನಿಷ್ಠ ವಿಶ್ವವಿದ್ಯಾಲಯಗಳನ್ನು ಬಲಪಡಿಸದೆ, ಅಲ್ಲಿ ಗುಣಮಟ್ಟದ ಶಿಕ್ಷಣವನ್ನು ಕೊಡದೆ ಆ ಮಕ್ಕಳನ್ನು ಖಾಸಗಿ ವಿಶ್ವವಿದ್ಯಾನಿಲಯಗಳ ಕಡೆಗೆ ಮುಖ ಮಾಡುವಂತೆ ಮಾಡುವುದು ಬಹಳ ಅಪರಾಧವಾಗುತ್ತದೆ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎನ್ನುವುದು ನನ್ನ ಭಾವನೆ. ನಾವೆಲ್ಲರೂ ಸರ್ಕಾರಿ ಶಾಲೆಯಲ್ಲಿಯೇ ಓದಿದವರು. ಪ್ರಾಥಮಿಕ ಶಾಲೆಯಿಂದ ಎಂ.ಇ., ವರೆಗೆ ನಾನು ಸರ್ಕಾರಿ ಶಾಲೆಗಳಲ್ಲಿಯೇ ಓದಿದ್ದೇನೆ. Ph.D., ಯನ್ನು ಸರ್ಕಾರಿ ಕಾಲೇಜಿನಲ್ಲಿಯೇ ಮಾಡಿದ್ದೇನೆ. ನಮ್ಮ ಸರ್ಕಾರಿ ವಿಶ್ವವಿದ್ಯಾನಿಲಯಗಳು ಯಾವುದಕ್ಕಿಂತಲೂ ಕಡಿಮೆ ಇಲ್ಲ. ಆದರೆ ದುರಂತ ಎಂದರೆ ಸ್ವಾತಂತ್ರ್ಯ ಬಂದ ನಂತರ ಈ ರಾಜ್ಯವನ್ನು ಆಳಿದ ಸರ್ಕಾರಗಳು ಸ್ವಾತಂತ್ರ್ಯ ಬಂದ ನಂತರ  ಶಿಕ್ಷಣ ವ್ಯವಸ್ಥೆಗೆ ಹೆಚ್ಚು ಒತ್ತು ಕೊಡದೆ ಇರುವುದರಿಂದ ಇನ್ನು ಸರ್ವವ್ಯಾಪಿಯಾಗಲು ಸಾಧ್ಯವಾಗಿರುವುದಿಲ್ಲ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಸರ್ಕಾರದ ಕೈಯಿಂದ ಈ ಕೆಲಸವಾಗುವುದಿಲ್ಲ ಖಾಸಗಿಯವರು ಈ ಕೆಲಸವನ್ನು ಮಾಡಲಿ ಎನ್ನುವ ಧೋರಣೆ ಬಂದಿದೆ ಎಂದು ನಾನು ಅಂದುಕೊಂಡಿದ್ದೇನೆ. ಖಾಸಗಿ ವಿಶ್ವವಿದ್ಯಾನಿಲಯಗಳ ವಿಚಾರ ವಿಷಯ ಬಂದಾಗ ಮಾನ್ಯ ಹಿರಿಯ ಸದಸ್ಯರಾದ ಹೊರಟ್ಟಿಯವರು ಖಾಸಗಿಯವರ ಮೇಲೆ ಸರ್ಕಾರಕ್ಕೆ ಏನು ಕಂಟ್ರೋಲ್ ಇದೆ ಎಂದು ಕೇಳಿದರು. ಸರ್ಕಾರಕ್ಕೆ ಖಾಸಗಿಯವರ ಮೇಲೆ ಕಂಟ್ರೋಲ್ ಇಲ್ಲವೆ ಇಲ್ಲ. ಮಾನ್ಯ ಸಿ.ಟಿ.ರವಿಯವರು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಸುಮಾರು 10 ರಿಂದ 12 ವಿಶ್ವವಿದ್ಯಾನಿಲಯಗಳನ್ನು ಸ್ಥಾಪನೆ ಮಾಡಿರುವುದನ್ನು ನಾವು ನೋಡಿದ್ದೇವೆ. ಸುಮಾರು ವಿಶ್ವವಿದ್ಯಾನಿಲಯಗಳ takeoff  ಆಗಿರುವುದಿಲ್ಲ. ಅಜೀಮ್ ಪ್ರೇಮಜಿ ವಿಶ್ವವಿದ್ಯಾನಿಲಯಕ್ಕೆ ಇದೇ ಸದನದಲ್ಲಿ ಅಪ್ರೂವಲ್ ಕೊಟ್ಟಿದ್ದೇವೆ. ಅದು 10 ವರ್ಷಗಳ ನಂತರ ಪ್ರಾರಂಭವಾಗಿದೆ. Alliance ಗಟಿುತಜಥಿುಣಥಿ ಬಗ್ಗೆ ಎಲ್ಲರಿಗೂ ಗೊತ್ತಿದೆ. Rai Technology University, Doddaballapura, ಇವರು B.Sc., (Agri) course ಪ್ರಾರಂಭ ಮಾಡಿದರು. ಆದರೆ ಕೊನೆಗೆ I.C.R., approval ಸಿಗಲಿಲ್ಲ ಎಂದು ಆ ಎರಡು ಬ್ಯಾಚ್ ಮಕ್ಕಳು ಇವತ್ತು ಬೀದಿಯಲ್ಲಿದ್ದಾರೆ. ಸರ್ಕಾರಕ್ಕೆ ಯಾವುದೇ ಕಂಟ್ರೋಲ್ ಇಲ್ಲ. ನಾವು ಎರಡು ವರ್ಷ ಡಿಗ್ರಿ ಓದಿದ್ದೇವೆ  ನಮಗೇನು ಮಾಡುತ್ತೀರಿ ಎಂದು ಅವರು ಬಂದು Governor office ಮುಂದೆ ಧರಣಿ ಮಾಡಿದರು. ನಾನು ಏನು ಹೇಳುತ್ತೇನೆ ಎಂದರೆ, ನೀವು ಎಷ್ಟಾದರೂ ವಿಶ್ವವಿದ್ಯಾನಿಲಯಗಳ ಸ್ಥಾಪನೆಗೆ ಅನುಮತಿಯನ್ನು ಕೊಡಿ ಆದರೆ ಅವರ ಜುಟ್ಟು ಜನಿವಾರ ನಿಮ್ಮ ಕೈಯಲ್ಲಿ ಇಟ್ಟುಕೊಳ್ಳಿ. ಅವರ ಜುಟ್ಟು ಜನಿವಾರ ನಿಮ್ಮ ಕೈಯಲ್ಲಿ ಇಲ್ಲದೆ ಹೋದರೆ ಮುಂದೆ ಒಂದು ದಿನ ಸರ್ಕಾರವನ್ನೆ ಚಾಲೆಂಜ್ ಮಾಡುವ ವ್ಯವಸ್ಥೆಗೆ ಹೋಗುತ್ತಾರೆ. ಇವತ್ತು ರಾಜ್ಯದಲ್ಲಿ ಮೆಡಿಕಲ್, ಡೆಂಟಲ್ ಕಾಲೇಜುಗಳ ಫೀ ಅನ್ನು ಫಿಕ್ಸ್ ಮಾಡುವವರು ಯಾರು? ಸರ್ಕಾರ ನೇಮಕ ಮಾಡಿದೆಯಾ? ಕಾಮೆಡ್-ಕೆ ಅಧ್ಯಕ್ಷರು ಯಾರು? ಪಟ್ಟಭದ್ರಹಿತಾಸಕ್ತಿಗಳಿಗೆ ಆಯುಧಗಳನ್ನು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಕೊಟ್ಟಿರುವುದು ಸರ್ಕಾರಗಳು. ನಮ್ಮ ಸರ್ಕಾರ, ನಿಮ್ಮ ಸರ್ಕಾರ ಎಂದು ಅಲ್ಲ ಎಲ್ಲಾ ಸರ್ಕಾರಗಳು ಮಾಡಿರುವುದು ಇದೆ ಕೆಲಸ. ಅವರನ್ನು ಓಲೈಸಲು ಸಾಮಾಜಿಕವಾಗಿ ಹಿಂದುಳಿದವರ, ದಲಿತರ ಧ್ವನಿಯನ್ನು ಅಳಿಸುವಂತಹ ಕೆಲಸವನ್ನು ನಾವು ಮಾಡುತ್ತಿದ್ದೇವೆ. ಆದರೆ ನಮ್ಮ ಡಾ:ಅಶ್ವಥನಾರಾಯಣಜಿಯವರು ಆ ಕೆಲಸವನ್ನು ಮಾಡುವುದಿಲ್ಲ ಎನ್ನುವ ವಿಶ್ವಾಸವಿದೆ. ಸರ್ಕಾರಕ್ಕೆ admission ಮೇಲೆ ಕಂಟ್ರೋಲ್ ಇಲ್ಲ. ಬೇಕಾದ ಹಾಗೆ ವರ್ಷಕ್ಕೆ 900, 500, 600 ವಿದ್ಯಾರ್ಥಿಗಳ admission ಮಾಡಿಕೊಳ್ಳುತ್ತಿದ್ದಾರೆ. Airport Road ನಲ್ಲಿ ಒಂದು ಕಾಲೇಜ್ ಇದೆ. ಅಲ್ಲಿ ವರ್ಷಕ್ಕೆ 15,000 ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಿದ್ದಾರೆ. ಆ ಕಾಲೇಜಿನ Vice Chancellor ಯಾರು ಗೊತ್ತಾ, ಹಿಂದೆ ಸಣ್ಣ ಕಂಟ್ರಾಕ್ಟ್ ಕೆಲಸ ಮಾಡಲು ಬೆಂಗಳೂರಿಗೆ ಬಂದವರು, ಆಜಿಂಡಿಜಜ eligibility ಇಲ್ಲದವರು, ಹಣವಂತರಾಗಿ ಹಣವನ್ನು ಹಾಕಿ ವಿಶ್ವವಿದ್ಯಾನಿಲಯವನ್ನು ಯಾರು ಪ್ರಾರಂಭ ಮಾಡಿದರು, ಅವರು ಈಗ Vice Chancellor. ನಾವು Vice Chancellor ಅವರ appointment ಮಾಡಬೇಕಾದರೆ Search Committee ಮಾಡಿ, ಅವರ bio-data ತೆಗೆದುಕೊಂಡು ಎಲ್ಲಾ ಪರಿಶೀಲನೆ ಮಾಡಿ ನೇಮಕ ಮಾಡುತ್ತೇವೆ. ಆದರೆ ಆ ವಿಶ್ವವಿದ್ಯಾನಿಲಯಕ್ಕೆ ಯಾರು ಓನರ್ ಅವರೆ Vice Chancellor ಏನು ವಿಪರ್ಯಾಸ ಇದು. ಅಂದರೆ, ಇಲ್ಲಿ ಎಷ್ಟು ಬೇಕಾದರೂ marks card ಗಳನ್ನು ತೆಗೆದುಕೊಳ್ಳಬಹುದು ಅನ್ನುವುದರಲ್ಲಿ ಅವರು ಸಿಕ್ಕಿಹಾಕಿಕೊಳ್ಳಬಹುದು. ಇನ್ನು ಖಾಸಗಿಯವರು ತೆಗೆದುಕೊಳ್ಳುವ ಫೀ ಬಗ್ಗೆ ಸಾಹೇಬರು ಮಾತನಾಡುವಾಗ ನಾನು ಕೇಳಿಸಿಕೊಂಡೆ. 40% ಸರ್ಕಾರ ನಿಗದಿಗೊಳಿಸುತ್ತದೆ. 60% ಖಾಸಗಿಯವರು ನಿಗದಿಗೊಳಿಸುತ್ತಾರೆ. ಕೋವಿಡ್ ಸಮಯದಲ್ಲಿ ಸುಮಾರು ಕಾಲೇಜುಗಳಲ್ಲಿ ಬಸ್ ಫೀ ತೆಗೆದುಕೊಂಡಿದ್ದಾರೆ. ಅಭಿವೃದ್ಧಿಗೆಂದು ಫೀ ತೆಗೆದುಕೊಂಡಿದ್ದಾರೆ. ಲ್ಯಾಬ್ ಫೀ ತೆಗೆದುಕೊಂಡಿದ್ದಾರೆ. ಇದನ್ನು ಯಾರು ಕಂಟ್ರೋಲ್ ಮಾಡಲು ಆಗುವುದಿಲ್ಲ. ದಿನಬೆಳಗಾದರೆ ನಮ್ಮ ಮನೆಗೆ ಜನರು ಬಂದು ಫೀ ಕೊಡದಿದ್ದರೆ ಹಾಲ್ ಟಿಕೇಟ್ ಕೊಡುವುದಿಲ್ಲ ಕಾಸು ಕೊಡಿ ಕೇಳುತ್ತಾರೆ. ಈ ವ್ಯವಸ್ಥೆಯಲ್ಲಿ ನಾವು ಸಾಗುತ್ತಿದ್ದೇವೆ. ಇದರ ಮೇಲೆ ಕಂಟ್ರೋಲ್ ಇಲ್ಲ. ಮೂರನೆಯದಾಗಿ, ಮಕ್ಕಳಿಗೆ ಅಲ್ಲಿ reservation ಇಲ್ಲವೆ ಇಲ್ಲ. ಎಸ್.ಸಿ., ಎಸ್.ಟಿ., ಓ.ಬಿ.ಸಿ., ಮಕ್ಕಳನ್ನು ಸೇರಿಸಿಕೊಳ್ಳುವುದಿಲ್ಲ. ಯಾರು ಹಣವಂತರಿದ್ದಾರೆ ಅವರ ಮಕ್ಕಳನ್ನು ಮಾತ್ರ ಸೇರಿಸಿಕೊಳ್ಳುತ್ತಾರೆ. ಉಳ್ಳವರು ಇಲ್ಲದೆ ಇರುವವರು ಎರಡೆ ವರ್ಗ ಇಲ್ಲಿ. ಬೇರೆ ಯಾವ reservation ಇಲ್ಲ. ಮಾನ್ಯ ಹಿರಿಯ ಸದಸ್ಯರಾದ ಹೊರಟ್ಟಿಯವರು examination system ಬಗ್ಗೆ ಒಂದು ಪಾಯಿಂಟ್ ಹೇಳಿದರು. ಮಾನ್ಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮರಿತಿಬ್ಬೇಗೌಡರು ಮೈಸೂರಿನಲ್ಲಿ ಓದಿದ್ದಾರೆ. ಡಾ:ಅಶ್ವಥನಾರಾಣಜಿಯವರು, ನಾನು, ಮಾನ್ಯ ಪುಟ್ಟಣ್ಣನವರು, ಮಾನ್ಯ ಡಾ:ತೇಜಸ್ವಿನಿ ಅಕ್ಕ, ಮಾನ್ಯ ಅಪ್ಪಾಜಿಗೌಡರು ನಾವೆಲ್ಲರೂ ಬೆಂಗಳೂರಿನಲ್ಲಿ ಓದಿದವರು. ಇಂಗ್ಲೀಷ್‌ನಲ್ಲಿ 51% ತೆಗೆದುಕೊಂಡವರು ರ್‍ಯಾಂಕ್. ಇದು ಅಪ್ಪಾಜಿಗೌಡರಿಗೂ ಗೊತ್ತಿದೆ. ಈಗ ಖಾಸಗಿ ವಿಶ್ವವಿದ್ಯಾನಿಲಯದವರು 95% ಕೊಡುತ್ತಾರೆ. Grade point is 9.90 out of 10. 4 Grade ಇದ್ದರೆ 3.8, ಏನು ಇದು? ನಾನು B.Sc., (Ag.,) ಒಂದು ವರ್ಷ ಓದಿದೆ. ಅಲ್ಲಿ Trimester system ಇತ್ತು. I was a student of B.Sc., (Ag.,)in 1983.

(ಮುಂದು)

(127)03-02-2021(05-30)ಬಿಎಸ್‌ಡಿ-ಎಂಡಿ

**ಡಾ: ವೈ.ಎ. ನಾರಾಯಣಸ್ವಾಮಿ (ಮುಂದು)**

Announced Exam, Unannounced Exam, Practical Exam, Final Exam ಗಳೆಲ್ಲವೂ ಆದಮೇಲೆ ಅವರು AGP (Average Grade Point) ಮಾಡುತ್ತಿದ್ದರು. ಮೂರು trimester ಆದಮೇಲೆ ನಾಲ್ಕನೆಯ trimester ನಲ್ಲಿ average CGP (Cumulative Grade Point) ಎಂದು ಮಾಡುತ್ತಿದ್ದರು. ನಾನು ಒಂದು ವರ್ಷ ಓದಿಕೊಂಡು ಅದನ್ನು ಬಿಟ್ಟು BE ಗೆ ಬಂದೆನು. ಆದರೆ ದುರಂತ ಏನೆಂದರೆ, examination control ಅವರ ಕೈಯಲ್ಲಿ ಇರುವುದರಿಂದ ಅವರು marks ಕೊಡದಿದ್ದರೆ admission ಆಗುವುದಿಲ್ಲ.

**ಉಪ ಸಭಾಪತಿಯವರು:-** ಮಾನ್ಯ ನಾರಾಯಣಸ್ವಾಮಿಯವರೇ, ತಾವು ಎಷ್ಟನೇ ಡಿಚಿಟಿಇ ಬಂದಿದ್ದಿರಿ ಎಂಬುದನ್ನು ಹೇಳಿ.

**ಡಾ: ವೈ.ಎ. ನಾರಾಯಣಸ್ವಾಮಿ:-** ನಾನು ಜೀವನದಲ್ಲಿ ನನಗೆ ಜ್ಞಾಪಕವಿರುವಂತೆ 7ನೆಯ class ನಿಂದ ಓದಿದ್ದು ಎಲ್ಲಾ ಸರ್ಕಾರಿ ಶಾಲಾ-ಕಾಲೇಜುಗಳಾಗಿದ್ದರೂ, ನನ್ನ life ನಲ್ಲಿ second class ನೋಡಿಲ್ಲ. ಯಾವಾಗಲೂ first class, distinction ನಲ್ಲಿಯೇ ಬಂದಿದ್ದೇನೆ. It will be on record. I can show the marks cards to you. ಮಾನ್ಯ ಅಪ್ಪಾಜಿಗೌಡರು ಜೊತೆಯಲ್ಲಿ ಇದ್ದರು, ಅವರನ್ನು ಕೇಳಿದರೆ ಹೇಳುತ್ತಾರೆ.

ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸದಸ್ಯರು ಶ್ರೀಯುತ ಸರ್.ಎಂ. ವಿಶ್ವೇಶ್ವರಯ್ಯನವರಿಗಿಂತ ಉನ್ನತವಾಗಿದ್ದಾರೆ.

**ಡಾ: ವೈ.ಎ. ನಾರಾಯಣಸ್ವಾಮಿ:–** ಚರ್ಚೆ ಬೇರೆ ಕಡೆ ಹೋಗುವುದು ಬೇಡ. ಇದರಲ್ಲಿ Examination System ಅನ್ನು ನಮ್ಮ control ನಲ್ಲಿ ಇಟ್ಟುಕೊಳ್ಳದಿದ್ದರೆ ವ್ಯಾಪಾರಕ್ಕೋಸ್ಕರ marks ಗಳನ್ನು ಇಷ್ಟ ಬಂದವರಿಗೆ ಕೊಟ್ಟು degree certificate ಗಳನ್ನು ಕೊಡುತ್ತಾರೆಯೇ ಹೊರತು, ಕೈಗೆ ಕೌಶಲ್ಯತೆ ಕೊಡುವುದಿಲ್ಲ, proficiency ಕೊಡುವುದಿಲ್ಲ, quality education ಕೊಡುವುದಿಲ್ಲ. ನನಗೆ ಬಹಳ ದು:ಖ ಆಗುತ್ತದೆ. ಮಾನ್ಯ ಸಭಾಪತಿಯವರೇ, ಎಷ್ಟೋ ಜನ BE graduates ಗಳು ಬೆಂಗಳೂರಿನಲ್ಲಿ ಭಿಚಿಭ ಜಡಿುತಜಡಿ ಗಳಾಗಿ ಕೆಲಸ ಮಾಡುತ್ತಿದ್ದಾರೆ. ಅಚಿಭ ಓಡಿಸುತ್ತಾರೆ. ನಾವು ಇವತ್ತು ಇದೆಲ್ಲವನ್ನು ತುಲನೆ ಮಾಡಿ ಯೋಚನೆ ಮಾಡಬೇಕಾಗಿದೆ. ಸರ್ಕಾರ ನಮ್ಮದು, ಅವರದ್ದು ಎಂಬುದು ಬಿಟಡಿಡಿಜಿಣಚಿಟಣ ಅಲ್ಲ. ಸಾಮಾಜಿಕ ವ್ಯವಸ್ಥೆ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಬೇಕು. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಅಶ್ವಥನಾರಾಯಣರವರು approval ತೆಗೆದುಕೊಳ್ಳಬೇಕೆಂದು ಆಸೆ ಪಡುತ್ತೇನೆ.

ಇನ್ನು ಎರಡನೆಯದಾಗಿ, ಬಹಳ ಮುಖ್ಯವಾಗಿ ಸರ್ಕಾರಕ್ಕೆ ನನ್ನ ಮನವಿ ಏನೆಂದರೆ, ಎಲ್ಲ University ಗಳಿಗೂ Centralized Examination Cell ಮಾಡಬೇಕು ಎಂದು ಆಗ್ರಹ ಮಾಡುತ್ತಿದ್ದೇನೆ. Admission ಗೆ, reservation ಗೆ ಮತ್ತು Examination System ಗೆ Centralized Examination Cell ಮಾಡಬೇಕು. ಅವರು ಏನು ಬೇಕೋ ಚಿಜಟಟುಂಟಿ ಮಾಡಿಕೊಳ್ಳಲಿ. ಆದರೆ ಪರೀಕ್ಷೆಯನ್ನು ಸರ್ಕಾರ ಮಾಡಬೇಕು. ಇವತ್ತು ಏಇಂ (Karnataka Examination Authority) ಇದೆ, ಈ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಪರೀಕ್ಷೆ ಮಾಡಲಿ. ಆಗ ಯಾರಿಗೂ ಸಮಸ್ಯೆ ಇರುವುದಿಲ್ಲ. ಅದನ್ನು ಬಿಟ್ಟು ಅವರೇ Vice Chancellor, ಅವರೇ admission ಮಾಡಿಕೊಳ್ಳುವವರು, ಅವರೇ Administrator, ಅವರೇ syllabus frame ಮಾಡುವವರು, ಅವರೇ curriculum frame ಮಾಡುವವರು, ಅವರೇ exam ಮಾಡಿ, ಅವರೇ grade ಕೊಡುವುದು, ನಂತರ ಬೀದಿಗೆ ಬಿಟ್ಟುಬಿಡುವುದು. ಇದು ಆಗುವುದು ಬೇಡ ಎಂದು ಮನವಿ ಮಾಡುತ್ತೇನೆ. ಇನ್ನು ಬಹಳಷ್ಟು ವಿಚಾರಗಳಿದ್ದರೂ ಇದರ ಬಗ್ಗೆ ನಾನು ಇಷ್ಟನ್ನು ಹೇಳಬಯಸುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೊನೆಗೆ ಯಾವ ಮಟ್ಟಕ್ಕೆ ಹೋಗುತ್ತೇವೆಂದರೆ, ನಮ್ಮ ಸರ್ಕಾರ ಇರಲಿ, ಅವರ ಸರ್ಕಾರ ಇರಲಿ, ಯಾವ ಸರ್ಕಾರ ಇದ್ದರೂ Private University ಗಳಿಗೆ ಮೂಗುದಾರ ಹಾಕಿ, ಸರ್ಕಾರದ control ಇಟ್ಟುಕೊಳ್ಳದಿದ್ದರೆ ಮುಂದೊಂದು ದಿನ ಸರ್ಕಾರಿ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳು ಮತ್ತು ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಓದಿರುವ ವಿದ್ಯಾರ್ಥಿಗಳ ಮಧ್ಯೆ ಸಾಮಾಜಿಕ ಸಂಘರ್ಷ ಉಂಟಾಗುತ್ತದೆ, ಆರ್ಥಿಕ ಸಂಘರ್ಷ ಉಂಟಾಗುತ್ತದೆ. ಅವರಿಗೆ ಕೆಲಸ ಸಿಗದೇ ಬೀದಿಗೆ ಬೀಳುತ್ತಾರೆ, ಇವರು ಕೆಲಸಕ್ಕೆ ಹೋಗುತ್ತಾರೆ. ಈ ಮಧ್ಯೆದಲ್ಲಿ ಸಮಾಜದಲ್ಲಿ ಅಲ್ಲೋಲಕಲ್ಲೋಲ ಉಂಟಾಗುತ್ತದೆ. ಇದನ್ನು ನಾನು 20 ವರ್ಷಗಳ ಹಿಂದಿನಿಂದಲೂ ಹೇಳುತ್ತಿದ್ದೇನೆ. ಮುಂದೆ ಬಹಳ ದೊಡ್ಡ ಅನಾಹುತ ಕಾದಿದೆ. ಇವತ್ತು ಯಾರಿಗೋ ಸಹಾಯ ಮಾಡಲು ಅಥವಾ ಯಾರದೋ ಒತ್ತಡಕ್ಕೆ ಮಣಿದು ಈ ರೀತಿ ಕೊಟ್ಟರೆ ಮುಂದಿನ ದಿನಮಾನಗಳಲ್ಲಿ reservation fabric ಅನ್ನು honour ಮಾಡದೇ economically ಜಠಿತಿಟಣಡಿಠಜಜಜಟ ನವರ ಹಿತಾಸಕ್ತಿ ಕಾಪಾಡದೇ, ಇದೆಲ್ಲವನ್ನು ಮಾಡಿದರೆ ಎಲ್ಲೋ ಒಂದು ಕಡೆ ನಾವೇ ಒಂದು ಕೆಟ್ಟ ಮರವನ್ನು ಬೆಳೆಸಲು ಬೀಜ ಹಾಕಿದಂತೆ ಆಗುತ್ತದೆ ಎಂದು ಹೇಳಬಯಸುತ್ತೇನೆ.

ಇನ್ನು ಕೊನೆಯದಾಗಿ ಮಾನ್ಯ ಸಚಿವರಿಗೆ ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ನಾವೆಲ್ಲರೂ ಇದಕ್ಕೆ ಉತ್ತರದಾಯಿತ್ವ ಮತ್ತು ಜವಾಬ್ದಾರಿ ಹೊಂದಿದವರಾಗಿದ್ದೇವೆ. ಇದರಲ್ಲಿ ಮಾನ್ಯ ಸಚಿವರ ಒಬ್ಬರ ಜವಾಬ್ದಾರಿ ಮಾತ್ರ ಇಲ್ಲ. ಮಾನ್ಯ ಮರಿತಿಬ್ಬೇಗೌಡರು ಬೆಂಗಳೂರಿನಲ್ಲಿ University ಸ್ಥಾಪನೆ ಮಾಡಿ, ಬೆಳಗಾವಿ ಮತ್ತು ಗುಲ್ಬರ್ಗಗಳಲ್ಲಿ centre ಮಾಡಬಹುದು ಎಂದು ಹೇಳಿದರು. ಮಾನ್ಯ ಸಭಾಪತಿಯವರೇ, Narayana E-Techno School ಎಂಬ ಶಾಲೆಯು ತೆಲಂಗಾಣ ರಾಜ್ಯದ ಒಬ್ಬ ಸಚಿವರ ಶಾಲೆಯಾಗಿದ್ದು, ಇಡೀ ಕರ್ನಾಟಕದಲ್ಲಿ ಆ ಶಾಲೆಯ 150 branch ಗಳಿವೆ. ಆ ಶಾಲೆಗಳಲ್ಲಿ ರೂ.2 ಲಕ್ಷ fees ಆಗಿದ್ದು, ಅವರು ಕೊಟ್ಟಿದ್ದೇ exam ಮತ್ತು ಬರೆದಿದ್ದೇ ಪರೀಕ್ಷೆ ಆಗಿದೆ. ಅದನ್ನು ನೋಡಬೇಕು. ಅವರದ್ದೇ hostel ನಲ್ಲಿ ಮಕ್ಕಳು ಇರಬೇಕು. ಅವರು ಹೇಳಿದ fees ಕಟ್ಟಬೇಕು, fees ಕಟ್ಟದಿದ್ದರೆ ಮಕ್ಕಳಿಗೆ hall ticket ಅನ್ನು ಕೊಡುವುದಿಲ್ಲ. ಅದಾದ ಮೇಲೆ Mahesh PU College ಎಂದು ಇದ್ದು, ಅದರ ಮಾತೃ ಸಂಸ್ಥೆ ಎಲ್ಲೋ ಇದೆ. ಇಡೀ ರಾಜ್ಯದಲ್ಲಿ franchisee ರೀತಿ ಮಾಡಿಕೊಂಡು ಬಿಟ್ಟಿದ್ದಾರೆ. ಅದೇರೀತಿ Chaithanya E-Techno School ಎಂದು ಇದೆ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಮರಿತಿಬ್ಬೇಗೌಡ:–** ಅದ್ಯಾವುದೋ NPS University ಎಂದು ಇದೆಯಂತೆ, ಅದರ ಮಾಲೀಕ ವಿಮಾನದಿಂದ ಕೆಳಗೆ ಇಳಿಯಲಿಲ್ಲವಂತೆ! ಅದರ ಬಗ್ಗೆ ಸ್ವಲ್ಪ ಹೇಳಬೇಕು.

**ಡಾ: ವೈ.ಎ. ನಾರಾಯಣಸ್ವಾಮಿ:–** ಅದರ ಬಗ್ಗೆ ಮಾನ್ಯ ಪುಟ್ಟಣ್ಣನವರು ಹೇಳುತ್ತಾರೆ.

**ಶ್ರೀ ಮರಿತಿಬ್ಬೇಗೌಡ:–** ಅದರ ಬಗ್ಗೆ ಮಾನ್ಯ ಸದಸ್ಯರಿಗೆ ಚೆನ್ನಾಗಿ ಗೊತ್ತು.

**ಡಾ: ತೇಜಸ್ವಿನಿಗೌಡ:–** ವಿಮಾನ ಇಂಧನ ತುಂಬಿಸಿಕೊಳ್ಳುವುದಕ್ಕಾದರೂ ಇಳಿಯಬೇಕಲ್ಲವೇ?

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನನ್ನ ಮಕ್ಕಳು ಅಲ್ಲಿ ಓದುತ್ತಿಲ್ಲ. ಆದ್ದರಿಂದ ನನಗೆ ಗೊತ್ತಿಲ್ಲ. ನಂತರ ಮಾನ್ಯ ಪುಟ್ಟಣ್ಣನವರನ್ನು ಕೇಳಿದರೆ ಹೇಳುತ್ತಾರೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸದಸ್ಯರಿಗೆ ಗೊತ್ತಿಲ್ಲದಿರುವುದು ಏನೂ ಇಲ್ಲ, ಆದರೆ ಏಕೋ......

**ಡಾ: ವೈ.ಎ. ನಾರಾಯಣಸ್ವಾಮಿ:–** ಇಡೀ ಸದನದಲ್ಲಿ ವಾದ–ವಿತಂಡ ವಾದ ಮತ್ತು ತಂತ್ರಗಾರಿಕೆ–ಕುತಂತ್ರಗಾರಿಕೆಗಳೆಲ್ಲವೂ ಮಾನ್ಯ ಮರಿತಿಬ್ಬೇಗೌಡರಿಗೊಬ್ಬರಿಗೆ ತಿಳಿದಿರುವುದು. ಇನ್ಯಾರಿಗೂ ಗೊತ್ತಿಲ್ಲ. ಮಾನ್ಯ ಮರಿತಿಬ್ಬೇಗೌಡರಿಗೆ ವಾದ ಮಾಡುವುದು ಗೊತ್ತು, ವಿತಂಡ ವಾದ ಮಾಡುವುದು ಗೊತ್ತು, ತಂತ್ರ ಮಾಡುವುದು ಗೊತ್ತು, ಕುತಂತ್ರ ಮಾಡುವುದು ಗೊತ್ತು, ಇದಕ್ಕೆ ಮಾನ್ಯ ಮರಿತಿಬ್ಬೇಗೌಡರೊಬ್ಬರೇ ಪಿತಾಮಹ.

**ಶ್ರೀ ಮರಿತಿಬ್ಬೇಗೌಡ:–** ಅದೆಲ್ಲವನ್ನೂ ಮಾಡಿದರೂ ಮಾನ್ಯ ಸದಸ್ಯರಷ್ಟು ಲಾಭ ಮಾಡಲು ಯಾರಿಂದಲೂ ಸಾಧ್ಯವಿಲ್ಲ.

**ಡಾ: ವೈ.ಎ. ನಾರಾಯಣಸ್ವಾಮಿ:–** ವಿಧಾನ ಪರಿಷತ್ತಿಗೆ ಲಾಭ ಮಾಡಲು ಬಂದಿಲ್ಲ, ಉತ್ತರದಾಯಿತ್ವ ಹೊತ್ತುಕೊಂಡು ಸಮಾಜದಲ್ಲಿ ಒಳ್ಳೆಯ ಕೆಲಸಕ್ಕೆ ಮಾಡಲು ಬಂದಿದ್ದೇವೆ. ಅದರ ಬಗ್ಗೆ ಜ್ಞಾಪಕ ಇಟ್ಟುಕೊಳ್ಳಬೇಕು. ಲಾಭ–ನಷ್ಟಕ್ಕೆ ಇಲ್ಲಿಗೆ ಬರುವ ಅವಶ್ಯಕತೆ ಇಲ್ಲ. ವ್ಯಾಪಾರ ಮಾಡಿಕೊಂಡು ಹೊರಗೆ ಇರಬಹುದು. ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುವುದೇನೆಂದರೆ, touring talkies ರೀತಿ ಅಲ್ಲಿ–ಇಲ್ಲಿ centre ಮಾಡುವ clause ಅನ್ನು ದಯವಿಟ್ಟು ತೆಗೆಯಬೇಕು D section ಅನ್ನು ತೆಗೆಯಬೇಕೆಂದು ನಾನು ಮನವಿ ಮಾಡುತ್ತೇನೆ, ಮಾನ್ಯ ಸಚಿವರು ಪ್ರತಿಷ್ಠೆಗೆ ಹೋಗಬಾರದು. ಏಕೆಂದರೆ ಇಡೀ ಸದನ ಅವರ ಜೊತೆಯಲಿದ್ದು, ಅವರ ಮೇಲೆ ಭಾರಿ ವಿಶ್ವಾಸ ಇದೆ. ಅವರನ್ನು ಬಹಳ ದೊಡ್ಡ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸ್ಥಾನದಲ್ಲಿ ನೋಡಬೇಕೆಂದು ಆಸೆ ಪಟ್ಟಿದ್ದೇವೆ. ಅವರು future leader. You must also have concern about the society ಎಂಬುದೇ ನಮ್ಮ ಆಸೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಇದನ್ನು ಹೇಳಿ ಮಾನ್ಯ ಸಚಿವರನ್ನು ಕೆಳಗೆ ಇಳಿಸಬಾರದು.

**ಡಾ: ವೈ.ಎ. ನಾರಾಯಣಸ್ವಾಮಿ:-** ಆ ರೀತಿ ನಮ್ಮ ಊಜಿಡಿಣಥಿ ಯಲ್ಲಿ ಮಾಡುವುದಿಲ್ಲ. ಅವರ ಊಜಿಡಿಣಥಿ ಯಲ್ಲಿ ಮಾಡುತ್ತಾರೆ. ಅದನ್ನು ಜೆಡಿ(ಎಸ್) ನಲ್ಲಿ ಮಾಡುತ್ತಾರೆ.

**ಶ್ರೀ ಮರಿತಿಬ್ಬೇಗೌಡ:-** ಮಾನ್ಯ ಸದಸ್ಯರು 22 Universities Bill pass ಆದಾಗಲೂ ಸದನದಲ್ಲಿ ಇದ್ದರು. ಒಂದು ದಿನ ಈ ರೀತಿ ಬಾಯಿ ತೆಗೆಯಲಿಲ್ಲ. ಈಗ ಏಕೆ? ಆಗ ಅರ್ಧ ಗಂಟೆಯಲ್ಲಿ pass ಮಾಡಿಸಿಬಿಟ್ಟರು.

**Dr. Y.A.NARAYANASWAMY:-** I got your point. ನಾನು ಆವತ್ತು ಮಾತನಾಡಿದ್ದೇನೆ, ಈ ಬಗ್ಗೆ ಕಡತ ತೆಗೆದು ನೋಡಲಿ. ಮಾನ್ಯ ಮರಿತಿಬ್ಬೇಗೌಡರು ಬುದ್ಧಿವಂತರಿದ್ದಾರೆ, senior ಆಗಿದ್ದಾರೆ, ಎಲ್ಲಾ University ಗಳಿಗೂ ಮೀರಿದ ಜ್ಞಾನ ಅವರಲ್ಲಿದೆ, ಆದರೆ ಇಲ್ಲಿ ಇರುವವರೆಲ್ಲರೂ ಬುದ್ಧಿವಂತರು ಎಂಬುದನ್ನು ಜ್ಞಾಪಕ ಇಟ್ಟುಕೊಳ್ಳಬೇಕು. ಅವರೊಬ್ಬರೇ ಅಲ್ಲ, ಇಲ್ಲಿ ಎಲ್ಲರೂ ಬುದ್ಧಿವಂತರಿದ್ದಾರೆ.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ಇವರಿಬ್ಬರ ವಾದವನ್ನು ಒಂದು ದಿವಸ ನಾವು ನೋಡಬೇಕು ಎನಿಸುತ್ತದೆ.

**ಡಾ: ವೈ.ಎ. ನಾರಾಯಣಸ್ವಾಮಿ:-** ಬುದ್ಧಿವಂತರಾಗಿದ್ದರೆ ಮಾತ್ರ ಎಲ್ಲರೂ ಇಲ್ಲಿಗೆ ಗೆದ್ದು ಬರಲು ಸಾಧ್ಯ.

**ಉಪ ಸಭಾಪತಿಯವರು:-** ಶಿಕ್ಷಕರ ಕ್ಷೇತ್ರದಿಂದ ಗೆದ್ದು ಬಂದಿರುವವರೆಲ್ಲರೂ ಬುದ್ಧಿವಂತರಾಗಿದ್ದಾರೆ. ಎಲ್ಲರೂ ನೋಡುತ್ತಿದ್ದೇವೆ.

**ಶ್ರೀ ಕೆ.ಟಿ. ಶ್ರೀಕಂಠೇಗೌಡ:-** ಮಾನ್ಯ ಸಭಾಪತಿಯವರೇ, ಸವಾಲು-ಪಾಟಿ ಸವಾಲು ಚೆನ್ನಾಗಿದೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಮರಿತಿಬ್ಬೇಗೌಡರು ನನಗಿಂತ senior ಆಗಿದ್ದು, ನಾನು ಅವರು independent ಆಗಿ ಕುಳಿತಿದ್ದೆವು. ಅವರು leader ಆಗಿ, ನಾನು deputy leader ಆಗಿದ್ದೆನು. ಶ್ರೀ ಜಿ.ಕೆ. ಪಾಟೀಲ್ ಮತ್ತು ಶ್ರೀ ಅರುಣ್ ಮಾಚಯ್ಯ ರವರುಗಳು ನಮ್ಮ ಗುಂಪಿನಲ್ಲಿ members ಆಗಿದ್ದರು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:–** ಅವರದ್ದು ಒಂದು ಗುಂಪು ಇತ್ತೇ?

**ಡಾ: ವೈ.ಎ. ನಾರಾಯಣಸ್ವಾಮಿ:–** ಹೌದು, ಒಂದು ಗುಂಪು ಇತ್ತು. ಆದ್ದರಿಂದ ಅವರು ಎಲ್ಲರಿಗೂ ಮಾರ್ಗದರ್ಶನ ನೀಡಬೇಕು. ಆದರೆ ಯಾರಿಗೂ ದಿಕ್ಕು ತಪ್ಪಿಸಲು ಹೋಗಬಾರದು. ಮಾರ್ಗದರ್ಶನ ಕೊಡಬೇಕು.

**ಡಾ: ತೇಜಸ್ವಿನಿಗೌಡ:–** ನಾವೆಲ್ಲರೂ ಅಮಾಯಕರು, ಅವರು ನಾಯಕರು, ಇವರು ಉಪ ನಾಯಕರು, ಆದರೆ ನಾವು ಅಮಾಯಕರು.

**ಡಾ: ವೈ.ಎ. ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಎರಡನೆಯದಾಗಿ 7(5) ನಲ್ಲಿ " ಮೌಲ್ಯಮಾಪನದ ವಿವಿಧ ವಿಧಾನಗಳ ಮೂಲಕ ಮಾಡಿದ ಮೌಲ್ಯಮಾಪನಕ್ಕೆ ಅನುಸಾರವಾಗಿ ಶಿಕ್ಷಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದುದುರ ಆಧಾರದ ಮೇಲೆ ಪದವಿಗಳನ್ನು ಡಿಪ್ಲೋಮೊಗಳನ್ನು ಪ್ರಮಾಣ ಪತ್ರಗಳನ್ನು ಮತ್ತು ಯಶೋಪತ್ರ ಪ್ರಧಾನದಂಥ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು" ಎಂಬ ಅಂಶವನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು.

(ಮುಂದು)

**(128)/03.02.2021/5.40/ಹೆಚ್‌ವಿಃಎಂಡಿ**

**ಡಾ॥ ವೈ.ಎ.ನಾರಾಯಣಸ್ವಾಮಿ(ಮುಂದುವರಿದದ್ದು)**

ಸನ್ಮಾನ್ಯ ಸಭಾಪತಿಯವರೇ, ಪದವಿಗಳನ್ನು, ಡಿಪ್ಲೋಮೋಗಳನ್ನು ಪ್ರಮಾಣಪತ್ರಗಳನ್ನು ಮತ್ತು ಯಶೋಪತ್ರ ಪ್ರಧಾನದಂಥ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು; ಎನ್ನುವುದರ ನಂತರ ನಾವುಗಳು ನಿವೇದನೆ ಮಾಡಿರುವಂತಹ ಅಂಶಗಳನ್ನು ನೆನಪಿನಲ್ಲಿಟ್ಟುಕೊಂಡು, ಕೇಂದ್ರೀಕೃತ ಪರೀಕ್ಷೆಯ ಮೂಲಕ ಮಾಡಿದರೆ ಈ ವಿಧೇಯಕಕ್ಕೆ ಒಂದು ಗಟ್ಟಿತನ ಬರುತ್ತದೆ, ಸರ್ಕಾರಕ್ಕೂ ಗೌರವ ಬರುತ್ತದೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮತ್ತು ಮಾನ್ಯ ಸಚಿವರಿಗೂ ಶೋಭೆ ಬರುತ್ತದೆನ್ನುವ ಮಾತುಗಳನ್ನು ಹೇಳಿ ಸರ್ಕಾರ ತಂದಿರುವ ಈ ವಿಧೇಯಕಕ್ಕೆ ಮಾನ್ಯ ಸಚಿವರು ತಿದ್ದುಪಡಿಗಳೊಂದಿಗೆ ಅನುಮೋದನೆಯನ್ನು ಪಡೆದುಕೊಳ್ಳಬೇಕೆನ್ನುವ ಮನವಿ ಮಾಡುತ್ತಾ, ಈ ವಿಧೇಯಕಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತಿದ್ದೇನೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ(ನಾಮ ನಿರ್ದೇಶಿತರು):-** ಸನ್ಮಾನ್ಯ ಸಭಾಪತಿಯವರೇ, ಮಾತನಾಡಲು ನನಗೆ ಅವಕಾಶವನ್ನು ನೀಡಿದ ತಮಗೆ ವಂದಿಸುತ್ತಿದ್ದೇನೆ. ಕೆಲವೊಂದು ಅಂಶಗಳನ್ನು ಮಾನ್ಯ ಸಚಿವರ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಈಗಾಗಲೇ ನಮ್ಮಲ್ಲಿ 'ಕರ್ನಾಟಕ ಯುನಿರ್ವಸಿಟಿ ಆಕ್ಟ್' ಎಂದು ಇದೆ. ಅದನ್ನು ಕನ್ನಡದಲ್ಲಿ 'ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯಿದೆ' ಎಂದು ಹೇಳುತ್ತೇವೆ. ಈಗ ಕೊಟ್ಟಿರುವ ವಿಧೇಯಕದಲ್ಲಿ ಎಲ್ಲಾ ಕಡೆಗಳಲ್ಲಿಯೂ 'ವಿಶ್ವವಿದ್ಯಾಲಯ' ಎಂದು ಇದೆ. 'ಮೈಸೂರು ವಿಶ್ವವಿದ್ಯಾನಿಲಯ' 'ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ' ಎಂದು ಇದೆ. ಎಲ್ಲ ಕಡೆಗಳಲ್ಲಿ 'ವಿಶ್ವವಿದ್ಯಾನಿಲಯ' ಎಂದು ಇದೆ. ಈ ವಿಧೇಯಕದಲ್ಲಿ ಮಾತ್ರ 'ವಿಶ್ವವಿದ್ಯಾಲಯ' ಎಂದು ಇದೆ. ಏತಕ್ಕೋಸ್ಕರ ಈ ರೀತಿ ತಪ್ಪಾಗಿದೆಯೆನ್ನುವುದು ನನಗೆ ಗೊತ್ತಾಗಿಲ್ಲ. ಏಕೆಂದರೆ, ರಾಷ್ಟ್ರಕವಿ ಕು.ವೆಂ.ಪು.ರವರು ಮೈಸೂರು ವಿಶ್ವವಿದ್ಯಾನಿಲಯದ ಉಪ ಕುಲಪತಿಗಳಾಗಿದ್ದಾಗ ಅವರೇ 'ವಿಶ್ವವಿದ್ಯಾನಿಲಯ' ಎಂದು ಹೆಸರಿಟ್ಟಿದ್ದಾರೆ. ಆಗ ಕೇಂದ್ರ ಸರ್ಕಾರದಲ್ಲಿ ಡಾಃಮಾಲಿ ಎನ್ನುವವರು ಸಚಿವರಾಗಿದ್ದರು. ದಯಮಾಡಿ ಮಾನ್ಯ ಸಚಿವರು ಈ ಬಗ್ಗೆ ಗಮನಹರಿಸಬೇಕಾಗಿದೆ. ಇದರ ಬಗ್ಗೆ ಹಿರಿಯ ಕನ್ನಡ ಸಾಹಿತಿಗಳ ಜೊತೆಗೆ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಜೊತೆಗೆ ಚರ್ಚೆ ಮಾಡಿ ಸೂಕ್ತ ನಿಲುವನ್ನು ತೆಗೆದುಕೊಳ್ಳಬೇಕೆನ್ನುವುದು ನನ್ನ ಸಲಹೆಯಾಗಿದೆ.

**ಡಾಃತೇಜಸ್ವಿನಿಗೌಡಃ-** ಸನ್ಮಾನ್ಯ ಸಭಪತಿಯವರೇ, ಇದನ್ನು ನಾನು ಸಹ ಇದನ್ನು ಗಮನಿಸಿದ್ದೇನೆ. 'ನಿಲಯ' ಎಂದು ಹೇಳಿದರೆ, ಒಂದು ನಿರ್ದಿಷ್ಟವಾದ ಕಾಲೇಜು ಅದರ ವ್ಯಾಪ್ತಿಗೆ ಬರುತ್ತದೆ. 'ಆಲಯ' ಎನ್ನುವುದು ಯುನಿರ್ವಸಿಟಿಯ ವ್ಯಾಪ್ತಿಗೆ ಬರುತ್ತದೆ. 'ವಿಶ್ವವಿದ್ಯಾನಿಲಯ' ಎನ್ನುವುದು ಸರಿಯಾಗಿದೆ. 'ವಿಶ್ವವಿದ್ಯಾಲಯ' ಎಂದರೆ, ಅದು ಒಂದು ನಿರ್ದಿಷ್ಟವಾದ ಕಾಲೇಜನ್ನು ಸೂಚಿಸುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿಃ-** ಸನ್ಮಾನ್ಯ ಸಭಾಪತಿಯವರೇ, ಎಲ್ಲರಿಗೂ ಅನ್ವಯವಾಗುವಂತಹ ಕಾಯಿದೆ ಇದೆ. ಅದರಲ್ಲಿ 'ವಿಶ್ವವಿದ್ಯಾನಿಲಯ' ಎಂದು ಇದೆ. ದಯಮಾಡಿ ಇದನ್ನು ಮಾನ್ಯ ಸಚಿವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಪರಿಶೀಲಿಸಬೇಕಾಗಿದೆ. ರಾಷ್ಟ್ರಕವಿ ಕು.ವೆಂಪು.ರವರು ಇಟ್ಟಂಥ ಹೆಸರು ಇದು. ಆದ್ದರಿಂದ ಇಲ್ಲಿ ಗೊಂದಲವುಂಟಾಗುವುದು ಬೇಡವೆನ್ನುವುದು ನನ್ನ ಅನಿಸಿಕೆಯಾಗಿದೆ.

**ಶ್ರೀ ಆರ್.ಧರ್ಮಸೇನಃ–** ಸನ್ಮಾನ್ಯ ಸಭಾಪತಿಯವರೇ, ಹಾಸ್ಟೆಲ್‌ಗಳನ್ನು 'ವಿದ್ಯಾರ್ಥಿನಿಲಯ' ಎಂದು ಹೇಳುತ್ತೇವೆ. ಹಾಸ್ಟೆಲ್‌ಗಳಿಗೂ 'ನಿಲಯ' ಎಂದು ಬರುತ್ತದೆ.

**ಶ್ರೀ ಕೆ.ಎ.ತಿಪ್ಪೇಸ್ವಾಮಿಃ–** ಸನ್ಮಾನ್ಯ ಸಭಾಪತಿಯವರೇ, ಇನ್ನೂ ಎರಡನೆಯದಾಗಿ ಈಗ ಸರ್ಕಾರ ತಂದಿರುವಂತಹ ವಿಧೇಯಕಗಳು ಹೊಸ ಶಿಕ್ಷಣ ನೀತಿ ಪ್ರಕಾರ ಇದೆಯೇ ಅಥವಾ ಇನ್ನೂ ನೀತಿ ನಿರೂಪಣೆ ಆಗಿಲ್ಲವೆಂದು ಅವುಗಳನ್ನು ಅಳವಡಿಕೆ ಮಾಡಿಕೊಂಡಿಲ್ಲವೇ? ಒಂದು ವೇಳೆ ಅಳವಡಿಕೆ ಆಗದಿದ್ದರೆ, ಮುಂದಿನ ದಿನಗಳಲ್ಲಿ ಅಳವಡಿಸಿಕೊಳ್ಳುವುದಕ್ಕೆ ಈ ಖಾಸಗಿ ವಿಶ್ವವಿದ್ಯಾನಿಲಯಗಳು ಒಪ್ಪುತ್ತಾರೆಯೇ ಎನ್ನುವುದನ್ನು ಮಾನ್ಯ ಸಚಿವರು ಸ್ಪಷ್ಟಪಡಿಸಿಕೊಳ್ಳಬೇಕಾಗಿದೆ. ಹೊಸ ಶಿಕ್ಷಣ ನೀತಿಯನ್ನು ನಮ್ಮವರೇ ಆಗಿರುವಂತಹ ಡಾ॥ಕಸ್ತೂರಿರಂಗನ್‌ರವರು ಕೊಟ್ಟಿದ್ದಾರೆ. ಅದರಲ್ಲಿ ಸಂಶೋಧನೆ ಮತ್ತು ತರಬೇತಿಗೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ಇದರ ಮೇಲೆ ಕನಿಷ್ಠ ಶೇಕಡಾ 10ರಷ್ಟು ಬಂಡವಾಳವನ್ನು ಹೂಡಬೇಕೆಂದು ಹೇಳಿದ್ದಾರೆ. ಅದರಲ್ಲೂ ಕೂಡ ಉನ್ನತ ಶಿಕ್ಷಣದಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಬೇಕಾದರೆ, ಬಿ.ಎಡ್ ಮತ್ತು ಎಂ.ಎಡ್ ಕೋರ್ಸ್‌ಗಳಿಗೆ ಸಾಕಷ್ಟು ಮಹತ್ವ ಕೊಡಬೇಕು, ಕಾಲೇಜುಗಳಲ್ಲಿ ಒತ್ತಾಯಪೂರ್ವಕವಾಗಿಯಾದರೂ ಇಂತಹ ಕೋರ್ಸ್‌ಗಳನ್ನು ಸರ್ಕಾರ ನೀತಿ ನಿರೂಪಣೆ ಮಾಡಬೇಕೆಂದು ಹೇಳಿದೆ. ಸರ್ಕಾರ ಇದರ ಬಗ್ಗೆ ಗಮನಹರಿಸಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಮೂರನೆಯದಾಗಿ ಖಾಸಗಿ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾತಿ ಶೇಕಡಾ 40ರಷ್ಟು CET or NEET ಮೂಲಕ ಮಾಡಿಕೊಳ್ಳಲಾಗುವುದು ಇನ್ನುಳಿದ ಶೇಕಡ 60ರಷ್ಟು ಸೀಟುಗಳನ್ನು ಆ ವಿಶ್ವವಿದ್ಯಾನಿಲಯದವರೇ ಭರ್ತಿ ಮಾಡಿಕೊಳ್ಳುತ್ತಾರೆಂದು ವಿಧೇಯಕದಲ್ಲಿ ಉಲ್ಲೇಖ ಮಾಡಲಾಗಿದೆ. ಖಾಸಗಿ ವಿಶ್ವವಿದ್ಯಾನಿಲಯದವರು ತಮ್ಮದೇ ಆಗಿರುವ ಒಂದು consortium ಮಾಡಿಕೊಳ್ಳುತ್ತಾರೆ. ಅವರದೇ ಒಂದು ಪರೀಕ್ಷೆ ನಡೆಸುತ್ತಾರೆ. ಅವರದೇ ಒಂದು grading ಮಾಡುತ್ತಾರೆ. ಇದರ ಬದಲಿಗೆ ಅಲ್ಲಿ ಪ್ರವೇಶಾತಿ ಪಡೆಯುವ ಎಲ್ಲ ವಿದ್ಯಾರ್ಥಿಗಳು ಸಿ.ಇ.ಟಿ. ಅಥವಾ ನೀಟ್ ಮೂಲಕ ಬರುವಂತಹ ವ್ಯವಸ್ಥೆಯನ್ನು ಮಾಡಿಕೊಳ್ಳಬಹುದೇ ಎನ್ನುವುದನ್ನು ಮಾನ್ಯ ಸಚಿವರು ಪರಿಶೀಲಿಸಬೇಕಾಗಿದೆ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸನ್ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮಲ್ಲಿ ಸುಮಾರು 35 ಖಾಸಗಿ ವಿಶ್ವವಿದ್ಯಾನಿಯಗಳು ಮತ್ತು Deemed University ಗಳಿವೆ. ಇವುಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಅಥವಾ ಅವುಗಳ ಉಸ್ತುವಾರಿ ನೋಡಿಕೊಳ್ಳುವಂತಹ ವ್ಯವಸ್ಥೆಯನ್ನು ಸರ್ಕಾರದ ಮಟ್ಟದಲ್ಲಿ ಮಾಡಬೇಕಾಗಿದೆ. ಈ ಖಾಸಗಿ ವಿಶ್ವವಿದ್ಯಾನಿಲಯದಲ್ಲಿ ಯು.ಜಿ.ಸಿ.ಯ ಪಾತ್ರವೇನು? ಈ ವಿಶ್ವವಿದ್ಯಾನಿಲಯದ ಮೇಲೆ ಯು.ಜಿ.ಸಿ,.ಯ ಹಿಡಿತ ಎಷ್ಟಿದೆ ಮತ್ತು ಈ ಖಾಸಗಿ ವಿಶ್ವವಿದ್ಯಾನಿಲಯಗಳೆಲ್ಲವೂ ಯು.ಜಿ.ಸಿ.ಯ ಎಲ್ಲಾ ನಿಬಂಧನೆಗಳಿಗೆ ಒಳಪಡುತ್ತವೆಯೇ ಎನ್ನುವುದರ ಬಗ್ಗೆ ಮಾನ್ಯ ಸಚಿವರು ಸದನಕ್ಕೆ ಸ್ಪಷ್ಟಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತಿದ್ದೇನೆ.

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಉಪ ಮುಖ್ಯಮಂತ್ರಿಗಳು ತಂದಿರುವಂತಹ 'ನ್ಯೂ ಹೊರೈಜನ್ ವಿಶ್ವವಿದ್ಯಾನಿಲಯ ವಿಧೇಯಕ' ವನ್ನು ನಾನು ಸ್ವಾಗತಿಸುತ್ತಾ, ಒಂದೆರಡು ಸಲಹೆಗಳನ್ನು ನೀಡುವುದಕ್ಕೆ ಬಯಸುತ್ತೇನೆ. ಖಾಸಗಿ ವಿಶ್ವವಿದ್ಯಾನಿಲಯಗಳ ಸಂಖ್ಯೆ ಮುಂದಿನ ದಿನಗಳಲ್ಲಿ ಹೆಚ್ಚಾಗುವ ಸಾಧ್ಯತೆಗಳಿವೆ. ಪದವೀಧರರ ಮತ್ತು ಶಿಕ್ಷಣ ಕ್ಷೇತ್ರಗಳಿಂದ ಚುನಾಯಿತರಾದ ಎಲ್ಲ ಶಾಸಕರು ಪಕ್ಷಾತೀತವಾಗಿ ಪದವಿಗೆ CET ಮಾದರಿಯಲ್ಲಿ ಒಂದು ಪರೀಕ್ಷೆ ನಡೆಸಬೇಕೆಂದು case withdraw ಮಾಡಿ ಪರೀಕ್ಷೆಯನ್ನು ಮಾಡಿಸಿದ್ದೆವು. ಖಾಸಗಿ ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚಿನ ಅಂಕಗಳನ್ನು ಕೊಡುತ್ತಾರೆ. ನಮ್ಮ ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾನಿಲಯಗಳಲ್ಲಿ ಹೆಚ್ಚಿನ ಅಂಕಗಳನ್ನು ನೀಡುವುದಿಲ್ಲ ಮತ್ತು ಕಾಲಕಾಲಕ್ಕೆ ಯಾವುದೇ ಫಲಿತಾಂಶಗಳನ್ನು ನೀಡುವುದಿಲ್ಲ. ಖಾಸಗಿ ವಿಶ್ವವಿದ್ಯಾಲನಿಯಗಳಲ್ಲಿ on time ಗೆ, ದಾಖಲಾತಿ ಮತ್ತು ಪರೀಕ್ಷೆಗಳನ್ನು ನಡೆಸುವ್ವುದರ ಮೂಲಕ ಗುಣಮಟ್ಟಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡುತ್ತಾರೆ. ಏಕೆಂದರೆ, ಅವರು ಸ್ಪರ್ಧೆಯನ್ನು ಎದುರಿಸಬೇಕಾಗಿದೆ.

ಸನ್ಮಾನ್ಯ ಸಭಾಪತಿಯವರೇ, ಡಾ॥ಅಶ್ವತ್ ನಾರಾಯಣ್‌ರವರು ಉನ್ನತ ಶಿಕ್ಷಣ ಸಚಿವರಾದ ಮೇಲೆ ಪೇಮೆಂಟ್ ಕೋಟಾ ಇಲ್ಲದೇ ಮೆರಿಟ್ ಕೋಟಾದ ಮೇಲೆ ಒಂದಷ್ಟು ಜನರು ಉಪ ಕುಲಪತಿಗಳಾಗಿ ನೇಮಕಗೊಂಡಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತಿದ್ದೇನೆ. ಹಿಂದೆ ಇದೇ ಸದನದಲ್ಲಿ ರಾಜ್ಯಪಾಲರಾಗಿದ್ದವರನ್ನು ಯಾವ ರೀತಿಯಲ್ಲಿ ನೇಮಕ ಮಾಡಿದ್ದರು ಎನ್ನುವುದು ನಮ್ಮೆಲ್ಲರಿಗೂ ಗೊತ್ತಿದೆ ಮತ್ತು ಇಡೀ ರಾಜ್ಯಕ್ಕೇ ಗೊತ್ತಿದೆ. ಈ ಬಗ್ಗೆ ಪತ್ರಿಕೆಯ ಮುಖಪುಟದಲ್ಲಿ ಪ್ರತಿದಿನ ಸುದ್ದಿಗಳು ಪ್ರಕಟವಾಗುತ್ತಿದ್ದವು. ಖಾಸಗಿ ವಿಶ್ವವಿದ್ಯಾನಿಲಯಗಳಿಗೆ ನಾವು ವಿರೋಧ ಪಕ್ಷದಲ್ಲಿದ್ದಾಗ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿರೋಧಿಸುವುದು, ಆಡಳಿತ ಪಕ್ಷದಲ್ಲಿದ್ದಾಗ ಸ್ವಾಗತಿಸುವುದು ಈ ರೀತಿ ಆಗಬಾರದು. ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾನಿಲಯಗಳ ಗುಣಮಟ್ಟವನ್ನು ಹೆಚ್ಚಿಸುವುದಕ್ಕೆ ಯಾವ ಸರ್ಕಾರಗಳು ಪ್ರಯತ್ನಿಸಲಿಲ್ಲ. ಸರ್ಕಾರಿ ಸ್ವಾಮ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಶೇಕಡಾ 85ರಷ್ಟು ಅಧ್ಯಾಪಕ ಹುದ್ದೆಗಳು ಖಾಲಿ ಇವೆ. ಕಾಲಕಾಲಕ್ಕೆ ಪರೀಕ್ಷೆಗಳನ್ನು ನಡೆಸಿ ಫಲಿತಾಂಶವನ್ನು ಕೊಡುವುದಕ್ಕೆ ಅವರಿಂದಾಗುತ್ತಿಲ್ಲ. ಆದರೆ, ಖಾಸಗಿ ವಿಶ್ವವಿದ್ಯಾನಿಲಯಗಳು ಸರಿಯಾದ ಸಮಯಕ್ಕೆ ದಾಖಲಾತಿಗಳನ್ನು, ಪರೀಕ್ಷೆಗಳನ್ನು ಮಾಡುತ್ತವೆ ಮತ್ತು ಫಲಿತಾಂಶಗಳನ್ನು ಮತ್ತು ಪದವಿ ಪ್ರಮಾಣಪತ್ರಗಳನ್ನು ನೀಡುತ್ತವೆ. ಬಡವರು ಮತ್ತು ಮಧ್ಯಮ ವರ್ಗದ ಮಕ್ಕಳು ಓದುತ್ತಿರುವ ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾನಿಲಯಗಳಲ್ಲಿ ಕಾಲಕಾಲಕ್ಕೆ ದಾಖಲಾತಿ, ಪರೀಕ್ಷೆ ನಡೆಸುತ್ತಿಲ್ಲ, ಫಲಿತಾಂಶಗಳನ್ನು ನೀಡುತ್ತಿಲ್ಲ. ಒಂದೆರಡು ವರ್ಷಗಳಾದರೂ ಫಲಿತಾಂಶ ಕೊಡುವುದಿಲ್ಲ. ಪದವಿ ಪ್ರಮಾಣಪತ್ರ ಸಿಗುವುದಿಲ್ಲ. ಅವಶ್ಯಕತೆ ಇರುವ ಪ್ರಮಾಣದಲ್ಲಿ ಅಧ್ಯಾಪಕರುಗಳ ನೇಮಕಾತಿ ಮಾಡಿಕೊಳ್ಳುವುದಿಲ್ಲ ಮತ್ತು ಸರಿಯಾಗಿ affiliation ಮಾಡದೇ ಇರುವುದರಿಂದ ನಮ್ಮ ಸರ್ಕಾರಿ ವಿಶ್ವವಿದ್ಯಾನಿಲಯಗಳು ಹಿಂದುಳಿದಿವೆ. ಈ ಎಲ್ಲ ಕಾರಣಗಳಿಂದ ಇವತ್ತು ಸರ್ಕಾರಿ ಸ್ವಾಮ್ಯದ ಕಾಲೇಜುಗಳಿರಬಹುದು ಅಥವಾ ವಿಶ್ವವಿದ್ಯಾನಿಲಯಗಳಿರಬಹುದು ಅವನತಿಯ ಹಾದಿಯತ್ತ ಸಾಗುತ್ತಿವೆ. ಖಾಸಗಿ ವಿಶ್ವವಿದ್ಯಾನಿಲಯಗಳ ಜೊತೆಗೆ ನಮ್ಮ ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾನಿಯಗಳು ಸ್ಪರ್ಧಿಸಬೇಕಾದರೆ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ.

(ಮುಂದುವರಿದಿದೆ)

(129) 3.2.2021 5.50 ಪಿಕೆ:ವಿಕೆ

**ಶ್ರೀ ಪುಟ್ಟಣ್ಣ (ಮುಂದುವರೆದಿದೆ)**

ಈಗ ತಾವೇನೋ ಬಂದು ಮೆರಿಟ್ ಕೋಟಾದಲ್ಲಿ 10 ವೈಸ್-ಚಾನ್ಸಲರ್‌ಗಳ ಹುದ್ದೆಗಳನ್ನು ತುಂಬಿದಿರಿ. ಇನ್ನೊಬ್ಬರು ಬಂದಾಗ ಮೆರಿಟ್ ಕೋಟಾ ಹೋಗಿ ಪೇಮೆಂಟ್ ಕೋಟಾ ಬಂದುಬಿಡುತ್ತದೆ. ಇದನ್ನು ತಪ್ಪಿಸುವುದಕ್ಕೆ ಏನಾದರೂ ಮಾಡಿ. ಇದನ್ನು ತಪ್ಪಿಸಿದಾಗ ಮಾತ್ರ ಏನಾದರೂ ಕೂಡ ಒಂದು ಸಾಧನೆ ಆಗುತ್ತದೆ, ವಿದ್ಯಾರ್ಥಿಗಳಿಗೆ ನ್ಯಾಯ ದೊರಕಿಸಿ ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದೇ ಇದ್ದರೇ, ಖಾಸಗಿ ವಿಶ್ವವಿದ್ಯಾಲಯ ವಿಧೇಯಕ ಬರುತ್ತದೆ, ಅದರ ಬಗ್ಗೆ ಚರ್ಚೆ ಆಗುತ್ತದೆ, ಅದಕ್ಕೆ ಅಪ್ರೂವಲ್ ಸಿಗುತ್ತದೆ ಮತ್ತು ಅದು ಅಷ್ಟಕ್ಕೆ ನಿಂತು ಹೋಗುತ್ತದೆ. ಮೊದಲು ಬೆಂಗಳೂರು ವಿಶ್ವವಿದ್ಯಾಲಯ ಒಂದೇ ಇತ್ತು. ಆದರೆ, 600-800 ಕಾಲೇಜುಗಳಿವೆ ಎಂದು ನಾವು ಗಲಾಟೆ ಮಾಡುತ್ತಿದ್ದೆವು. ಈಗ 3

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯಗಳಾಯಿತು. ಈ 3 ವಿಶ್ವವಿದ್ಯಾಲಯಗಳೂ ಕೂಡ ಆರ್ಥಿಕ ಸಂಕಷ್ಟದಲ್ಲಿವೆ, ನಡೆಸುವುದಕ್ಕೆ ಆಗುತ್ತಿಲ್ಲ. ಹುದ್ದೆಗಳನ್ನು ತುಂಬುವುದಕ್ಕೆ ಆಗುತ್ತಿಲ್ಲ, ಈಗಿರುವಂತಹ ಕಾಲೇಜುಗಳಿಗೆ ಸರಿಯಾಗಿ ಫಲಿತಾಂಶ ಕೊಡುವುದಕ್ಕೆ ಆಗುತ್ತಿಲ್ಲ. ಈಗಿರುವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಡ್ಮೀಷನ್ ಕೊಟ್ಟು ರಿಸಲ್ಟ್ ಕೊಡುವುದಕ್ಕೆ ಆಗುತ್ತಿಲ್ಲ. ವಿದ್ಯಾರ್ಥಿಗಳು ಈ ವಿಶ್ವವಿದ್ಯಾಲಯಗಳ ಮೇಲೆ ನಂಬಿಕೆ ಕಳೆದುಕೊಳ್ಳುತ್ತಿದ್ದಾರೆ. ಹಿಂದೆ ನಾವು ಬೆಂಗಳೂರು ವಿಶ್ವವಿದ್ಯಾಲಯ ಅಥವಾ ಮೈಸೂರು ವಿಶ್ವವಿದ್ಯಾಲಯ ಎಂದರೆ ಎದೆ ಉಬ್ಬಿಸಿಕೊಂಡು ಓಡಾಡುವಂತಹ ಪರಿಸ್ಥಿತಿ ಇತ್ತು. ಇವತ್ತು ಯಾವ ಪರಿಸ್ಥಿತಿ ಇದೆ? ಮೌಲ್ಯ ಮಾಪನ ಮಾಡುವ Custodians ಯಾರಿದ್ದಾರೆ ಅವರು, ವಿಶ್ವವಿದ್ಯಾಲಯದ ವಿಸಿ ಪೋಸ್ಟ್‌ಗೆ ಲಾಬಿ ಮಾಡುವ ಹಾಗೆ ಲಾಬಿ ಮಾಡುತ್ತಾರೆ. ಅಂತಹ ಲಾಬಿ ಶುರುವಾಗಿದೆ ಮತ್ತು Examination ನ Custodian ಪೋಸ್ಟ್‌ಗೆ ಲಾಬಿ ಶುರುವಾಗಿದೆ. ಕೊನೆಗೆ ಅದು ಇನ್ನೂ ಎಲ್ಲಿಯವರೆಗೆ ಹೋಗುತ್ತಿದೆ ಎಂದರೆ Squad Duty ಗೆ ಏನು ಹಾಕುತ್ತಾರೋ ಅದಕ್ಕೂ ಪೈಪೋಟಿ ಇದೆ. ಇಂಥದ್ದನ್ನು ಹೇಗೆ ಸರಿಪಡಿಸುತ್ತೀರಿ? ನಾವೆಲ್ಲರೂ ಖಾಸಗಿ ವಿಶ್ವವಿದ್ಯಾಲಯದ ಬಗ್ಗೆ ಮಾತನಾಡುತ್ತಿದ್ದೇವೆ. ನಾನು ಹಿಂದಿನ 18 ವರ್ಷವಾದರೂ ಮಾತನಾಡುತ್ತಲೇ ಇದ್ದೇನೆ, ಆದರೆ ಏನೂ ಆಗಲಿಲ್ಲ. ಅವ್ಯವಸ್ಥೆಯನ್ನು ಮೊದಲು ಸ್ಟ್ರೀಮ್‌ಲೈನ್ ಮಾಡಬೇಕು. ವಿದ್ಯಾರ್ಥಿಗಳಿಗೆ ನಂಬಿಕೆ ಬರುವ ಹಾಗೆ ಮಾಡದೇ ಇದ್ದರೆ ಯಾವ ವಿಶ್ವವಿದ್ಯಾಲಯಗಳೂ ಉದ್ಧಾರ ಆಗುವುದಕ್ಕೆ ಸಾಧ್ಯವಿಲ್ಲ. ಹಿಂದೆ ಆದಂತಹ ನೇಮಕಾತಿಗಳು ಯಾವರೀತಿ ಆಯಿತು? ನಾವೆಲ್ಲರೂ, ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಓದುವ ಮಕ್ಕಳಿಗೆ ಹೆಚ್ಚಿನ ಅಂಕಗಳು ದೊರಕುತ್ತವೆ; ಆದರೆ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ಕಡಿಮೆ ಅಂಕಗಳು ಸಿಗುತ್ತವೆ ಎಂದು ಯೋಚನೆ ಮಾಡುತ್ತೇವೆ. ಇನ್ನು ಮುಂದೆ ರಾಜ್ಯ ಸರ್ಕಾರದ ಯಾವುದೇ ಹುದ್ದೆಗಳನ್ನು ತುಂಬಿದರೂ ಅದಕ್ಕೆ ಅಂಕಗಳನ್ನು ಆಧಾರವಾಗಿ ಇಟ್ಟುಕೊಳ್ಳಬೇಡಿ. ಸಿ.ಇ.ಟಿ. ಮಾದರಿಯಲ್ಲಿ ಪರೀಕ್ಷೆ ಮಾಡಿ. ಯಾವುದೇ ಸಂದರ್ಶನಕ್ಕೆ ಅಂಕಗಳನ್ನು ನಿಗದಿ ಮಾಡಬೇಡಿ. ಸಿ.ಇ.ಟಿ ಮುಖಾಂತರ ಆಯ್ಕೆ ಮಾಡಿದರೆ ಈ ಮಕ್ಕಳಿಗೂ ಕೂಡ ನ್ಯಾಯ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ನಮ್ಮೆಲ್ಲರ ಅಭಿಪ್ರಾಯ ಇದೆ ಆಗಿದೆ ಎಂದು ನಾನು ಭಾವಿಸುತ್ತೇನೆ. ಮಾನ್ಯ ಸಚಿವರು ಈ ಅಂಶದ ಕಡೆ ಗಮನಹರಿಸಬೇಕು. ಇನ್ನು ಮುಂದೆ ಸರ್ಕಾರದ ಯಾವುದೇ ಹುದ್ದೆಗಳನ್ನು ತುಂಬಿದರೂ ಸ್ಪರ್ಧಾತ್ಮಕ ಪರೀಕ್ಷೆ ಮಾಡಿ ಮೆರಿಟ್ ಲಿಸ್ಟ್ ಪ್ರಕಾರ ಮಾಡಬೇಕು. 24 ಗಂಟೆಗಳಲ್ಲಿ ಮೌಲ್ಯಮಾಪನ ಮುಗಿದು ಹೋಗಬೇಕು. ಇವತ್ತು ಆನ್‌ಲೈನ್ ಎಗ್ಸಾಮಿನೇಷನ್ ಮಾಡಬಹುದು. ಪ್ರಶ್ನೆ ಪತ್ರಿಕೆಯನ್ನು ಪ್ರಿಂಟ್ ಮಾಡಿ ಅದನ್ನು ಹಂಚಿಕೊಂಡು ಕುಳಿತುಕೊಳ್ಳಬೇಕಾಗಿಲ್ಲ.

ಅವರೇ ಮೌಲ್ಯ ಮಾಪನ ಮಾಡಿಕೊಳ್ಳಬಹುದು, ಇದು ನಿಮ್ಮೆಲ್ಲರಿಗೂ ಗೊತ್ತಿರುವ ವಿಚಾರವಾಗಿದೆ. ಇಂತಹ ಸಿಸ್ಟಮ್ ಒಂದನ್ನು ತಂದರೆ ನಿಜವಾಗಲೂ ಸ್ಪರ್ಧೆ ಎನ್ನುವುದು ಮುಂದುವರೆಯುತ್ತದೆ; ಎಲ್ಲೋ ಒಂದು ಕಡೆ ಗುಣಮಟ್ಟ ಎನ್ನುವುದು ಉಳಿಯುತ್ತದೆ. ಸರ್ಕಾರಿ ಕಾಲೇಜುಗಳಲ್ಲಿ ಓದುವ ಮಕ್ಕಳಿಗೆ, ಸರ್ಕಾರಿ ಸ್ವಾಮ್ಯದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ ನ್ಯಾಯ ಸಿಗುವುದಕ್ಕೆ ಸಹಾಯ ಆಗುತ್ತದೆ. ಈಗೇನು ನೀವು ವಿಶ್ವವಿದ್ಯಾಲಯಗಳನ್ನು ಎಲ್ಲಾ ಕಡೆ ಸ್ಥಾಪನೆ ಮಾಡುತ್ತಿದ್ದೀರೋ ಅವುಗಳನ್ನು ದಯವಿಟ್ಟು ನಿಲ್ಲಿಸಿ. 2–3–10–20 ವಿಶ್ವವಿದ್ಯಾಲಯಗಳನ್ನೇನು ಸ್ಥಾಪನೆ ಮಾಡುತ್ತಿದ್ದೀರೋ ಅದನ್ನು ಬಿಟ್ಟು 2–3 ವಿಶ್ವವಿದ್ಯಾಲಯಗಳನ್ನು ಮಾತ್ರ ಮಾಡಿ. ಹಾಗೆ ಮಾಡಿದರೂ ಸರ್ಕಾರ ಅವುಗಳಿಗೆ ಅನುದಾನ ಕೊಡುವುದಿಲ್ಲ. ಎಲ್ಲಾ ಕಡೆ ಸ್ವಾಯತ್ತ ವಿಶ್ವವಿದ್ಯಾಲಯಗಳನ್ನು ಮತ್ತು ಖಾಸಗಿ ವಿಶ್ವವಿದ್ಯಾಲಯಗಳನ್ನು ನೀವೇ ಮಾಡುತ್ತಿದ್ದೀರಿ. ಹೀಗಾದರೆ ಸರ್ಕಾರಿ ಸ್ವಾಮ್ಯದಲ್ಲಿ ಉಳಿಯುವ ಕಾಲೇಜುಗಳೆಷ್ಟು? ನಿಮಗೆ ಫೀ ಎಲ್ಲಿಂದ ಬರುತ್ತದೆ? ಆ ಸಂಸ್ಥೆಗಳು ಹೇಗೆ ರನ್ ಆಗುತ್ತವೆ?

ಮಾನ್ಯ ಸಭಾಪತಿಯವರೇ, ಖಾಸಗಿ ವಿಶ್ವವಿದ್ಯಾಲಯಗಳಿಗೆ 25–35 ಎಕರೆ ಜಾಗ ಇರಬೇಕು ಎಂದು ನಿಗದಿ ಮಾಡುತ್ತಾರೆ. ಅದೇ ಸರ್ಕಾರಿ ವಿಶ್ವವಿದ್ಯಾಲಯಗಳು 100–500–1000 ಎಕರೆ ಜಾಗಗಳಲ್ಲಿ ಇರುತ್ತವೆ. 500 ಎಕರೆಯನ್ನಿಟ್ಟುಕೊಂಡು ನೀವು ಏನು ಮಾಡುತ್ತಿದ್ದೀರಿ? ಎಕನಾಮಿಕ್ಸ್ ವಿಷಯಕ್ಕೆಂದು ನಾಲ್ಕು ರೂಮ್‌ಗಳನ್ನು ಕಟ್ಟುತ್ತೀರಿ; ಅಲ್ಲಿ 40 ಜನ ವಿದ್ಯಾರ್ಥಿಗಳು ಇರುತ್ತಾರೆ. ಮೊದಲನೆ ವರ್ಷದಲ್ಲಿ 40 ಜನ ವಿದ್ಯಾರ್ಥಿಗಳು, 2ನೇ ವರ್ಷದಲ್ಲಿ 40 ಜನ ವಿದ್ಯಾರ್ಥಿಗಳು ಇರುತ್ತಾರೆ. 500 ಎಕರೆ ಜಮೀನಿನಲ್ಲಿ ಓದುತ್ತಿರುವ ಮಕ್ಕಳ ಸಂಖ್ಯೆ 1 ಸಾವಿರ ದಾಟುವುದಿಲ್ಲ. 2–3 ಎಕರೆಗಳಲ್ಲಿ ಮಾಡಿರುವ ಖಾಸಗಿ ವಿಶ್ವವಿದ್ಯಾಲಯಗಳಲ್ಲಿ 10 ಸಾವಿರ ವಿದ್ಯಾರ್ಥಿಗಳಿದ್ದರೆ, ಸರ್ಕಾರಿ ಸ್ವಾಮ್ಯದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿ ಇರುವಂತಹ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು? ಅಲ್ಲಿ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚು ಮಾಡುವ ವ್ಯವಸ್ಥೆ ಮಾಡಿ. M.Sc Computer Science ಇನ್ನೊಂದು, ಮತ್ತೊಂದು ಕೋರ್ಸ್‌ಗಳಿವೆ ಅವುಗಳನ್ನು ಪ್ರಾರಂಭ ಮಾಡಿ. ಒಂದೊಂದು ಕೋರ್ಸ್‌ಗಳಿಗೂ 500 ಸೀಟ್‌ಗಳನ್ನು ಮಾಡಿ. ಸ್ಥಳ ಇದೆ, ಜಮೀನು ಇದೆ, ವಿಶ್ವವಿದ್ಯಾಲಯ ಕೂಡ ಇರುವಾಗ ಎಲ್ಲಾ ಬಡ ಮಕ್ಕಳಿಗೆ ಅಲ್ಲಿ ಓದಲು ಅಡ್ಮಿಷನ್ ಕೊಡಿ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಅರ್ಥಶಾಸ್ತ್ರದ ವಿಷಯಕ್ಕೆ 50 ಸೀಟುಗಳಿವೆ. ಆ ವಿಶ್ವವಿದ್ಯಾಲಯದ ಒಟ್ಟು ಜಾಗ 1200 ಎಕರೆ ಇದೆ.

**ಶ್ರೀ ಯು.ಬಿ.ವೆಂಕಟೇಶ್**:– ಅವರಿಗೆ ಹೇಳಿ ಕೊಡುವುದಕ್ಕೂ ಸಿಬ್ಬಂದಿಗಳಿಲ್ಲ.

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ಶ್ರೀ ಪುಟ್ಟಣ್ಣ:-** ನಾನೂ ಕೂಡ ಅದನ್ನೇ ಹೇಳುತ್ತಿದ್ದೇನೆ. ನಾವು ಆ ಕಡೆ ಇದ್ದಾಗಲೂ ಅದನ್ನೇ ಹೇಳುತ್ತಿದ್ದೆವು, ಈ ಕಡೆ ಬಂದರೂ ಅದನ್ನೇ ಮಾತನಾಡುತ್ತಿದ್ದೇವೆ.

**ಶ್ರೀ ಯು.ಬಿ.ವೆಂಕಟೇಶ್:-** ನಿಮ್ಮ ಪರಿಸ್ಥಿತಿ ಎಲ್ಲಿದ್ದರೂ ಒಂದೇ ಆಗಿದೆ.

**ಶ್ರೀ ಪುಟ್ಟಣ್ಣ:-** ಹೌದು. ಖಾಸಗಿ ವಿಶ್ವವಿದ್ಯಾಲಯಗಳ ಜೊತೆ ಪೈಪೋಟಿ ಏರ್ಪಡಬೇಕು ಎಂದರೆ, ಸರಿಯಾದ ರೀತಿಯಲ್ಲಿ ನೇಮಕಾತಿ ಆಗಬೇಕು ಮತ್ತು ವಿಶ್ವವಿದ್ಯಾಲಯಗಳಲ್ಲೇ ವಿದ್ಯಾರ್ಥಿ ಸಂಖ್ಯೆಯನ್ನು ಜಾಸ್ತಿ ಮಾಡಬೇಕು. ಆಗ ಮಾತ್ರ ಸ್ಪರ್ಧೆ ಏರ್ಪಟ್ಟು ಎಲ್ಲೋ ಒಂದು ಕಡೆ ನ್ಯಾಯ ದೊರಕುವುದಕ್ಕೆ ಸಾಧ್ಯವಾಗುತ್ತದೆ. ಖಾಸಗಿ ವಿಶ್ವವಿದ್ಯಾಲಯಗಳಿಗಿಂತ ನಮ್ಮ ಸರ್ಕಾರಿ ವಿಶ್ವವಿದ್ಯಾಲಯಗಳು ಏಕೆ ಹಿಂದುಳಿದಿವೆ ಎಂದರೆ, ನಮ್ಮಲ್ಲಿ ಮುಕ್ತ ವಿಶ್ವವಿದ್ಯಾಲಯ ಏನಿತ್ತು, ಅಲ್ಲಿಗೆ ಇಲ್ಲಿಂದ ವಿ.ಸಿ.ಯೊಬ್ಬರು ನೇಮಕವಾದರು. ಯು.ಜಿ.ಸಿ.ನಿಂದ ಏನು continuous recognition ಮಾಡಬೇಕೋ ಅದಕ್ಕೆ ವಿಶ್ವವಿದ್ಯಾಲಯದವರು ಅಪ್ಲಿಕೇಷನ್ನೇ ಹಾಕಲಿಲ್ಲ. ಅದು ಎಂತಹ ಪರಿಸ್ಥಿತಿ ಎಂದರೆ ಲಕ್ಷಾಂತರ ವಿದ್ಯಾರ್ಥಿಗಳು ಹೋರಾಟ ಮಾಡಿದರು, ಕೋರ್ಟ್-ಕಚೇರಿ ತಿರುಗಿದರು. ಆದರೂ ಆಗ ಎಲ್ಲಾ ವಿದ್ಯಾರ್ಥಿಗಳಿಗೆ ಅನ್ಯಾಯವಾಯಿತು. ಇವೆಲ್ಲವೂ ಸ್ಟ್ರೀಮ್‌ಲೈನ್ ಆಗಬೇಕು. ಸರ್ಕಾರಿ ವಿಶ್ವವಿದ್ಯಾಲಯಗಳ ವ್ಯವಸ್ಥೆಯನ್ನೂ ಸರಿ ಮಾಡಬೇಕು.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ನಾನೂ ಕೂಡ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಂದವನಾಗಿದ್ದೇನೆ. ತಮ್ಮ ಪ್ರಕಾರ ಸರ್ಕಾರಿ ಸ್ವಾಮ್ಯದಲ್ಲಿದ್ದ ವಿಶ್ವವಿದ್ಯಾಲಯಗಳಲ್ಲಿ ಏನೂ ಆಗಲಿಲ್ಲ ಎಂದು ಹೇಳುತ್ತಿದ್ದೀರಾ? ಖಾಸಗೀಕರಣ ಆದನಂತರ ಸರ್ಕಾರಿ ಸ್ವಾಮ್ಯದ ಎಲ್ಲಾ ಸಂಸ್ಥೆಗಳು ಸಹ ಕೆಳಗಡೆ ಬರುತ್ತಿವೆ. ಅದಕ್ಕೆ ಕಾರಣ ಹುಡುಕಬೇಕಾಗುತ್ತದೆ. ಯಾವುದೇ ಸರ್ಕಾರ ಇರಬಹುದು, ಎಲ್ಲವನ್ನೂ ನಾವು ಸರ್ಕಾರದ ಮೇಲೆ ಆಪಾದನೆ ಮಾಡುವುದಕ್ಕಾಗುವುದಿಲ್ಲ. ನಾವೂ ಬೆಂಗಳೂರು ವಿಶ್ವವಿದ್ಯಾಲಯದಿಂದ ಬಂದವರೇ ಆಗಿದ್ದೇವೆ. ಆಗ ಅದು ಸರಿಯಾಗಿರಲಿಲ್ಲವೇ? ಎಲ್ಲವೂ ಸರಿಯಿತ್ತು. ಯಾವಾಗ ಖಾಸಗೀಕರಣ ಬಂತೊ ಆಗ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಕೆಳಗಡೆ ಬಂತು.

**ಶ್ರೀ ಪುಟ್ಟಣ್ಣ:-** ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಈಗ ಓದುವ ಮಕ್ಕಳ ಸಂಖ್ಯೆ ಜಾಸ್ತಿ ಆಗುತ್ತಿದೆ. ನಾವು ಓದುವ ಸಂದರ್ಭದಲ್ಲಿ ಹಿಸ್ಟರಿ ಡಿಪಾರ್ಟ್‌ಮೆಂಟ್‌ನಲ್ಲಿ 30 ಎಂ.ಎ. ಸೀಟುಗಳಿತ್ತು,

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ನಾನು ಬಿಡುವಾಗ 50 ಸೀಟುಗಳಾಯಿತು; ಆದರೆ ಇವತ್ತೂ ಕೂಡ 50 ಸೀಟುಗಳೇ ಇವೆ. ಇದು ಸರಿಯೇ? ಈ ಸೀಟುಗಳನ್ನು ಹೆಚ್ಚು ಮಾಡಬೇಕು. ಅಲ್ಲಿ ಓದುವಂಥವರು ಬಡವರು ಮತ್ತು ಮಧ್ಯಮ ವರ್ಗದವರಾಗಿರುತ್ತಾರೆ. ಅಲ್ಲಿ ಸೀಟುಗಳನ್ನು ಜಾಸ್ತಿ ಮಾಡಿದರೆ ಎಲ್ಲಾ ವಿದ್ಯಾರ್ಥಿಗಳಿಗೂ ಓದಲು ಅವಕಾಶ ಸಿಗುತ್ತದೆ ಎಂದು ಹೇಳಬಯಸುತ್ತಿದ್ದೇನೆ.

**ಶ್ರೀ ಬಿ.ಕೆ.ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, National Knowledge Commission ನಲ್ಲಿ ಸ್ಯಾಮ್ ಪಿಟ್ರೋಡಾರವರು ಇದ್ದಾಗ ಅವರು, ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮೆರಿಟ್ ಸೀಟ್‌ಗಳು ಇರುವುದರಿಂದ ಅವರಿಗೂ ಸೀಟುಗಳನ್ನು ಅಕಾಮಡೇಟ್ ಮಾಡಬೇಕು ಮತ್ತು ಮೀಸಲಾತಿಯಿಂದ ಬಂದಿರುವವರಿಗೂ ಅವಕಾಶ ಮಾಡಿಕೊಡಬೇಕು. ಅದಕ್ಕೋಸ್ಕರ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ಸಂಖ್ಯೆ ಜಾಸ್ತಿಯಾಗಬೇಕು ಎಂದು ಹೇಳಿದರೇ ಹೊರತು ಅದಕ್ಕೆ ಬೇರೆ ಯಾವುದೇ ಕಾರಣ ಇರಲಿಲ್ಲ.

(ಮುಂದು . . .)

(130) 3-2-2021/6.00/ಡಿಎಸ್-ಎಕೆ

**ಶ್ರೀ ಪುಟ್ಟಣ್ಣ(ಶಿಕ್ಷಕರ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಕಾಲೇಜುಗಳನ್ನು ಹೆಚ್ಚಿಗೆ ಮಾಡುವುದರ ಜೊತೆಗೆ ನಾನು ಹೇಳುವುದೇನೆಂದರೆ, ನಾವು 500-600 ಎಕರೆ ಸುಮ್ಮನೆ ಜಮೀನು ಇಟ್ಟುಕೊಳ್ಳುವುದರ ಬದಲು ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಅವಕಾಶವನ್ನು ಮಾಡಿಕೊಡಿ. ಅಲ್ಲಿ ಒಳ್ಳೆಯ ಗುಣಮಟ್ಟ ಆಗುವ ರೀತಿಯಲ್ಲಿ ಸರ್ಕಾರಗಳು ನೀತಿ ನಿಯಮಗಳನ್ನು ರೂಪಿಸಿ ಅದನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲಿ. ಒಳ್ಳೆಯ ಅಧ್ಯಾಪಕರುಗಳನ್ನು ನೇಮಕ ಮಾಡಿ. 20 ವರ್ಷಗಳ ಹಿಂದೆ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನೇಮಕಾತಿ ಆಗಿರುವಂಥದ್ದು. ಈಗ ಶೇಕಡ 85 ರಷ್ಟು ಹುದ್ದೆಗಳು ಖಾಲಿ ಇವೆ. ಹೀಗಾದರೆ ಗುಣಮಟ್ಟ ಹೇಗೆ ಹೆಚ್ಚಾಗುತ್ತದೆ? ನನ್ನ ಮನವಿ ಏನೆಂದರೆ, ದಯಮಾಡಿ ಈ ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕವನ್ನು ಏನು ತಂದಿದ್ದಾರೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದರ ಜೊತೆಗೆ ಏನು ಸರ್ಕಾರಿ ಸ್ವಾಮ್ಯದ ವಿಶ್ವವಿದ್ಯಾಲಯಗಳಿವೆ ಅವುಗಳನ್ನು ಉನ್ನತ ದರ್ಜೆಗೇರಿಸುವಂತಹ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೆಲಸ ಮಾಡಬೇಕು. ಅಲ್ಲಿ ಓದುತ್ತಿರುವಂತಹ ವಿದ್ಯಾರ್ಥಿಗಳಿಗೂ ಕೂಡ ನ್ಯಾಯವನ್ನು ಕೊಡಬೇಕೆಂದು ನಾನು ಮಾನ್ಯ ಸಚಿವರಿಗೆ ಮನವಿ ಮಾಡುತ್ತೇನೆ, ಧನ್ಯವಾದಗಳು.

**ಸಭಾಪತಿಯವರು:–** ಈ ವಿಧೇಯಕದ ಬಗ್ಗೆ ಯಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದು ಮತ್ತೆ ಪುನಾರವರ್ತನೆ ಆಗುವುದು ಬೇಡ. ಯಾವುದಾದರೂ ಹೊಸ ವಿಚಾರಗಳಿದ್ದರೆ ಮಾತನಾಡಿ. ಏಕೆಂದರೆ, ಇನ್ನು 10 ಜನರು ಮಾತನಾಡಬೇಕಾಗಿದೆ.

**ಶ್ರೀ ಎನ್.ರವಿಕುಮಾರ್:–** ಮಾನ್ಯ ಸಭಾಪತಿಯವರೇ, ಐದು ನಿಮಿಷ ಅವಕಾಶ ಕೊಡಿ. ನಾನು ಬೇರೆ ವಿಚಾರಗಳನ್ನು ಹೇಳಬೇಕಾಗಿದೆ.

**ಶ್ರೀ ಎಸ್.ಆರ್.ಪಾಟೀಲ್(ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಐದು ಖಾಸಗಿ ವಿಶ್ವವಿದ್ಯಾಲಯದ ಬಗ್ಗೆ ಕುರಿತು ವಿಧೇಯಕಗಳನ್ನು ತಂದಿದ್ದಾರೆ. ಮೊದಲನೆಯದು ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕ, 2021 ಅನ್ನು ಮಂಡನೆ ಮಾಡಿದ್ದಾರೆ. ಇನ್ನು 4 ವಿಧೇಯಕಗಳಿವೆ. 5 ಖಾಸಗಿ ವಿಶ್ವವಿದ್ಯಾಲಯಗಳನ್ನು ಆರಂಭಿಸುವ ಕುರಿತು ಪ್ರಸ್ತಾವಗಳನ್ನು ಇಲ್ಲಿ ತಂದಿದ್ದಾರೆ. ಮಾನ್ಯ ಉನ್ನತ ಶಿಕ್ಷಣ ಸಚಿವರು ಹೇಳಿದ ಹಾಗೆ, ಶ್ರೀ ಸ್ಯಾಮ್ ಪಿಟ್ರೋಡಾ ರವರು 150 ವಿಶ್ವವಿದ್ಯಾಲಯಗಳ ಅವಶ್ಯಕತೆ ಇದೆ ಎಂದು ಹೇಳಿದ್ದಾರೆ. 150 ವಿಶ್ವವಿದ್ಯಾಲಯಗಳನ್ನು ಸರ್ಕಾರ ಪ್ರಾರಂಭಿಸುವುದಕ್ಕೆ ಸಾಧ್ಯವಿಲ್ಲದಿರುವಂತಹ ಸಂದರ್ಭದಲ್ಲಿ ಖಾಸಗಿಯವರಿಗೆ ಅವಕಾಶ ಕೊಟ್ಟಿದ್ದೇವೆಂದು ಹೇಳಿದ್ದಾರೆ. Mr. Sam Pitroda is the greatest personality; none can dispute it. ಅವರು ಹೇಳಿದ್ದು ಇಷ್ಟು ವಿಶ್ವವಿದ್ಯಾಲಯಗಳ ಕೊರತೆ ಇದೆ ಎಂದು ಹೇಳಿದ್ದಾರೆ. ಅದನ್ನು ಇವರು ಪ್ರಾರಂಭ ಮಾಡಿದ್ದಾರೆ. Tom, Dick and Harry ಅವರಿಗೆ ಕೊಟ್ಟು ಖಾಸಗಿ ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡಿ ಎಂದು ಹೇಳಿಲ್ಲ. ಶ್ರೀ ಸ್ಯಾಮ್ ಪಿಟ್ರೋಡಾ ರವರು ಕಮ್ಯುನಿಕೇಶನ್‌ನಲ್ಲಿ ಭಾರತ ದೇಶ ವಿಶ್ವದ ನಕ್ಷೆಯಲ್ಲಿ ಗುರುತಿಸಲ್ಪಟ್ಟಿದೆ ಎಂದರೆ ಅದು ಶ್ರೀ ಸ್ಯಾಮ್ ಪಿಟ್ರೋಡಾ ರವರು ಕಾರಣರಾಗಿದ್ದಾರೆ. 21ನೇ ಶತಮಾನದಲ್ಲಿ ಭಾರತ ಆಧುನಿಕವಾಗಿ ಯಾವ ರೀತಿ ಇರಬೇಕೆನ್ನುವ ಪರಿಕಲ್ಪನೆ ಸಲುವಾಗಿ ನಮ್ಮ ನೆಚ್ಚಿನ ಹಿಂದಿನ ಯುವ ಪ್ರಧಾನಿ ಶ್ರೀ ರಾಜೀವ್ ಗಾಂಧಿಯವರು ಅವರನ್ನು ಇಲ್ಲಿಗೆ ಕರೆತಂದು ಅವರ ಮಾರ್ಗದರ್ಶನದಲ್ಲಿ ಇವತ್ತು communication strengthen ಮಾಡಿರುವುದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅವರದು

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಅಂತಹ ದೊಡ್ಡ personality. ಅವರು ಹೇಳಿರುವ ವಿಚಾರಗಳನ್ನು ನಾವು ಅನುಸರಿಸುತ್ತಿದ್ದೇವೆ. 150 ವಿಶ್ವವಿದ್ಯಾಲಯಗಳು ಪ್ರಾರಂಭವಾಗಬೇಕು ಎನ್ನುವ ವಿಚಾರದಲ್ಲಿ ಇವತ್ತು ಖಾಸಗಿಯವರಿಗೆ ಇವರು ಅವಕಾಶ ಮಾಡಿಕೊಟ್ಟಿದ್ದಾರೆ. ಡಾ||ವೈ.ಎ.ನಾರಾಯಣಸ್ವಾಮಿಯವರು ಖಾಸಗಿ ವಿಶ್ವವಿದ್ಯಾಲಯಕ್ಕೆ ಬಹಳ ವಿರೋಧ ವ್ಯಕ್ತ ಮಾಡಿದರು. ನನಗನಿಸುತ್ತಿದೆ, ಡಾ||ವೈ.ಎ.ನಾರಾಯಣಸ್ವಾಮಿಯವರು ಬೆಂಗಳೂರು ವಿಶ್ವವಿದ್ಯಾಲಯದಿಂದ, ಮಾನ್ಯ ಕೆ.ಟಿ.ಶ್ರೀಕಂಠೇಗೌಡರು ಮೈಸೂರು ವಿಶ್ವವಿದ್ಯಾಲಯದಿಂದ, ಹಾಗೆಯೇ ನಾನು ಕರ್ನಾಟಕ ವಿಶ್ವವಿದ್ಯಾಲಯದಿಂದ, ನಮ್ಮ ಕರ್ನಾಟಕ ವಿಶ್ವವಿದ್ಯಾಲಯ Harvard University product ಎಂದು ಎಷ್ಟು ಹೆಸರು ಮಾಡಿದೆ, ಅಷ್ಟು ನಮ್ಮ ಕರ್ನಾಟಕ ವಿಶ್ವವಿದ್ಯಾಲಯದಲ್ಲೂ ನಮಗೆ ಗೌರವವಿತ್ತು. ಅದು ಸ್ಟ್ಯಾಂಡರ್ಡ್ ವಿಶ್ವವಿದ್ಯಾಲಯ. ಅಲ್ಲಿ ವೈಸ್‌ಛಾನ್ಸಲರ್ ಡಾ|| ಡಿ.ಸಿ.ಪಾವಟೆರವರು ಇದ್ದರು. ಅಲ್ಲಿ ಅವರ ಪುತ್ಥಳಿಯನ್ನು ನಿಲ್ಲಿಸಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಯಾರೋ ಹಿಂದೆ ಇದ್ದರಲ್ಲಾ ವೈಸ್‌ಛಾನ್ಸಲರ್ ಎನ್ನುವುದು ಯಾರಿಗೂ ನೆನಪಿಲ್ಲ. ಆದರೆ ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ವೈಸ್‌ಛಾನ್ಸಲರ್ ಡಾ||ಡಿ.ಸಿ.ಪಾವಟೆರವರ ಪುತ್ಥಳಿಯನ್ನು ನಿಲ್ಲಿಸಿದ್ದಾರೆ. ಅವರು ಮುಂದೆ ಪಂಜಾಬ್‌ನ ರಾಜ್ಯಪಾಲರಾದರು. ಅಂದರೆ ಆ ರೀತಿಯಾಗಿ ವಿಶ್ವವಿದ್ಯಾಲಯವನ್ನು ಎತ್ತರಕ್ಕೆ ತೆಗೆದುಕೊಂಡು ಹೋಗಿದ್ದರು. ಅವರು ಶಿಕ್ಷಣದ ಗುಣಮಟ್ಟವನ್ನು ಸುಧಾರಣೆ ಮಾಡಿದರು. ಇವತ್ತು ನನಗನಿಸುವುದೇನೆಂದರೆ, ಖಾಸಗಿ ವಿಶ್ವವಿದ್ಯಾಲಯದವರಿಗೆ ಕೊಡುವಂತಹ ವಿಚಾರವನ್ನು ಏನು ಕೈಗೊಂಡಿದ್ದಾರೆ ಅದು ಸ್ಟ್ಯಾಂಡರ್ಡ್ ಇರಬೇಕು. ಶಿಕ್ಷಣದ ಗುಣಮಟ್ಟ ಅತ್ಯುತ್ತಮವಾಗಿರಬೇಕು ಮತ್ತು ಸಾಮಾಜಿಕ ಚಿಂತನೆ ಕೂಡ ವಿಶ್ವವಿದ್ಯಾಲಯದಲ್ಲಿರಬೇಕು. ಖಾಸಗಿಯವರಿಗೆ ಕೊಟ್ಟ ತಕ್ಷಣ ಬಹಳಷ್ಟು ನಿರ್ಬಂಧಗಳನ್ನು ಹೇರಬೇಕಾಗುತ್ತದೆ. ಮಾನ್ಯ ಮರಿತಿಬ್ಬೇಗೌಡರು, ಮಾನ್ಯ ಬಸವರಾಜ ಹೊರಟ್ಟಿಯವರು, ಡಾ||ವೈ.ಎ.ನಾರಾಯಣಸ್ವಾಮಿಯವರು, ಅನೇಕರು ಶಿಕ್ಷಣ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದವರು. ಶೈಕ್ಷಣಿಕ ರಂಗದಲ್ಲಿ ಪದವೀಧರ ಕ್ಷೇತ್ರದಿಂದ, ಶಿಕ್ಷಕರ ಕ್ಷೇತ್ರದಿಂದ ಆಯ್ಕೆಯಾಗಿರುವಂಥವರು. ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಅನುಭವ ಹೊಂದಿ ತಮ್ಮದೇ ಛಾಪು ಅನ್ನು ಮೂಡಿಸಿದಂಥವರು ಇಲ್ಲಿ ಬಹಳ ಸುದೀರ್ಘವಾಗಿ, ಅರ್ಥಪೂರ್ಣವಾಗಿ ಸಾಕಷ್ಟು ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಅವರು ಮಾನ್ಯ ಉನ್ನತ ಶಿಕ್ಷಣ ಸಚಿವರಿಗೆ ಏನೇನು ಷರತ್ತುಗಳನ್ನು ವಿಧಿಸಬೇಕೆಂದು ಹೇಳಿದ್ದಾರೆ. ಡಾ||ವೈ.ಎ.ನಾರಾಯಣಸ್ವಾಮಿಯವರು ಖಾಸಗಿ ವಿಶ್ವವಿದ್ಯಾಲಯದ ಮೂಗುದಾರ ನಿಮ್ಮ ಕೈಯಲ್ಲಿರಬೇಕೆಂದು ಹೇಳಿದರು. ಅವರಿಗೆ absolute freedom ಕೊಟ್ಟರೆ ಮುಂದೆ ಪರಿಸ್ಥಿತಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹೇಗೆ? ಸರ್ಕಾರಿ ವಿಶ್ವವಿದ್ಯಾಲಯ ಮತ್ತು ಖಾಸಗಿ ವಿಶ್ವವಿದ್ಯಾಲಯದಿಂದ ಪಾಸಾಗಿ ಬಂದಂತಹ ಪದವೀಧರರ ಮುಂದೆ ಪೈಪೋಟಿಯಾಗಿ ಯಾವುದೇ ರೀತಿಯಿಂದ malpractice ಮಾಡಿ ಹೆಚ್ಚು ಅಂಕಗಳನ್ನು ಪಡೆದಂತಹ ಖಾಸಗಿ ವಿಶ್ವವಿದ್ಯಾಲಯದ ಪದವೀಧರರು ಹೋಲಿಸಿದರೆ ಬೆಂಗಳೂರು, ಮೈಸೂರು, ಕರ್ನಾಟಕ, ಈ ವಿಶ್ವವಿದ್ಯಾಲಯಗಳು ಸ್ಟ್ಯಾಂಡರ್ಡ್. ಅವರು ಬಹಳ ಸ್ಟ್ರಿಕ್ಟ್. ಅವರು ಪರೀಕ್ಷೆಯನ್ನು ಸ್ಟ್ರಿಕ್ಟ್ ಆಗಿ ನಡೆಸುತ್ತಾರೆ. ಅಲ್ಲಿ ಅಂಕಗಳನ್ನು ತೆಗೆದುಕೊಳ್ಳುವುದೇ ಬಹಳ ಕಷ್ಟ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ 50 ಅಂಕಗಳನ್ನು ತೆಗೆದುಕೊಂಡರೆ ಅವರನ್ನು ಮೆರವಣಿಗೆ ಮಾಡುವ ಪರಿಸ್ಥಿತಿ ಇತ್ತು. ಈಗ ಅನೇಕ ವಿಷಯಗಳಲ್ಲಿ ಶೇಕಡ ನೂರರಷ್ಟು ಅಂಕಗಳನ್ನು ತೆಗೆದುಕೊಳ್ಳುತ್ತಾರೆ. ಅವರು ಹೇಗೆ ಅಷ್ಟು ಅಂಕಗಳನ್ನು ತೆಗೆದುಕೊಳ್ಳುತ್ತಾರೆಯೋ ನಮಗಂತೂ ಗೊತ್ತಿಲ್ಲ. ನಾನು ಸೆಕೆಂಡ್ ಕ್ಲಾಸ್‌ನಲ್ಲಿ ಪಾಸ್ ಆಗಿದ್ದೇನೆ. ನಾನು ಖಾಸಗಿ ವಿದ್ಯಾ ಸಂಸ್ಥೆಯಿಂದ ಪದವೀಧರನಾಗಿದ್ದೇನೆ. ಬಸವೇಶ್ವರ ವಿಜ್ಞಾನ ಮಹಾ ವಿದ್ಯಾಲಯದಿಂದ ಇವತ್ತು ಬಿ.ಎಸ್‌ಸಿ ಪದವೀಧರನಾಗಿದ್ದೇನೆ. ಮುಂದೆ ನಾನು ಕಾನೂನು ಪದವಿಯನ್ನು ಧಾರವಾಡದಲ್ಲಿ ಮುಗಿಸಿದ್ದೇನೆ. ಡಾ॥ವೈ.ಎ.ನಾರಾಯಣಸ್ವಾಮಿಯವರು ಹೇಳಿದರು, ನಾವೆಲ್ಲಾ ಸರ್ಕಾರಿ ಕಾಲೇಜಿನಲ್ಲಿ ಓದಿದ್ದೇವೆಂದು ಹೇಳಿದರು. ನಮ್ಮ ಕಡೆ ಇವತ್ತು ನಾವು ಖಾಸಗಿ ವಿಶ್ವವಿದ್ಯಾಲಯವನ್ನು ವಿರೋಧ ಮಾಡದಿರುವಂತಹ ಪರಿಸ್ಥಿತಿಗೆ ಬಂದು ತಲುಪಿದ್ದೇವೆ. ಏಕೆಂದರೆ, ಇವತ್ತು ಉತ್ತರ ಕರ್ನಾಟಕ ಶೈಕ್ಷಣಿಕವಾಗಿ ಬಹಳಷ್ಟು ಹಿಂದುಳಿದಂತಹ ಕ್ಷೇತ್ರ. ಇವತ್ತು ಸಪ್ತ ಋಷಿಗಳು ಪ್ರಾರಂಭ ಮಾಡಿರುವಂತಹ ಕೆ.ಎಲ್.ಇ. ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದ ಖ್ಯಾತಿಯನ್ನು ಪಡೆದಿದೆ. ಅದೇ ರೀತಿ ಬನ್ನಾಳ್ ಶಿವಯೋಗಿಯವರು ಪ್ರಾರಂಭ ಮಾಡಿದಂತಹ ಬಿ.ಎಲ್.ಡಿ. ಸಂಸ್ಥೆ ಅದು ಕೂಡ ಅಷ್ಟೇ ಎತ್ತರದಲ್ಲಿ ಬೆಳೆದಿದೆ. ಬೇಲೂರು ಶ್ರೀಗಳು ಪ್ರಾರಂಭ ಮಾಡಿರುವಂತಹ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘ. ಅದು ಕೂಡ ಬೃಹದ್ದಾಕಾರವಾಗಿ ಬೆಳೆದಿದೆ. ಅದೇ ರೀತಿ ಬಳ್ಳಾರಿಯ ವೀರಶೈವ ವಿದ್ಯಾ ಸಂಸ್ಥೆ ನಮ್ಮ ಊಹೆಗೆ ನಿಲುಕಲಾರದಷ್ಟು ಎತ್ತರಕ್ಕೆ ಬೆಳೆದಿದೆ. ದಕ್ಷಿಣ ಕರ್ನಾಟಕಕ್ಕೆ ಬಂದರೆ ಸುತ್ತೂರು ಶ್ರೀಗಳು ಪ್ರಾರಂಭಿಸಿದಂತಹ ವಿದ್ಯಾಸಂಸ್ಥೆ ಮತ್ತು ಪೂಜ್ಯ ಬಾಲಗಂಗಾಧರ ಸ್ವಾಮೀಜಿಯವರು ಪ್ರಾರಂಭಿಸಿದಂತಹ ಬಿಜಿಎಸ್ ಶಿಕ್ಷಣ ಸಂಸ್ಥೆ. ತುಮಕೂರು ಸಿದ್ದಗಂಗಾ ನಡೆದಾಡುವ ದೇವರು ಎಂದೇ ಖ್ಯಾತರಾಗಿರುವ ತ್ರಿವಿಧ ದಾಸೋಹಿ ಸಿದ್ದಗಂಗಾ ಶ್ರೀಗಳು ಪ್ರಾರಂಭಿಸಿದಂತಹ ಶಿಕ್ಷಣ ಸಂಸ್ಥೆಗಳು ಇವತ್ತು ಇವೆ. ಉತ್ತರ ಕರ್ನಾಟಕದಲ್ಲಿ ವೀರಶೈವ ಸಮುದಾಯದವರು ಈ ವಿದ್ಯಾ ಸಂಸ್ಥೆಗಳನ್ನು ಅಲ್ಲಿ ಪ್ರಾರಂಭ ಮಾಡದಿದ್ದರೆ ನಮ್ಮ ಪರಿಸ್ಥಿತಿ ಏನಾಗುತ್ತಿತ್ತು? ನಮ್ಮ ಉತ್ತರ ಕರ್ನಾಟಕ ಹಿಂದುಳಿದಿದೆ ಎಂದು ಹೇಳುವಂತಹ ಶಬ್ಧವೇ ನನ್ನ ಬಾಯಿಯಿಂದ ಬರುತ್ತಿರಲಿಲ್ಲ. ನಮಗೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿಂದುಳಿದಿದೆ ಎಂಬುದು ತಿಳಿಯಬೇಕಲ್ಲವೇ? ದಕ್ಷಿಣ ಕರ್ನಾಟಕದಲ್ಲಿ ಸರ್ಕಾರಿ ಸಂಸ್ಥೆಗಳು, ಶಾಲಾ-ಕಾಲೇಜುಗಳು, ವಿಶ್ವವಿದ್ಯಾಲಯಗಳು ಇವೆ. ನಮ್ಮಲ್ಲಿ ಇಲ್ಲವೇ ಇಲ್ಲ. ಅಖಂಡ ವಿಜಯಪುರ ಜಿಲ್ಲೆಗೆ ಮೊಟ್ಟ ಮೊದಲನೇ ಕಾಲೇಜು ಬಂದಿತು. ಮಾನ್ಯ ಎಸ್.ಆರ್.ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಶ್ರೀ ವೀರಪ್ಪ ಮೊಯ್ಲಿಯವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಮೊಟ್ಟ ಮೊದಲನೇ ಸರ್ಕಾರಿ ಕಾಲೇಜು ನಮ್ಮ ತಂದೆಯವರ ಹೆಸರಿನಲ್ಲಿ ಪ್ರಾರಂಭಿಸಿದ್ದೇವೆ.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಉತ್ತರ ಕರ್ನಾಟಕದವರು ಅಖಂಡ ಕರ್ನಾಟಕ ಕನಸು ಕಂಡಿದಂಥವರು. ನಾವೇನು ಮೈಸೂರು ಪ್ರಾಂತ್ಯ ಎಂದು ಕರೆಯುತ್ತೇವೆಯೋ ಇವೆಲ್ಲವೂ ಮೈಸೂರು ಮಹಾರಾಜರ ಆಡಳಿತದಲ್ಲಿ ಇದ್ದಂತಹ ಭಾಗ. ಇಲ್ಲಿ ಮೊದಲಿನಿಂದಲೂ ಶೈಕ್ಷಣಿಕ ಸಂಸ್ಥೆಗಳು, ಕಾಲೇಜುಗಳು, ಪ್ರೌಢಶಾಲೆಗಳನ್ನು ತೆಗೆದಂಥವರು ಮೈಸೂರಿನ ಮಹಾರಾಜರು. ಆದರೆ, ಮುಂಬೈ ಕರ್ನಾಟಕದ ಪ್ರಾಂತ್ಯ ಶೈಕ್ಷಣಿಕ ಸಂಸ್ಥೆಗಳಾಗಿದ್ದು ಖಾಸಗಿ ಶಿಕ್ಷಣ ಸಂಸ್ಥೆಗಳಿಂದ ಮತ್ತು ಮಠಮಾನ್ಯಗಳಿಂದ. ಇದರಿಂದ ನಾವು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಬಹಳ ಹಿಂದುಳಿದಂತಹ ಪ್ರದೇಶ ಈ ಶಿಕ್ಷಣ ದಾಸೋಹದಿಂದ ಅದು ಮುಂದುವರೆಯಿತು ಎಂದು ಹೇಳುವುದಕ್ಕೆ ಬಯಸುತ್ತೇನೆ.

**ಶ್ರೀ ಎಸ್.ಆರ್.ಪಾಟೀಲ್:-** ಮಾನ್ಯ ಸಭಾಪತಿಯವರೇ, ಶೈಕ್ಷಣಿಕ ಕ್ಷೇತ್ರದಲ್ಲಿ ಖಾಸಗಿ ವಿದ್ಯಾ ಸಂಸ್ಥೆ ಉತ್ತರ ಕರ್ನಾಟಕದಲ್ಲಿ ಇಲ್ಲ. ಒಂದು ಸರ್ಕಾರಿ ಸಂಸ್ಥೆಗಳೇ ಇಲ್ಲ. ಏನೇನು ಇಲ್ಲ. A big zero. ಇಂತಹ ಸಂದರ್ಭದಲ್ಲಿ ವೀರಶೈವ ಸಮುದಾಯದವರು ದೊಡ್ಡ ದೊಡ್ಡ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು.

(ಮುಂದು)

131/3-2-2021/6-10/ಬಿಕೆಪಿ-ಆರ್-ಎನ್

**ಶ್ರೀ ಎಸ್.ಆರ್.ಪಾಟೀಲ್(ಮುಂದು. . . )**

ಅಂತಹ ಸಂದರ್ಭದಲ್ಲಿ ಈ ವೀರಶೈವ ಸಮುದಾಯದವರು ಈಗ ಏನು ನಾನು ಉದಾಹರಣೆಯನ್ನು ಕೊಟ್ಟಿದ್ದೇನೆ. ದೊಡ್ಡ ದೊಡ್ಡ ಸಂಸ್ಥೆಗಳ ಬಗ್ಗೆ ಹೇಳಿದೆ, ಇನ್ನು ಇಂತಹ ಸಾಕಷ್ಟು ಸಂಸ್ಥೆಗಳಿವೆ. ನಾವುಗಳು ಏನು ಅಲ್ಪ-ಸ್ವಲ್ಪ ವಿದ್ಯಾ-ಬುದ್ಧಿ ಕಲಿತಿದ್ದೇವೆಂದರೆ ಅದು ಖಾಸಗಿ ವಿದ್ಯಾ ಸಂಸ್ಥೆಗಳಿಂದ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಎಂದು ಹೇಳಲಿಕ್ಕೆ ಬಯಸುತ್ತೇನೆ. ಅವುಗಳು ಇಲ್ಲದಿದ್ದರೆ ನಮ್ಮ ಪರಿಸ್ಥಿತಿ ಏನಿರುತ್ತಿತ್ತೋ ಗೊತ್ತಿಲ್ಲ. ಹೇಳಬೇಕೆಂದರೆ ನಾವು ಇಲ್ಲಿಗೆ ಬರುತ್ತಿರಲಿಲ್ಲ. ಅಷ್ಟರಮಟ್ಟಿಗೆ ವಿದ್ಯಾದಾನ ಮಾಡಿದಂತಹ ಖಾಸಗಿ ವಿದ್ಯಾ ಸಂಸ್ಥೆಗಳಿದ್ದವು. ಅವರ ಉದ್ದೇಶ ಏನಿತ್ತು ಎಂದರೆ, ವಿದ್ಯಾದಾನ ಮಾಡಬೇಕೆನ್ನುವ ನಿರ್ಮಲ ಮನಸ್ಸು ಆ ಸಂಸ್ಥೆಗಳಿಗೆ ಇತ್ತು. ಪ್ರಾಂಜಲ ಮನಸ್ಸಿನಿಂದ ವಿದ್ಯಾ ಪ್ರಸಾರ ಮಾಡಬೇಕೆನ್ನುವ ಏಕೈಕ ಮನಸ್ಸಿನಿಂದ, ಸದುದ್ದೇಶದಿಂದ ಪ್ರಾರಂಭವಾದಂತಹ ಖಾಸಗಿ ಶಿಕ್ಷಣ ಸಂಸ್ಥೆಗಳು ಇವೆ. ಇವತ್ತು ಖಾಸಗಿ ವಿಶ್ವವಿದ್ಯಾನಿಲಯಗಳನ್ನು ಪ್ರಾರಂಭ ಮಾಡಲಿಕ್ಕೆ ನಾನು ಮುಂದು, ನೀನು ಮುಂದು ಎಂದು ಹೇಳಿ ತಮ್ಮ ಕಡೆ, ಸರ್ಕಾರದ ಕಡೆ ಬಂದಿರುತ್ತಾರೆ. ಅದು ಸರ್ವೆ ಸಾಮಾನ್ಯ. ಇವರದ್ದು bona-fide intention ಇದೆಯೇ, ಇಲ್ಲವೋ ಎನ್ನುವುದನ್ನು ನೀವು ಮೊದಲು ನೋಡಿ. ಈಗ ಮಾನ್ಯ ಸದಸ್ಯರಾದ ಶ್ರೀಕಂಠೇಗೌಡರು ಮಾತನಾಡಿದಂತೆ ಖಾಸಗಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿದರೆ ಅವರ ಮಕ್ಕಳು, ಮೊಮ್ಮೊಕ್ಕಳು, ಮರಿ ಮಕ್ಕಳು ಜೀವನದಲ್ಲಿ ಆರಾಮವಾಗಿ ಇರಬಹುದಂತೆ. ಅಂದರೆ ಕಮರ್ಷಿಯಲ್ ಆಗಿ ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡುವವರ ಮೇಲೆ ನಿಗಾ ಇಡಬೇಕೆಂದು ಹೇಳುತ್ತೇನೆ. ಏಕೆಂದರೆ, ನಾಳೆ ಖಾಸಗಿ ವಿಶ್ವವಿದ್ಯಾನಿಲಯ ಮತ್ತು ನಮ್ಮ ಸರ್ಕಾರ ನಡೆಸುವಂತಹ ವಿಶ್ವವಿದ್ಯಾನಿಲಯಗಳ ಮಧ್ಯ ಆ ಮಕ್ಕಳು ಏನು ಪದವೀಧರರಾಗಿ ಹೊರಗಡೆ ಬರುತ್ತಾರೆ ಅವರ ಮಧ್ಯ ತಾರತಮ್ಯ ಆಗಬಾರದು. ಅದರ ಬಗ್ಗೆ ಬಹಳಷ್ಟು ಯೋಚನೆ ಮಾಡಬೇಕು. ಅವರ ಬಗ್ಗೆ ಯಾವಾಗಲೂ ನಿಗಾ ಇಡಬೇಕು. ಶಿಕ್ಷಣದ ಗುಣಮಟ್ಟ ಅತ್ಯುತ್ತಮವಾಗಿರಬೇಕು. ಇದಕ್ಕೆ ತ್ರಿಸದಸ್ಯ ಕಮಿಟಿಗೆ ವೈಸ್ ಚಾನ್ಸಲರ್ ಅನ್ನು ನೇಮಕ ಮಾಡಿಕೊಳ್ಳುತ್ತಾರೆ. 3 ಮೆಂಬರ್ಸ್ ಕಮಿಟಿ, ನಂತರ ಸರ್ಚ್ ಕಮಿಟಿ, ಆದಾದ ಮೇಲೆ ಸುದೀರ್ಘವಾಗಿ ಚರ್ಚೆ ಮಾಡಿ who is capable ಎನ್ನುವುದನ್ನು ನಿರ್ಧರಿಸಿದ ನಂತರ, ಕೊನೆಗೆ ಮಾನ್ಯ ರಾಜ್ಯಪಾಲರ ಹತ್ತಿರ ಹೋಗಿ ವೈಸ್– ಚಾನ್ಸಲರ್ ನೇಮಕಾತಿ ಬಗ್ಗೆ ಅನುಮೋದನೆ ಪಡೆಯಲಾಗುತ್ತದೆ.

(ಈ ಹಂತದಲ್ಲಿ ಮಾನ್ಯ ಸಭಾಪತಿಯವರು ಸಭಾಪೀಠವನ್ನು ಅಲಂಕರಿಸಿದರು)

ಖಾಸಗಿ ವಿಶ್ವವಿದ್ಯಾನಿಲಯದ ಬಗ್ಗೆ ನಿಮಗೆ ಏನು ಅಧಿಕಾರವಿರುತ್ತದೆ? ಅವರು ಯಾರನ್ನ ಬೇಕಾದರೂ ವೈಸ್ ಚಾನ್ಸಲರ್ ಆಗಿ ನೇಮಕ ಮಾಡಿಕೊಳ್ಳಬಹುದು, ಯಾರನ್ನ ಬೇಕಾದರೂ ಪ್ರಾಧ್ಯಾಪಕರನ್ನು ನೇಮಕ ಮಾಡಿಕೊಳ್ಳಬಹುದು. ಅತ್ಯುತ್ತಮ ವಿದ್ಯೆಯನ್ನು ಕೊಡುವಂತಹ ಪ್ರಾಧ್ಯಾಪಕರನ್ನು ನೇಮಕ ಮಾಡಿಕೊಳ್ಳಬೇಕಲ್ಲವೇ?

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಖಾಸಗಿ ವಿಶ್ವವಿದ್ಯಾನಿಲಯದ ಅಧಿಕಾರವನ್ನು ಅವರಿಗೆ ಕೊಟ್ಟರೆ ನೀವು ವಿಶ್ವವಿದ್ಯಾನಿಲಯವನ್ನು ಅವರಿಗೆ ಕೊಟ್ಟಂತೆ. ನಾಳೆ ಮುಂದಿನ ಜನಾಂಗ, ಅಲ್ಲಿ ಕಲಿಯುವಂತಹ ಮಕ್ಕಳ ಗತಿ ಏನು? ಅಂಬೆಗಾಲು ಇಡುವಂತಹ ಮಕ್ಕಳ ಮೇಲೆ ಈ ದೇಶದ ಭವಿಷತ್ತು ಇದೆ. ಇಂದಿನ ಮಕ್ಕಳೇ ಮುಂದಿನ ಜವಾಬ್ದಾರಿ ತೆಗೆದುಕೊಳ್ಳುವಂತಹ ಪ್ರಜೆಗಳು, ನಾಗರೀಕರು. ಅವರು ಸತ್ವಶಾಲಿ ಪ್ರಜೆಗಳಾಗಿ ನಾಡನ್ನು. ರಾಷ್ಟ್ರವನ್ನು ಅಭಿವೃದ್ಧಿಯತ್ತ ಮುನ್ನೆಡೆಸುವಂತಹ ಮಕ್ಕಳ ಭವಿಷ್ಯವೇ ಇವತ್ತು ನಿಮ್ಮ ಕೈಯಲ್ಲಿ ಇದೆ. ಇವತ್ತು ನೀವು ಖಾಸಗಿ ವಿಶ್ವವಿದ್ಯಾನಿಲಯವನ್ನು ಖಾಸಗಿಯವರಿಗೆ ಕೊಟ್ಟರೆ ಎಲ್ಲಾ ರೀತಿಯ ಷರತ್ತುಗಳು ಅವರ ಮೇಲೆ ಇರಬೇಕು. ಮಾನ್ಯ ಉಪ ಮುಖ್ಯಮಂತ್ರಿಗಳು ಗಮನಿಸಬೇಕು. ಮಾನ್ಯ ಸದಸ್ಯರಾದ ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿಯವರು ನಿಮ್ಮ ಬಗ್ಗೆ ಒಳ್ಳೆಯ ಗೌರವ ಇಟ್ಟುಕೊಂಡಿದ್ದಾರೆ. ನನಗೂ ಸಹ ನಿಮ್ಮ ಬಗ್ಗೆ ಗೌರವ ಇದೆ. ಕಳಕಳಿ ಇದೆ, ಚಿಂತನೆ ಇದೆ. ನಾವು ಬೆಳಗಾವಿ ಅಧಿವೇಶನದಲ್ಲಿ 22 ವಿಶ್ವವಿದ್ಯಾನಿಲಯಗಳ ಬಗ್ಗೆ 15 ನಿಮಿಷಗಳಲ್ಲಿ ಚರ್ಚೆ ಮಾಡಿ ಬಿಲ್ ಪಾಸ್ ಮಾಡಲಾಗಿರುತ್ತದೆ. ಅವುಗಳ ಗತಿ ಏನಾಗಿದೆ ಎನ್ನುವುದು ತಮಗೆಲ್ಲಾ ತಿಳಿದಿದೆ. ಅಲೈಯನ್ಸ್ ಯುನಿವರ್ಸಿಟಿಯಲ್ಲಿ ಒಂದು ಕೊಲೆಯಾಗಿದೆ. ಸರ್ಕಾರಕ್ಕೂ ಗೌರವ ಬರಬೇಕು. ವ್ಯಕ್ತಿಗತವಾಗಿ ನಿಮಗೂ ಗೌರವ ಬರಬೇಕು. ಈ ವಿಚಾರದಲ್ಲಿ ತಾವುಗಳು ಯೋಚನೆ ಮಾಡಬೇಕು. ಸರ್ಕಾರಕ್ಕೂ ಗೌರವ ಬರಬೇಕು, ವ್ಯಕ್ತಿಗತವಾಗಿ ನಿಮ್ಮ ಮೇಲೆಯೇ ಪಿನ್ ಪಾಯಿಂಟ್ ಬರುತ್ತದೆ. ಖಾಸಗಿ ವಿಶ್ವ ವಿದ್ಯಾನಿಲಯವನ್ನು ಯಾರ ಕಾಲಕ್ಕೆ ಕೊಟ್ಟರು? ಆ 22 ವಿಶ್ವವಿದ್ಯಾನಿಲಯಗಳನ್ನು ಯಾರ ಕಾಲಕ್ಕೆ ಕೊಟ್ಟರು ಎನ್ನುವುದಕ್ಕೆ ಅವರ ಹೆಸರನ್ನು ಹೇಳುವುದಿಲ್ಲ. ಅವರು ಈ ಸದನದ ಸದಸ್ಯರಲ್ಲ, ಅದಕ್ಕೋಸ್ಕರ ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ತಾವು ಇಲ್ಲಿ ಇದ್ದೀರಿ. ತಾವು ಉನ್ನತ ಶಿಕ್ಷಣ ಸಚಿವರಾಗಿದ್ದೀರಿ. ಅದರ ಜೊತೆಗೆ ಸಂವಿಧಾನದಲ್ಲಿ ಇಲ್ಲವೊಂದರೂ ಉಪ ಮುಖ್ಯಮಂತ್ರಿಗಳೆಂದು ನಾವು ಕರೆಯುತ್ತೇವೆ. ಆ ಮಾತು ಬೇರೆ. ಅಂತಹ ಉನ್ನತ ಸ್ಥಾನದಲ್ಲಿರುವ ನಿಮ್ಮ ಹೆಸರು ಅಜರಾಮಜರವಾಗಿರಬೇಕು. ಇತಿಹಾಸ ಪುಟದಲ್ಲಿ ರಾರಾಜಿಸುತ್ತಿರಬೇಕು. ಇಂತಹ 5 ವಿಶ್ವವಿದ್ಯಾನಿಲಯಗಳನ್ನು ಕೊಟ್ಟಿದ್ದಾರೆಂದು ಸಂತೋಷ ಪಡಬೇಕು. ಉಳಿದ ನಮ್ಮ ಸರ್ಕಾರಿ ಸ್ವಾಮ್ಯದಲ್ಲಿರುವಂತಹ ವಿಶ್ವವಿದ್ಯಾನಿಲಯಗಳ ಜೊತೆ ಪೈಪೋಟಿ ನೆಡೆಸುವಂತಿರಬೇಕು. ಅವರ ಮೇಲೆ ಮೂಗುದಾರವನ್ನು ಇಟ್ಟುಕೊಳ್ಳಿ. ಎರಡು ನೂರು ವಿಶ್ವ ವಿದ್ಯಾಲಯಗಳು ವಿಶ್ವದಲ್ಲೇ, ಇಡಿ ಪ್ರಪಂಚದಲ್ಲೇ ಅತೀ ಶ್ರೇಷ್ಠವಾದ ವಿಶ್ವವಿದ್ಯಾಲಯಗಳಿವೆ. ಅದರಲ್ಲಿ ನಮ್ಮ ಭಾರತದ ಒಂದು ವಿಶ್ವವಿದ್ಯಾಲಯವೂ ಇಲ್ಲ. ಯಾವ ವಿಶ್ವವಿದ್ಯಾಲಯವೂ ಸ್ಥಾನವನ್ನು ಪಡೆದಿಲ್ಲ. ಅಂತಹ ವಿಶ್ವ ವಿದ್ಯಾಲಯದಲ್ಲಿ ಜಾಗ ದೊರೆಯುವಂತಹ ವಿಶ್ವವಿದ್ಯಾಲಯಗಳು ನಮ್ಮಲ್ಲಿ ಆಗಬೇಕೆಂದು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಉಪ ಮುಖ್ಯಮಂತ್ರಿಗಳು ಮತು ಉನ್ನತ ಶಿಕ್ಷಣ ಸಚಿವರಿಗೆ ತಿಳಿಸಬಯಸುತ್ತೇನೆ. ಇವರದ್ದೂ ಒಂದು ಹೆಸರು ಕೇಳುವಂತಾಗಬೇಕು. You study in-depth. ಇವತ್ತೂ ಖಾಸಗಿ ವಿಶ್ವ ವಿದ್ಯಾಲಯಗಳಿಗೆ ನೀವು ಪರವಾನಗಿಯನ್ನು ಕೊಡುತ್ತಿದ್ದೀರಿ. ನಿಮಗೆ ಬಹುಮತ ಇದೆ. ಈ ಕಂಡೀಷನ್, ಆ ಕಂಡೀಷನ್ ಎಂದು ಬಹಳಷ್ಟು ವಿಚಾರಗಳನ್ನು ನಾವು ಹೇಳಬಹುದು. ಆ ಎರಡು ನೂರು ವಿಶ್ವವಿದ್ಯಾಲಯಗಳನ್ನು ಹೇಗೆ ನಡೆಸುತ್ತಿದ್ದಾರೆನ್ನುವುದನ್ನು ತಿಳಿಯಬೇಕು. ನನಗೆ ಪರಿಚಯವಿರುವ ಸುಮಾರು ಜನ IAS officers ಇದ್ದಾರೆ. ಅವರು ಮೊದಲು ಐಎಎಸ್ ಎಂದು ಹೇಳುವುದಿಲ್ಲ. I am a product of Harward University ಎಂದು ಹೇಳುತ್ತಾರೆ. ಐಎಎಸ್/ಐಪಿಎಸ್ ಅದೇನು ದೊಡ್ಡದಲ್ಲ. ಅವರು I am a product of Harward University ಎನ್ನುವುದೇ ಹೆಮ್ಮೆ ಎಂದು ಹೇಳಿಕೊಳ್ಳುತ್ತಾರೆ. ನಾವು ಇಂದು ಇರುತ್ತೇವೆ, ಹೋಗುತ್ತೇವೆ. ಇವತ್ತೂ ಈ ವಿಧೇಯಕವನ್ನು ಪಾಸ್ ಮಾಡಿ ಹೋಗುತ್ತೇವೆ. ಯಾರ್‍ಯಾರೋ ಅದನ್ನು ಪಡೆಯುತ್ತಾರೆ. ಆದರೆ ಈ ನಾಡಿನ ಮಕ್ಕಳ ಭವಿಷ್ಯತ್ತಿನ ಬಗ್ಗೆ ಯೋಚಿಸಬೇಕಾಗುತ್ತದೆ, ಅವರ ಅತ್ಯುತ್ತಮವಾದ ಭವಿಷ್ಯತ್ತನ್ನು ರೂಪಿಸುವಂತಹ ವಿಶ್ವವಿದ್ಯಾಲಯಗಳು ಬೇಕಾಗುತ್ತದೆ. ಇಡೀ ವಿಶ್ವಕ್ಕೆ ವಿದ್ಯಾಲಯಗಳಾಗಬೇಕು. ಅಂತಹ ವಿಶ್ವವಿದ್ಯಾಲಯ ಗಳನ್ನು ಖಾಸಗಿಯವರ ಕೈಯಲ್ಲಿ ಕೊಡುವ ಮೊದಲು ನೀವು ಒಂದು ಸಲ ಅಲ್ಲ, ನೂರು ಸಲ ಯೋಚನೆ ಮಾಡಿ, ಇದರಿಂದ ಸರ್ಕಾರಕ್ಕೆ ಹೆಸರು ಬರಬೇಕು. ನಿಮಗೆ ವೈಯಕ್ತಿಕ image ಕೂಡಾ boost ಆಗಬೇಕು. ಇದೆಲ್ಲಕ್ಕಿಂತ ಮಿಗಿಲಾಗಿ ಕನ್ನಡ ನಾಡಿನ ಮಕ್ಕಳಿಗೆ ಯಾವ ಒಂದು ನ್ಯಾಯ ಒದಗಿಸುವಂತಹ ಕಂಡೀಷನ್ಸ್ ಏನೇನಿವೆ ಅದನ್ನು ಕರಾರುವಕ್ಕಾಗಿ no mercy, ಯಾವ ಮರ್ಜಿ, ಬಿಡೆ, ಮುಲಾಜಿಗೊಳಗಾಗದೆ ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಂಡು ನೀವೇನೇನು ಕಂಡೀಷನ್ಸ್ ಹಾಕಬೇಕು ಎಂದು ಹೇಳಬೇಕೆಂದರೆ; ನಾನು ಆ ಕ್ಷೇತ್ರದಿಂದ ಬಂದವನಲ್ಲ, ನನಗೆ ಅಷ್ಟು ಅಪಾರವಾದ ಅನುಭವ ಇಲ್ಲ. ಇಲ್ಲಿ ಆ ಕ್ಷೇತ್ರದಿಂದ ಬಂದವರಿಗಿದೆ. ಆ ದೃಷ್ಟಿಯಿಂದ ಈ ವಿಧೇಯಕದಂತೆಯೇ ಇನ್ನೂ ಉಳಿದ ಎಲ್ಲಾ ವಿಶ್ವವಿದ್ಯಾಲಯಗಳ ವಿಧೇಯಕಗಳು ಸಹ, ಬಹಳ ಯೋಚನೆ ಮಾಡಿ ಈ ವಿಶ್ವವಿದ್ಯಾಲಯಗಳು ನಮ್ಮ ವಿಶ್ವವಿದ್ಯಾಲಯಗಳಿಗಿಂತ ಶೈಕ್ಷಣಿಕ ಗುಣಮಟ್ಟದಲ್ಲಿ ಒಂದು ಹೆಜ್ಜೆ ಮುಂದೆ ಬರಲಿ. ಮಾನ್ಯ ಸಚಿವರೆ ನಾನು ಮತ್ತು ಇಲ್ಲಿರುವ ಇತರರು ಹೇಳಿರುವಂತಹ ಅನೇಕ ವಿಚಾರಗಳನ್ನು ತಾವು ಗಮನದಲ್ಲಿಟ್ಟುಕೊಂಡು ಅದನ್ನು ಚಿಂತನ–ಮಂಥನ ಮಾಡಿ ಈ ನಾಡಿನ ಮಕ್ಕಳ ಭವಿಷ್ಯತ್ತಿನ ದೃಷ್ಟಿಯಿಂದ ಅತ್ಯುತ್ತಮವಾದಂತಹ ಶಿಕ್ಷಣದ ಗುಣಮಟ್ಟವನ್ನು ನೀಡತಕ್ಕಂತಹ ಸಾಮರ್ಥ್ಯವಿರುವವರಿಗೆ

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇಷ್ಟೆಲ್ಲಾ ಕರಾರುವಕ್ಕಾದಂತಹ ಕಂಡೀಷನ್‌ಗಳನ್ನು ಮಾಡಿ ಅವರಿಗೆ ತಾವು ನೀಡಬಹುದು. ಅವರು ಅದನ್ನು ಪರಿಪೂರ್ಣ ಮಾಡಿಲ್ಲವೆಂದರೆ, ನಿಮಗೆ ತೃಪ್ತಿಕರವಾಗಿ ಅವರು ನಡೆದುಕೊಂಡಿಲ್ಲವೆಂದರೆ ನಿರ್ದಾಕ್ಷಿಣ್ಯವಾಗಿ ತೆಗೆದುಹಾಕುವಂತಹ ಅಧಿಕಾರವನ್ನು ನೀವು ಇಟ್ಟುಕೊಳ್ಳಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

**ಸಭಾಪತಿಯವರು:–** ಮಾನ್ಯ ಸದಸ್ಯರುಗಳಾದ ಸಂಕನೂರ್, ರವಿಕುಮಾರ್, ಬಸವರಾಜ ಪಾಟೀಲ್ ಇಟಗಿ, ಡಾ॥ ತೇಜಸ್ವಿನಿ ಗೌಡ ಡಾ: ತಳವಾರ್ ಸಾಬಣ್ಣ, ಆರ್.ಬಿ. ತಿಮ್ಮಾಪೂರ್ ಇಷ್ಟು ಜನರು ಮಾತನಾಡುವವರಿದ್ದಾರೆ. ಸುಮಾರು 8 ರಿಂದ 9 ಗಂಟೆ ಸಮಯವಾಗುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ:** ಮಾನ್ಯ ಸಭಾಪತಿಯವರೆ, ನಾಳೆಯೂ ವಿಧೇಯಕದ ಚರ್ಚೆ ತೆಗೆದುಕೊಳ್ಳಬಹುದು.

**ಶ್ರೀ ಎಂ.ನಾರಾಯಣ ಸ್ವಾಮಿ(ವಿರೋಧಪಕ್ಷದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ನಮ್ಮ ಪಕ್ಷದ ಶಾಸಕಾಂಗ ಸಭೆಯನ್ನು ಸಂಜೆ 6–30ಕ್ಕೆ ಕರೆಯಲಾಗಿದೆ. ನಾವೆಲ್ಲ ಅಲ್ಲಿಗೆ ಹೋಗಬೇಕಿದೆ. ನಾಳೆ ಈ ಚರ್ಚೆಯನ್ನು ಮುಂದುವರೆಸಬಹುದು.

( ಮುಂದು

**(132) 03.02.2021 06.20 ಎಸ್‌ವಿ–ಆರ್‌ಎನ್** **(ಸಭಾಪತಿಯವರ ಉಪಸ್ಥಿತಿ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದ ವಿಚಾರವಾಗಿರುವುದರಿಂದ, ನಾಳೆಯೂ ಸಹ ಇದರ ಮೇಲಿನ ಚರ್ಚೆಯನ್ನು ಮುಂದುವರೆಸಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, ಇದು ಬಹಳ ಮಹತ್ವವಾದ ವಿಚಾರವಾಗಿರುವುದರಿಂದ ನಾಳೆಯೂ ಇದರ ಮೇಲಿನ ಚರ್ಚೆ ಮುಂದುವರೆಯಲಿ.

**ಸಭಾಪತಿಯವರು:–** ಸರ್ಕಾರ ಒಪ್ಪಬೇಕಲ್ಲ..

**ಡಾ:ಸಿ.ಎನ್.ಅಶ್ವತ್ಥ ನಾರಾಯಣ (ಉಪ ಮುಖ್ಯಮಂತ್ರಿಗಳು):–** ಮಾನ್ಯ ಸಭಾಪತಿಯವರೇ, ಈಗಾಗಲೇ ನಮ್ಮ ಎಲ್ಲಾ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಇದು ಅವರಿಗೆಲ್ಲಾ ಬಹಳಷ್ಟು ತಿಳಿದಿರುವ ವಿಚಾರಗಳೇ ಆಗಿದೆ. ಅವರು ನೀಡಿರುವ ಸಲಹೆಗಳನ್ನು, ಅವರ ಭಾವನೆಗಳನ್ನು ಪರಿಗಣಿಸಿ,

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಇದನ್ನು ನಿಯಂತ್ರಣ ಮಾಡಲಿಕ್ಕೆ ಮತ್ತು ಸೂಕ್ತವಾಗಿ ನಿರ್ವಹಣೆ ಮಾಡಲಿಕ್ಕೆ ಅಗತ್ಯವಾದ ಕಾನೂನುಗಳನ್ನು ಮಾಡಿದ್ದೇನೆ. ಮಾನ್ಯ ಸದಸ್ಯರಿಗೆ ಈ ವಿಧೇಯಕವನ್ನು ಇಂದೇ ಪಾಸ್ ಮಾಡಿಕೊಡಬೇಕೆಂದು ಕೋರುತ್ತೇನೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಇದು ಬಹಳ ಮುಖ್ಯವಾದ ವಿಧೇಯಕ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:-** ಮಾನ್ಯ ಉಪಮುಖ್ಯಮಂತ್ರಿಗಳೇ, ವಿಧೇಯಕವನ್ನು ಪಾಸ್ ಮಾಡಿಕೊಡಲಿಕ್ಕೆ ಯಾವುದೇ ಅಡ್ಡಿಯಿಲ್ಲ. ಆದರೆ ಮುಂದೇನು ಮಾಡಬೇಕು ಎನ್ನುವುದರ ಬಗ್ಗೆ ಒಂದು ಗಂಭೀರವಾದ ಚರ್ಚೆಯಾಗಬೇಕು.

**ಶ್ರೀ ಎನ್.ರವಿಕುಮಾರ್:-** ಮಾನ್ಯ ಸಭಾಪತಿಯವರೇ, ನಾವು ಯಾರೂ ಮಾತನಾಡುವುದಿಲ್ಲ. ವಿಧೇಯಕವನ್ನು ಪಾಸ್ ಮಾಡಿಕೊಡಿ.

**ಶ್ರೀ ಎನ್.ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, ಈ ಮಹತ್ತರವಾದ ವಿಧೇಯಕದ ಕುರಿತು ಚರ್ಚೆಯಾಗಬೇಕಾಗಿರುವುದು ಬಹಳ ಅಗತ್ಯವಾಗಿದೆ. 2012ರಲ್ಲಿ ಸುಮಾರು 25 ಖಾಸಗಿ ವಿಶ್ವವಿದ್ಯಾಲಯಗಳ ವಿಧೇಯಕಗಳನ್ನು ಕೇವಲ 15 ನಿಮಿಷಗಳಲ್ಲಿ ಅಂಗೀಕಾರ ಎನ್ನುವ ವಿಷಯವೇ ಬಹಳ ದೊಡ್ಡ ವಿಷಯ. ಈಗ ನಾವು ಶಾಸಕರಾಗಿ ಇಲ್ಲಿ ಇದ್ದೇವೆ. ನಮ್ಮ ಮೂಲಭೂತ ಕರ್ತವ್ಯವೇನೆಂದರೆ ಈ ಎಲ್ಲಾ ವಿಧೇಯಕಗಳನ್ನು ಕೂಲಂಕಷವಾಗಿ ಚರ್ಚಿಸಿ ಅವುಗಳನ್ನು ಅಂಗೀಕಾರ ಮಾಡಬೇಕಾದುದು ನಮ್ಮ ಕರ್ತವ್ಯ. ಆದರೆ ದುರಂತವೇನೆಂದರೆ ಇಲ್ಲಿ ಯಾವುದೇ ಸರ್ಕಾರವಿದ್ದರೂ ಸಹ ಬೇರೆ-ಬೇರೆ ಕಾರಣಕ್ಕಾಗಿ ಕೊನೆಯ ಸಮಯದಲ್ಲಿ ತಂದು ಯಾರಿಗೂ ಆಸಕ್ತಿ ಇಲ್ಲದಿರುವ ಸಮಯದಲ್ಲಿ ಎಲ್ಲಾ ವಿಧೇಯಕಗಳು ಅಂಗೀಕಾರಗೊಳ್ಳುವ ಒಂದು ಅವ್ಯವಸ್ಥೆಗೆ ತಾವು ಅವಕಾಶ ಮಾಡಿಕೊಡಬಾರದು. ನಾನೂ ಕೂಡ ಐದನೆಯ ವರ್ಷ ನೋಡುತ್ತಿದ್ದೇನೆ. ವಿಧೇಯಕಗಳು ಯಾವಾಗ ಪಾಸ್ ಆಗುತ್ತದೆಯೆಂದರೆ ಕೊನೆಯ ದಿನಗಳಲ್ಲಿ ನಾವು ಗಲಾಟೆ ಮಾಡುತ್ತಿರುವಾಗ ಅಥವಾ ಸ್ಪೀಕರ್ ಬಾವಿಯಲ್ಲಿರುವಾಗ ಪಾಸ್-ಪಾಸ್ ಎಂದು ಹೋಗುತ್ತಿದ್ದೇವೆ. ಇದು ಬಹಳ ದುರಂತವಾದ ವಿಷಯ. ಒಂದು ಸಂತೋಷದ ವಿಷಯವೇನೆಂದರೆ ಎಲ್ಲಾ ಸದಸ್ಯರು ಕೂಡ ಪಕ್ಷಾತೀತವಾಗಿ ಚರ್ಚೆಯನ್ನು ಮಾಡುತ್ತಿರುವುದು this is the beauty of the Democracy. ಇದಾಗಬೇಕು. ವಿಧೇಯಕಗಳನ್ನು ಕಾಲಕಾಲಕ್ಕನುಗುಣವಾಗಿ ಅಂಗೀಕಾರ ಮಾಡಬೇಕಾದುದು ಎಲ್ಲಾ ನಮ್ಮ ಶಾಸಕರ ಕರ್ತವ್ಯ. ಆಡಳಿತ ಪಕ್ಷವಿರಬಹುದು ಅಥವಾ ವಿರೋಧಪಕ್ಷವಿರಬಹುದು. ಎಲ್ಲರೂ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕೂಡ ಅವರ ಭಾವನೆಗಳನ್ನು ವ್ಯಕ್ತಪಡಿಸಿ ಈ ಒಂದು ತಿದ್ದುಪಡಿಗೆ ಅನೇಕ ಸಲಹೆಗಳನ್ನು ನೀಡಿದ್ದಾರೆ. ಹಾಗಾಗಿ ನಾನೂ ಕೂಡ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಸರ್ಕಾರ ತಂದಿರುವ ಖಾಸಗಿ ವಿಶ್ವವಿದ್ಯಾಲಯದ ವಿಧೇಯಕದ ಬಗ್ಗೆ ನನಗೆ ಬಹಳ ಸಂತೋಷದ ವಿಷಯವೇನೆಂದರೆ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ ವಿಧೇಯಕ. ನಾನು 1985ರಿಂದ 1988ರ ತನಕ ಬಿ.ಎ. ಪದವಿಯನ್ನು ಈ ಒಂದು ಪ್ರತಿಷ್ಠಿತ ಸಂತ ಜೋಸೆಫರ ಕಾಲೇಜಿನಲ್ಲಿ ಅಧ್ಯಯನ ಮಾಡಿದ್ದೇನೆ. ಅಂತಹ ಒಂದು ಸಂಸ್ಥೆಯು ವಿಶ್ವವಿದ್ಯಾಲಯ ಮಾಡುತ್ತಿರುವುದು ಬಹಳ ಸಂತೋಷದ ವಿಷಯ. ನಾನು ಆ ಒಂದು ಕಾಲೇಜಿನ ವಿದ್ಯಾರ್ಥಿಯಾಗಿದ್ದವನು. ಈಗ ಖಾಸಗಿ ಕಾಲೇಜುಗಳು ಅಥವಾ ವಿಶ್ವವಿದ್ಯಾಲಯಗಳು ಎಂದರೆ ಎಲ್ಲವನ್ನೂ ಕೂಡ...

**ಡಾ:ಸಿ.ಎನ್.ಅಶ್ವತ್ಥನಾರಾಯಣ:–** ಮಾನ್ಯ ಅಪ್ಪಾಜಿಗೌಡರೇ, ಬೆಂಗಳೂರು ವಿಶ್ವವಿದ್ಯಾಲಯವನ್ನು ಮರೆಯಬೇಡಿ.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಉಪಮುಖ್ಯಮಂತ್ರಿಯವರೇ, ಅದನ್ನು ನಂತರ ಹೇಳುವವನಿದ್ದೆ. ನಾನು ಬಿ.ಎ. ವ್ಯಾಸಂಗ ಮಾಡಿದ ನಂತರ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂ.ಎ. ಇನ್ ಪೊಲಿಟಿಕಲ್ ಸೈನ್ಸ್ ವ್ಯಾಸಂಗ ಮಾಡಿದವನು. ಡಾ:ತೇಜಸ್ವಿನಿ ಗೌಡ ಅವರು ನನ್ನ ಕಿರಿಯ ಸಹಪಾಠಿಗಳು. ಡಾ:ವೈ.ಎ.ನಾರಾಯಣಸ್ವಾಮಿಯವರ ರೀತಿಯಲ್ಲಿ ನಾನು ಎಂ.ಎ. ವ್ಯಾಸಂಗ ಮಾಡಿ ಐದನೆಯ ರ್‍ಯಾಂಕ್ ಅನ್ನು ಪಡೆದಿದ್ದೆನು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಅಪ್ಪಾಜಿಗೌಡರೇ, ಹಾಗಾದರೆ ನಿಮ್ಮೆಲ್ಲರ ಅಡ್ಡ...

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಶ್ರೀಕಂಠೇಗೌಡರೇ, ನೀವು ಹಿರಿಯರಾಗಿ ಉಪನ್ಯಾಸಕರಾಗಿ 'ಅಡ್ಡ' ಎನ್ನುವ ಪದವನ್ನು ಬಳಸಿದ್ದಕ್ಕೆ ನನ್ನ ಖಂಡನೆಯಿದೆ.

**ಡಾ:ತೇಜಸ್ವಿನಿ ಗೌಡ:–** ಗುರುಗಳು ದಾರಿ ತಪ್ಪುತ್ತಿದ್ದಾರೆ.

**ಡಾ.ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಶ್ರೀಕಂಠೇಗೌಡರೇ, ಮಾನ್ಯ ಅಪ್ಪಾಜಿಗೌಡರು ಐದನೆಯ ರ್‍ಯಾಂಕ್ ಬಂದದ್ದನ್ನು ನಾವೆಲ್ಲಾ ನೋಡಿದ್ದೇವೆ. ಅದನ್ನು ಸಂತೋಷದಿಂದ ಗೌರವಿಸಬೇಕು.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ನಾನು ತಮಾಷೆಗಾಗಿ ಹೇಳಿದೆನು.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಶ್ರೀಕಂಠೇಗೌಡರೇ, ನೀವು ಒಬ್ಬ ಉಪನ್ಯಾಸಕರಾಗಿದ್ದವರು ಈ ರೀತಿಯಾಗಿ ತಮಾಷೆ ಮಾಡಿದ್ದಕ್ಕೆ ನನ್ನ ಖಂಡನೆಯಿದೆ.

**ಡಾ:ಸಿ.ಎನ್.ಅಶ್ವತ್ಥ ನಾರಾಯಣ:–** ಮಾನ್ಯ ಅಪ್ಪಾಜಿಗೌಡರೇ, ಅಷ್ಟೊಂದು ಗಂಭೀರವಾಗಿ ತೆಗೆದುಕೊಳ್ಳಬೇಡಿ. ವಿದ್ಯಾರ್ಥಿಗಳು ಸಾಮಾನ್ಯವಾಗಿ ಅಡ್ಡಗಳಲ್ಲಿ ಸೇರುತ್ತಾರೆ ಎನ್ನುವಂತೆ ಅವರು ಹೇಳಿದರು. ನೀವು ಎಷ್ಟು ಅಡ್ಡಗಳನ್ನು ಇಟ್ಟುಕೊಂಡಿದ್ದಿರಿ?

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಉಪಮುಖ್ಯಮಂತ್ರಿಗಳೇ, ಅವರು ಹಾಸ್ಯ ಚಟಾಕಿಯನ್ನು ಹಾರಿಸುವ ಜಾಗದಲ್ಲಿ ಹಾರಿಸಲಿಲ್ಲ. ಸದನದಲ್ಲಿ ಏಕೆ ಹಾರಿಸುತ್ತಿದ್ದಾರೆ?

**ಶ್ರೀ ಎಂ.ಎ.ಗೋಪಾಲಸ್ವಾಮಿ:–** ಮಾನ್ಯ ಸಭಾಪತಿಯವರೇ, ಇಡೀ ರಾಜ್ಯದಲ್ಲಿಯೇ ಹೆಚ್ಚು ವರ್ಷಗಳ ಕಾಲ ಪ್ರಾಂಶುಪಾಲರಾಗಿರುವಂತಹವರು ಮಾನ್ಯ ಶ್ರೀಕಂಠೇಗೌಡರು.

**ಶ್ರೀ ಎನ್.ಅಪ್ಪಾಜಿಗೌಡ:–** ಮಾನ್ಯ ಉಪಮುಖ್ಯಮಂತ್ರಿಗಳೇ, ನಮಗೇನೂ ಮುಜುಗರ ಇಲ್ಲ. ನಾವು ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಡಕ್ಟ್ ಎಂದು ಹೇಳಿಕೊಳ್ಳುವುದಕ್ಕೆ ನಮಗೆ ಬಹಳ ಹೆಮ್ಮೆಯಿದೆ. ನಾನು ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ 1995ರಲ್ಲಿ ಕೆಲಸ ಮಾಡಿದ್ದೇನೆ. ನಾನು ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಮಾಜಿ ಪ್ರಧಾನಮಂತ್ರಿಗಳಾದ ದಿವಂಗತ ಚಂದ್ರಶೇಖರ್ ಅವರನ್ನು ಕರೆಸಿ ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬವನ್ನು ಆಚರಣೆ ಮಾಡುವ ಅವಕಾಶ ನನಗೆ ಸಿಕ್ಕಿದ್ದು ನನ್ನ ಪುಣ್ಯ ಎಂದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ.

ಮಾನ್ಯ ಸಭಾಪತಿಯವರೇ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಾನಷ್ಟೇ ಅಲ್ಲ, ಇಲ್ಲಿರುವ ವಿಧಾನ ಪರಿಷತ್ತಿನ ಅನೇಕ ಸದಸ್ಯರು, ಕೆಳಮನೆಯ ಹಲವು ಸದಸ್ಯರು ವ್ಯಾಸಂಗ ಮಾಡಿದ್ದಾರೆ. ಈಗಲೂ ಕೂಡ ಕೆಲವರು ಮಂತ್ರಿಗಳಾಗಿ ಕೆಲಸ ಮಾಡುತ್ತಿದ್ದು, ಮಾಜಿ ಮುಖ್ಯಮಂತ್ರಿಗಳು, ಮಂತ್ರಿಗಳೂ ಇದ್ದಾರೆ. ಮೊದಲು ಕಾಲೇಜುಗಳಲ್ಲಿ ವಿದ್ಯಾರ್ಥಿ ಸಂಘಗಳಿದ್ದವು. ಅಂತಹ ವಿದ್ಯಾರ್ಥಿ ಸಂಘಗಳಲ್ಲಿ ನಾಯಕರಾಗಿ ಯಾರ್‍ಯಾರು ಹೊರಹೊಮ್ಮಿದ್ದರೋ ಅಂತಹ ಅನೇಕರು ಶಾಸಕರಾಗಿ, ಸಚಿವರಾಗಿ ಕೆಲಸ ಮಾಡಿದ್ದಾರೆ. ಇಂತಹ ನಾಯಕರಾಗಿ ಹೊರಹೊಮ್ಮಲು ಒಂದು ವೇದಿಕೆ ಬೇಕು. ಆ ಕೀರ್ತಿ ಬೆಂಗಳೂರು ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ ಅಥವಾ ಕರ್ನಾಟಕ ವಿಶ್ವವಿದ್ಯಾಲಯಗಳಿಗೆ ಸಲ್ಲುತ್ತದೆ. ನನಗೆ ಹೆಮ್ಮೆಯೆನಿಸುತ್ತದೆ. ಜೊತೆಗೆ ಅನೇಕ ಜನ ಸಹಪಾಠಿಗಳು ಡಾ:ತೇಜಸ್ವಿನಿಗೌಡ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರಬಹುದು, ಡಾ:ವೈ.ಎ.ನಾರಾಯಣಸ್ವಾಮಿ ಇರಬಹುದು. ಅವರೆಲ್ಲಾ ಆಗಿನ ಪ್ರತಿಭಾವಂತ ವಿದ್ಯಾರ್ಥಿಗಳಾಗಿದ್ದು, ನಾವೆಲ್ಲಾ ಒಟ್ಟಿಗೆ ಓದಿದ್ದೇವೆ.

ಸೆಂಟ್ ಜೋಸೆಫ್ ಬಗ್ಗೆ ಏಕೆ ಹೇಳುತ್ತಿದ್ದೇನೆಂದರೆ ನಾನು ಕೂಡ ಹಳ್ಳಿಗಾಡಿನ ವಿದ್ಯಾರ್ಥಿ. ಸೆಂಟ್ ಜೋಸೆಫ್ ಕಾಲೇಜಿನಲ್ಲಿ ನಾನು ಬಿ.ಎ. ಸೇರಿದಾಗ ಅಲ್ಲಿಯ ವಾತಾವರಣ ಭಿನ್ನವಾಗಿತ್ತು. ಇದು ಇಂಗ್ಲೆಡ್‌ನಲ್ಲಿದೆಯೋ ಅಥವಾ ಅಮೆರಿಕಾದಲ್ಲಿದೆಯೋ ಎನ್ನುವಂತಹ ಪರಿಸ್ಥಿತಿ ಇತ್ತು. ನಾನು ಹಳ್ಳಿಗಾಡು ಹಿನ್ನೆಲೆಯುಳ್ಳವನಾಗಿದ್ದು, ಅಲ್ಲಿಯ ವಾತಾವರಣ ಹೊಸದಾಗಿತ್ತು. ಎಲ್ಲಾ ಆಗರ್ಭ ಶ್ರೀಮಂತರ ಮಕ್ಕಳು, ಅವರ ಉಡುಗೆ-ತೊಡುಗೆಗಳು ಕೂಡ ಬೇರೆಯದೇ ಆಗಿತ್ತು. ಆ ರೀತಿಯ ವ್ಯವಸ್ಥೆ ಇತ್ತು. ಭಗವಂತನ ಆಶೀರ್ವಾದದಿಂದ ಅಂತಹ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಡಿಸ್ಟಿಂಕ್ಷನ್‌ನಲ್ಲಿ ಉತ್ತೀರ್ಣನಾಗಿ ಎಂ.ಎ. ಮಾಡಿ ನಂತರ ಎಂ.ಫಿಲ್ ಕೂಡ ಮಾಡಿದೆನು. ಅಲ್ಲಿಯೂ ಸಹ ನಾನು ರ್‍ಯಾಂಕ್ ಅನ್ನು ಗಳಿಸಿದೆನು. 1996ರಲ್ಲಿ ಕೆ.ಪಿ.ಎಸ್.ಸಿ. ಮುಖಾಂತರ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕನಾಗಿ ಆಯ್ಕೆಯಾಗಿದ್ದೆನು.

**ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ:-** ಮಾನ್ಯ ಸಭಾಪತಿಯವರೇ, ಮಾನ್ಯ ಅಪ್ಪಾಜಿಗೌಡರ ಈ ವಿಚಾರ ಯಾರಿಗೂ ತಿಳಿದಿರಲಿಲ್ಲ. ಈ ಸದನದ ಮುಖಾಂತರ ಒಳ್ಳೆಯ ವಿಚಾರಗಳನ್ನು ಹೇಳಿದ್ದಾರೆ. ಸಂತೋಷ.

**ಶ್ರೀ ಎನ್.ಅಪ್ಪಾಜಿಗೌಡ:-** ನಮ್ಮ ಜೀವನದಲ್ಲಿ ಇಂತಹ ಒಂದು ವೇದಿಕೆಯನ್ನು ಕಲ್ಪಿಸಿಕೊಟ್ಟಂತಹ ನಮ್ಮ ಪದವಿ ಇರಬಹುದು, ಸ್ನಾತಕೋತ್ತರ ಪದವಿ ಇರಬಹುದು. ನಾವು ಸೆನೆಟ್ ಅಥವಾ ಸಿಂಡಿಕೇಟ್‌ನಲ್ಲಿ ಕೆಲಸ ಮಾಡಿ ಬಂದಿರುವವರು. ನಮ್ಮೆಲ್ಲರ ಭದ್ರ ಬುನಾದಿ ನಮ್ಮ ಬೆಂಗಳೂರು ವಿಶ್ವವಿದ್ಯಾನಿಲಯ ಎಂದು ಹೇಳಲು ನನಗೆ ಬಹಳ ಹೆಮ್ಮೆಯೆನಿಸುತ್ತದೆ.

ವಿಶೇಷವಾಗಿ ಸೆಂಟ್ ಜೋಸೆಫ್ ವಿಶ್ವವಿದ್ಯಾಲಯದಂತಹ ಖಾಸಗಿ ಕಾಲೇಜುಗಳು ವಿಶ್ವವಿದ್ಯಾಲಯಗಳನ್ನು ಪ್ರಾರಂಭ ಮಾಡುತ್ತಿದೆ. ಈ ಒಂದು ಕಾಲೇಜಿನಲ್ಲಿರುವ faculty ಯ ಬಗ್ಗೆ ನನಗೆ ಬಹಳ ಮೆಚ್ಚುಗೆಯಿದೆ. ಆ ಕಾಲದಲ್ಲಿಯೇ ನಮ್ಮ ರಾಜ್ಯದಲ್ಲಿದ್ದಂತಹ ಒಳ್ಳೆಯ ಪ್ರೊಫೆಸರ್‌ಗಳು ಅಲ್ಲಿದ್ದರು. ಅದರಲ್ಲಿ ಬಡವರನ್ನು, ಹಳ್ಳಿಗಾಡಿನಿಂದ ಬಂದವರನ್ನು ಯಾರನ್ನೂ ಹಣಕಾಸಿನ ದೃಷ್ಟಿಯಿಂದ ನೋಡದೆ ಯಾರ್ಯಾರು ಮೆರಿಟ್ ವಿದ್ಯಾರ್ಥಿಗಳಿದ್ದರೋ ಅಂಥವರಿಗೆ ಮಾತ್ರ ಅಲ್ಲಿ ಅವಕಾಶವಿತ್ತು. ಅಂತಹ ಒಂದು ಕಾಲೇಜು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡುತ್ತಿರುವುದು ಬಹಳ ಸಂತೋಷದ ವಿಷಯ.

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಅದರ ಜೊತೆಯಲ್ಲಿ ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇಂದು ಹಲವು ಇಂಜಿನಿಯರಿಂಗ್ ಕಾಲೇಜುಗಳು ಇವೆ. ಈಗಾಗಲೇ ಮಾನ್ಯ ಮರಿತಿಬ್ಬೇಗೌಡರು ಹೇಳಿದಂತೆ ಕೆಲವು ಕಾಲೇಜುಗಳಲ್ಲಿ ಒಂದು ಸಾವಿರ ಸಂಖ್ಯೆಯಲ್ಲಿ ಪ್ರವೇಶಾತಿಯಿದೆ. 1999–2000ನೇ ಸಾಲಿನಲ್ಲಿ ಮಾನ್ಯ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಸುಮಾರು ಇಂಜಿನಿಯರಿಂಗ್ ಕಾಲೇಜುಗಳು ಪ್ರಾರಂಭವಾದವು. ಕೆಲವು ಗುಣಮಟ್ಟದ ಶಿಕ್ಷಣವನ್ನು ಕೊಡುತ್ತಿವೆ. ಆದರೆ ಕಾಲಾನಂತರ ಸ್ವಾಯತ್ತ ಇಂಜಿನಿಯರಿಂಗ್ ಕಾಲೇಜುಗಳು, ಡೀಮ್ಡ್ ವಿಶ್ವವಿದ್ಯಾಲಯಗಳು, ಖಾಸಗಿ ವಿಶ್ವವಿದ್ಯಾಲಯಗಳು ಪ್ರಾರಂಭವಾದವೋ ಆಗ ಕಟ್ಟಡ ಗುತ್ತಿಗೆದಾರರಾಗಿದ್ದವರು ಮಾಲೀಕರಾದರು. ಅಲ್ಲಿ 15,000–16,000 ಜನ ಮಕ್ಕಳಿದ್ದಾರೆ. ಗುತ್ತಿಗೆದಾರರಾಗಿದ್ದವರು ಆ ವಿಶ್ವವಿದ್ಯಾಲಯಗಳಿಗೆ Chancellor and Vice Chancellor.

**(...ಮುಂದು)**

(133) 03.02.2021, 6 .30. KG.BNS

**ಶ್ರೀ ಎನ್.ಅಪ್ಪಾಜಿಗೌಡ (ಮುಂದು.,):–**

ಇದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಯವರು ಕಡಿವಾಣ ಹಾಕಬೇಕು. Chancellor ಮತ್ತು Vice Chancellor ಆಗುವುದಕ್ಕೆ ಅವರು ವಿಶ್ವವಿದ್ಯಾನಿಲಯದಲ್ಲಿ ಏನಾದರೂ ಮಾನದಂಡ ಇಲ್ಲವೇ? ದಯವಿಟ್ಟು, ಮಾನ್ಯ ಸಚಿವರು ಇದನ್ನು ಯೋಚನೆ ಮಾಡಬೇಕು. ಇವತ್ತು ದುರಂತ ಏನೆಂದರೆ, ಎಷ್ಟೋ Engineering College ಗಳು ಮುಚ್ಚಿ ಹೋಗುತ್ತಿವೆ. ನಾವು ಕೆಲವರು ದುಡ್ಡು ಮಾಡಿಕೊಳ್ಳುತ್ತಿದ್ದಾರೆಂದು ಅಂದುಕೊಂಡಿದ್ದೇವೆ. ಆದರೆ, ಎಷ್ಟೋ ವಿದ್ಯಾಸಂಸ್ಥೆಗಳಲ್ಲಿ ವೇತನ ಕೊಡುವುದಕ್ಕೆ ಹಣ ಇಲ್ಲದೇ, ಅವರ ಮನೆ ಮಠಗಳನ್ನು ಮಾರಾಟ ಮಾಡಿ ಸಂಬಳ ಕೊಟ್ಟಿರುವಂತಹ ನಿರ್ದೇಶನಗಳು ಇವೆ. ಅದನ್ನು ಸಹ ತಾವು ಪರಿಗಣಿಸಬೇಕು. ಎಲ್ಲಾ ಕಾಲೇಜುಗಳು ಲಾಭದಾಯಕವಾಗಿಲ್ಲ. ಕೆಲವರು ಯಾರೋ, 'A' Grade College ಗಳು ಅಂತಹವು, ಬೆಂಗಳೂರಿನಲ್ಲಿ ಸುಮಾರು ನಾಲ್ಕೈದು Institutions ಇರಬಹುದು, ಅವರು ಮಾತ್ರ ಹಣ ಮಾಡುತ್ತಿದ್ದಾರೆ. ಎಲ್ಲಾ ಕಾಲೇಜುಗಳು ಅಲ್ಲ. ಅದಕ್ಕೆ ಮಾನ್ಯ ಉಪ ಮುಖ್ಯ ಮಂತ್ರಿಯವರಲ್ಲಿ, ತಾವು ಏನಾದರೂ AICTE ತಾವಿಬ್ಬರೂ ಒಂದು ಪರಸ್ಪರ correspondence ಮಾಡಿಕೊಂಡು ಅವರ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಒಂದು intake ಅನ್ನು ಕಡಿಮೆ ಮಾಡದಿದ್ದರೆ, ಮುಂದಿನ ದಿವಸಗಳಲ್ಲಿ ಯಾರ್ಯಾರು ಒಂದು education ಕೊಡಬೇಕೆಂದು ಆಸೆಯಿತ್ತು, ಅಂತಹವರು educational Institution ಗಳನ್ನು ಮುಚ್ಚಿ ಬೀದಿಗೆ ಬರುವಂತಹ ಪರಿಸ್ಥಿತಿ ನಿರ್ಮಾಣವಾದರೆ ಆಶ್ಚರ್ಯವಿಲ್ಲವೆಂದು ಹೇಳಿ, ನಾನು ಕೆಲವೊಂದು ಮಾರ್ಪಾಡುಗಳನ್ನು ಮಾಡಿ, ಇದು ಒಂದೇ ವಿಧೇಯಕವಲ್ಲ. ಎಲ್ಲಾ ವಿಧೇಯಕಗಳನ್ನು ಮಾನ್ಯ ಎಲ್ಲಾ ಸದಸ್ಯರು ಚರ್ಚೆ ಮಾಡಿ ಅದರ ಸಾಧಕ ಭಾದಕಗಳನ್ನು ಯೋಚನೆ ಮಾಡಿ ಅಂಗೀಕಾರ ಮಾಡುವುದು ಒಳ್ಳೆಯದು ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ವಿಶ್ವ ವಿದ್ಯಾನಿಲಯಗಳನ್ನು ಹೊಸದಾಗಿ ಪ್ರಾರಂಭ ಮಾಡುತ್ತಲೇ ಇದ್ದಾರೆ. ಈಗಾಗಲೇ 22 ವಿಶ್ವವಿದ್ಯಾನಿಲಯಗಳು ಇವೆ. ಅಲ್ಲಿ ಘರ್ಷಣೆ ಪ್ರಾರಂಭವಾಗಿದೆ. ಅಲ್ಲಿ ಮಾನ್ಯ ರಾಜ್ಯಪಾಲರು ಒಂದು ಕಡೆ. ಸರ್ಕಾರ ಒಂದು ಕಡೆ. ನಾವು ರಾಜ್ಯಪಾಲರ ಕಡೆಯಿಂದ ನೌಕರರನ್ನು ತೆಗೆದುಕೊಳ್ಳುವುದಕ್ಕೆ permission ತೆಗೆದುಕೊಂಡು ಬಿಟ್ಟಿದ್ದೇವೆ, ಸರ್ಕಾರ ಏನು ನಮಗೆ ಸಂಬಂಧವಿಲ್ಲ ಎನ್ನುವುದು, ಹಾಗಾದರೆ, ಇನ್ನೂ Rules ಏಕೆ ಮಾಡಿಲ್ಲ? ಇನ್ನೂ ಎಷ್ಟು ದಿವಸಗಳು ಬೇಕು Rules ಮಾಡುವುದಕ್ಕೆ? ಮೈಸೂರು ವಿಶ್ವವಿದ್ಯಾನಿಲಯದ ಗಲಾಟೆಯನ್ನು ತಾವೆಲ್ಲರೂ ಕೇಳಿರಬಹುದು. ಅಲ್ಲಿ Vice Chancellor ರವರದ್ದು ಗಲಾಟೆಯಾಗಿತ್ತು. ಇಲ್ಲಿ ಅವರ ಹೆಸರನ್ನು ತೆಗೆದುಕೊಳ್ಳುವುದು ಬೇಡ. ಈಗ ಮಾನ್ಯ ಸಚಿವರು ಉಪ ಮುಖ್ಯ ಮಂತ್ರಿಗಳಾಗಿದ್ದಾರೆ. ಈಗ ಆ ಉಪ ಎಂಬುದನ್ನು ತೆಗೆದು ಮುಖ್ಯಮಂತ್ರಿಗಳು ಆಗಬೇಕು. ಇಲ್ಲಿ ಪಾಪ ಎನ್ನುವುದಲ್ಲ. ಯಾರೋ ಪುಣ್ಯಾತ್ಮರು ಮಾನ್ಯ ಸಚಿವರ ಹೆಸರನ್ನು ಕೆಡಿಸುವುದಕ್ಕೆ ಇವರಿಗೆ ಇಂತಹ ವಿಧೇಯಕವನ್ನು ತರುವುದಕ್ಕೆ ಕಳುಹಿಸಿದ್ದಾರೆ.

ಮಾನ್ಯ ಸಭಾಪತಿಯವರೇ, ಇದರಲ್ಲಿ ಮಾನ್ಯ ಸಚಿವರು ಏನು ಸಾಧನೆ ಮಾಡುತ್ತಾರೆ? ಇದರಲ್ಲಿ 60% ಬೇರೆ ಕಡೆಯವರು, 40% ಮಾತ್ರ ನಮ್ಮ ರಾಜ್ಯದವರು ಎಂದು ಇದೆ. ಇದರಿಂದ ನಮ್ಮ ರಾಜ್ಯವನ್ನು ಏನು ಉದ್ದಾರ ಮಾಡುತ್ತಾರೆ? 60% ಬೇರೆ ರಾಜ್ಯದವರನ್ನು ತಂದು ಇಲ್ಲಿ ಉದ್ದಾರ ಮಾಡುವುದಕ್ಕೆ ಈ ವಿಧೇಯಕವನ್ನು ತಂದಿದ್ದಾರೆಯೇ? ಇದರಲ್ಲಿ ಏನು ಪುರುಷಾರ್ಥ ಇದೆ? ಇದರಿಂದ ನಮ್ಮ ರಾಜ್ಯಕ್ಕೆ ಹಾನಿಯಾಗುತ್ತದೆ. ರಸ್ತೆ, ರಸ್ತೆಗಳಲ್ಲಿ Certificate ಗಳು ಸಿಗುತ್ತವೆ. ಯಾವ Degree

ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

Certificates ಕೇಳುತ್ತೀರಿ, M.A. Degree ಕೇಳಿ, B.E. Degree ಕೇಳಿ ಎಲ್ಲವೂ ಸಿಗುತ್ತವೆ.

**ಶ್ರೀ ಎಸ್.ಆರ್.ಪಾಟೀಲ್ (ವಿರೋಧ ಪಕ್ಷದ ನಾಯಕರು):-** ಮಾನ್ಯ ಸದಸ್ಯರೇ, Ph.D. ಸಿಗುತ್ತದೆಯೇ?

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ವಿರೋಧಪಕ್ಷದ ನಾಯಕರೇ, Ph.D. ಸಿಗುತ್ತದೆ ಬಿಡಿ. Columbia University, Sikkim University ಯಿಂದ Doctorate ಗಳನ್ನು ತೆಗೆದುಕೊಂಡು ಬರುತ್ತಾರೆ. ನಮ್ಮ ಮಾನ ಮರ್ಯಾದೆಗಳನ್ನು ತೆಗೆಯುವಂತಹ University ಗಳು ನಮಗೆ ಬೇಕೇ? ಇದರಲ್ಲಿ ಕೆಲವರು ಒಳ್ಳೆಯವರು ಇದ್ದಾರೆ.,

**(ಗೊಂದಲ)**

**ಡಾ॥ತೇಜಸ್ವಿನಿಗೌಡ (ವಿಧಾನ ಸಭಾ ಕ್ಷೇತ್ರ):-** ಮಾನ್ಯ ಸಭಾಪತಿಯವರೇ, Sikkim ನಮ್ಮ ದೇಶದ ಈಶಾನ್ಯ ರಾಜ್ಯಗಳಲ್ಲಿ ಒಂದು.,

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:-** ಮಾನ್ಯ ಸಭಾಪತಿಯವರೇ, ಅದು ನನಗೆ ಗೊತ್ತು. ನಾನು ಹೇಳುತ್ತಿದ್ದೇನೆ ಅಲ್ಲವೇ; ನಾನೇನು ಕರ್ನಾಟಕ ಎಂದು ಹೇಳಿದ್ದೇನೆಯೇ?

**(ಗೊಂದಲ)**

**ಡಾ॥ತೇಜಸ್ವಿನಿಗೌಡ:-** ಮಾನ್ಯ ಸಭಾಪತಿಯವರೇ, Sikkim ರಾಜ್ಯದಲ್ಲಿ ನಮ್ಮ ಕರ್ನಾಟಕದ ಕಾಲೇಜು ಇದೆ.,

**(ಗೊಂದಲ)**

**ಶ್ರೀ ಮರಿತಿಬ್ಬೆಗೌಡ:-** ಮಾನ್ಯ ಸಭಾಪತಿಯವರೇ, ಈ ಡಾಕ್ಟರೇಟ್ ಪದವಿ ಎಲ್ಲಿಗೆ ಹೋಗಿದೆ ಎಂದರೆ, ನಮ್ಮ ರಾಜ್ಯದಲ್ಲಿ ಅನೇಕ ಶಾಸಕರು ಡಾಕ್ಟರೇಟ್ ಪದವಿಯನ್ನು ತೆಗೆದುಕೊಂಡಿದ್ದಾರೆ..

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಬಹಳ ಮಂದಿ ತೆಗೆದುಕೊಂಡಿದ್ದಾರೆ.

**ಶ್ರೀ ಮರಿತಿಬ್ಬೆಗೌಡ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಅದರಲ್ಲಿ ಕೆಲವರು ತೋರಿಸುತ್ತಿದ್ದಾರೆ. ಇನ್ನೂ ಕೆಲವರು ಮನೆಯಲ್ಲಿ ಇಟ್ಟುಕೊಂಡಿದ್ದಾರೆ. ಆ ಪರಿಸ್ಥಿತಿಗೆ ಈ ಡಾಕ್ಟರೇಟ್ ಪದವಿ ಹೋಗಿದೆ.

**(ಗೊಂದಲ)**

**ಡಾ||ವೈ.ಎ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ಮಾನ್ಯ ತಿಮ್ಮಾಪೂರರವರು ಡಾಕ್ಟರೇಟ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ..

**(ಗೊಂದಲ)**

**ಸಭಾಪತಿಯವರು:–** ಮಾನ್ಯ ತಿಮ್ಮಪೂರರವರೇ, ತಾವು yield ಆಗಬೇಡಿ.

**ಡಾ||ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಡಾಕ್ಟರೇಟ್ ಬೇರೆ, Ph.D. Doctorate ಬೇರೆ. ಇದು ಸಮಸ್ಯೆ ಅಲ್ಲ.

**(ಗೊಂದಲ)**

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾಳೆಗೆ ಟೈಮ್ ಕೊಡಿ. ಅವರು ಸುಮ್ಮನೆ divert ಮಾಡುತ್ತಿದ್ದಾರೆ. ಈ ವಿಧೇಯಕ ಕರ್ನಾಟಕಕ್ಕೆ ಮಾರಕವಾಗಿದೆ. ಈ ರೀತಿ ಮಾರಕವಾದಂತಹ ವಿಧೇಯಕಗಳನ್ನು ತರುವುದರ ಮೂಲಕ.,

**(ಗೊಂದಲ)**

**ಶ್ರೀ ಎಂ.ನಾರಾಯಣಸ್ವಾಮಿ:–** ಮಾನ್ಯ ಸಭಾಪತಿಯವರೇ, ನಾವು ಶಾಸಕಾಂಗ ಪಕ್ಷದ ಸಭೆಗೆ ಹೋಗಬೇಕಾಗಿದೆ. ಈ ರೀತಿ ಮಾತನಾಡುತ್ತಿದ್ದರೆ, ಈ ವಿಷಯವನ್ನು ನಾಳೆಗೆ ತೆಗೆದುಕೊಳ್ಳಿ.

**(ಗೊಂದಲ)**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ನಾಳೆಗೆ ಅವಕಾಶ ಕೊಡಿ.,

**(ಗೊಂದಲ)**

**ಸಭಾಪತಿಯವರು:–** ಮಾನ್ಯ ಸದಸ್ಯರೇ, ತಾವು ಮಾತನಾಡಿ. ತಾವು yield ಆಗಬೇಡಿ. ತಾವು ಮಾತನಾಡಿ.

**ಶ್ರೀ ಆರ್.ಬಿ.ತಿಮ್ಮಾಪೂರ:–** ಮಾನ್ಯ ಸಭಾಪತಿಯವರೇ, ಇದರಿಂದ ನಮ್ಮ ರಾಜ್ಯಕ್ಕೆ ಏನು ಲಾಭ? ಮಾನ್ಯ ಉಪ ಮುಖ್ಯ ಮಂತ್ರಿಯವರು ಮುಂದೆ ಏನಾದರೂ ಮುಖ್ಯ ಮಂತ್ರಿಗಳು ಆಗಬೇಕಾದರೆ, ಅವರಿಗೆ ದಲಿತರ ಮತಗಳು ಬೇಡವೇ? ದಲಿತರ ಬಗ್ಗೆ ಪೂರ್ಣವಾಗಿ ಅನ್ಯಾಯ ಮಾಡುವಂತಹದ್ದು, ಇದರಲ್ಲಿ ದಲಿತರ ಬಗ್ಗೆ ಏನು ಹೇಳಿದ್ದಾರೆ? ಹಾಗಾದರೆ, ಬಿ.ಜೆ.ಪಿ., ಸರ್ಕಾರ ಅಧಿಕಾರಕ್ಕೆ ತರುವುದಕ್ಕೆ ದಲಿತರು ಮತ ಹಾಕಲಿಲ್ಲವೇ? ಏಕೆ ಅನ್ಯಾಯ ಮಾಡುತ್ತಿದ್ದೀರಿ? ಏಕೆ ಅದರ ಬಗ್ಗೆ ಏನು ಹೇಳುತ್ತಿಲ್ಲ? ಅಂದರೆ, ಇಲ್ಲಿ ಸಂಪೂರ್ಣವಾಗಿ ಒಂದೊಂದು ವರ್ಗವನ್ನು ಮುಗಿಸಿಬಿಡಬೇಕು ಎನ್ನುವಂತಹ ಕುತಂತ್ರವನ್ನು ಮಾಡುತ್ತಿದ್ದಾರೆ. ಸ್ವಾಮಿ, ಇದು ಸಫಲವಾಗುವುದಿಲ್ಲ. ಇದರಿಂದ, ಅವರಿಗೂ ಮತ್ತು ಅವರ ಪಕ್ಷಕ್ಕೂ ಕೆಟ್ಟ ಹೆಸರು ಬರುತ್ತದೆ ಎನ್ನುವುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ.

ಮಾನ್ಯ ಸಭಾಪತಿಯವರೇ, ಆ ಇದ್ದ ಹಣ 15 ಕೋಟಿ ರೂಪಾಯಿಗಳು ಅಥವಾ 25 ಕೋಟಿ ರೂಪಾಯಿಗಳು, ಅದನ್ನು 75 ಕೋಟಿ ರೂಪಾಯಿಗಳನ್ನು ಶಾಸನ ರೀತಿಯಲ್ಲಿಟ್ಟು ಬೇಕಾದಂತೆ ಖರ್ಚು ಮಾಡಿಕೊಳ್ಳಬಹುದಂತೆ. ಅದನ್ನು ಇಡುವುದು ಏಕೆ? ಅವರು ಏನಾದರೂ ತಪ್ಪು ತಡೆಗಳನ್ನು ಮಾಡಿದರೆ ಏನು ಶಿಕ್ಷೆ? ರದ್ದು ಮಾಡಿ ಬಿಡುವುದಂತೆ. ಇಷ್ಟೊಂದು ವಿದ್ಯಾರ್ಥಿಗಳೊಂದಿಗೆ ಚೆಲ್ಲಾಟವಾಡುವಂತಹ ಇವರುಗಳಿಗೆ punishment ಇಲ್ಲ. ಅವರು ಏನಾದರೂ ತಪ್ಪು ಮಾಡಿಬಿಟ್ಟರೆ, ಆಯಿತು. ವಿಶ್ವವಿದ್ಯಾನಿಲಯವನ್ನಾದರೂ ಬಂದ್ ಮಾಡುತ್ತೇವೆ ಅಥವಾ ಕಾಲೇಜನ್ನಾದರೂ ಬಂದ್ ಮಾಡುತ್ತೇವೆ. ಅಂದರೆ, ಈ ಸರ್ಕಾರ ಎಲ್ಲೋ ಒಂದು ಕಡೆ ಈ ಕಪ್ಪು ಹಣ ಇಲ್ಲಿ ಬರತಕ್ಕಂತಹದ್ದು, ಅನಧಿಕೃತವಾಗಿ ಹಣ ಕೊಡಿಸುವಂತಹ ಸಂಸ್ಥೆಗಳನ್ನು ಹುಟ್ಟು ಹಾಕುವುದು, ಇದರಿಂದ ಲಾಭ ಪಡೆದುಕೊಳ್ಳುವುದಕ್ಕೆ ಸರ್ಕಾರದ ಯಾವುದೋ ಒಂದು ಕುತಂತ್ರವಿದೆ ಎಂದು ನನಗೆ ಅನಿಸುತ್ತದೆ. ದಯಮಾಡಿ, ಮಕ್ಕಳ ಜೊತೆಗೆ ಈ ಚೆಲ್ಲಾಟ ಸರಿಯಲ್ಲ. ತಾವು ಇನ್ನೊಮ್ಮೆ ಚಿಂತನೆ ಮಾಡಿ. Joint Selection Committee ಗೆ ಹಾಕಿ. ಇನ್ನು ಕೆಲವು ತಜ್ಞರನ್ನು ವಿಚಾರ ಮಾಡಿ. ತರಾತುರಿಯಲ್ಲಿ ದಲಿತರಿಗೆ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಮಾರಕವಾಗುವಂತಹ ಮತ್ತು ರಾಜ್ಯಕ್ಕೆ ಮಾರಕವಾಗುವಂತಹ ವಿಧೇಯಕವನ್ನು ತಂದು ಏನು ಸಾಧನೆ ಮಾಡುತ್ತಾರೆ? ಯಾವ ಪುರಷಾರ್ಥಕ್ಕಾಗಿ ಇದನ್ನು ಮಾಡುತ್ತಿದ್ದಾರೆ?

ಮಾನ್ಯ ಸಭಾಪತಿಯವರೇ, ಅಂಕಪಟ್ಟಿಯಲ್ಲಿ ಏನಾದರೂ ಏರುಪೇರಾದರೆ, 50 ಸಾವಿರದಿಂದ 10 ಲಕ್ಷ ರೂಪಾಯಿಗಳ ದಂಡ. ಹಲವಾರು ಸದಸ್ಯರು ಪರೀಕ್ಷೆಗಳನ್ನು ಸರ್ಕಾರವೇ conduct ಮಾಡಬೇಕೆಂದು ಹೇಳಿದ್ದಾರೆ. ದಲಿತ ವಿದ್ಯಾರ್ಥಿಗಳಿಗೆ ನೌಕರಿಯಲ್ಲಿ ಪ್ರಾಮುಖ್ಯತೆ ಕೊಡಬೇಕು. ಇಲ್ಲದಿದ್ದರೆ, ಇದು ದಲಿತರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾರಕವಾದಂತಹ ಬಿಲ್ಲು ಆಗುತ್ತದೆ. ತಮಗೆ ಇನ್ನೊಂದು ವಿಷಯವನ್ನು ಹೇಳಬೇಕೆಂದರೆ, ಈ Certificate ಗಳು, ಸ್ವಾಮಿ ನಿಮ್ಮ ಕಾಲೇಜುಗಳಿಗೂ ಸಹ ಯಾರು ಬರುವುದಿಲ್ಲ. ಮನೆಯಲ್ಲಿ ಕುಳಿತುಕೊಂಡಿದ್ದರೆ Certificate ಗಳು ಸಿಗುತ್ತವೆ. ನಿಮ್ಮ ಕಾಲೇಜುಗಳಿಗೆ ಏಕೆ ಬರಬೇಕು? ಪುಕ್ಕಟೆಯಾಗಿ 99% ನ ಅಂಕಪಟ್ಟಿಗಳು ಸಿಗುತ್ತದೆ. ಓದಲಿಲ್ಲವೆಂದರೂ ಸಹ ಸಿಗುತ್ತದೆ. ಅವರು ಶಾಲೆಗೆ ಹೋಗಲಿಲ್ಲವೆಂದರೂ ಸಹ ಸಿಗುತ್ತದೆ. ಹೌದು, ಅವರ attendance ನೋಡುತ್ತೀರಾ, ಇದರಲ್ಲಿ ಸರ್ಕಾರದ ಏನು ಕ್ರಮ ಇದೆ? ದಿವಸ ಎಷ್ಟು ಹಾಜರಾತಿ ಬಂತು ಎಂದು ಪ್ರತಿ ದಿವಸ ನೋಡುತ್ತೀರಾ? ಈಗಲೇ ಎಷ್ಟೋ ಕಾಲೇಜುಗಳಿಗೆ ಮಕ್ಕಳು ಬರುವುದಿಲ್ಲ. ಪರೀಕ್ಷೆಯಲ್ಲಿ ಯಾರನ್ನು ಕೂರಿಸಿ ಬರೆಸಿ ಪ್ರಮಾಣ ಪತ್ರ ತೆಗೆದುಕೊಳ್ಳುತ್ತಾರೆ. ಇನ್ನೂ ಇದರ ಹಣೆಬರಹ ತಿನ್ನುವಷ್ಟು ಇದೆ. ಅದಕ್ಕೆ ನಾನು ದಯಮಾಡಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನೊಮ್ಮೆ ಯೋಚನೆ ಮಾಡಿ. ನಮ್ಮ ರಾಜ್ಯಕ್ಕೆ ಮಾರಕವಾದಂತಹ ವಿಧೇಯಕ ಬೇಡ ಎನ್ನುವಂತಹ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

**ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗಾಗಲೇ ಮಾನ್ಯ ಸದಸ್ಯರು ಇದರ ಬಗ್ಗೆ ಸಾಕಷ್ಟು ವಿವರವಾಗಿ ಮಾತನಾಡಿದ್ದಾರೆ. ಮಾನ್ಯ ಸಚಿವರಲ್ಲಿ ನನ್ನದೊಂದು clarification ಇದೆ. ಆಂಧ್ರ ಪ್ರದೇಶದಲ್ಲಿ Agriculture college ಅನ್ನು ತೆಗೆದುಬಿಟ್ಟರು. ಅಲ್ಲಿ ಏನು ಮಾಡಿದ್ದಾರೆ, ಅಲ್ಲಿ ಎರಡು ವರ್ಷಗಳ ಕಾಲ ಸಾವಿರ, ಸಾವಿರ ವಿದ್ಯಾರ್ಥಿಗಳನ್ನು ತೆಗೆದುಕೊಂಡು ಬಿಟ್ಟರು. ಇದನ್ನು ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಉಲ್ಲೇಖ ಮಾಡಿದ್ದಾರೆ. ಸಾವಿರ, ಸಾವಿರ ವಿದ್ಯಾರ್ಥಿಗಳನ್ನು intake ಮಾಡಿದರು. ಅದು ನಾಲ್ಕು ವರ್ಷದ ಪದವಿ. ನಂತರ ಅದು ICAR ರವರಿಂದ objection ಆಯಿತು. Objection ಆದ ಮೇಲೆ, ಆ ಎರಡು ವರ್ಷಗಳ ವಿದ್ಯಾರ್ಥಿಗಳ ಪೂರ್ತಿ ಶುಲ್ಕ, ಶಿಕ್ಷಣ ಎಲ್ಲವು ಹೋಯಿತು. ಅದಕ್ಕೆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನನ್ನ ಕಳಕಳಿ ಏನೆಂದರೆ, ಈಗ ತಾವು private Universities ಗೆ ಕೊಡುವುದಕ್ಕೆ ಇದ್ದೀರಿ, ಅದರಲ್ಲಿ Agriculture College, Veterinary College, Forestry College, Horticulture College, Dairy Science and Veterinary, Marketing and Co-operation, Home Science, Seed Technology ಇಂತಹ ಕಾಲೇಜುಗಳಿಗೆ ಏನಾದರೂ ಅನುಮತಿ ಕೊಡುತ್ತೀರಾ? ಏಕೆಂದರೆ ಇವುಗಳಿಗೆ ಕೊಡಬೇಕು.

(ಮುಂದು.,)

(134)03–02–2021(6–40)ಎಂವಿ–ಬಿಎನ್ಎಸ್

**ಶ್ರೀ ಬಸವರಾಜ ಪಾಟೀಲ್ ಇಟಗಿ (ಮುಂದು):–**

ಮಾನ್ಯ ಸಭಾಪತಿಯವರೇ, Agriculture and Dairy Science Colleges ಗೆ permission ಕೊಡಬೇಕಾದರೆ 1,000 acres ಜಾಗ ಬೇಕು. ಏಕೆಂದರೆ, ಕೇವಲ ಅಲ್ಲಿ ಕಲಿಸುವುದು ಅಷ್ಟೆ ಅಲ್ಲ. ಅಲ್ಲಿ ರಿಸರ್ಚ್ ನಡೆಯಬೇಕು. ಧಾರವಾಡ ಕೃಷಿ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಿವೆ. ಅಲ್ಲೆಲ್ಲಾ ರಿಸರ್ಚ್ ಆಗಬೇಕು, field trials ಆಗಬೇಕು. ಅದಕ್ಕೆ ಸಾಕಷ್ಟು land ಬೇಕು. ಈಗ ಇರುವುದು ಕೇವಲ 25 ಎಕರೆ ಎಂದು ಹೇಳಿದ್ದಾರೆ. ಆದುದರಿಂದ ಇವುಗಳಿಗೆಲ್ಲಾ ಅನುಮತಿ ಕೊಡುತ್ತಾರೋ ಇಲ್ಲವೋ ಎಂದು ಸ್ಪಷ್ಟೀಕರಣ ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

**ಶ್ರೀ ಪ್ರಕಾಶ್ ಕೆ. ರಾಥೋಡ್ (ನಾಮನಿರ್ದೇಶನ ಹೊಂದಿದವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಈ ವಿಧೇಯಕದ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ವಿಶೇಷವಾಗಿ ಆರೋಗ್ಯದ ದೃಷ್ಟಿಯಿಂದ ಕ್ರೀಡೆಗೆ ಪ್ರೋತ್ಸಾಹ ಕೊಡಬೇಕು. ವಿಶ್ವವಿದ್ಯಾಲಯಗಳಲ್ಲಿ ಅಕಾಡೆಮಿಕ್ ಜೊತೆಗೆ ಕ್ರೀಡೆಗೂ ಸಹ ಪ್ರೋತ್ಸಾಹ ಕೊಡಬೇಕು. ಅಲ್ಲಿ ಸಾಕಷ್ಟು ಸೌಲಭ್ಯಗಳಿರಬೇಕು. ನನಗೆ ಅನಿಸುವ ಮಟ್ಟಿಗೆ, ನಾನು ಸಹ St. Joseph's College ನಲ್ಲಿ ಓದಿದ್ದೇನೆ. ಅಲ್ಲಿ ನನಗೆ ಕ್ರೀಡೆಯಲ್ಲಿ ಪ್ರತಿಭಾನ್ವಿತನಾಗುವುದಕ್ಕೆ ಸಾಕಷ್ಟು ಅವಕಾಶ ಸಿಕ್ಕಿತ್ತು. ಈಗ ಹೊಸ ವಿಶ್ವವಿದ್ಯಾಲಯಗಳನ್ನು ಮಾಡಿದ್ದಾರೆ. ನಾವು ಬೇರೆ ದೇಶಗಳನ್ನು ನೋಡಿದರೆ, ಅಲ್ಲಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ವಿಶ್ವವಿದ್ಯಾಲಯಗಳಲ್ಲಿ ಆರೋಗ್ಯ ದೃಷ್ಟಿಯಿಂದ ವಿಶೇಷವಾಗಿ ಕ್ರೀಡೆಗೆ ಪ್ರೋತ್ಸಾಹ ಕೊಡುತ್ತಾರೆ. ಈ ವಿಶ್ವವಿದ್ಯಾಲಯಗಳಲ್ಲೂ ಕೂಡ ಈ ರೀತಿಯ ಮಾನದಂಡವನ್ನು ಹಾಕಿದರೆ ಒಳ್ಳೆಯದಾಗಿರುವುದು ಎಂದು ನನ್ನ ಭಾವನೆ. ಆದರೆ, ಇದರಲ್ಲಿ ಅದು ಇಲ್ಲ. ಇದರ ಜೊತೆಗೆ ನನ್ನ ವೈಯಕ್ತಿಕ ಮತ್ತು ಮಾನ್ಯ ಆರ್.ಬಿ.ತಿಮ್ಮಾಪೂರವರು ಹೇಳಿದಂತೆ, ಪರಿಶಿಷ್ಟ ಜಾತಿಯವರಿಗೆ ಅಡ್ಮಿಷನ್ ಅನ್ನು ಕೊಟ್ಟರೆ, ಅದು ಒಳ್ಳೆಯದಾಗುತ್ತದೆ. ಏಕೆಂದರೆ, ನನ್ನ ಪ್ರಕಾರ ಬಹುಶಃ ಬೆಂಗಳೂರಿನ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಅಡ್ಮಿಷನ್‌ನಲ್ಲಿ reservation ಇಲ್ಲ. ಅಲ್ಲಿ ಮೆರಿಟ್ ಮೇಲೆ ಕೊಡುತ್ತಾರೆ. ಅದು ಒಳ್ಳೆಯದು. ಆದರೂ ಅದರಲ್ಲಿ ಸ್ವಲ್ಪ ಪ್ರತಿಶತ reservation ಅನ್ನು ಕೊಡಬೇಕು. ಕಡ್ಡಾಯವಾಗಿ reservation ಕೊಡುವಂತಹ ಮಾನದಂಡವನ್ನು ಮಾಡಬೇಕು. ಇಲ್ಲವಾದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳು ಅವಕಾಶಗಳಿಂದ ವಂಚಿತರಾಗುತ್ತಾರೆಂದು ಹೇಳುತ್ತೇನೆ.

**ಶ್ರೀ ಅಲ್ಲಂ ವೀರಭದ್ರಪ್ಪ (ವಿಧಾನ ಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಏನು ಈ ವಿಶ್ವವಿದ್ಯಾಲಯದ ವಿಧೇಯಕವಿದೆ ಅದನ್ನು ಕಳೆದ ಸರ್ಕಾರದಲ್ಲೂ ಸಹ move ಮಾಡಿದ್ದರು. ಈಗ ಈ ವಿಧೇಯಕವನ್ನು ತಂದಿರುವುದಕ್ಕೆ ಅದನ್ನು ಸ್ವಾಗತ ಮಾಡುತ್ತೇನೆ. I am an old student of St. Joseph's School and College and I welcome the Bill.

**ಡಾ॥ ಅಶ್ವಥ್‌ನಾರಾಯಣ್ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, ಮಾನ್ಯ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ ಮತ್ತು ವಿವಿಧ ವಿಚಾರಗಳ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಏನು ಸವಾಲು ಮತ್ತು ಸಮಸ್ಯೆಗಳು ಒಟ್ಟಾರೆ ಈ ಪವಿತ್ರವಾದಂತಹ ಸಭೆಯಿಂದ, ಏನು ಒಂದು ಜವಾಬ್ದಾರಿಯುತವಾಗಿ ನಾವು ಮಾಡುವಂತಹ ಶಾಸನಗಳು ಸಮಾಜಕ್ಕೆ ಶಕ್ತಿ ತುಂಬುವಂಥದ್ದಾಗಿರಬೇಕು. ಸಮಾಜಕ್ಕೆ ಪೂರಕವಾಗಿರಬೇಕು. ಎಲ್ಲೋ ಒಂದು ಕಡೆ ನಾವು ಮಾಡುವಂತಹ ಕಾಯ್ದೆಗಳು ಸಮಾಜಕ್ಕೆ ಒಂದು ಉತ್ತಮವಾದ ಬಾಳನ್ನು ಬದುಕಿ ಬಾಳುವುದಕ್ಕೆ ಅವಕಾಶವಾಗುವಂತಹ ರೀತಿಯಲ್ಲಿ ಈ ಶಾಸನಗಳನ್ನು ತರುವಂಥದ್ದು ಆಗಬೇಕು. ಈ ದಿಕ್ಕಿನಲ್ಲಿ ನಾನು ಒಬ್ಬ ಉನ್ನತ ಶಿಕ್ಷಣದ ಸಚಿವನಾಗಿ, ಅದೃಷ್ಟವಶಾತ್ ನನ್ನ ಕ್ಷೇತ್ರದಲ್ಲಿ ಬಹಳಷ್ಟು ವರ್ಷದ ಸಾಮಾಜಿಕ ಜೀವನದಲ್ಲಿ ನೋಡಿದಂತೆ, ನಾನು ಜನಪ್ರತಿನಿಧಿಯಾಗಿ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮೂರನೆ ಬಾರಿ ಆಯ್ಕೆಯಾಗಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರೆ, ನಾನು ಹಲವಾರು ವರ್ಷಗಳಿಂದ ಸಮಾಜದ ಸಮಸ್ಯೆಗಳನ್ನು ನೋಡುತ್ತಿದ್ದೇನೆ. ಸಮಾಜದ ಸಮಸ್ಯೆಗಳನ್ನು ಹೇಗೆ ಬಗೆಹರಿಸುವುದು? ಇಂತಹ ಸಮಸ್ಯೆಗಳು ಉದ್ಭವಾಗುತ್ತಿರುತ್ತವೆ ಮತ್ತು ಸಮಸ್ಯೆಗಳು ಬರುತ್ತಿರುತ್ತವೆ. ಇದನ್ನು ಹೇಗೆ ನಿಯಂತ್ರಣ ಮಾಡಿ ಬಗೆಹರಿಸಬೇಕು ಎಂದರೆ, ಈಗ ನಾವುಗಳು ಎಲ್ಲೋ ಒಂದಷ್ಟು ಹಣವನ್ನು ತಂದು ರಸ್ತೆಗಳು ಮತ್ತೊಂದು ಮತ್ತೊಂದನ್ನು ಮಾಡುತ್ತೇವೆ. ಅದರ ಅವಶ್ಯಕತೆ ಇದೆ ಇಲ್ಲವೆಂದು ಅಲ್ಲ. ಆದರೆ, ಮುಖ್ಯವಾದಂತಹ ಅವಶ್ಯಕತೆ ಏನು? ಮನುಷ್ಯನಿಗೆ ತಿಳುವಳಿಕೆ, ಜ್ಞಾನ, ಅರಿವು ಮತ್ತು ಕೌಶಲ್ಯತೆ ಇಲ್ಲದೆ ಉತ್ತಮವಾಗಿ ಬದುಕಿ ಬಾಳಬೇಕು ಎಂದರೆ, ಇವತ್ತು ಜಗತ್ತು, ನಮ್ಮ ಕೇರಿ, ನಮ್ಮ ಅಕ್ಕಪಕ್ಕದ ಮನೆ ಮತ್ತು ನಮ್ಮ ಅಣ್ಣ-ತಮ್ಮ ಮತ್ತು ನಮ್ಮ ಊರಿಗೆ ಸೀಮಿತವಾಗಿ ಇರುವುದಿಲ್ಲ. ಮಾನ್ಯ ಕೆ.ಸಿ.ಕೊಂಡಯ್ಯ ಸಾಹೇಬರೆ ಇದು ದೇಶಕ್ಕೂ ಸಹ ಸೀಮಿತವಾಗಿರುವುದಿಲ್ಲ. ನಾವು ಇಡೀ ವಿಶ್ವದ ಜೊತೆಯಲ್ಲಿ ಸ್ಪರ್ಧೆಯನ್ನು ಮಾಡಬೇಕಾಗುತ್ತದೆ. ನಮ್ಮ ಸಮಾಜದಲ್ಲಿ ಅತೀ ಹೆಚ್ಚಾಗಿ ಇರುವಂತಹ ಸಂಪನ್ಮೂಲ ಎಂದರೆ, ಅದು ಮಾನವ ಸಂಪನ್ಮೂಲ. ಈ ಸಂಪನ್ಮೂಲಕ್ಕೆ ಶಿಕ್ಷಣವನ್ನು ಕೊಡುವುದಕ್ಕೆ ಎಷ್ಟರ ಮಟ್ಟಿಗೆ ಎಷ್ಟು ಶಿಕ್ಷಣ ಸಂಸ್ಥೆಗಳನ್ನು ನಿರ್ಮಾಣ ಮಾಡುವಂಥದ್ದು, ನಮ್ಮಲ್ಲಿ ಎಷ್ಟರ ಮಟ್ಟಿಗೆ ಪ್ರಯತ್ನವಾಗಿದೆ ಎಂಬುದನ್ನು ತಾವು ನೋಡಬೇಕಾಗಿದೆ. ಎಲ್ಲೋ ಒಂದು ಹುಮ್ಮಸ್ಸಿನಿಂದ ಒಂದು ಕಡೆ ಪ್ರಾರಂಭ ಮಾಡಿರುತ್ತೇವೆ. ಅದನ್ನು ಯಾವ ಮಟ್ಟದಲ್ಲಿ ಅದರ ಗುಣಮಟ್ಟವನ್ನು ಕಾಪಾಡಿಕೊಂಡು, ಅದನ್ನು ಸುಧಾರಣೆ ಮತ್ತು ನಿರ್ವಹಣೆ ಮಾಡಿಕೊಂಡು, ಈಗ ನಿರ್ವಹಣೆ ಎಂದು ಬಂದಾಗ ಅದು ಎಷ್ಟರ ಮಟ್ಟಿಗೆ ನಡೆದಿದೆ ಎಂಬುದು ಬಹಳ ಮುಖ್ಯವಾದ ವಿಚಾರ. ಇದರ ಮೂಲಕವೇ ಸಮಾಜದಲ್ಲಿ ಏನಾದರೂ ಗುಣಮಟ್ಟವನ್ನು ನೋಡಿಕೊಳ್ಳಬೇಕು ಮತ್ತು ಸಮಾಜ ಎಷ್ಟರ ಮಟ್ಟಿಗೆ ಬೆಳೆಯುತ್ತದೆ ಮತ್ತು ಈ ದೇಶಕ್ಕೆ ಭವಿಷ್ಯವಿದೆ ಅಥವಾ ಈ ಸಮಾಜಕ್ಕೆ ಭವಿಷ್ಯವಿದೆ ಎಂದು ಹೇಳುವುದನ್ನು ಯಾವ ಅಳತೆಯಿಂದ ಹೇಳುವುದಕ್ಕೆ ಆಗುತ್ತದೆ ಮಾನ್ಯ ಮರಿತಿಬ್ಬೇಗೌಡರೆ. ಈಗ ಯಾವುದೇ ಒಂದು ರಾಜ್ಯ ಅಥವಾ ನಗರಕ್ಕೆ ಬರುತ್ತೇವೆ. ಈಗ ಈ ಸಮಾಜಕ್ಕೆ ಮತ್ತು ರಾಜ್ಯಕ್ಕೆ ಭವಿಷ್ಯವಿದೆ ಎಂದು ಹೇಳಬೇಕಾದರೆ, ಹೇಗೆ ಹೇಳುತ್ತೀರಿ ಎಂದು ಹೇಳಿ ಅದು ನನಗೂ ಗೊತ್ತಾಗಬೇಕು. ಹೇಗೆ ಅಳತೆ ಮಾಡಿ ಹೇಳುವುದಕ್ಕೆ ಆಗುತ್ತದೆಂದು ಹೇಳಿ. ಇವತ್ತು ಮಾನ್ಯ ಆರ್.ಬಿ.ತಿಮ್ಮಾಪೂರ ರವರು ಹೇಳುತ್ತಿದ್ದರು, ನೀವು ಎಲ್ಲೋ ಒಂದು ಕಡೆ ಬಲಿಪಶು ಆಗುತ್ತೀರಿ ಎಂದು. ನಾವು ಹಾಗೆ ಅಲ್ಲ. ನಾನು ಬಹಳಷ್ಟು ಜವಾಬ್ದಾರಿ, ಅರಿವು, ತಿಳುವಳಿಕೆಯಿಂದ ಇವತ್ತು ಏನೋ ನಾಲ್ಕು ವಿಶ್ವವಿದ್ಯಾಲಯ, ಐದು ವಿಶ್ವವಿದ್ಯಾಲಯ, ಇಪತ್ತು ವಿಶ್ವವಿದ್ಯಾಲಯ, ಇಪ್ಪತ್ತೈದು ವಿಶ್ವವಿದ್ಯಾಲಯ, ನಲವತ್ತು ವಿಶ್ವವಿದ್ಯಾಲಯ

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಎನ್ನುವುದು ಮುಖ್ಯವಲ್ಲ. ನಾನು ಸಂಖ್ಯೆಯ ಬಗ್ಗೆ ಮಾತನಾಡುವುದಿಲ್ಲ. ಇದು ಪರಿಹಾರ ಎಂದು ಬಹಳ ಬಲವಾಗಿ ನಂಬಿದ್ದೇನೆ. ಅದು ಏಕೆ ಎಂದು ಒಂದಷ್ಟು ವಿಚಾರಗಳನ್ನು ಹೇಳುತ್ತೇನೆ. ಅವರು ಎತ್ತಿರುವಂತಹ ವಿಚಾರ ಪ್ರಸ್ತುತವಾಗಿರುವಂಥದ್ದು, ಈ ಸಂಸ್ಥೆ ಏತಕ್ಕಾಗಿ ಮತ್ತು ಯಾರಿಗಾಗಿ ಸಲ್ಲುವಂತಹ ಸಂಸ್ಥೆಗಳು, ಇದನ್ನು ಹೇಗೆ ವ್ಯತ್ಯಾಸ ಮಾಡುವಂಥದ್ದು ಬಹಳ ಮುಖ್ಯವಾದಂಥದ್ದು ಮತ್ತು ಸರ್ಕಾರ ನಿಯಂತ್ರಣವನ್ನು ಹೇಗೆ ಮಾಡುವಂಥದ್ದು. ಮಾನ್ಯ ಕೆ.ಟಿ.ಶ್ರೀಕಂಠೇಗೌಡರೆ ತಾವು ಹೇಳಿರುವಂತಹ ವಿಚಾರಗಳನ್ನು ಚಿಕ್ಕದಾಗಿ ಹೇಳುತ್ತೇನೆ. ಅದನ್ನು ಉದ್ದ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ಇಲ್ಲಿ ಎಲ್ಲಾ ದಿಗ್ಗಜರು ಇದ್ದಾರೆ. ಇದೇ ವಿಷಯದಲ್ಲಿ experts ಇದ್ದಾರೆ. ಮುಖ್ಯವಾಗಿ ಮಾನ್ಯ ಬಸವರಾಜ ಹೊರಟ್ಟಿಯವರು ಈ ಸಂಸ್ಥೆಗಳ ಹಿನ್ನೆಲೆಯನ್ನು ತಿಳಿಸಿ ಎಂದು ಕೇಳಿದರು. ಮುಖ್ಯವಾಗಿ ಇವರೆಲ್ಲರೂ ಸಹ ನಮ್ಮ ಕರ್ನಾಟಕ ರಾಜ್ಯದವರು.  ಬಹಳ ವರ್ಷಗಳಿಂದ ಈ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದಾರೆ. ನ್ಯೂ ಹೊರೈಜನ್ ಸಂಸ್ಥೆ 1980ರಲ್ಲಿ ಪ್ರಾರಂಭವಾಗಿ, ಹಲವಾರು ವರ್ಷ ಗುಣಮಟ್ಟದ ಶಿಕ್ಷಣವನ್ನು ಶಾಲಾ ಮಟ್ಟದಲ್ಲಿ professional education ನಲ್ಲಿ education ಕೊಟ್ಟು, general education ಕೊಟ್ಟು ಬಹಳ ಉತ್ತಮವಾಗಿ ನಿರ್ವಹಣೆ ಮಾಡಿದ್ದಾರೆ. ಹಾಗೆ ಶ್ರೀ ಮುರುಘರಾಜೇಂದ್ರ ಮಠ 1966ರಲ್ಲಿ ಪ್ರಾರಂಭವಾಗಿದೆ. ಏಟ್ರಿಯಾ ಸಂಸ್ಥೆ 1984ರಲ್ಲಿ ಪ್ರಾರಂಭವಾಗಿದೆ. ಅವರು ಬಹಳಷ್ಟು ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಸೆಂಟ್ ಜೋಸೆಫ್ಸ್ ಸಂಸ್ಥೆ ಸ್ವಾತಂತ್ರ್ಯ ಪೂರ್ವದಿಂದ ನಡೆಸುತ್ತಿರುವಂತಹ ಸಂಸ್ಥೆಯಾಗಿದೆ. ವಿದ್ಯಾಶಿಲ್ಪ್ ಎನ್ನುವಂಥದ್ದು ಶಾಲೆಯಲ್ಲಿ ನಡೆಸುತ್ತಿರುವಂಥದ್ದು, ಇವತ್ತು ಬಹಳ ಉತ್ತಮವಾಗಿ ಪ್ರಯತ್ನ ಮಾಡಿ, ಒಳ್ಳೆಯ ಉತ್ತಮವಾದ ಸಂಸ್ಥೆಗಳನ್ನು ಕಟ್ಟಬೇಕು ಎಂದು ಹೊರಟ್ಟಿರುವುದು. ಮಾನ್ಯ ಆಡಳಿತ ಪಕ್ಷದ ಮುಖ್ಯ ಸಚೇತಕರು ಕೇಳಿದರು ಈ ವಿಧೇಯಕದ control mechanism ಹೇಗಿದೆ ಎಂದು ತಿಳಿಸಿ ಅಂತ ಕೇಳಿದ್ದಾರೆ. ಒಂದಷ್ಟನ್ನು ಚಿಕ್ಕದಾಗಿ ಹೇಳಬೇಕು ಎಂದರೆ, ಮಾನ್ಯ ಬಿ.ಕೆ.ಹರಿಪ್ರಸಾದ್ ಮತ್ತು ಮಾನ್ಯ ಆರ್.ಬಿ.ತಿಮ್ಮಾಪೂರ ರವರ ಸಾಮಾಜಿಕ ಕಾಳಜಿಯಲ್ಲಿ ಹೇಗೆ ನಮ್ಮ ರಾಜ್ಯದ ಮಕ್ಕಳಿಗೆ ವಿದ್ಯಾಭ್ಯಾಸ ಮಾಡುವುದಕ್ಕೆ ಪ್ರಮುಖವಾಗಿ ಸೆಕ್ಷನ್ 9ರಲ್ಲಿ,

***"University open to all classes, Castes, creed, gender or nation.-*** *The University admissions shall be open ...*" ಅದು ಜನರಲ್ ಆಗಿ ಇರುವಂಥದ್ದು. Next, in the second paragraph it reads as under:

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

*"Provided that forty percent of the admissions in all courses of the university shall be reserved for the students of Karnataka State and admissions shall be made through a Common Entrance Examination conducted by the Central Government or State Government or its agency, as the case may be and seats shall be allotted as per the merit and reservation policy of the State Government from time to time:"*

**(ಗೊಂದಲ)**

ಅದನ್ನು State Government ಮಾಡುವಂಥದ್ದು ಇನ್ನೇನು ಬೇರೆ ಏನು ಮಾಡುವುದಕ್ಕೆ ಆಗುವುದಿಲ್ಲ. Against the spirit of Constitution ಯಾವ ಆ್ಯಕ್ಟ್ ನಿಲ್ಲುವುದಿಲ್ಲ. ನಾವು ಅದರ ವಿರುದ್ಧ ಹೋಗುವಂತಹ ಪ್ರಶ್ನೆಯೇ ಇಲ್ಲ. ಸುಮ್ಮನೆ ಏನು ಎಂದರೆ, ಪ್ರಮುಖವಾಗಿ ನೀವು ಏನು reflect ಮಾಡಿದ್ದೀರಾ ಇಲ್ಲವೆ ಎಂದು ಕೇಳುತ್ತೀರಿ ಎಂದು. ಅದನ್ನು reflect ಮಾಡಿದ್ದೇವೆಂದು ಹೇಳುತ್ತಿದ್ದೇನೆ. ಇನ್ನು ಉಳಿದಿರುವುದನ್ನು ನಮ್ಮ ಮಾನ್ಯ ತಿಮ್ಮಾಪೂರ ರವರು ಹೇಳಿದರು, ಶೇಕಡಾ 60ರಷ್ಟು ಸೀಟ್‌ಗಳಲ್ಲಿ ಉಳಿಕೆ ಸೀಟ್‌ಗಳನ್ನು ಬೇರೆ ರಾಜ್ಯದವರಿಗೆ ಕೊಟ್ಟುಬಿಡುತ್ತಾರೆ, ಬೇರೆಯವರು ಬಂದು ಬಿಡುತ್ತಾರೆಂದು ಹೇಳುತ್ತಾರೆ. ಇನ್ನು ಉಳಿದ ಶೇಕಡಾ 60 ಸೀಟುಗಳನ್ನು State Government ನಿಂದ fill ಮಾಡುವುದಿಲ್ಲ. ಅವುಗಳನ್ನು ಅವರು ತುಂಬುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ. Fill ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಸೀಟ್‌ಗೆ Fees Fixation Committee ಯಿಂದ fees ಅನ್ನು fix ಮಾಡಲಾಗುತ್ತದೆ. ಶುಲ್ಕ ನಿಗದಿಗೆ ನಿವೃತ್ತ ನ್ಯಾಯಾಧೀಶರ ಸಮಿತಿ ಇರುತ್ತದೆ. Fees Fixation Committee ಮೂಲಕ fees fix ಮಾಡಿ ಕೊಡುವಂಥದ್ದು ಆಗುತ್ತದೆ.

**(ಮುಂದು...)**

(135) 03.02.2021 06.50 LL-GR

**ಡಾ: ಅಶ್ವತ್ಥ್‌ನಾರಾಯಣ್** .ಸಿ.ಎನ್. (ಮುಂದುವರೆದಿದ್ದು...):-

ಮತ್ತು ಅಲ್ಲಿಯೂ ಕೂಡ ಶುಲ್ಕ ನಿಗದಿ ಮಾಡಿಕೊಡುವುದು ಒಂದು ಭಾಗವಾಗವಾದರೂ ಕೂಡ ಅಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಮತ್ತು ಈ ಬಗ್ಗೆ ತಮಗೆಲ್ಲಾ ಗೊತ್ತಿರುವಂತೆ ಎಲ್ಲಾ ರಾಜ್ಯಗಳು...

**ಶ್ರೀ ಎಸ್.ಆರ್. ಪಾಟೀಲ್:-** ಮಾನ್ಯ ಸಭಾಪತಿಯವರೇ, Fee Fixation Committee ಯನ್ನು ಯಾರು ಅಪಾಯಿಂಟ್ ಮಾಡುತ್ತಾರೆ?

**ಡಾ: ಅಶ್ವತ್ಥ್‌ನಾರಾಯಣ್ ಸಿ.ಎನ್.:-** ಮಾನ್ಯ ಸಭಾಪತಿಯವರೇ, ಅದನ್ನು ನಮ್ಮ ಸ್ಟೇಟ್ ಗವರ್ನ್‌ಮೆಂಟ್ ಅಪಾಯಿಂಟ್ ಮಾಡುತ್ತದೆ. ಅಂದರೆ, ನಾವು ಮಾನ್ಯ ಮುಖ್ಯ ನ್ಯಾಯಾಧೀಶರಿಗೆ ಪತ್ರ ಬರೆದು, ಈ ರೀತಿ Fee Fixation Committee, Admission Regulating Comittee ಗೆ ಒಬ್ಬ ನಿವೃತ್ತ ನ್ಯಾಯಾಧೀಶರ ಹುದ್ದೆ ಖಾಲಿ ಇದೆ ಅದನ್ನು ತಾವು ನೇಮಕಾತಿ ಮಾಡಿಕೊಡಬೇಕೆಂದು ಕೋರುತ್ತೇವೆ. ಅದರಂತೆ, ಆ ಹುದ್ದೆಗೆ ಅವರು ನೇಮಕಾತಿ ಮಾಡಿಕೊಡುತ್ತಾರೆ. ಈಗಾಗಲೇ ಮಾನ್ಯ ಸದಸ್ಯರುಗಳು ಹೇಳಿದ ರೀತಿ, ಈ ಹಿಂದೆ ಪ್ರಾರಂಭದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅನುಮತಿ ನೀಡಿದಾಗ ಕೆಲವೊಂದು ನಿಯಂತ್ರಣಗಳು ತಪ್ಪಿ ಹೋಗಿದ್ದವು. ಆ ರೀತಿ ತಪ್ಪಿ ಹೋದಂತಹ ನಿಯಂತ್ರಣಗಳನ್ನು ಈಗ ಓವರ್ ರೆಗ್ಯುಲೇಟ್ ಮಾಡಿದ್ದಾರೆ. ಅದನ್ನು ಎಲ್ಲಿಯವರೆಗೆ ಓವರ್ ರೆಗ್ಯುಲೇಟ್ ಮಾಡಿದ್ದಾರೆಂದರೆ, ಮಾನ್ಯ ತಿಪ್ಪೇಸ್ವಾಮಿಯವರು ಹೇಳಿದ ರೀತಿ, ನ್ಯಾಷನಲ್ ಎಜುಕೇಷನ್ ಪಾಲಿಸಿಯ spirit ಏನಿದೆಯೆಂದರೆ, ಸ್ವಾಯತ್ತತೆಯನ್ನು ಹೆಚ್ಚಾಗಿ ಕೊಡಬೇಕೆಂದು ಹೇಳುತ್ತಿದ್ದಾರೆಯೇ ಹೊರತು, ಕೊಡಬಾರದೆಂದು ಹೇಳಿರುವುದಿಲ್ಲ. ಆದರೆ, ನಾವು ಈ ವಿಧೇಯಕದಲ್ಲಿ ನಿಯಂತ್ರಣ ಹಾಕಿರುವ ಬಗ್ಗೆ ನಾನು ಕೊನೆಯಲ್ಲಿ ಹೇಳುತ್ತೇನೆ. ಆದಾಗ್ಯೂ, ನಿಜವಾಗಿಯೂ ಈ ವಿಧೇಯಕದಲ್ಲಿ ಖಾಸಗಿ ವಿಶ್ವವಿದ್ಯಾಲಯಗಳನ್ನು ಬಹಳ ಕಟ್ಟಿ ಹಾಕುವಂತಹ ಕೆಲಸವೇ ಆಗಿರುತ್ತದೆ. ಇದರಲ್ಲಿ ಸಂಪೂರ್ಣ ನಿರ್ಬಂಧಗಳನ್ನು ತಂದಿರುವುದು ಇದೆ. ಇವೊತ್ತಿನ ದಿವಸ Harvard University, Stanford University, Yale University, Kingston University - ಈ ಎಲ್ಲವೂ ಖಾಸಗಿ ವಿಶ್ವವಿದ್ಯಾಲಯಗಳಾಗಿವೆ. ಇದರಲ್ಲಿ ಆಶ್ಚರ್ಯ ಪಡುವುದೇನೆಂದರೆ, ಕೆಲವೊಂದು ಯುನಿವರ್ಸಿಟಿಗಳಲ್ಲಿ ಬಹುತೇಕ ನಮ್ಮ ರಾಜ್ಯದ ಆಯವ್ಯಯದಷ್ಟೇ ವಾರ್ಷಿಕ ಅಂದಾಜು ಆಯವ್ಯಯ ಬರುತ್ತದೆ. ಕೇವಲ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕದಿಂದ ಈ

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ರೀತಿಯ ಸಂಸ್ಥೆಗಳನ್ನು ನಡೆಸುವುದಕ್ಕಾಗುವುದಿಲ್ಲ. ಒಂದು ಗುಣಮಟ್ಟದ ಸಂಸ್ಥೆ ನೋಡಿಕೊಳ್ಳಬೇಕಾದರೆ, ಅದಕ್ಕೆ ಒಂದು ಬಜೆಟ್ ಬೇಕಾಗುತ್ತದೆ. ಆ ಬಜೆಟ್ ಎಂದು ನೋಡಿದಾಗ ಮೂರ್ನಾಲ್ಕು ದಿಕ್ಕುಗಳಿಂದ ದಾನ ಮಾಡುವಂತಹವರು ಬೇಕಾಗುತ್ತದೆ. ಅಂದರೆ, ಈ ಹಿಂದೆ ಯಾವ ರೀತಿ ದಾನಿಗಳು ಶೈಕ್ಷಣಿಕ ಸಂಸ್ಥೆಗಳಿಗೆ ದಾನ ಮಾಡುತ್ತಿದ್ದರು, ಆ ರೀತಿ ದಾನ ಮಾಡಿದರೆ ಮಾತ್ರ ಅದು ಆಗುತ್ತದೆ. ಆದರೆ, ಇವೊತ್ತಿನ ದಿವಸ ನಂಬಿಕೆ ಮತ್ತು ಅಪನಂಬಿಕೆಗಳು ಖಾಸಗಿ ವಿಶ್ವವಿದ್ಯಾಲಯಗಳನ್ನು ನೋಡಿದ ತಕ್ಷಣ ಕಳ್ಳರು ಬಂದಿದ್ದಾರೆ ಅಥವಾ ಮತ್ತೊಬ್ಬರು ಬಂದಿದ್ದಾರೆ ಎನ್ನುವ ಭಾವನೆ ನಮ್ಮಲ್ಲಿ ನಿರ್ಮಾಣ ಆಗಿದೆ. ಅವರಿಗೆ, probably, they don't know how to express themselves. ಮಾನ್ಯ ಹರಿಪ್ರಸಾದ್‌ರವರೇ, ತಾವು ಕೂಡ ತಮ್ಮ ಭಾಷಣವನ್ನು ಪ್ರಾರಂಭ ಮಾಡಿದಾಗ, the way you expressed yourself and articulated, ಅದೇ ವಿಚಾರವನ್ನು ನಾವು ಮೊದಲು ಮಾತನಾಡಿದ್ದರೆ ಅದನ್ನು ಬೇರೆ ರೀತಿ ತಿಳಿದುಕೊಳ್ಳಬೇಕಾಗಿತ್ತು. ಆದರೆ, ಇವೊತ್ತಿನ ದಿವಸ ತಾವು ಅದನ್ನು ಬಹಳ ಉತ್ತಮವಾಗಿ ಮಂಡಿಸಿದ್ದೀರಿ.

**ಶ್ರೀ ಬಿ.ಕೆ. ಹರಿಪ್ರಸಾದ್:(ವಿಧಾನಸಭಾ ಕ್ಷೇತ್ರ)–** ಮಾನ್ಯ ಸಭಾಪತಿಯವರೇ, ಕೆಲವು ಖಾಸಗಿ ವಿಶ್ವವಿದ್ಯಾಲಯಗಳು capitation fee ಮೂಲಕ ಬಡ ವಿದ್ಯಾರ್ಥಿಗಳ ರಕ್ತ ಹಿಂಡುತ್ತಿದ್ದಾರೆ. ಆ ಬಗ್ಗೆ ನಮ್ಮ ಕಾಳಜಿ ಇದೆ. ಹಾಗಾಗಿ, ನಾವು ಹೇಳುವುದೇನೆಂದರೆ, ಖಾಸಗಿ ವಿಶ್ವವಿದ್ಯಾಲಯಗಳು ಬಡ ವಿದ್ಯಾರ್ಥಿಗಳ ರಕ್ತ ಹಿಂಡುವುದು ಬೇಡ.

**ಡಾ: ಅಶ್ವತ್ಥ್‌ನಾರಾಯಣ್ ಸಿ.ಎನ್.:–** ಮಾನ್ಯ ಸಭಾಪತಿಯವರೇ, ನಾನು ಈ ವಿಷಯದ ಬಗ್ಗೆ ಹೆಚ್ಚು ಒತ್ತು ಕೊಟ್ಟು ಮಾತನಾಡುತ್ತಿರುತ್ತೇನೆ. ಹಾಗಾಗಿ, ಮಾನ್ಯ ಸದಸ್ಯರು ನಾನು ಮಾತನಾಡಿದ್ದರಲ್ಲಿ ತಪ್ಪು ತಿಳಿದುಕೊಳ್ಳುವುದು ಬೇಡ. ನಾವು ಕೇಳುವುದೇನೆಂದರೆ, ನಮ್ಮ ಮಕ್ಕಳು ಎಲ್ಲಿ ಓದುತ್ತಿದ್ದಾರೆ, ಅವರಿಗೆ ಗುಣಮಟ್ಟದ ಶಿಕ್ಷಣ ಬೇಕೆಂದು ಹೇಳುತ್ತೇವೆ. ಅದು ಏತಕ್ಕೆ ಆ ರೀತಿ ಮಾತನಾಡುತ್ತೇವೆಂದರೆ, ಆಸ್ತಿ–ಅಂತಸ್ತುಗಳನ್ನು ನಾವು ಹೊತ್ತಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಯಾರಾದರೂ ಎಲ್ಲಿಯಾದರೂ ಬದುಕಬೇಕಾದರೆ, ಅವನ ಉತ್ತಮವಾದ ಶಿಕ್ಷಣವೇ ಅವರನ್ನು ಕಾಪಾಡುತ್ತದೆ. ಹಾಗಾಗಿ, ಶಿಕ್ಷಣ ಬಹಳ ಪ್ರಮುಖವಾಗಿರುತ್ತದೆ. ಇದು ಎಲ್ಲಾ ಮನೆಯ ಮಕ್ಕಳಿಗೆ ಸಿಗಬೇಕು. ಇದರಲ್ಲಿ ಒಂದಿಷ್ಟು ತಪ್ಪು ಇರಬಹುದು. ಹಾಗಾಗಿ, ಈ ಖಾಸಗಿ ವಿಶ್ವವಿದ್ಯಾಲಯಗಳವರು ಮಹಾನ್ ಪುರುಷರು, ಬಹಳ ಸತ್ಪುರುಷರು ಎಂದು ನಾವು ಹೇಳುವುದಿಲ್ಲ. ಆದರೆ, ಒಳ್ಳೆಯದನ್ನು ಹೆಚ್ಚಾಗಿ ಮಾಡುತ್ತಿದ್ದಾರೆ ಹಾಗೂ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಾವು ಕೂಡ ಅವರನ್ನು ಈ ವ್ಯವಸ್ಥೆಯಲ್ಲಿ ನಿಯಂತ್ರಣ ಮಾಡುವಂಥ ಜವಾಬ್ದಾರಿ ಕೂಡ ಇದೆ. ಇದರಲ್ಲಿ ಬಹಳ ಪ್ರಮುಖವಾಗಿರುವುದು ಕಾಂಪಿಟೇಷನ್. ಇವೊತ್ತಿನ ದಿವಸ ಯಾವುದೋ ಡೈನಾಮಿಕ್ಸ್‌ನಲ್ಲಿ ಕುಳಿತಲ್ಲಿಯೇ ಯಾವುದೋ ವಿದ್ಯಾರ್ಥಿಗೆ ಡಿಗ್ರಿ ಸರ್ಟಿಫಿಕೇಟ್ ಕೊಟ್ಟು ಪಾಸ್ ಮಾಡಿದ ತಕ್ಷಣ ಆಗುವುದಿಲ್ಲ. ಇಂದಿನ ಮಾರ್ಕೆಟ್‌ನಲ್ಲಿ ನಾನು ಡಿಗ್ರಿ ಓದಿದ್ದೇನೆಂದು ಹೇಳಿಕೊಳ್ಳುವುದು ಬೇರೆ ಭಾಗವಾಗಿರುತ್ತದೆ. ಆದರೆ, ಉದ್ಯೋಗ ಸಿಗಬೇಕಾದರೆ ಗುಣಮಟ್ಟ ಇಲ್ಲವೆಂದರೆ ಯಾವುದೇ ಕಂಪನಿಯವರು ಯಾವುದೇ ಉದ್ಯೋಗಕ್ಕೆ ತೆಗೆದುಕೊಳ್ಳುವುದಿಲ್ಲ.

**ಶ್ರೀ ಆರ್.ಬಿ. ತಿಮ್ಮಾಪುರ:–** ಮಾನ್ಯ ಸಭಾಪತಿಯವರೇ, ನೇರ ನೇಮಕಾತಿಯಲ್ಲಿ ಅವರೇ ಬರುವುದು.

**ಡಾ: ಅಶ್ವತ್ಥ್‌ನಾರಾಯಣ್ ಸಿ.ಎನ್.:–** ಮಾನ್ಯ ಸಭಾಪತಿಯವರೇ, ಆ ರೀತಿ ಬರುವುದಿಲ್ಲ. ಉದಾಹರಣೆಗೆ, ಮಾನ್ಯ ಸದಸ್ಯರೇ ತಮ್ಮ ಆಪ್ತ ಸಹಾಯಕರಾಗಿ ಯಾವುದೋ ಗುಣಮಟ್ಟದ ಶಿಕ್ಷಣ ಇಲ್ಲದಿರುವವರನ್ನು ನೇಮಕ ಮಾಡಿಕೊಳ್ಳುವುದಿಲ್ಲ. ಎಲ್ಲರೂ ಸಹ ಎಲ್ಲಾ ವಿಷಯದಲ್ಲಿಯೂ ಅಳೆದು, ತೂಗಿಯೇ ನೇಮಕ ಮಾಡಿಕೊಳ್ಳುತ್ತಾರೆ. ಅಲ್ಲದೇ, ಯಾರು ಯಾರಿಗೆ ಭಾರವಾಗಿ, ಸ್ವಂತ ಮನೆ ಮಕ್ಕಳನ್ನು ಅಥವಾ ಸ್ವಂತ ತಂದೆ–ತಾಯಿಗಳನ್ನೇ ವಯಸ್ಸಾದ ಮೇಲೆ ಭಾರವಾಗಿದ್ದಾರೆಂದು ಅವರನ್ನೇ ಸಹ ನೋಡಿಕೊಳ್ಳುವುದಿಲ್ಲ; ಅಂತಹ ಸ್ವಾರ್ಥ ಸಮಾಜದಲ್ಲಿ ನಾವಿದ್ದೇವೆ. ಅಂದರೆ, ಪರಿಸ್ಥಿತಿ ಅಷ್ಟು ಪ್ರಸ್ತುತವಾಗಿಲ್ಲ, ಲಾಭವಾಗಿಲ್ಲ ಅಥವಾ ಒಳ್ಳೆಯ ಗುಣಮಟ್ಟ ಇಲ್ಲದೇ ಇದ್ದರೆ ಯಾರು ಕೂಡ ಅದನ್ನು ಸ್ವೀಕರಿಸುವುದಕ್ಕೆ ತಯಾರಿರುವುದಿಲ್ಲ. ಯಾರೋ ಒಬ್ಬ ವ್ಯಕ್ತಿಯನ್ನು ಯಾವುದೋ ಒಂದು ಉದ್ಯೋಗಕ್ಕಾಗಿ ನಾವು ಶಿಫಾರಸ್ಸು ಮಾಡಿ ಅವರಿಗೆ ಸಂಬಳ ಕೊಡಬೇಕೆಂದು ಹೇಳಿ ಕಳುಹಿಸಿದರೆ, ಆ ವ್ಯಕ್ತಿಗೆ, ಸಂಬಂಧಪಟ್ಟವರು ಮೊದಲ ಒಂದು ತಿಂಗಳು ಸಂಬಳ ಕೊಡಬಹುದು. ಆದರೆ, ಎರಡನೇ ತಿಂಗಳಿಗೆ ಏತಕ್ಕೋ ಈ ವ್ಯಕ್ತಿ ನಮಗೆ ಸೆಟ್ ಆಗುತ್ತಿಲ್ಲವೆಂದು ಕಾರಣ ಹೇಳಿ ವಾಪಸ್ಸು ಕಳುಹಿಸುತ್ತಾರೆ. ಹಾಗಾಗಿ, ಇಂತಹ ವಿಶ್ವವಿದ್ಯಾಲಯಗಳಿಗೆ ಯಾವುದೇ ವ್ಯಕ್ತಿಯನ್ನು ಯಾವುದೇ ಉದ್ಯೋಗಕ್ಕಾಗಿ ಸ್ವೀಕರಿಸಬೇಕಾದರೆ, ಎಷ್ಟು ಜನ ಉಪನ್ಯಾಸಕರು ಲಭ್ಯವಿದ್ದಾರೆ, ಅವರಲ್ಲಿ ಎಷ್ಟು ಜನ N.E.T., ಮಾಡಿದ್ದಾರೆ, ಎಷ್ಟು ಜನ S.L.E.T., ಮಾಡುತ್ತಿದ್ದಾರೆ ಮತ್ತು ನಮ್ಮ ಸರ್ಕಾರದ ವಿಶ್ವವಿದ್ಯಾಲಯಗಳಲ್ಲಿಯೇ ಅರ್ಹ ಉಪನ್ಯಾಸಕರನ್ನು ತರಬೇಕಾದರೆ, ಅದರಲ್ಲಿ ಎಷ್ಟು ಸವಾಲುಗಳಿವೆ ಮತ್ತು ಯಾವ ಸಮಸ್ಯೆಗಳಿವೆ ಎಂದು ತಮಗೂ ಸಹ ಗೊತ್ತಿರುತ್ತದೆ. ಇಂತಹ ವಿಷಯಗಳಲ್ಲಿ ಸರ್ಕಾರಕ್ಕಿಂತಲೂ ಯಾರೂ ಸಹ ದೊಡ್ಡವರು

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಇರುವುದಿಲ್ಲವೆಂದು ತಮಗೂ ಗೊತ್ತಿದೆ. ಇವೊತ್ತಿನ ದಿವಸ ಅಂತಹ ಮೆಡಿಕಲ್ ಕಾಲೇಜು ಲಾಭಿಯ ಒಂದು ಸೀಟಿಗೆ ಪ್ರವೇಶಾತಿ ಮಾಡುವುದಕ್ಕೆ ಅವಕಾಶವಿಲ್ಲದೇ ನೀಟ್‌ನ ಮೂಲಕ ಸಂಪೂರ್ಣ ಶೇಕಡ 100 ರಷ್ಟು ನಿಯಂತ್ರಣ ಮಾಡಿರುವುದು ಇದೆ. KSET ನಲ್ಲಿ ಎಲ್ಲಾ ಸೀಟುಗಳ ಪ್ರವೇಶಾತಿಯನ್ನು Entrance Examination ಮೂಲಕ ಮಾಡಲಾಗುತ್ತಿದೆ. ಎಂ.ಬಿ.ಎ., ಮತ್ತು ಎಂ.ಸಿ.ಎ.,ಗೆ ಏನು ಡಿಮ್ಯಾಂಡ್ ಇತ್ತು, ಅವುಗಳೆಲ್ಲವೂ PGET Entrance Examination ಮೂಲಕ ಸಂಪೂರ್ಣವಾಗಿ ಪ್ರವೇಶಾತಿ ನಿಯಂತ್ರಣ ಆಗುತ್ತಿರುತ್ತದೆ. ಈ ರೀತಿ ಕಾನೂನಿನಲ್ಲಿ ಅಥವಾ ಬೇರೆ ಬೇರೆ ಪ್ರೋಗ್ರಾಮ್‌ನಲ್ಲಿ ಆಗುತ್ತಿತ್ತು ಹಾಗೂ ನಮ್ಮ ಸ್ನೇಹಿತರಾದ ಶ್ರೀ ಬಸವರಾಜ ಪಾಟೀಲ್ ಇಟಗಿಯವರು ಹೇಳಿದ ರೀತಿ Agriculture University, Law University, Medical University, Veterinary University ಮತ್ತು Horticulture University ಇಂತಹ ಯಾವುದೇ ಯುನಿವರ್ಸಿಟಿಗಳನ್ನು ಇಲ್ಲಿ ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕಾದರೆ ಆ ಸಂಬಂಧಪಟ್ಟ ಯುನಿವರ್ಸಿಟಿಗಳು ಅವರಿಗೆ ಎನ್.ಓ.ಸಿ., ಕೊಟ್ಟರೆ ಮಾತ್ರ ಪ್ರಾರಂಭ ಮಾಡುವುದಕ್ಕೆ ಆಗುತ್ತದೆ. ಇಲ್ಲದೇ ಹೋದರೆ, ಜನರಲ್ ಇಂಜಿನಿಯರಿಂಗ್, ಬಿ.ಎ., ಬಿ.ಕಾಂ., ಮತ್ತು ಇತರೆ ಪ್ರೊಫೆಷನಲ್ ಕೋರ್ಸ್‌ಗಳ ಕ್ಕಾಂಬಿನೇಷನ್‌ನಲ್ಲಿ ನಡೆಸುವಂಥದ್ದು ಆಗುತ್ತದೆ. ಆದರೆ, ಮೆಡಿಕಲ್ ಮಾಡಬೇಕಾದರೆ ಸಂಬಂಧಪಟ್ಟ ಯುನಿವರ್ಸಿಟಿಗಳು ಎನ್.ಓ.ಸಿ., ಕೊಟ್ಟರೆ ಮಾತ್ರ ಆಗುತ್ತದೆ. ಇಲ್ಲದೇ ಹೋದರೆ ಅವಕಾಶ ಆಗುವುದಿಲ್ಲ. ಇದರ ಜೊತೆಗೆ, ಕೆಲವು ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ತಮಗೆ ಇಷ್ಟ ಬಂದ ಹಾಗೆ ಅಂಕಗಳನ್ನು ಅಥವಾ ಸಂಖ್ಯೆಗಳನ್ನು ತುಂಬಿಕೊಳ್ಳುವ ಬಗ್ಗೆ ಅನುಮಾನ ಇತ್ತು. ಆದರೆ, ಆ ರೀತಿ ಇಷ್ಟ ಬಂದ ಹಾಗೆ ಸಂಖ್ಯೆಗಳನ್ನು ಹೆಚ್ಚಿಸುವುದಕ್ಕೆ ಸಹ ಪ್ರಸ್ತುತ ಅವಕಾಶವಿರುವುದಿಲ್ಲ. ಎಲ್ಲಾದಕ್ಕೂ ಸಹ ಗೈಡ್‌ಲೈನ್ಸ್ ಇದೆ. ಈ ಗೈಡ್‌ಲೈನ್ಸ್ ಪ್ರಕಾರ ಸಂಬಂಧಪಟ್ಟ ಯು.ಜಿ.ಸಿ., ಮತ್ತು ಎ.ಇ.ಸಿ.ಟಿ.ಇ., ಮತ್ತು ಸಂಬಂಧಪಟ್ಟ ಸೆಂಟ್ರಲ್ ಕೌನ್ಸಿಲ್‌ರವರು ಅನುಮತಿ ಕೊಟ್ಟಾಗ ಮಾತ್ರ ಮತ್ತು Karnataka State Higher Education Council ನಿಂದ ಏನು ಮೂಲಭೂತ ಅವಶ್ಯಕತೆಗಳಿವೆ ಅಥವಾ ಏನೇನು ಮಾನದಂಡಗಳಿವೆ ಅವುಗಳನ್ನು ಅನುಸರಿಸಿದಾಗ ಮಾತ್ರ ಇಂತಹ ಖಾಸಗಿ ವಿಶ್ವವಿದ್ಯಾಲಯಗಳಿಗೆ ಅವಕಾಶ ಕೊಡುವುದು ಇದೆ. ಹಾಗಾಗಿ, ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಬೇರೆ ಯಾವುದನ್ನು...

**ಶ್ರೀ ಬಿ.ಕೆ. ಹರಿಪ್ರಸಾದ್:-** ಮಾನ್ಯ ಸಭಾಪತಿಯವರೇ, ಇವೆಲ್ಲವೂ self financing University ಗಳಾಗಿವೆ. ಈ ಬಗ್ಗೆ ವಿಧೇಯಕದಲ್ಲಿಯೂ ಸಹ ಇದೆ. ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಹಾಗೆ, Harvard University, Stanford University, Berkeley University ಮತ್ತು ಇತರೆ ವಿಶ್ವವಿದ್ಯಾನಿಲಯಗಳು ಸಹ ಖಾಸಗಿ ವಿಶ್ವವಿದ್ಯಾನಿಲಯಗಳೆಂದು ಹೇಳಿದರು. ಆ ಬಗ್ಗೆ ನಾನು ಗಮನಕ್ಕೆ ತರುವುದೇನೆಂದರೆ, they are all not a profit-making institutions. ಆ ಎಲ್ಲಾ ವಿಶ್ವವಿದ್ಯಾಲಯಗಳಿಗೆ ಮಲ್ಟಿ ನ್ಯಾಷನಲ್ ಕಂಪನಿಗಳು ಫೈನಾನ್ಸ್ ಮಾಡುತ್ತವೆ. ಆದುದರಿಂದ, ಆ ವಿಶ್ವವಿದ್ಯಾಲಯಗಳು ಪ್ರಾಫಿಟ್ ಮೇಕಿಂಗ್ ಯುನಿವರ್ಸಿಟಿಗಳು ಆಗಿರುವುದಿಲ್ಲ. ಆದರೆ, ಇದರಲ್ಲಿ 'self financing' ಎಂಬ ಪದ ಉಪಯೋಗಿಸಿರುವುದರಿಂದ ಅದರ ಅರ್ಥ they are profit-making institutions ಎನ್ನುವ ಅರ್ಥ ಬರುತ್ತದೆ. They have their own type of operating system.

**ಡಾ: ಅಶ್ವತ್ಥ್‌ನಾರಾಯಣ್ ಸಿ.ಎನ್.:-** ಮಾನ್ಯ ಸಭಾಪತಿಯವರೇ, ಇದು ಪ್ರಮುಖವಾಗಿ ಈ ಒಂದು ಕ್ಷೇತ್ರದಲ್ಲಿ ಪ್ರೈವೇಟ್ ಕಂಪನಿಗಳು ಏನಾದರೂ ಟ್ರಸ್ಟ್ ಬಿಟ್ಟು ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶವಿರುವುದಿಲ್ಲ. ಇವೆಲ್ಲವೂ Societies Act or Trust Act ಅಡಿಯಲ್ಲಿಯೇ ಅಥವಾ Section 8 of the Companies Act ಅಡಿಯಲ್ಲಿ ಬರುತ್ತದೆ. ಇದರಲ್ಲಿ ಬಹಳ ಸ್ಪಷ್ಟವಾಗಿ ಹೇಳಬೇಕಾದರೆ, this is not for profit-making organisation. ಇದರಲ್ಲಿ ಪ್ರಾಫಿಟ್ ಅನ್ನು ಯಾರೂ ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಮತ್ತು ಕಾನೂನಾತ್ಮಕವಾಗಿ ಯಾವ ಅವಕಾಶ ಕೂಡ ಇರುವುದಿಲ್ಲ. ಇದೊಂದೇ ಕ್ಷೇತ್ರದಲ್ಲಿ 'not for profit' ಎಂದು ಇರುವಂಥದ್ದು. ಹಾಗಾಗಿ, ಅದರ ಅಡಿಯಲ್ಲಿ ಮಾಡಬೇಕಾಗುತ್ತದೆ. ಒಂದು ವೇಳೆ ಇದರಲ್ಲಿ ಏನೇ ದುಡ್ಡು ತೆಗೆದುಕೊಳ್ಳಬೇಕಾದರೆ, ಯಾವುದಾದರೂ ಕಿಕ್‌ಬ್ಯಾಕ್‌ನಲ್ಲಿ ತೆಗೆದುಕೊಳ್ಳಬೇಕೇ ಹೊರತು, ಬೇರೆ ಏನು ಮಾಡುವುದಕ್ಕಾಗುವುದಿಲ್ಲ. ಅದನ್ನು ಅವರು ಬೇರೆ ರೂಪದಲ್ಲಿ ಮಾಡಿಕೊಳ್ಳಬಹುದು. ಆದರೆ, ಈ ಸಂಸ್ಥೆಗಳು ಬೆಳೆಯಬೇಕಾದರೆ ಪ್ರತಿವರ್ಷ ಗುಣಮಟ್ಟ ಕಾಪಾಡಿಕೊಳ್ಳಬೇಕು. ಈ ಬಗ್ಗೆ ನಾವು ಏನೇ ಹೇಳಿದರೂ ಸಹ, ತಮ್ಮ ವೈಯಕ್ತಿಕ ಅನುಭವದ ಪ್ರಕಾರದಲ್ಲಿ ಯಾರಾದರೂ ಅಸೋಸಿಯೆಟ್ ಆಗಿದ್ದರೆ, ಯಾರಾದರೂ ಇಂತಹ ಕಾಂಪಿಟೇಷನ್‌ನಲ್ಲಿ ಉಳಿದುಕೊಳ್ಳಬೇಕಾದರೆ, ಗುಣಮಟ್ಟವನ್ನು

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಕಾಪಾಡಿಕೊಂಡಿಲ್ಲವೆಂದರೆ ಅಂತಹ ವಿಶ್ವವಿದ್ಯಾಲಯಗಳಿಗೆ ಮುಂದಿನ ವರ್ಷ ಒಂದೂ ಸಹ ಪ್ರವೇಶ ಬರುವುದಿಲ್ಲ. ಏಕೆಂದರೆ, ಜನರಿಗೆ ಬೇಕಾದಷ್ಟು alternatives ಇರುತ್ತದೆ. ಇದರಿಂದಾಗಿ, ಆತ ತನ್ನ ಸಂಸ್ಥೆಗೆ ಕೀಲಿ ಹಾಕಿಕೊಂಡು ಹೋಗಬೇಕಾಗುತ್ತದೆಯೇ ಹೊರತು, ಇಂತಹ ಕಾಂಪಿಟೇಷನ್‌ನಲ್ಲಿ ಗುಣಮಟ್ಟ ಇಲ್ಲವೆಂದರೆ ಉಳಿಯುವುದಕ್ಕೆ ಆಗುವುದಿಲ್ಲ. ಹಾಗಾಗಿ, ಇಂತಹ ಕಾಂಪಿಟೇಷನ್‌ನಲ್ಲಿ perform ಮಾಡಲೇಬೇಕಾಗುತ್ತದೆ. ಅದನ್ನು ಮಾಡಿಲ್ಲವೆಂದರೆ, ಯಾರು ಕೂಡ ಅಂತಹ ಸಂಸ್ಥೆಗೆ ಹೋಗುವುದಿಲ್ಲ. ಒಂದು ವೇಳೆ ಅಂತಹ ಸಂಸ್ಥೆಯಲ್ಲಿ ಓದಿದವರಿಗೆ ಉದ್ಯೋಗ ಸಿಗುವುದಿಲ್ಲವೆಂದರೆ ಅಥವಾ ಗುಣಮಟ್ಟದ ಶಿಕ್ಷಣ ಇಲ್ಲವೆಂದರೆ, ಆ ಸಂಸ್ಥೆಗಳು ಉಳಿಯುವುದಕ್ಕೆ ಸಾಧ್ಯವೇ ಇಲ್ಲ. ಈ ಬಗ್ಗೆ ನಾವು ಮುಕ್ತವಾಗಿ ಹೇಳಬೇಕಾದರೆ, ನಮ್ಮ ಅವಶ್ಯಕತೆಯನ್ನು ಅಥವಾ ನಮ್ಮ ಬೇಡಿಕೆಗಳನ್ನು ಸರ್ಕಾರದಲ್ಲಿ... ಈ ಬಗ್ಗೆ ಮಾನ್ಯ ಶ್ರೀಕಂಠೇಗೌಡರು ಮತ್ತು ಶ್ರೀ ಮರಿತಿಬ್ಬೇಗೌಡರು ಹೇಳುತ್ತಿದ್ದರು. ಅದೇನೆಂದರೆ, ನಮ್ಮಲ್ಲಿರುವ ಸಂಸ್ಥೆಗಳಲ್ಲಿ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಬೇಕು. ಇದರ ಜೊತೆಗೆ, ಹೊಸ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವ ವಿಷಯ ಹೊರತುಪಡಿಸಿ, ಇರುವಂತಹ ವಿಶ್ವವಿದ್ಯಾಲಯಗಳಿಗೆ ನೇಮಕಾತಿಗಳನ್ನು ಬಹಳಷ್ಟು ಮಾಡುವುದಿದೆ. ಈಗ ಪ್ರಸ್ತುತ ಹೈಯರ್ ಎಜುಕೇಷನ್‌ನಲ್ಲಿ ರೆಗ್ಯುಲರ್ ಆಗಿ 4700 ಕೋಟಿ ರೂಪಾಯಿಗಳ ಬಜೆಟ್ ಇಟ್ಟುಕೊಂಡಿರುತ್ತೇವೆ. ಇದರ ಜೊತೆಗೆ, arrears ಕಟ್ಟುವುದಕ್ಕಾಗಿ ಇನ್ನೂ 700 ರಿಂದ 800 ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಕೊಟ್ಟಿದ್ದೇವೆ. ಅದರಂತೆ, ಸುಮಾರು 5500 ಕೋಟಿ ರೂಪಾಯಿಗಳನ್ನು ಈಗ ಖರ್ಚು ಮಾಡುತ್ತಿದ್ದೇವೆ.

(...ಮುಂದುವರೆದಿದೆ)

(136) 03.02.2021 7.00 ವೈಎಲ್-ಜಿಆರ್

**ಡಾ॥ ಸಿ.ಎನ್.ಅಶ್ವಥ್‌ನಾರಾಯಣ್ (ಮುಂದು):-**

ಈ ಐದೂವರೆ ಸಾವಿರ ಕೋಟಿಯನ್ನು ನಮ್ಮ ಬಜೆಟ್‌ನಲ್ಲಿ ತೆಗೆದುಕೊಂಡಾಗ ಉನ್ನತ ಶಿಕ್ಷಣಕ್ಕೆ ಶೇ. 2 ಅಥವಾ 2½ ರಷ್ಟು ಖರ್ಚು ಮಾಡುತ್ತೇವೆ. ಇವತ್ತು ಇರುವುದನ್ನು ಸರಿಪಡಿಸಲು ಎರಡಲ್ಲ, ಮೂರು ಪಟ್ಟು ಜಾಸ್ತಿ ಮಾಡಿದರೂ, ಶೇ.85 ಕ್ಕಿಂತ ಹೆಚ್ಚು salary component ನಲ್ಲಿಯೇ ಇದೆ. Salary component ಅನ್ನು ಇನ್ನೂ ಹೆಚ್ಚಾಗಿ ನೀಡಬೇಕಾಗುತ್ತದೆ. ಶೇ.2 ರಷ್ಟು ಹೆಚ್ಚಿಸಿದರೂ ಸಹ existing institutions ಗಳಿಗೆ ಬಜೆಟ್ ಸಾಕಾಗುವುದಿಲ್ಲ. ಹಾಗೆಯೇ ನಾವು ಯಾವುದನ್ನು

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಹಿಡಿದು ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಹಾಗಾಗಿ ಇದು ಮುಂದೆ ಹೋಗುತ್ತಿರಬೇಕು, ಅವಕಾಶ ಕಲ್ಪಿಸುತ್ತಿರಬೇಕು. ಅದಕ್ಕೆ ಪೂರಕವಾಗಿ ಮಾಡಬೇಕು. ಅದರ ಜೊತೆಗೆ ಸರ್ಕಾರಿ ಸಂಸ್ಥೆಗಳು ಸುಮ್ಮನೆ ನೋಡುತ್ತಾ, ಕುಳಿತ್ತಿಲ್ಲ. ನಾವು ಸಹ ಪೈಪೋಟಿಗೆ ತಯಾರಿದ್ದೇವೆ. ಖಾಸಗಿ ಸಂಸ್ಥೆಗಳಿಗಿಂತ ಸರ್ಕಾರಿ ಸಂಸ್ಥೆಗಳನ್ನು ಚೆನ್ನಾಗಿ ಮಾಡಬೇಕೆಂದು ಪಣ ತೊಟ್ಟಿ ಕೆಲಸವನ್ನು ಮಾಡಿ, ತಂತ್ರಜ್ಞಾನದ ಬಳಕೆ ಮೂಲಕ Learning Management System ಅನ್ನು ತಂದುಕೊಂಡಿದ್ದೇವೆ. ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಸಹ ಇದನ್ನು ತರಲು ಸಾಧ್ಯವಾಗಿಲ್ಲ. ಇದನ್ನು ತರುವುದರ ಮೂಲಕ master classes ಅನ್ನು ಎಷ್ಟು ಚೆನ್ನಾಗಿ ತಯಾರು ಮಾಡಿದ್ದೇವೆ ಎಂದರೆ, really it will be a national model. ನಾನು ಈ ಸ್ಥಾನದಲ್ಲಿ ನಿಂತುಕೊಂಡಿದ್ದೇನೆ, ಹಾಗಾಗಿ ಇಲಾಖೆಯನ್ನು represent ಮಾಡುತ್ತಿದ್ದೇನೆ ಎಂದು ಹೇಳಿಕೊಳ್ಳುತ್ತಿಲ್ಲ.

**ಶ್ರೀ ನಸೀರ್ ಅಹ್ಮದ್ (ವಿಧಾನಸಭೆಯಿಂದ ಚುನಾಯಿತರಾದವರು):-** ಮಾನ್ಯ ಸಭಾಪತಿಯವರೇ, ಒಂದು ನಿಮಿಷ. ಮಾನ್ಯ ಸಚಿವರು ಬಹಳ ಚೆನ್ನಾಗಿ vision ಇಟ್ಟುಕೊಂಡು ಮಾತನಾಡುತ್ತಿದ್ದಾರೆ. ಈಗಾಗಲೇ ಯಾವ ರೀತಿ ಸರ್ಕಾರಿ ಸಂಸ್ಥೆಗಳನ್ನು ಮುಂದೆ ಚೆನ್ನಾಗಿ ಮಾಡಬೇಕು, ಸರ್ಕಾರಿ ಶಾಲೆಗಳು ಯಾವ ರೀತಿ ಇರಬೇಕು ಎಂಬುವ ವಿಚಾರವನ್ನು ಮಾನ್ಯ ಸಚಿವರು ಹೇಳಿದರು. ದೆಹಲಿಯಲ್ಲಿ A.A.P., ನವರು ಮಾಡಿರುವುದನ್ನು ಹೋಗಿ ನೋಡಬಹುದಲ್ಲವೇ? ಇವತ್ತು ಅಲ್ಲಿ reverse trend ಆಗುತ್ತಿದೆ. Private institutions ಗಳಿಂದ ಸರ್ಕಾರಿ ಸಂಸ್ಥೆಗಳಿಗೆ ಮಕ್ಕಳನ್ನು ಸೇರಿಸಲು ಬರುತ್ತಿದ್ದಾರೆ. ಕಾರಣವೇನೆಂದರೆ, ಈ ಸರ್ಕಾರಿ ಸಂಸ್ಥೆಗಳಲ್ಲಿರುವ international standard Swimming Pool, international standard tracks, ವಿದ್ಯಾರ್ಥಿಗಳಿಗೆ ನೀಡುತ್ತಿರುವಂಥ uniforms. ಆ ರೀತಿ ಎಲ್ಲಾ A.A.P., ನವರು ಮಾಡಿದ್ದಾರೆ. ಇನ್ನೊಂದು ವಿಚಾರವನ್ನು ಗಮನಿಸಬೇಕು. Byju's Classes ಎನ್ನುವವರ ಕ್ಯಾಪಿಟಲ್ ಇವತ್ತಿನ ದಿವಸ ಎಷ್ಟಿದೆ? What is their valuation today? ನಾವು ದುಡ್ಡಿಲ್ಲ, ದುಡ್ಡಿಲ್ಲ ಎಂದು ಮಾತನಾಡುತ್ತೇವೆ. I think, today their valuation is more than Rs.25 to 30 thousand crore. They have achieved it in a matter of about

ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

four or five years. ಹಾಗಾಗಿ ಇದರ ಕಡೆ ಸ್ವಲ್ಪ ಗಮನಹರಿಸಬೇಕೆಂದು ನಾನು ಸಲಹೆ ನೀಡುವುದಕ್ಕೆ ಬಯಸುತ್ತೇನೆ.

**ಡಾ॥ ಸಿ.ಎನ್.ಅಶ್ವಥ್‌ನಾರಾಯಣ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ಅವರು ಸಲಹೆ ನೀಡಿರುವುದರಿಂದ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛಿಸುತ್ತೇನೆ. ಖಂಡಿತವಾಗಿ Byju's Classes ಹಾಗೂ ಇನ್ನೂ ಹಲವಾರು Edutech Companies ಗಳ base ಆಗಿರುವುದು ಬೆಂಗಳೂರೇ.

**ಸಭಾಪತಿಯವರು:–** ಮಾನ್ಯ ಸಚಿವರೇ ತಾವೂ ಉತ್ತರ ನೀಡಿದ್ದು, ಮುಗಿಯಿತೇ?

**ಡಾ॥ ಸಿ.ಎನ್.ಅಶ್ವಥ್‌ನಾರಾಯಣ್:–** ಮಾನ್ಯ ಸಭಾಪತಿಯವರೇ, ಮುಗಿಸೋಣವೇ?

**ಶ್ರೀ ನಸೀರ್ ಅಹ್ಮದ್:–** ಮಾನ್ಯ ಸಭಾಪತಿಯವರೇ, ಮಾನ್ಯ ಸಚಿವರು ಚೆನ್ನಾಗಿ ಮಾತನಾಡುತ್ತಿದ್ದಾರೆ, ಬೆಂಗಳೂರಿಗೆ ಸಂಬಂಧಿಸಿದ ಸರಿಸ್ಥಿಯಾಗಿದೆ ಮಾತನಾಡಲಿ.

**ಡಾ॥ ಸಿ.ಎನ್.ಅಶ್ವಥ್‌ನಾರಾಯಣ್:–** ಮಾನ್ಯ ಸಭಾಪತಿಯವರೇ, ತಾಂತ್ರಿಕವಾಗಿ ಹೇಳುವುದಾದರೆ, Edutech, Agritech ಅಥವಾ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡಾಗ ಕರ್ನಾಟಕಕ್ಕೆ ವಿಶ್ವಾಸದಿಂದ ಹೇಳುತ್ತಿದ್ದೇನೆ. ಪವಿತ್ರವಾಗಿರುವಂಥ ಈ ಸದನದಲ್ಲಿ ಹೇಳುತ್ತಿದ್ದೇನೆ, ಸರಿಯಾಗಿ ಶಿಕ್ಷಣ ಮತ್ತು ಕೌಶಲ್ಯತೆಯನ್ನು ನೀಡಿ, ಇಡೀ ವಿಶ್ವದಲ್ಲಿಯೇ ಯಾರೂ ಸಹ ಸರಿಸಾಟಿಯಾಗಿ ಕರ್ನಾಟಕ ರಾಜ್ಯಕ್ಕೆ ನಿಲ್ಲುವುದಕ್ಕೆ ಸಾಧ್ಯವಾಗಿಲ್ಲ. ಖಂಡಿತವಾಗಿ ಶಿಕ್ಷಣಕ್ಕಾಗಲಿ, ತಂತ್ರಜ್ಞಾನಕ್ಕಾಗಲಿ ಏನು ಉತ್ತೇಜನ ನೀಡಬೇಕು, ವ್ಯಯ ಮಾಡಬೇಕಾಗಿದೆ, ಅದನ್ನು ಸರಿಯಾಗಿ ಅಳವಡಿಸಿಕೊಂಡು ಅದಕ್ಕೆ ಉತ್ತೇಜನ ನೀಡುತ್ತಾ ಹೋದರೆ, ಇವತ್ತು Silicon Valley ನಲ್ಲಿ ಏನಿದೆ, ಆ Silicon Valley ನಲ್ಲಿ ಕೆಲಸ ಮಾಡುವವರ ಸಂಖ್ಯೆಗಿಂತ ದೊಡ್ಡ ಸಂಖ್ಯೆಯಲ್ಲಿ ನಮ್ಮವರು ಕೆಲಸ ಮಾಡುತ್ತಿದ್ದಾರೆ. ಸೊಲ್ಯೂಷನ್ ಕಂಡುಹಿಡಿಯುತ್ತಿರುವವರು ನಮ್ಮವರು. ಇವತ್ತು ದೇಶದಲ್ಲಿಯೇ ಯಾವುದೇ ರಾಜ್ಯದಲ್ಲಿ ಬೇರೆ–ಬೇರೆ manufacturing base ಆದರೂ ಸಹ ನಮ್ಮ ರಾಜ್ಯದಿಂದಲೇ ಮೊದಲು ಪ್ರಾಡಕ್ಟ್ ಡೆವಲಪ್‌ಮೆಂಟ್ ಆಗುವುದು. Ether, ಓಲಾ, ಇನ್ನಿತರ ಯಾವುದೇ ಕಂಪನಿ ಹೋದರೂ,

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯಾವುದೇ ಒಂದು ಪ್ರಾಡಕ್ಟ್ ಡೆವಲಪ್ ಆಗುವುದು ನಮ್ಮ ರಾಜ್ಯದಿಂದ. Constituent Colleges ಬಗ್ಗೆಯು ಮಾನ್ಯ ಸದಸ್ಯರುಗಳು ಕೇಳಿದ್ದಾರೆ. ಮುಖ್ಯವಾಗಿ ಇರುವ ಉದ್ದೇಶವೇನೆಂದರೆ, ಬೆಂಗಳೂರು ಮಾತ್ರವಲ್ಲ. ಎಲ್ಲಾ ಕಡೆಯೂ ವಿದ್ಯಾ ಸಂಸ್ಥೆಗಳನ್ನು ಹೆಚ್ಚಾಗಿ ಪ್ರಾರಂಭ ಮಾಡಲು ಸಂಸ್ಥೆಯನ್ನು ಕಟ್ಟುವವರಿದ್ದರೆ, ಬನ್ನಿ ಕಟ್ಟಿ ಎಂದು ನಾವು ಸ್ವಾಗತಿಸಬೇಕೇ ಹೊರತು, ಸಂಸ್ಥೆ ಕಟ್ಟಬೇಡಪ್ಪ ಎಂದು ಹೇಳುವುದಕ್ಕಾಗುವುದಿಲ್ಲ.

ಇವರೇ ಸಂಸ್ಥೆಯನ್ನು ನಿರ್ಮಿಸಿದರೂ, ಸರ್ಕಾರದಿಂದ ನಿಗದಿ ಮಾಡಿರುವ ಶುಲ್ಕವನ್ನು ನಮ್ಮ ಸಮಾಜ ಕಲ್ಯಾಣ ಇಲಾಖೆಯಿಂದ, ಹಿಂದೂಳಿದ ವರ್ಗಗಳ ಇಲಾಖೆಯಿಂದ, Minorities Development Department ಯಿಂದ ಭರಿಸಲು ಅವಕಾಶ ಇರುತ್ತದೆ. ಸರ್ಕಾರದಿಂದಲೇ ಫಿಕ್ಸ್ ಮಾಡಿರುವಂಥ ಶುಲ್ಕ, merit ಗಾಗಿ ಫಿಕ್ಸ್ ಮಾಡಿರುವ ಶುಲ್ಕವನ್ನು ಭರಿಸಲು ಅವಕಾಶವಾಗುತ್ತದೆ. ಇಲ್ಲದಿದ್ದರೆ ನಾವು ಅದನ್ನು ತಡೆಹಿಡಿದುಕೊಂಡರೆ,... ನಾನು ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ತಮಗೆ ಹೇಳುವುದಾದರೆ, ಕಾರ್ಮಿಕರ ಭವಿಷ್ಯ ನಿಧಿಯಿಂದ 55 ಲಕ್ಷ ಜನ ಕರ್ನಾಟಕದಲ್ಲಿ ನೋಂದಣಿಯಾಗಿದ್ದಾರೆ. Common Sector ಬಿಟ್ಟು, ಇ.ಪಿ.ಎಫ್., ನಲ್ಲಿ 55 ಲಕ್ಷ ಜನ ನೋಂದಣಿಯಾಗಿದ್ದಾರೆ. ಅದಲ್ಲದೇ Formal Sector ನಲ್ಲಿ, ಇನ್ನೂ 30 ಲಕ್ಷ ಜನರಿದ್ದಾರೆ, who will not come under E.P.F. ಎಲ್ಲವನ್ನೂ ಲೆಕ್ಕ ಹಾಕಿ ನೋಡಿದರೆ unorganised sector ಬಿಟ್ಟು, ಫಾರ್ಮಲ್ ಸೆಕ್ಟರ್‌ನಲ್ಲಿ 85 ಲಕ್ಷ ಜನರಿದ್ದಾರೆ. ಇಷ್ಟು ಸಂಖ್ಯೆಯನ್ನು ನೋಡಿದಾಗ ಇಷ್ಟು ಜನ ಎಲ್ಲಿದ್ದಾರೆ, ನಾವು ಎಷ್ಟು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ, ಇನ್ನು ಎಷ್ಟು ಜನರಿಗೆ ಅವಕಾಶಗಳಿವೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಬಹಳಷ್ಟು ಇದೆ. Agritech ತೆಗೆದುಕೊಂಡರೂ ಸಹ ಗ್ರಾಮೀಣ ಭಾಗದಲ್ಲಿಯು ಬಹಳಷ್ಟು ಸುಧಾರಣೆ ಮಾಡಬೇಕಾಗಿದೆ. ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ.

ನಮ್ಮಲ್ಲಿ potential ಇದೆ. ಡಿಮ್ಯಾಂಡ್ ಅಂಡ್ ಸಪ್ಲೈಗೆ connect ಇಲ್ಲದಂತಾಗಿದೆ. ಏನು ಮಾಡಿದರೆ ನಮಗೆ ಒಳ್ಳೆಯದು, ಏನೇನು ಅವಕಾಶ ಇದೆ, ಏನು ಬೇಕಾಗಿದೆ ಎನ್ನುವುದನ್ನು ಮಾಡದೆಯೇ,... ಎಲ್ಲರೂ ಓದುತ್ತಾರೆ, ಮಾತನಾಡುತ್ತಾರೆ. ಆದರೆ, ಓದಿಗೆ ತಕ್ಕ ಉದ್ಯೋಗ ಸಿಗುತ್ತಿಲ್ಲ ಎಂಬುದೇ ದೊಡ್ಡ ಸಮಸ್ಯೆಯಾಗಿದೆ. ಇದನ್ನು ನೋಡಿಕೊಂಡು ಮಾಡಿದಾಗ ಮಾತ್ರ, ಪ್ರಸ್ತುತವಾಗಿ

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ನಮ್ಮ ಮನೆ ಬಾಗಿಲಿನ ಮುಂದೆಯಾಗಲಿ ಅಥವಾ ಇನ್ನೊಬ್ಬರ ಮನೆ ಬಾಗಿಲಿನ ಮುಂದೆಯಾಗಲಿ ಯಾವುದೇ ಯುವಕ ಉದ್ಯೋಗಕ್ಕಾಗಿ ಬಂದು ನಿಲ್ಲುವ ಪರಿಸ್ಥಿತಿ ಯಾವತ್ತು ನಿರ್ಮಾಣವಾಗುವುದಿಲ್ಲ. ಪ್ರಸ್ತುತವಾಗಿ ಮಾಡಿದಾಗ ಮಾತ್ರ, ಸಾಧ್ಯವಾದಷ್ಟು ಪರಿಹಾರ ಕಂಡುಹಿಡಿಯಲು ಸಾಧ್ಯವಾಗುತ್ತದೆ. ಈ ದಿಕ್ಕಿನಲ್ಲಿ aero space ತೆಗೆದುಕೊಳ್ಳಿ, ಯಾವುದನ್ನಾದರೂ ತೆಗೆದುಕೊಳ್ಳಿ, ಎಕೋ ಸಿಸ್ಟಂಗಳೆಲ್ಲಾ ಬಹಳ ಅದ್ಭುತವಾಗಿ ನಿರ್ಮಾಣವಾಗಿದೆ. ಅದ್ಭುತವಾಗಿ ನಿರ್ಮಾಣವಾಗಿರುವುದನ್ನು ಸರಿಯಾಗಿ ಬಳಕೆ ಮಾಡಿಕೊಂಡು ಮುಂದೆ ಹೋಗೋಣ ಎನ್ನುವ ಮಾತನ್ನು ಹೇಳುತ್ತಿದ್ದೇನೆ. ಎಲ್ಲಿಯೋ ಒಂದು ಕಡೆ ಪಟ್ಟಭದ್ರ ಅಥವಾ ಯಾರದೋ ಸ್ವಾರ್ತಕ್ಕಾಗಿ, ಇನ್ನೊಂದಕ್ಕಾಗಿ ಈ ಕೆಲಸವನ್ನು ಕೈಗೊಂಡಿಲ್ಲ. ಎಲ್ಲರ ಮುಂದೆ ಎದ್ದು ನಿಂತುಕೊಂಡು ಮಾತನಾಡಬೇಕೆಂದರೆ, ಈ ಜವಾಬ್ದಾರಿಯುತ ಸ್ಥಾನದಲ್ಲಿ ಕೆಲಸ ಮಾಡಬೇಕೆಂದರೆ, ಸಮಾಜಕ್ಕೆ ಪೂರಕವಾಗಿ, ಸಮಾಜದ ಕೆಲಸವನ್ನು ನೆನೆಸಿಕೊಂಡು ಮಾಡಬೇಕಾಗುತ್ತದೆ. ಎಲ್ಲಿಯೋ ಒಂದು ಕಡೆ ಸುಮ್ಮನೆ ಕುಳಿತುಕೊಂಡು ಮಾಡಿದರೆ ಕಳಂಕ ಬರುತ್ತದೆ, ಕೈ ತೋರಿಸುವಂಥ ಕೆಲಸವಾಗುತ್ತದೆ. ಹಾಗೆಂದು ಹಿಂಜರಿದುಕೊಂಡು ಹೋದರೆ, ಪರಿಹಾರವನ್ನು ಎಲ್ಲಿಂದ ನೀಡುವುದು? ಆ ಕಾರಣದಿಂದಾಗಿ ಮಾನ್ಯ ಸದಸ್ಯರೆಲ್ಲರಿಂದ ಕೇಳುತ್ತಿದ್ದೇನೆ ದಯವಿಟ್ಟು ಈ ವಿಧೇಯಕವನ್ನು ಅಂಗೀಕರಿಸಿಕೊಡಿ.

**ಶ್ರೀ ಕೆ.ಟಿ.ಶ್ರೀಕಂಠೇಗೌಡ:–** ಮಾನ್ಯ ಸಭಾಪತಿಯವರೇ, examinations and academic affairs ಗಳನ್ನು ಯಾವ ರೀತಿ streamline ಗೆ ತರುತ್ತೀರಿ?

**ಡಾ॥ ಸಿ.ಎನ್.ಅಶ್ವಥ್‌ನಾರಾಯಣ್:–** ಮಾನ್ಯ ಸಭಾಪತಿಯವರೇ, ಆ ವಿಚಾರಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಈಗ ಸುಧಾರಣೆಗಳು learning outcome ಎಂದು ಬಂದಿದೆ. ಪ್ರಸ್ತುತವಾಗಿ ಹೇಳುವುದಾದರೆ, ಡಿಗ್ರಿ ಮಾರ್ಕ್ಸ್‌ನಿಂದ ನೇರವಾಗಿ ಸರ್ಕಾರಿ ಹುದ್ದೆಗಳಿಗೆ ಆಯ್ಕೆಯಾಗುತ್ತಿದ್ದರು. ಆದರೆ, ಇವತ್ತು ಆ ರೀತಿ ಆಯ್ಕೆಯಾಗುವುದಕ್ಕೆ ಅವಕಾಶ ಇರುವುದಿಲ್ಲ. ಸಾಕಷ್ಟು ಹಿರಿಯರಿದ್ದೀರಿ. ಈ ಮೊದಲು ಪ್ರಯತ್ನ ಮಾಡಿ, ಡಿಗ್ರಿ ಮಾರ್ಕ್ಸ್ ಮೇಲೆ ಆಯ್ಕೆಯಾಗುವುದನ್ನು ತಡೆಹಿಡಿದಿರುವ ಉದಾಹರಣೆಯು ಇದೆ. ನಾವು ಸಹ ಯಾವುದಕ್ಕಾದರೂ ಆಯ್ಕೆ ಮಾಡಬೇಕೆಂದರೆ ನಮ್ಮ ಇಲಾಖೆಯಲ್ಲಿಯೇ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಆಯ್ಕೆ ಮಾಡುವಂಥ ಕೆಲಸವಾಗುತ್ತಿದೆ. ಹಾಗಾಗಿ ಇದ್ಯಾವುದು ಮಾರ್ಕ್ಸ್ ಆಧಾರಿತವಾಗಿ ಆಗುವುದಿಲ್ಲ. ಮುಂದಿನ ದಿನಗಳಲ್ಲಿಯು Competitive Exam ಎಂಬುದು ಬರುತ್ತದೆ. ನಮ್ಮ ಇಲಾಖೆಯಲ್ಲಿಯೂ ಸಹ Competitive Exam ಮೂಲಕ ಆಯ್ಕೆ

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ Exit Exam ಎಂದು ಬರುತ್ತದೆ. Learning outcome ಮೂಲಕ ಪ್ರತಿಯೊಂದು ಸಂಸ್ಥೆಯಲ್ಲಿಯು ಯಾವ್ಯಾವ ವಿದ್ಯಾರ್ಥಿ ಹೇಗೆ ಸ್ಪರ್ಧೆ ಮಾಡಿದ್ದಾನೆ, ಸಂಸ್ಥೆಗಳ ಗುಣಮಟ್ಟ ಸಹ Learning outcome ನಲ್ಲಿಯೇ establish ಆಗಿಬಿಡುತ್ತದೆ. ಜೊತೆಗೆ ಹಲವಾರು ಏಜೆನ್ಸಿಗಳು ಇವೆ. National Institutional Framework, National Board of Accreditation (NBA), U.G.C., ಸಂಸ್ಥೆಗಳು ಇವೆ. ಈ ಸಂಸ್ಥೆಗಳ Governing Body ಯಲ್ಲಿ ಯು.ಜಿ.ಸಿ. ಯ ಸದಸ್ಯರುತ್ತಾರೆ. ಜೊತೆಗೆ ನಮ್ಮ ಪ್ರಧಾನ ಕಾರ್ಯದರ್ಶಿಯವರು ಹಾಗೂ ಸರ್ಕಾರದ ನಾಮಿನಿ, ಎಲ್ಲರೂ ಇರುತ್ತಾರೆ. ಹಾಗಾಗಿ ಎಲ್ಲವನ್ನೂ ನೋಡಿಕೊಂಡು, ಮಾನ್ಯ ಸದಸ್ಯರು ಈಗಾಗಲೇ ಕೇಳಿರುವ ಎಲ್ಲಾ ವಿಚಾರವನ್ನೂ ಗಮನದಲ್ಲಿಟ್ಟುಕೊಂಡು ಮಾಡುವಂಥದಾಗುತ್ತದೆ. ಮಾನ್ಯ ಸದಸ್ಯರೆಲ್ಲರ ಸಲಹೆ, feedback ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು, ನಿಯಮದಲ್ಲಿ ಏನೇನು ಬದಲಾವಣೆ ಮಾಡಬೇಕಾಗಿದೆ ಅದೆಲ್ಲವನ್ನೂ ಮಾಡುತ್ತೇವೆ. Unified University Management System ಎಂದು ನಮ್ಮ ಸರ್ಕಾರಿ ಕಾಲೇಜಿಗೆ ಮಾಡಲಾಗಿದೆ. ರಿಯಲ್ ಟೈಮ್‌ನಲ್ಲಿ ಆಡಳಿತದಲ್ಲಿ ಏನೇನು ಆಗುತ್ತಿದೆ, ಅದೆಲ್ಲದರ ಮಾಹಿತಿಯನ್ನು ಹಿಂದೆ ಸಿಗುತ್ತಿರಲಿಲ್ಲ. ಇವತ್ತು ಅದೆಲ್ಲವೂ ಸಿಗುವ ಹಾಗೆ ಮಾಡುತ್ತಿದ್ದೇವೆ. ಇನ್ನೂ 3 ತಿಂಗಳಲ್ಲಿ Unified University and College Management System ಎಂಬುದನ್ನು ಮಾಡಲಾಗುತ್ತದೆ. ಆ ಮೂಲಕ ಎಲ್ಲಾ ಮಾಹಿತಿಯನ್ನು ಪಡೆಯಲಾಗುತ್ತದೆ. Same thing will be extended to the private universities, ಸರ್ಕಾರಿ ಸಂಸ್ಥೆಗಳಿಗೆ ಏನು ಮಾಡಲಾಗಿದೆ, same thing we want to extend to the Private Universities. ಖಾಸಗಿ ಸಂಸ್ಥೆಗಳಲ್ಲಿಯೂ ರಿಯಲ್ ಟೈಮ್‌ನಲ್ಲಿ ಎಲ್ಲಾ ಡೆಟಾವನ್ನು ಸಂಗ್ರಹಿಸುವ ಕೆಲಸವನ್ನೂ ಮಾಡುತ್ತೇವೆ.

(ಮುಂದು...)

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(137)03.02.2021/7.10/ಎಸ್‌ಕೆ-ಎಂಡಿ

**ಡಾ. ಅಶ್ವಥ್‌ನಾರಾಯಣ್ ಸಿ.ಎನ್. (ಮುಂದು):-**

ನಮ್ಮ ಎಲ್ಲಾ ಗೌರವಾನ್ವಿತ ಸದಸ್ಯರ ಸಲಹೆ, feedback, ಅನಿಸಿಕೆ ಆಧಾರದ ಮೇಲೆ ಮತ್ತು ಸದರಿ ಆ್ಯಕ್ಟ್‌ನ ಕೆಳಗೆ ರೂಲ್ಸ್‌ಗಳನ್ನು ಮಾಡುವಾಗ ಮತ್ತಷ್ಟು ಆ ವಿಷಯಗಳಲ್ಲಿ ಬದಲಾವಣೆಗಳನ್ನು ತರಲಾಗುತ್ತದೆ. ದಯವಿಟ್ಟು, ಈ ವಿಧೇಯಕವನ್ನು ಪಾಸ್ ಮಾಡಿಕೊಡಿ ಎಂದು ನಾನು ವಿನಂತಿಯನ್ನು ಮಾಡುತ್ತೇನೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನವನ್ನು ಹೊಂದಿದವರು):-** ಮಾನ್ಯ ಸಚಿವರೇ ನನ್ನದೊಂದೇ clarification. ಈ St. Joseph's University, Financial Memorandum ಗೆ ಸಂಬಂಧಪಟ್ಟ ಹಾಗೇ ತಾವು "The initial outlay requirement towards the establishment of St. Joseph's University is estimated to be Rs. 55.00 crores. Out of which Central Government will provide its share of 60% i.e., Rs. 33.00 Cr. and State Government will provide its share of 40% i.e., Rs. 22.00 Cr." ಎಂದು ಇದೆ. ಬಿಲ್ ಜೊತೆಗೆ Financial Memorandum attach ಮಾಡಿದ್ದೀರಿ. ಇದಕ್ಕೆ ಒಂದು clarification. ಇದಕ್ಕೆ ಏನಾದರೂ commit ಆಗಿದ್ದೀರಾ. ಇದಕ್ಕೆ ತಾವು provide ಮಾಡಿದ್ದೀರಾ.

**ಡಾ. ಅಶ್ವತ್ಥನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):-** ಮಾನ್ಯ ಸಭಾಪತಿಯವರೇ, RUSA (Rashtriya Uchchattar Shiksha Abhiyan)ಯೋಜನೆ ಅಡಿಯಲ್ಲಿ ಅಂದರೆ ಈ ರಾಷ್ಟ್ರೀಯ ಉಚ್ಚತರ ಶಿಕ್ಷಣ ಅಭಿಯಾನ 2.0 ನಲ್ಲಿ ಆಯ್ಕೆಯಾಗಿತ್ತು. ಅದಕ್ಕೆ ಕೇಂದ್ರ ಸರ್ಕಾರದಿಂದ ಶೇಕಡ 60, ರಾಜ್ಯ ಸರ್ಕಾರದಿಂದ ಶೇಕಡ 40 ಕೊಡುವಂತಹದ್ದನ್ನು ಮಾಡುತ್ತಿದ್ದೇವೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ.ತಿಪ್ಪೇಸ್ವಾಮಿ:–** ಈ RUSA (Rashtriya Uchchattar Shiksha Abhiyan) ದಲ್ಲಿ ಆ ಕಾಲೇಜು cover ಆಗಿದೆಯಾ.

**ಡಾ. ಅಶ್ವತ್ಥನಾರಾಯಣ ಸಿ.ಎನ್.:–** ಹೌದು ಅದು RUSA ದಲ್ಲಿ cover ಆಗಿದೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು."

<u>**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**</u>

<u>**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**</u>

<u>**ಖಂಡ 2 ರಿಂದ 62 ರವರೆಗೆ**</u>

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 62ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

<u>**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**</u>

**(ಖಂಡ 2 ರಿಂದ 62ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

<u>**ಖಂಡ 1 ಇತ್ಯಾದಿ**</u>

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

<u>**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**</u>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ. ಅಶ್ವತ್ಥನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ನ್ಯೂ ಹೊರೈಜನ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಆ) ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2021**

**ಪರ್ಯಾಲೋಚನ ಪ್ರಸ್ತಾವ**

**ಡಾ. ಅಶ್ವತ್ಥನಾರಾಯಣ್ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2021 ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಡಾ. ಅಶ್ವತ್ಥನಾರಾಯಣ್ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಈಗಾಗಲೇ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಲಾಗಿದೆ. ಕೆಲವರ ಸಲಹೆಯೂ ಇತ್ತು. ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಎನ್ನುವಂತಹ ಬದಲು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ, ಬೆಂಗಳೂರು ಎಂದು ಮಾಡಿ. ಬೆಂಗಳೂರು ಎನ್ನುವ ಪದವನ್ನು ಕೊನೆಗೆ ತನ್ನಿ. ಆ ಬೆಂಗಳೂರು ಎನ್ನುವ ಪದ ಪ್ರಾರಂಭದಲ್ಲಿ ಬೇಡ ಎನ್ನುವ ಎಲ್ಲರ ಸಲಹೆಯ ಪೂರಕವಾಗಿ ಇದರ ತಿದ್ದುಪಡಿಯನ್ನು ನಾವು ತರುತ್ತಿದ್ದೇವೆ. ಈ ವಿಧೇಯಕವನ್ನು ಸಭೆಯು ಒಪ್ಪಿಕೊಳ್ಳಬೇಕು.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–**ಮಾನ್ಯ ಸಭಾಪತಿಯವರೇ ಒಂದೇ ಒಂದು ನಿಮಿಷ. London School of Economics and Delhi School of Economics ಎನ್ನುವ ದೃಷ್ಟಿಯಿಂದ ಕೊನೆ ಬಾರಿ ಮಾಡಿದ್ದು ಎಂದು ಕಾಣುತ್ತಿದೆ. ಅದರ ಬದಲಾವಣೆಗೆ ಪ್ರಬಲವಾದ ಕಾರಣವೇನು?

**ಡಾ. ಅಶ್ವತ್ಥನಾರಾಯಣ್ ಸಿ.ಎನ್.:–** ಮಾನ್ಯ ಸದಸ್ಯರೇ, ಮುಖ್ಯವಾಗಿ ಬೆಂಗಳೂರು ಡಾ:ಬಿ.ಆರ್ ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಎನ್ನುವುದು ಇತ್ತು. ಬೆಂಗಳೂರು ಎಂಬ ಪದವು ಮೊದಲು ಬರುವ ಬದಲು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ ಬೆಂಗಳೂರು ಎಂದು ಮಾಡಿದ್ದೇವೆ. ಡಾ: ಬಿ.ಆರ್ ಅಂಬೇಡ್ಕರ್‌ರವರಿಗೆ ಪ್ರಾಮುಖ್ಯತೆ ನೀಡುವ ದೃಷ್ಟಿಯಿಂದ ತಂದಿದ್ದೇವೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

**<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>**

ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ರಿಂದ 5 ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 5 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ: ಅಶ್ವತ್ಥನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2021ರ ಬೆಂಗಳೂರು ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2021ರ ಡಾ: ಬಿ.ಆರ್. ಅಂಬೇಡ್ಕರ್ ಅರ್ಥಶಾಸ್ತ್ರ ವಿದ್ಯಾಲಯ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಇ) ವಿದ್ಯಾಶಿಲ್ಪ್ ವಿಶ್ವವಿದ್ಯಾಲಯ ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಡಾ. ಅಶ್ವತ್ಥನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿದ್ಯಾಶಿಲ್ಪ್ ವಿಶ್ವವಿದ್ಯಾಲಯ ವಿಧೇಯಕ, 2020 ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು.**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ವಿದ್ಯಾಶಿಲ್ಪ್ ವಿಶ್ವವಿದ್ಯಾಲಯ ವಿಧೇಯಕವನ್ನು ಮಂಡಿಸಲಾಯಿತು."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು.**

**ಖಂಡ 2 ರಿಂದ 62 ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

"ಖಂಡ 2 ರಿಂದ 62ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

“ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

**(ಖಂಡ 2 ರಿಂದ 62ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)**

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

“ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ. ಅಶ್ವತ್ಥನಾರಾಯಣ ಸಿ.ಎನ್. (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2020ರ ವಿದ್ಯಾಶಿಲ್ಪ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ;

“ಕರ್ನಾಟಕ ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ವಿದ್ಯಾಶಿಲ್ಪ್ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು”

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

(ಮುಂದು)

“ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು”

138) 03.02.2021,7.20, ಟಿಸಿಹೆಚ್–ಎಂಡಿ

**ಈ) ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಡಾ॥ ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ " **ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ, 2020**"ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ॥ ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ಈ ಖಾಸಗಿ ವಿಶ್ವವಿದ್ಯಾಲಯನವನ್ನು ಸ್ಥಾಪನೆ ಮಾಡುವುದಕ್ಕೆ ಮುಂದೆ ಬಂದಿದ್ದಾರೆ. ಒಂದು ಗುಣಮಟ್ಟ ಮತ್ತು Gross Enrolment Ratio ವನ್ನು ಹೆಚ್ಚಿಸುವುದಕ್ಕೆ ಅವಕಾಶವನ್ನು ಹೆಚ್ಚಿಸುವುದಕ್ಕೋಸ್ಕರ ಅವಶ್ಯಕತೆ ಇರುವ ಕಾರಣದಿಂದ ಈ ಖಾಸಗಿ ವಿಶ್ವವಿದ್ಯಾಲಯಕ್ಕೆ ಅನುಮತಿ ಕೊಡಬೇಕೆಂದು ನಾನು ಕೋರಿಕೊಳ್ಳುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತ ರೂಪದಲ್ಲಿರುವ 2020ರ ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ: ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 62 ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 62ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 62 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

(ಮೊದಲನೆಯ ಖಂಡ, ಪೀಠಿಕೆ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

**ಡಾ॥ ಅಶ್ವತ್ ನಾರಾಯಣ್** ಸಿ.ಎನ್ **(ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ, 2020ನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ ಏಟ್ರಿಯಾ ವಿಶ್ವವಿದ್ಯಾಲಯ ವಿಧೇಯಕ, 2020ನ್ನು ಅಂಗೀಕರಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

**ಉ) ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕ, 2020**

**ಪರ್ಯಾಲೋಚನ ಪ್ರಸ್ತಾವ**

**ಡಾ|| ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ " ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕ, 2020ನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

**ಪ್ರಸ್ತಾವವನ್ನು ಮಂಡಿಸಲಾಯಿತು**

**ಡಾ|| ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು):–** ಮಾನ್ಯ ಸಭಾಪತಿಯವರೇ, ಈ ಸಂಸ್ಥೆಯು ಬಹಳ ವರ್ಷಗಳಿಂದ ಶಿಕ್ಷಣ ಕ್ಷೇತ್ರದಲ್ಲಿ ಸಾಮಾಜಿಕವಾಗಿ ಉತ್ತಮವಾದ ಕಾರ್ಯಗಳನ್ನು ಮಾಡುತ್ತಿದ್ದಾರೆ. ಚಿತ್ರದುರ್ಗ ಭಾಗದಲ್ಲಿ ಈ ವಿಶ್ವವಿದ್ಯಾಲಯವು ಬಹಳ ದೊಡ್ಡ ವ್ಯತ್ಯಾಸ ಮಾಡುವಂಥದ್ದು ಇದೆ. ಇದರ ಅವಶ್ಯಕತೆ ಇದೆ. ಗುಣಮಟ್ಟದ ಶಿಕ್ಷಣ ಮತ್ತು ಎಲ್ಲರಿಗೂ ವಿದ್ಯಾಭ್ಯಾಸ ಮಾಡುವುದಕ್ಕೆ ಅವಕಾಶ ಇದೆ. ಆದ್ದರಿಂದ ಈ ವಿಧೇಯಕವನ್ನು ಅಂಗೀಕಾರ ಮಾಡಿಕೊಡಬೇಕೆಂದು ಮಾನ್ಯ ಸದಸ್ಯರಲ್ಲಿ ಕೋರಿಕೊಳ್ಳುತ್ತೇನೆ.

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2020ರ ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕವನ್ನು ಪರ್ಯಾಲೋಚಿಸುವುದು"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ವಿಧೇಯಕವನ್ನು ಖಂಡ ಖಂಡವಾಗಿ ಪರ್ಯಾಲೋಚಿಸುವುದು**

**ಖಂಡ 2 ರಿಂದ 61 ರವರೆಗೆ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು**

(ಖಂಡ 2 ರಿಂದ 61 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

**ಖಂಡ 1 ಇತ್ಯಾದಿ**

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.**

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

**ಪ್ರಸ್ತಾವದ ಅಂಗೀಕಾರ**

**ಡಾ|| ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ " 2020ರ ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಸಭಾಪತಿಯವರು:–** ಪ್ರಸ್ತಾವ ಏನೆಂದರೆ,

ವಿಧಾನಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ "2020ರ ಶ್ರೀ ಜಗದ್ಗುರು ಮುರುಘರಾಜೇಂದ್ರ ವಿಶ್ವವಿದ್ಯಾಲಯ ವಿಧೇಯಕವನ್ನು ಅಂಗೀಕರಿಸುವುದು".

**ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು**

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

## 08) ಪ್ರಕಟಣೆ

**ಸಭಾಪತಿಯವರು:–** ಮಾನ್ಯ ಸಭಾಧ್ಯಕ್ಷರಿಂದ ಈ ಮುಂದಿನ ಸಂದೇಶ ಬಂದಿರುತ್ತದೆ.

ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ 104ರ ನಿಯಮದ ಮೇರೆಗೆ ವಿಧಾನಸಭೆಯು ದಿನಾಂಕ 03.02.2021ರಂದು ಈ ಕೆಳಕಂಡ ವಿಧೇಯಕಗಳನ್ನು ಅಂಗೀಕರಿಸಿರುತ್ತದೆಂದು ಹಾಗೂ ಸದರಿ ವಿಧೇಯಕಗಳಿಗೆ ವಿಧಾನ ಪರಿಷತ್ತಿನ ಸಹಮತಿ ನೀಡಬೇಕೆಂದು ಕೋರಿರುತ್ತಾರೆ.

1) ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ 2020.
2) ಕರ್ನಾಟಕ ಅಂಗಡಿಗಳು ಮತ್ತು ವಾಣಿಜ್ಯ ಸಂಸ್ಥೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020.

**ಡಾ॥ ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):–** ಮಾನ್ಯ ಸಭಾಪತಿಯವರೇ, ಸೇಂಟ್ ಜೋಸೆಫ್ ಯೂನಿವರ್ಸಿಟಿ ವಿಚಾರದಲ್ಲಿ financial implications ಇರುವುದರಿಂದ, ಇದನ್ನು ಇವತ್ತು ಇಲ್ಲಿ ಮಂಡಿಸುತ್ತಿಲ್ಲ. ರೂ.55 ಕೋಟಿಗಳ ಅನುದಾನ ಕೊಡುತ್ತಿರುವುದರಿಂದ ಗೌರವಾನ್ವಿತ ರಾಜ್ಯಪಾಲರಿಂದ ಅನುಮತಿ ತೆಗೆದುಕೊಳ್ಳಬೇಕಾಗಿದೆ. ಇದನ್ನು ನಾಳೆ ಮಂಡಿಸಲಾಗುವುದು.

**ಶ್ರೀ ನಸೀರ್ ಅಹ್ಮದ್ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಈಗ ನೀವು ಈಗಾಗಲೇ ನಾಲ್ಕು ವಿಶ್ವವಿದ್ಯಾಲಯಗಳ ವಿಧೇಯಕಗಳನ್ನು ಪಾಸ್ ಮಾಡಿಬಿಟ್ಟು, ಸೇಂಟ್ ಜೋಸೆಫ್

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಯೂನಿವರ್ಸಿಟಿ minorities ಗೆ ಸೇರಿದ್ದು ಎಂದು... ಈಗಾಗಲೇ ನಾವು ನೋಡುತ್ತಿದ್ದೇವೆ. ಅಲ್ಲಿ ಏನೋ ಸ್ವಲ್ಪ ಮಾತುಕತೆ ನಡೆಯುತ್ತಿತ್ತು. ದಯವಿಟ್ಟು ಅಂಥದ್ದನ್ನು ಮಾಡಬೇಡಿ.

**ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು):-** ಮಾನ್ಯ ಸಭಾಪತಿಯವರೇ, ವಿಧೇಯಕಗಳು ಪಾಸ್ ಆಗಿಬಿಟ್ಟಿದೆಯಲ್ಲಾ ರೆಕಾರ್ಡ್ ಅಗಿದೆ. . .

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಸೇಂಟ್ ಜೋಸೆಫ್ ಯೂನಿವರ್ಸಿಟಿ ಬಗ್ಗೆ . . .

**ಡಾ॥ ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):-** ಮಾನ್ಯ ಸಭಾಪತಿಯವರೇ, ಅವರು ನಮ್ಮಲ್ಲಿ ಬಂದಿದ್ದು, ಬಿಲ್ ಪಾಸ್ ಮಾಡಿಬಿಡೋಣ, ಮಾಡಿಬಿಡಿ ಎಂದು ಒತ್ತಾಯ ಮಾಡುತ್ತಿದ್ದರು. ಸಂಸದೀಯ ವ್ಯವಹಾರಗಳ ಕಾರ್ಯದರ್ಶಿಯವರು ಬಂದು ತಿಳಿಸಿರುವುದು.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಸಂಸದೀಯ ವ್ಯವಹಾರಗಳ ಕಾರ್ಯದರ್ಶಿಯವರು ಇಷ್ಟೆಲ್ಲಾ ಗುಲ್ ಎಲ್ಲಾ ಆಗುತ್ತಿರುವ ತನಕ ಏನು ಮಾಡುತ್ತಿದ್ದರು?

**ಡಾ॥ ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):-** ಮಾನ್ಯ ಸಭಾಪತಿಯವರೇ, ಮುಖ್ಯವಾಗಿ ವಿಧೇಯಕವನ್ನು ತರಬೇಕಾದರೆ financial implication ಇರಬೇಕಾಗುತ್ತದೆ. ರೂ.20 ಕೋಟಿಗಿಂತ ಹೆಚ್ಚಿನ ಹಣಕಾಸನ್ನು ಕೊಟ್ಟಿದ್ದರೆ, ಅದಕ್ಕೆ ಗೌರವಾನ್ವಿತ ರಾಜ್ಯಪಾಲರಿಂದ ಒಂದು permission ಬರಬೇಕಾಗಿದೆ. ಈಗಾಗಲೇ ಕಳುಹಿಸಲಾಗಿದೆ. ಅವರಿಂದ ಅನುಮತಿ ಪಡೆದುಕೊಳ್ಳಬೇಕಾಗಿದೆ. ಅನುಮತಿ ತೆಗೆದುಕೊಂಡು ನಾಳೆಯೇ ಮಂಡಿಸಲಾಗುವುದು. ಈಗಾಗಲೇ ನಾವು ವಿಧಾನಸಭೆಯಲ್ಲಿ ಈ ಬಿಲ್‌ನ್ನು ಪಾಸ್ ಮಾಡಿದ್ದೇವೆ. ವಿಧಾನಸಭೆಯಲ್ಲಿ ಪಾಸ್ ಮಾಡಿರುವುದು ಇಲ್ಲಿಗೆ ಬರುವಾಗ ನಮಗೆ ಗೊತ್ತಾಗಿರುವುದು. ಆ ವಿಧೇಯಕ ಮಾನ್ಯ ರಾಜ್ಯಪಾಲರ ಕಚೇರಿಗೆ ಹೋಗಿರುವಂಥದ್ದು. ಇಲ್ಲದಿದ್ದರೆ ನಾವು ಮಂಡಿಸಿಕೊಳ್ಳುತ್ತಿದ್ದೆವು. ಮಾನ್ಯ ನಸೀರ್ ಅಹ್ಮದ್‌ರವರೇ, ತಾವು ಒಮ್ಮೆ ಅವರದ್ದು ಎಷ್ಟು ವರ್ಷದ ಬೇಡಿಕೆ ಇತ್ತೆಂದು ಆ

"ತಿದ್ದುಪಡಿಯಾಗದ ಪ್ರತಿ/ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

ಸಂಸ್ಥೆಯವರನ್ನು ಕೇಳಿ. ನಾನು ಯಾವ ರೀತಿ ಕೆಲಸ ಮಾಡಿಕೊಟ್ಟಿದ್ದೇನೆಂದು ಕೇಳಿ. ನೀವು ಈ ರೀತಿ ಒಮ್ಮೆಲೆ ಹೇಳಿಬಿಟ್ಟರೆ ತಪ್ಪಾಗುತ್ತದೆ.

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಸೇಂಟ್ ಜೋಸೆಫ್ ಕಾಲೇಜ್‌ಗೆ ಎಲ್ಲರೂ ಕೆಲಸ ಮಾಡಿ ಕೊಡುತ್ತಾರೆ...

(ಗೊಂದಲ)

**ಡಾ|| ಅಶ್ವತ್ ನಾರಾಯಣ್ ಸಿ.ಎನ್ (ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):-** ಮಾನ್ಯ ಸಭಾಪತಿಯವರೇ, ದಯವಿಟ್ಟು ಬಿಲ್ ಪಾಸ್ ಮಾಡಿ ಕೊಡಿ ಅವನ್ನೆಲ್ಲಾ ಕಂಡಿಷನ್ ಹೇಳಬೇಡಿ ಎಂದು ಹೇಳಿದರು. ಅದಕ್ಕೋಸ್ಕರ ಅವರು ಬಂದಿದ್ದು. ಅಷ್ಟೇ ಹೊರತು . . .

**ಶ್ರೀ ಎನ್.ಅಪ್ಪಾಜಿಗೌಡ:-** ಮಾನ್ಯ ಸಭಾಪತಿಯವರೇ, ಹಾಗಾದರೆ, ಅಧಿಕಾರಿಗಳು ಏನು ಮಾಡುತ್ತಿದ್ದರು?

**(ಮುಂದು...)**

(139)03.02.2021/7.30/ಎಂ.ಎಂ-ಎ.ಕೆ

**ಶ್ರೀ ಎಸ್.ಆರ್. ಪಾಟೀಲ್ (ವಿರೋಧಪಕ್ಷದ ನಾಯಕರು):-** ಈ ವಿಧೇಯಕ ಕೆಳಮನೆಯಲ್ಲಿ ಪಾಸ್ ಆಗಿದೆ. ಮೇಲ್ಮನೆಯಲ್ಲಿ ಸಹಮತಕ್ಕೆ ಬಂದಿದೆ.

**ಡಾ: ಸಿ.ಎನ್. ಅಶ್ವಥ್‌ನಾರಾಯಣ್(ಉಪ ಮುಖ್ಯಮಂತ್ರಿ ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ):-** ಮಾನ್ಯ ವಿರೋಧ ಪಕ್ಷದ ನಾಯಕರೇ, ನಾವೆಲ್ಲಾ ಮಾಡಿದ ಮೇಲೆ ಅಂತಿಮವಾಗಿ ಅದು ಗವರ್ನರ್ ಬಳಿಗೆ ಹೋಗುತ್ತದೆ. ನಾವು ಈ ಸಂಸ್ಥೆಗೆ ಸಹಾಯ ಮಾಡುವ ಸಲುವಾಗಿ ನಿಂತಿದ್ದೇವೆ.

**ಶ್ರೀ ಎಸ್.ಆರ್. ಪಾಟೀಲ್:-** ಆ ವಿಧೇಯಕವನ್ನು ನಾಳೆ ತೆಗೆದುಕೊಂಡು ಬನ್ನಿ.

"ತಿದ್ದುಪಡಿಯಾಗದ ಪ್ರತಿ ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

"ತಿದ್ದುಪಡಿಯಾಗದ ಪ್ರತಿ/ **Unedited Copy,** ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಸಿ.ಎನ್. ಅಶ್ವಥ್‌ನಾರಾಯಣ್(ಉಪ ಮುಖ್ಯಮಂತ್ರಿ):-** ನಾವೇನು ಈಗಲೂ ತರಬಹುದು ಆದರೆ ultimately ಅಲ್ಲಿ ಹೋಗಿ ಸಮಸ್ಯೆಯಾಗಬಾರದು.

**ಶ್ರೀ ಪುಟ್ಟಣ್ಣ:-** ಕಾಯಿದೆಯು ನಮ್ಮ ಹೌಸ್‌ನಲ್ಲಿ lay ಆಗಿದೆ. ಈಗ ಅದು ಸದನದ ಆಸ್ತಿಯಾಗಿದೆ.

**Dr. C.N. ASHWATH NARAYAN (DEPUTY CHIEF MINISTER)**: Automatic ಆಗಿ ನಾಳೆ ಚರ್ಚೆಯೇನು ಇರುವುದಿಲ್ಲ ಪಾಸ್ ಮಾಡಿಕೊಳ್ಳುವುದಷ್ಟೇ ಆಗಿದೆ.

**ಶ್ರೀ ಪುಟ್ಟಣ್ಣ:-** ಮಾನ್ಯ ಸಚಿವರು ಅದಕ್ಕೆ ಅನುಮತಿ ಪಡೆದುಕೊಂಡು ಬಂದು ನಾಳೆ ಸದನದಲ್ಲಿ ಪಾಸ್ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ. ಈಗಲೇ ಮಾಡಿ ಎಂದು ಹೇಳಿದೆವು ಅಷ್ಟೇ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರೇ, ಮತ್ತೆ ಏನಾದರೂ ಈ ಬಿಲ್ ಕೆಳಮನೆಗೆ ಹೋಗಬೇಕಾ?

**ಶ್ರೀ ಎಸ್.ಆರ್. ಪಾಟೀಲ್:-** ಕೆಳ ಮನೆಗೆ ಏಕೆ ಹೋಗಬೇಕು ಪಾಸ್ ಆದಮೇಲೆ ಅಲ್ಲಿಗೆ ಹೋಗುವುದೇ ಇಲ್ಲ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಏಕೆಂದರೆ financial implication ಇದೆ, ಗವರ್ನರ್ ಅವರಿಂದ ಬಂದ ಮೇಲೆ en route ನಲ್ಲಿ ಬರಬೇಕಲ್ಲವೇ. Point of Order ಇದು. ಇಲ್ಲಿ ಏನು ಅಪ್ಲೈ ಆಗುತ್ತದೆ ಅದು ಅಲ್ಲಿಗೂ ಅಪ್ಲೈ ಆಗುತ್ತದೆ ತಾನೇ.

**ಶ್ರೀ ಎಸ್.ಆರ್. ಪಾಟೀಲ್:-** ರಿಜೆಕ್ಟ್ ಆದರೆ ಕೆಳಮನೆಗೆ ಹೋಗುತ್ತದೆ.

**ಶ್ರೀ ಕೆ.ಎ. ತಿಪ್ಪೇಸ್ವಾಮಿ:-** ಮಾನ್ಯ ಸಭಾಪತಿಯವರು ಇದರ ಬಗ್ಗೆ ಬೆಳಕು ಚೆಲ್ಲಬೇಕು.

**ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ:-** ತಪ್ಪಿದ್ದರೆ rectify ಮಾಡಿ pass ಮಾಡಿದರೆ ಆಯಿತು. ಅದನ್ನು ಸರಿ ಮಾಡಿ ಪಾಸ್ ಮಾಡಿ.

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"

**ಶ್ರೀ ಕೆ.ಎ. ತಿಪ್ಪೇಸ್ವಾಮಿ:–** ತಾವು clarification ಮಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಾಳೆ ಮಂಡಿಸುತ್ತೇವೆ.

**ಶ್ರೀ ಮರಿತಿಬ್ಬೇಗೌಡ:–** ಮಾನ್ಯ ಸಭಾಪತಿಯವರೇ, ದಯಮಾಡಿ ನಾಳೆ ಇಲ್ಲದಿದ್ದರೆ ಶುಕ್ರವಾರ ಅಧಿವೇಶನ ಮುಗಿಯುವುದರೊಳಗೆ ಪಾಸ್ ಮಾಡಿಕೊಡಿ.

**ಸಭಾಪತಿಯವರು:–** ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11 ಗಂಟೆ ಸೇರುವುದು.

**(ಸದನವು ಸಂಜೆ 7 ಗಂಟೆ 32 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 4ನೇ ಫೆಬ್ರವರಿ ಮಾಹೆ 2021ರ ಗುರುವಾರದಂದು ಬೆಳಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)**

<><><>

"ತಿದ್ದುಪಡಿಯಾಗದ ಪ್ರತಿ, ನ್ಯಾಯಾಲಯಗಳಲ್ಲಿ ಅಥವಾ ಪತ್ರಿಕಾ ಪ್ರಕಟಣೆಗಾಗಿ ಉಪಯೋಗಿಸಕೂಡದು"